ಬೆಂಗಳೂರು
ಸೋಮವಾರ, 15 ಜೂನ್ 2026
ಸಂಪುಟ 33, ಸಂಚಿಕೆ 225, ಪುಟಗಳು 12+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಎನ್‌ಡಿಎಗೆ ಟಿಎಂಸಿ ಬಣ ಬೆಂಬಲ | ೦೫
ಕೊಲ್ಲೂರಿಗೆ ಅನಂತ್ ಅಂಬಾನಿ ಭೇಟಿ | ೦೫
ಮಹಿಳಾ ವಿಶ್ವಕಪ್: ಪಾಕಿಸ್ತಾನ ಸದೆಬಡಿದ ಭಾರತ | ೧೨

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ತಿಥಿ: ಅಮಾವಾಸ್ಯೆ ಉಪರಿ ಪಾಡ್ಯ, ನಕ್ಷತ್ರ: ಮೃಗಶಿರ

ದಿನದ ಮಾತು

ಸುಗಂಧಿತ ಹೂಗಳನ್ನು ಹೊಂದಿರುವ ಒಂದು ಮರ ಇಡೀ ಕಾಡಿಗೆ ಕಂಪನ್ನು ಹರಡುತ್ತದೆ. ಗುಣವಂತನಾದ ಪುತ್ರನು ಇಡೀ ವಂಶಕ್ಕೆ ಕೀರ್ತಿಯನ್ನು ಹರಡುತ್ತಾನೆ.
▲ ಚಾಣಕ್ಯ ನೀತಿ

ಮುರಿಯಲಾಗದ ನೆಹರೂ ಮಹಾನ್ ದಾಖಲೆಗಳು!

ನೇರ ನೋಟ
• ದು.ಗು.ಲಕ್ಷ್ಮಣ
• ಪುಟ ೬

ಕಿರುಸುದ್ದಿ

ಒಮಾನ್: ಎಲ್ಲಾ 14 ಭಾರತೀಯ ಸಿಬ್ಬಂದಿ ರಕ್ಷಣೆ
• ಪುಟ ೫

ಕೇರಳದಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಇಂದಿನಿಂದ
• ಪುಟ ೫

ಭಾರತ ಈಗ ಕೇವಲ ಗ್ರಾಹಕನಲ್ಲ, ವಿಶ್ವಕ್ಕೆ ಪರಿಹಾರ ಹೇಳುವ ರಾಷ್ಟ್ರ
ಫ್ರಾನ್ಸ್‌ನಲ್ಲಿ ಭಾರತ್ ಇನ್ನೋವೇಟ್ಸ್ ಉದ್ಘಾಟಿಸಿ ಮೋದಿ ಮಾತು

ಜಾಗತಿಕ ಕೊಡುಗೆದಾರ

• **ನೈಸ್ (ಫ್ರಾನ್ಸ್):** ಭಾರತವು ಇನ್ನು ಕೇವಲ ಜಾಗತಿಕ ಪರಿಹಾರಗಳ ಗ್ರಾಹಕನಾಗಿಯಷ್ಟೇ ಉಳಿಯದು, ಬದಲಿಗೆ ಅವುಗಳಿಗೆ ಮಹತ್ವದ ಕೊಡುಗೆ ನೀಡುವ ದೇಶವಾಗಿದೆ ಎಂಬುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಹೇಳಿದ್ದಾರೆ. ಈ ಮೂಲಕ ನಾವೀನ್ಯತೆ-ಆವಿಷ್ಕಾರ, ತಂತ್ರಜ್ಞಾನದ ಮೂಲಕ ವಿಶ್ವಕ್ಕೆ ಸುಸ್ಥಿರ ಭವಿಷ್ಯವೊಂದನ್ನು ಕಲ್ಪಿಸುವ ಭಾರತದ ದೃಷ್ಟಿಕೋನವನ್ನು ಮೋದಿ ವಿಶ್ವದ ಮುಂದಿಟ್ಟಿದ್ದಾರೆ.

ತಮ್ಮ ಫ್ರಾನ್ಸ್ ಭೇಟಿ ಸಂದರ್ಭದಲ್ಲಿ, ಈ ಮೆಡಿಟರೇನಿಯನ್ ಫ್ರೆಂಚ್ ನಗರದಲ್ಲಿ ಫ್ರಾನ್ಸ್ ಅಧ್ಯಕ್ಷ ಇಮಾನ್ಯುವೆಲ್ ಮ್ಯಾಕ್ರಾನ್ ಉಪಸ್ಥಿತಿಯಲ್ಲಿ ಮಹತ್ವದ 'ಭಾರತ್ ಇನ್ನೋವೇಟ್ಸ್' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮೋದಿ, ಭಾರತ್ ಇನ್ನೋವೇಟ್ಸ್ ಭಾರತ, ಫ್ರಾನ್ಸ್ ಮತ್ತು ಇತರ ಕೆಲವು ದೇಶಗಳ ಉನ್ನತ ಮಟ್ಟದ ಇನ್ನೋವೇಶನ್ ಸ್ಟಾರ್ಟ್‌ಅಪ್‌ಗಳನ್ನು ಜೊತೆಗೂಡಿಸುತ್ತಿರುವುದು ಮಹತ್ವದ್ದಾಗಿದೆ ಎಂದರು.

ಭಾರತ್ ಇನ್ನೋವೇಟ್ಸ್, ಜಾಗತಿಕ ಇನ್ನೋವೇಶನ್‌ನ ಮುಂದಿನ ಚಾಪ್ಟರಿನ ಸಹಸೃಷ್ಟಿಗಾಗಿ ವಿಶ್ವಕ್ಕೆ ನೀಡಿದ ಆಹ್ವಾನವಾಗಿದೆ ಎಂದು ಬಣ್ಣಿಸಿದರು. ➡ಪುಟ ೨

ಸುಧಾರಣಾ ಎಕ್ಸ್‌ಪ್ರೆಸ್ ನಿಲ್ಲದು

ಕೇವಲ ಒಂದು ದಶಕದ ಹಿಂದೆ ಭಾರತ ತಂತ್ರಜ್ಞಾನ ಪಡೆಯುವ ದೇಶವಾಗಿದ್ದರೆ ಇಂದು ಭಾರತವು ತಂತ್ರಜ್ಞಾನ ಒದಗಿಸುವ ದೇಶವಾಗಿ ಮೂಡಿಬರುತ್ತಿರುವುದನ್ನು ಜಗತ್ತು ವೀಕ್ಷಿಸುತ್ತಿದೆ. ಭಾರತದ ಆವಿಷ್ಕಾರ ವಿಶ್ವದ ಸುಸ್ಥಿರ ಭವಿಷ್ಯಕ್ಕಾಗಿ ಇರುವಂಥದ್ದು. ಭಾರತದ ಯುವ ಅನ್ವೇಷಕರು ಕಂಡುಕೊಂಡಿರುವ ಪರಿಹಾರಗಳು ಇಡಿ ವಿಶ್ವದ ಮನುಕುಲಕ್ಕೇ ಲಾಭ ತಂದುಕೊಡಲಿದೆ ಎಂದು ಮೋದಿ ಹೇಳಿದರು. ➡ಪುಟ ೨



ಭಾರತ ನಾವೀನ್ಯತಾ ದೇಶ: ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರಾನ್

ಫ್ರಾನ್ಸ್‌ನ ಅಧ್ಯಕ್ಷ ಮ್ಯಾಕ್ರಾನ್ ಮಾತನಾಡಿ, ಫ್ರಾನ್ಸ್ ಮೇಕ್ ಇನ್ ಇಂಡಿಯಾ ಉಪಕ್ರಮವನ್ನು ಗೌರವಿಸುತ್ತದೆ. ಭಾರತದ ವೈವಿಧ್ಯಮಯ ಕ್ಷೇತ್ರಗಳಲ್ಲಿ ಫ್ರಾನ್ಸ್ ಭಾಗವಾಗಿರುತ್ತದೆ. ಭಾರತ ಒಂದು ನಾವೀನ್ಯತಾ ದೇಶವಾಗಿದ್ದು, ಎಐ ಮತ್ತು ಹವಾಮಾನ ಬದಲಾವಣೆಯಂತಹ ಕ್ಷೇತ್ರಗಳಲ್ಲಿ ಭಾರತ-ಫ್ರಾನ್ಸ್‌ನದ್ದು 'ನಿಜವಾದ ಪಾಲುದಾರಿಕೆ'ಯಾಗಿದೆ. ಈ ದ್ವಿಪಕ್ಷೀಯ ಸಹಕಾರವು ಸಣ್ಣ ಮಾಡ್ಯುಲರ್ ರಿಯಾಕ್ಟರ್‌ಗಳು ಸೇರಿದಂತಹ ನಾಗರಿಕ ಪರಮಾಣು ಇಂಧನ ಕ್ಷೇತ್ರಕ್ಕೂ ವಿಸ್ತರಿಸುವ ಆಶಯವಿದೆ ಎಂದರು.

- ಭಾರತ್ ಇನ್ನೋವೇಟ್ಸ್ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಭಾಷಣ
- ಭಾರತವು ಈಗ ಜಾಗತಿಕ ಪರಿಹಾರಗಳ ಗ್ರಾಹಕ ರಾಷ್ಟ್ರವಲ್ಲ, ಪರಿಹಾರಗಳನ್ನು ನೀಡುವ ದೇಶ
- ಆವಿಷ್ಕಾರ ಮತ್ತು ಒಳಗೊಳ್ಳುವಿಕೆ ಪರಸ್ಪರ ಪೂರಕ
- ವಿಶ್ವಾಸಾರ್ಹ, ಸಮಗ್ರ ಮತ್ತು ಮಾನವಕೇಂದ್ರಿತ ತಂತ್ರಜ್ಞಾನಗಳತ್ತ ಮುಖ ಮಾಡುತ್ತಿರುವ ವಿಶ್ವ
- ಮಾನವತೆಗೆ ತಂತ್ರಜ್ಞಾನ ಎಂಬುದಕ್ಕೆ ಭಾರತದ ಆದ್ಯತೆ
- ಹೈಟೆಕ್, ಅಣುಶಕ್ತಿ, ರಕ್ಷಣಾ ಮತ್ತು ನವೋದ್ಯಮ ಕ್ಷೇತ್ರಗಳಲ್ಲಿ ಸುಧಾರಣೆ ಮುಂದುವರಿಕೆ
- ಭಾರತದಲ್ಲಿ ಸ್ಟಾರ್ಟ್‌ಅಪ್‌ಗಳ ಸಂಖ್ಯೆ ಹಲವು ಪಟ್ಟು ಹೆಚ್ಚಳ ವಿಶ್ವಾಸ
- ಭವಿಷ್ಯ ರೂಪಿಸಲಿವೆ ಎಐ, ಕ್ವಾಂಟಂ ಕಂಪ್ಯೂಟಿಂಗ್, ಜೈವಿಕ ತಂತ್ರಜ್ಞಾನ ಮತ್ತು ಬಾಹ್ಯಾಕಾಶ ತಂತ್ರಜ್ಞಾನ

ಕರ್ನಾಟಕಕ್ಕೆ ಯುಪಿಎ ಅವಧಿಗಿಂತ 5 ಪಟ್ಟು ಹೆಚ್ಚು ಹಣ: ವಿತ್ತ ಸಚಿವೆ ನಿರ್ಮಲಾ ಮಾಹಿತಿ

ರಾಜ್ಯಕ್ಕೆ ಕೇಂದ್ರದಿಂದ ₹4 ಲಕ್ಷ ಕೋಟಿ ಹಂಚಿಕೆ



• **ಬೆಂಗಳೂರು:** ಕರ್ನಾಟಕವು ಕೇಂದ್ರದ ಅನುದಾನ ಹಂಚಿಕೆಯಿಂದ ವಂಚಿತವಾಗಿದೆ ಎಂಬ ಕಾಂಗ್ರೆಸ್ ಆರೋಪವನ್ನು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ನಿರಾಕರಿಸಿದ್ದು, ಯುಪಿಎ ಅವಧಿಯಲ್ಲಿ ಹಂಚಿಕೆಯಾಗಿದ್ದಕ್ಕಿಂತ ಐದು ಪಟ್ಟು ಹೆಚ್ಚು ಕೇಂದ್ರ ತೆರಿಗೆ ಹಂಚಿಕೆಯನ್ನು ಕರ್ನಾಟಕ ಪಡೆದಿದೆ. ರಾಜ್ಯವು 4 ಲಕ್ಷ ಕೋಟಿ ರೂ. ತೆರಿಗೆ ಹಂಚಿಕೆ ಪಡೆದುಕೊಂಡಿದೆ ಎಂದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸರ್ಕಾರವು 12 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಬೆಂಗಳೂರಿನ ಜಯನಗರದಲ್ಲಿ ಭಾನುವಾರ ಏರ್ಪಡಿಸಿದ ವಿಕಸಿತ ಭಾರತ ಸಂಕಲ್ಪ ಸಮಾವೇಶ ಉದ್ಘಾಟಿಸಿದ ಅವರು, ಕೇಂದ್ರ ಸರ್ಕಾರ ಯಾವುದೇ ಅನುದಾನ ನೀಡುತ್ತಿಲ್ಲ ಎಂದು ಕರ್ನಾಟಕ ಸರ್ಕಾರ ನಿರಂತರವಾಗಿ ಹೇಳಿಕೊಂಡು ಬರುತ್ತಿದೆ. ಆದರೆ, ಯುಪಿಎ ಸರ್ಕಾರದ 10 ವರ್ಷಗಳ ಅವಧಿಯಲ್ಲಿ ರಾಜ್ಯಕ್ಕೆ ಸಿಗುತ್ತಿದ್ದ ಅನುದಾನಕ್ಕಿಂತ ಕೇವಲ ಒಂದು ವರ್ಷದಲ್ಲೇ ಕರ್ನಾಟಕಕ್ಕೆ ಶೇ.76ರಷ್ಟು ಹೆಚ್ಚು ಅನುದಾನ ಕರ್ನಾಟಕಕ್ಕೆ ದೊರೆಯುತ್ತಿದೆ ಎಂದರು. ➡ಪುಟ ೨

> ರಾಜ್ಯಗಳಿಗೆ ಬಡ್ಡಿರಹಿತ ಸಾಲ ನೀಡುತ್ತಿದ್ದೇವೆ. 18 ಸಾವಿರ ಕೋಟಿ ರೂ. ಗಿಂತಲೂ ಅಧಿಕ ಹಣವನ್ನು ಹಣಕಾಸು ಆಯೋಗದ ಶಿಫಾರಸು ಇಲ್ಲದಿದ್ದರೂ ರಾಜ್ಯಗಳಿಗೆ ನೀಡಿದ್ದೇವೆ. ಅದು ಕರ್ನಾಟಕಕ್ಕೂ ಸಿಕ್ಕಿದೆ.
> ■ ನಿರ್ಮಲಾ ಸೀತಾರಾಮನ್, ಹಣಕಾಸು ಸಚಿವೆ

ಕೊಪ್ಪಳ-ಗದಗ ಹಸಿರು ಇಂಧನ ಕೇಂದ್ರ
• ಪುಟ ೨



ಇರಾನ್ ಒಪ್ಪಂದಕ್ಕೆ ಸಹಿ: ರಾಷ್ಟ್ರಗಳ ಭಿನ್ನ ನಿಲುವು

• **ಇಸ್ಲಾಮಾಬಾದ್:** ಇರಾನ್ ಯುದ್ಧವನ್ನು ಕೊನೆಗೊಳಿಸುವ ಒಪ್ಪಂದಕ್ಕೆ ಭಾನುವಾರ ಸಹಿ ಹಾಕಬಹುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಸಂಧಾನಕಾರ ಪಾಕಿಸ್ತಾನ ಘೋಷಿಸಿವೆ. ಆದರೆ, ಈ ಪ್ರಕ್ರಿಯೆಗೆ ಹೆಚ್ಚಿನ ಸಮಯ ಬೇಕಾಗಬಹುದು ಎಂದು ಇರಾನ್ ಸೂಚಿಸಿದೆ. ಮುಂದಿನ 24 ಗಂಟೆಗಳ ಒಳಗೆ ಎಲೆಕ್ಟ್ರಾನಿಕ್ ಸಹಿಗಳ ಮೂಲಕ ಒಪ್ಪಂದ ವಾಗುವ ನಿರೀಕ್ಷೆಯಿದೆ ಎಂದು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ತಿಳಿಸಿದ್ದಾರೆ. ಪಾಕಿಸ್ತಾನದ ವಿದೇಶಾಂಗ ಸಚಿವಾಲಯ ಭಾನುವಾರಕ್ಕೆ ಸಮಾರಂಭವನ್ನು ನಿಗದಿಪಡಿಸಿದೆ. ಒಪ್ಪಂದಕ್ಕೆ ಸಹಿ ಹಾಕಲಾಗುವುದು ಮತ್ತು ನಂತರ ಹಾರ್ಮುಜ್ ಜಲಸಂಧಿಯನ್ನು ತಕ್ಷಣವೇ ತೆರೆಯಲಾಗುವುದು ಎಂದು ಟ್ರಂಪ್ ಪ್ರತಿಪಾದಿಸಿದ್ದಾರೆ. ➡ಪುಟ ೨

24 ಗಂಟೆಯಲ್ಲಿ ಎಲೆಕ್ಟ್ರಾನಿಕ್ ಸಹಿ ಮೂಲಕ ಒಪ್ಪಂದ ನಿರೀಕ್ಷೆ



ಜು.4-9: ಖಮೇನಿ ಅಂತ್ಯಕ್ರಿಯೆ ಪ್ರಕ್ರಿಯೆ

ಇದರ ನಡುವೆ, ಯುದ್ಧದ ಆರಂಭದಲ್ಲಿ ಹತರಾದ ಮಾಜಿ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಅಂತ್ಯಕ್ರಿಯೆಯ ವಿಧಿ-ವಿಧಾನಗಳು ಜುಲೈ 4ರಿಂದ 9ರವರೆಗೆ ನಡೆಯಲಿವೆ ಎಂದು ಇರಾನ್ ಘೋಷಿಸಿದೆ.

ಕೇರಳದ ಚಿಂತಕರು, ಗಣ್ಯರ ಸಭೆಯಲ್ಲಿ ಅಭಿಮತ

ಸಮಾಜ ಸಂಘಟನೆ ಗುರಿ: ಭಾಗವತ್



• **ತ್ರಿಶೂರು:** ಭಾರತದ ಪುನರುತ್ಥಾನಕ್ಕಾಗಿ ಸಮಾಜ ಸಂಘಟನೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೂಲ ಗುರಿಯಾಗಿದೆ. ಭಾರತದ ಪುನರುತ್ಥಾನಕ್ಕೆ ಏನೆಲ್ಲ ಆಗಬೇಕಿದೆಯೋ ಅದೆಲ್ಲದಕ್ಕೂ ಕೊಡುಗೆ ನೀಡಿ ಅದನ್ನು ಪೂರ್ಣಗೊಳಿಸುವುದೇ ಸಂಘದ ಉದ್ದೇಶ ಎಂದು ಸಂಘದ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಭಾನುವಾರ ಹೇಳಿದ್ದಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ಇಲ್ಲಿ ಸೇರಿದ್ದ ಕೇರಳದ ಚಿಂತಕರು ಮತ್ತು ಗಣ್ಯರ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು. ಸಂಘ ಎಂದೂ ರಾಜಕೀಯ ಅಧಿಕಾರ ಅಥವಾ ಜನಪ್ರಿಯತೆಗಾಗಿ ಸ್ಥಾಪನೆಯಾಗಿದ್ದಲ್ಲ, ಹಾಗೆಯೇ ಯಾವುದೇ ಸಮುದಾಯ ಅಥವಾ ಗುಂಪುಗಳನ್ನು ವಿರೋಧಿಸಲೂ ಆರಂಭವಾಗಿದ್ದಲ್ಲ, ಬದಲಿಗೆ ಇದು ವಿಶಾಲವಾದ ರಾಷ್ಟ್ರೀಯ ಉದ್ದೇಶವೊಂದನ್ನು ಪೂರ್ಣಗೊಳಿಸುವುದಕ್ಕಾಗಿ ಮತ್ತು ಭಾರತದ ಪುನರುತ್ಥಾನ ಮತ್ತು ಕಲ್ಯಾಣಕ್ಕಾಗಿ ಅಗತ್ಯವಿರುವ ಪ್ರತಿಯೊಂದಕ್ಕೂ ಕೊಡುಗೆ ನೀಡುವ ಉದ್ದೇಶದೊಂದಿಗೆ ಆರಂಭವಾಗಿದೆ ಎಂದರು.

ಸಂಘಟಿತ-ಅನುಶಾಸನ ಬದ್ಧ ಸಮಾಜದಿಂದಲೇ ಸಂಪನ್ನ ಭಾರತ: ಭಾರತವು ಪದೇಪದೆ ವಿದೇಶಿ ಶಕ್ತಿಗಳ ಕಪಿಮುಷ್ಟಿಗೆ ಸಿಲುಕುತ್ತಿರುವುದೇಕೆ? ನಮ್ಮ ದೌರ್ಬಲ್ಯಗಳೇನು? ➡ಪುಟ ೨





ಗೃಹಲಕ್ಷ್ಮಿ, ಗೃಹಜ್ಯೋತಿ ನಿಲ್ಲಲ್ಲ: ಡಿಕೆಶಿ



• **ಬೆಂಗಳೂರು:** ಗೃಹಲಕ್ಷ್ಮಿ ಮತ್ತು ಗೃಹ ಜ್ಯೋತಿ ಯೋಜನೆಗಳ ಪರಿಷ್ಕರಣೆ ಕುರಿತಂತೆ ಮರು ಅರ್ಜಿ ಸಲ್ಲಿಸುವ ಕುರಿತಂತೆ ಸಾರ್ವಜನಿಕರಲ್ಲಿ ಉಂಟಾಗಿರುವ ಗೊಂದಲಗಳಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟನೆ ನೀಡಿದ್ದು, ಕಾಂಗ್ರೆಸ್ ಸರ್ಕಾರದ ಹೆಮ್ಮೆಯ ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮಿ ಮತ್ತು ಗೃಹ ಜ್ಯೋತಿ ಯೋಜನೆಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ ಎಂದು ಹೇಳಿದ್ದಾರೆ. ➡ಪುಟ ೨

ನಾನು, ಡಿಕೆಶಿ ಒರಿಜಿನಲ್ ಜೋಡಿತ್ತು: ಡಾ.ಪರಮೇಶ್ವರ್
• ಪುಟ ೩

3ನೇ ಸಿಎಂ ಬಂದರೂ ಅಚ್ಚರಿ ಇಲ್ಲ: ಬಿವೈವಿ
• ಪುಟ ೩

ಕೈದಿಗಳಿಂದ ವಾರ್ಡನ್‌ಗೆ ಹಲ್ಲೆ
• ಪುಟ ೩

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,60,000 (2,60,000) ಅಪರಂಜಿ ಚಿನ್ನ: 1,49,090 (1,49,080) ಆಭರಣ ಚಿನ್ನ: 1,36,650 (1,36,650) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

$1 = ₹95.12

ರಜೆ ಹಿನ್ನೆಲೆ ಮಂತ್ರಾಲಯಕ್ಕೆ ಬಂದ ಭಕ್ತರ ಮಹಾಪೂರ


• **ರಾಯಚೂರು:** ಇತ್ತೀಚೆಗೆ ಪ್ರತಿ ಎರಡನೇ ಹಾಗೂ ನಾಲ್ಕನೇ ಶನಿವಾರ, ಭಾನುವಾರಗಳಂತೆ ಈ ಎರಡನೇ ಶನಿವಾರವೂ ರಾಯರ ದರ್ಶನಕ್ಕೆಂದು ಮಂತ್ರಾಲಯಕ್ಕೆ ಭಕ್ತ ಸಾಗರ ಹರಿದು ಬಂದಿತು.



ಶನಿವಾರ ಮತ್ತು ಭಾನುವಾರ ಎರಡು ದಿನ ರಜೆ ಇರುವ ಹಿನ್ನೆಲೆ ಉತ್ತರ ಕರ್ನಾಟಕದ ಕೆಲ ಭಾಗಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಭಕ್ತರು ಆಗಮಿಸಿದ್ದು ಕಂಡುಬಂದಿದೆ. ಅತ್ಯಧಿಕ ಭಕ್ತರು ಆಗಮಿಸಿದ್ದರಿಂದ ಮಠದ ವಸತಿ ನಿಲಯಗಳು ಖಾಲಿ ಇಲ್ಲದ ಕಾರಣಕ್ಕೆ ಹಾಗೂ ಖಾಸಗಿ ವಸತಿ ನಿಲಯಗಳಲ್ಲಿ ಹೆಚ್ಚಿನ ಬಾಡಿಗೆ ಹೇಳುತ್ತಿರುವ ಕಾರಣಕ್ಕೆ ಭಕ್ತರು ಶ್ರೀಮಠದ ಮುಂದಿನ ಪ್ರಾಂಗಣ ಹಾಗೂ ಕಲ್ಯಾಣ ಮಂಟಪದಲ್ಲಿ ತಂಗುವ ಮೂಲಕ ರಾತ್ರಿ ಸಮಯ ಕಳೆದಿದ್ದಾರೆ. ಸಾಮಾನ್ಯವಾಗಿ ಗುರುವಾರ ಹೆಚ್ಚಿನ ಸಂಖ್ಯೆಯಲ್ಲಿ ರಾಯರ ದರ್ಶನಕ್ಕೆ ಭಕ್ತರು ಆಗಮಿಸುತ್ತಿದ್ದರು. ಆದರೆ, ಕಳೆದ ಮೂರ್ನಾಲ್ಕು ವರ್ಷಗಳಿಂದ ಮಂತ್ರಾಲಯಕ್ಕೆ ಭಕ್ತರ ಸಂಖ್ಯೆ ಗಮನಾರ್ಹವಾಗಿ ಏರಿಕೆ ಆಗಿದೆ.

ಶನಿವಾರ ಮಧ್ಯ ರಾತ್ರಿ ಹಾಗೂ ಬೆಳಗಿನ ಜಾವ ಮಳೆ ಆಗಿದ್ದರಿಂದ ಮಠದ ಪ್ರಾಂಗಣದಲ್ಲಿ ಮಲಗಿಕೊಂಡಿದ್ದ ಭಕ್ತರ ನಿದ್ದೆಗೆಡಿಸಿತು. ಈ ಸಮಯದಲ್ಲಿ ಭಕ್ತರು ಮಠದಲ್ಲಿನ ಕಟ್ಟಡಗಳಲ್ಲಿ ಆಶ್ರಯವನ್ನು ಪಡೆದುಕೊಂಡಿದ್ದು ಕಂಡುಬಂದಿತು. ಶ್ರೀಮಠದಲ್ಲಿ ಬೇರೆ ಧಾರ್ಮಿಕ ಸ್ಥಳಗಳಲ್ಲಿ ಒಂದೊಂದು ರೂಮಿನಲ್ಲಿ 50-100 ಜನ ತಂಗುವಂತಹ ವ್ಯವಸ್ಥೆಯನ್ನು ಶ್ರೀಮಠ ಮಾಡಬೇಕೆಂದು ಭಕ್ತರು ಅಭಿಪ್ರಾಯ ವ್ಯಕ್ತಪಡಿಸುತ್ತಿರುವುದು ಕಂಡುಬಂದಿತು.

ರಾಮ ಬಾಣ



ಕೊಲ್ಲೂರು ದೇವಿ ದರ್ಶನ ಪಡೆದ ಅನಂತ್ ಅಂಬಾನಿ

• **ಬೈಂದೂರು:** ಕೊಲ್ಲೂರು ಮೂಕಾಂಬಿಕೆ ದೇಗುಲಕ್ಕೆ ಮುಕೇಶ್ ಅಂಬಾನಿ ಪುತ್ರ ಅನಂತ್ ಅಂಬಾನಿ ಭೇಟಿ ನೀಡಿದ್ದಾರೆ. ಹಲವು ದೇವಸ್ಥಾನಗಳಿಗೆ ಭೇಟಿ ನೀಡುತ್ತಿರುವ ಅನಂತ್ ಅಂಬಾನಿ ಇದೀಗ ಕೊಲ್ಲೂರಿನಲ್ಲಿ ದೇವಿ ದರ್ಶನ ಪಡೆದಿದ್ದಾರೆ.



ಇತ್ತೀಚೆಗೆ ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಕೊಲ್ಲೂರು ಮೂಕಾಂಬಿಕೆ ದರ್ಶನ ಪಡೆದು ಮರಳಿದ್ದರು. ಇದರ ಬೆನ್ನಲ್ಲೇ ಇದೀಗ ರಿಲಯನ್ಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಪುತ್ರ ಅನಂತ್ ಅಂಬಾನಿ ಕೊಲ್ಲೂರು ಮೂಕಾಂಬಿಕೆ ದೇಗುಲಕ್ಕೆ ಭೇಟಿ ನೀಡಿದ್ದಾರೆ. ಮೂಕಾಂಬಿಕೆ ದೇವಿ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದ್ದಾರೆ. ಅಂಬಾನಿ ಕುಟುಂಬದ ಗುರೂಜಿಯ ಜೊತೆ ಆಗಮಿಸಿ ದರ್ಶನ ಅಂಬಾನಿ ಕುಟುಂಬದ ಗುರೂಜಿ ಜೊತೆ ಕೊಲ್ಲೂರು ಮೂಕಾಂಬಿಕೆ ದೇವಿ ದರ್ಶನಕ್ಕೆ ಆಗಮಿಸಿದ್ದರು.

ಜೂ. 13ರಂದು ಅನಂತ್ ಅಂಬಾನಿ ಕೊಲ್ಲೂರು ಮೂಕಾಂಬಿಕೆ ದರ್ಶನಕ್ಕೆ ದಿನಾಂಕ ನಿಗದಿಯಾಗಿತ್ತು. ಆದರೆ ಮುಂಬೈನಲ್ಲಿ ಭಾರೀ ಮಳೆ ಕಾರಣದಿಂದ ಪ್ರವಾಸ ಮುಂದೂಡಲಾಗಿತ್ತು. ಹಲವು ದೇವಸ್ಥಾನ ದರ್ಶನ ಮಾಡುತ್ತಿರುವ ಅನಂತ್ ಅಂಬಾನಿಗೆ ದೇವರ ಮೇಲೆ ಅಪಾರ ನಂಬಿಕೆ ಹಾಗೂ ಭಕ್ತಿ ಇದೆ. ಅನಂತ್ ಅಂಬಾನಿ ಸತತವಾಗಿ ದೇವಸ್ಥಾನಗಳಿಗೆ ಭೇಟಿ ನೀಡುತ್ತಿದ್ದಾರೆ. ಇತ್ತೀಚೆಗಷ್ಟೇ ಕೇರಳಕ್ಕೆ ತೆರಳಿ ಹಲವು ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದ್ದರು. ಇನ್ನು ತಿರುಪತಿಗೆ ಕುಟುಂಬ ಸಮೇತ ತೆರಳಿ ಪೂಜೆ ಸಲ್ಲಿಸಿದ್ದರು. ಇದೀಗ ಕೊಲ್ಲೂರು ಮೂಕಾಂಬಿಕೆ ದರ್ಶನ ಪಡೆದಿದ್ದಾರೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಧರ್ಮ ಎಂದರೆ ಪೂಜಾ ಪದ್ಧತಿಯಲ್ಲ, ಅದು ಜೀವನ ಪದ್ಧತಿ.ಜಗತ್ತಿನ ಎಲ್ಲ ಜನಗಳಿಗೆ ಮಾರ್ಗದರ್ಶನ ಮಾಡುವ ವಿಚಾರಗಳು ಭಾರತದಲ್ಲಿವೆ, ಅದುವೇ ಧರ್ಮ -ಪಿ.ಎಸ್.ಪ್ರಕಾಶ್

- ಪೂಜೆಯೇ ಧರ್ಮವಾಗಿದ್ದಲ್ಲಿ ಭಾರತದಲ್ಲಿ ರಾಮಾಯಣದ ಬದಲು ರಾವಣಾಯಣವನ್ನು ಓದಬೇಕಿತ್ತು, ಏಕೆಂದರೆ ರಾವಣ ಪರಮ ಭಕ್ತಿಯಿಂದ ಶಿವನ ಪೂಜೆಯನ್ನು ದಿನಾ ಮಾಡುತ್ತಿದ್ದ!

ದಿನ ಭವಿಷ್ಯ

ಮೇಷ
ವಿರಾಮ ಬಯಸಿದರೂ ಕೆಲಸದ ಒತ್ತಡ ಬಾಧಿಸುವುದು. ಆಪ್ತರ ಸಂಗಡ ವಾಗ್ವಾದಕ್ಕೆ ಇಳಿಯಬೇಡಿ. ನೀವು ಮೌನವಾಗಿ ಉಳಿಯಿರಿ.

ವೃಷಭ
ಗತದಿನಗಳ ಬಗ್ಗೆ ಅತಿಯಾಗಿ ಚಿಂತಿಸದಿರಿ. ಈಗ ಮಾಡಬೇಕಾದ ಕೆಲಸಕ್ಕೆ ಆದ್ಯತೆ ಕೊಡಿ. ಕೆಲ ವಿಷಯಗಳಿಗೆ ಅತಿರೇಕದ ಪ್ರತಿಕ್ರಿಯೆ ತೋರುತ್ತೀರಿ.

ಮಿಥುನ
ಗುಣಾತ್ಮಕ ಸಂಕೇತಗಳಿಂದಲೇ ಇಂದಿನ ದಿನ ಆರಂಭ. ನಿಮಗೆ ಪೂರಕ ಪರಿಸ್ಥಿತಿ. ಆರ್ಥಿಕ ಚಿಂತೆ ನಿವಾರಣೆ. ಆತ್ಮೀಯರ ಸಂಗಡ ಖುಷಿ ಪಡುವಿರಿ.

ಕಟಕ
ನಿಮ್ಮ ಜತೆಗೆ ಅತಿಯಾದ ಸಲುಗೆ ಸಾಧಿಸುವವರ ಕುರಿತು ಎಚ್ಚರವಿರಲಿ. ಮನೆಯಲ್ಲಿ ಸೌಹಾರ್ದ ವಾತಾವರಣ, ನೆಮ್ಮದಿ.

ಸಿಂಹ
ಕೆಲವರನ್ನು ಕುರುಡಾಗಿ ನಂಬದಿರಿ. ಅವರಿಂದಲೇ ಮೋಸ ಹೋಗುವಿರಿ. ಕೆಲಸದ ಒತ್ತಡದಿಂದಾಗಿ ವಿಶ್ರಾಂತಿಗೆ ಅಸ್ಪದ ಸಿಗಲಾರದು.

ಕನ್ಯಾ
ಯೋಜನೆ ಹಾಕಿ ಕೆಲಸ ನಿರ್ವಹಿಸಿ. ಇಲ್ಲವಾದರೆ ಗೊಂದಲ ಎದುರಿಸುವಿರಿ. ಆರೋಗ್ಯ ಸ್ಥಿರ. ಹಣದ ಚಿಂತೆಯೊಂದು ಪರಿಹಾರ.

ತುಲಾ
ಜಡತ್ವ ಬಿಟ್ಟು ಕ್ರಿಯಾಶೀಲರಾಗಿ. ನಿಮ್ಮ ಹವ್ಯಾಸ ಬಿಡಬೇಡಿ. ದೈಹಿಕ ಶ್ರಮದಿಂದ ಬಳಲುವಿರಿ. ಆಪ್ತರ ಜತೆ ಮಾತಿನ ಚಕಮಕಿ

ವೃಶ್ಚಿಕ
ಎಲ್ಲರೂ ನಿಮ್ಮಂತೆ ಯೋಚಿಸಬೇಕು ಎಂದು ಬಯಸುವುದು ತಪ್ಪು. ಇತರರ ಭಾವನೆ ಗೌರವಿಸಿ. ಮನೆಯಲ್ಲಿ ಹಿರಿಯರಿಗೆ ಅನಾರೋಗ್ಯ ಸಂಭವ.

ಧನು
ಕೌಟುಂಬಿಕ ವಿಷಯ ಮುಖ್ಯವಾಗುತ್ತದೆ. ಕಳೆದು ಹೋದುದಕ್ಕೆ ಕೊರಗುತ್ತಾ ಕೂರದಿರಿ. ನಗುನಗುತ್ತಾ ನಿಮ್ಮ ಹೊಣೆ ನಿಭಾಯಿಸಿ. ಆರೋಗ್ಯ ಕಾಯ್ದುಕೊಳ್ಳಿ.

ಮಕರ
ಕೌಟುಂಬಿಕ ಪರಿಸ್ಥಿತಿ ನೆಮ್ಮದಿ ತರಲಿದೆ. ಆತ್ಮೀಯರ ಒಡನಾಟದಲ್ಲಿ ಸಂತೋಷ ಕಾಣುವಿರಿ. ಹಣ ಗಳಿಕೆಗೆ ಮೋಟಕು ದಾರಿ ಹಿಡಿಯದಿರಿ.

ಕುಂಭ
ವ್ಯವಹಾರದ ಬಗ್ಗೆ ಹೆಚ್ಚು ಗಮನ ಕೊಡಿ. ನಿರ್ಲಕ್ಷ್ಯ ತೋರಿದರೆ ನಷ್ಟ ಉಂಟಾದೀತು. ಹೆತ್ತವರು ಮಕ್ಕಳ ಜತೆ ಮೆದುವಾಗಿ ವರ್ತಿಸಬೇಕು.

ಮೀನ
ವ್ಯವಹಾರದಲ್ಲಿ ಮಹತ್ವದ ಬದಲಾವಣೆ ತೋರುವ ಸಾಧ್ಯತೆಯಿದೆ. ಮಾನಸಿಕ ಒತ್ತಡ ನಿವಾರಣೆಗೆ ಧ್ಯಾನ ಸಹಕಾರಿಯಾದೀತು.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ: 8,2,7,47

ರಾಜ್ಯದೆಲ್ಲೆಡೆ ವರುಣಾರ್ಭಟ | ಜನಜೀವನ, ಸಂಚಾರಕ್ಕೆ ತೊಂದರೆ

ಐದು ದಿನ ಭಾರೀ ಮಳೆ

• **ಬೆಂಗಳೂರು:** ಕರ್ನಾಟಕದಲ್ಲಿ ಮುಂದಿನ ಇಂದಿನಿಂದ ಅಂದರೆ ಜೂನ್ 15ರಿಂದ ಐದು ದಿನಗಳವರೆಗೆ ಕೆಲವೆಡೆ ವರುಣಾರ್ಭಟ ಮುಂದುವರಿಯಲಿದ್ದು, ಹಲವು ಜಿಲ್ಲೆಗಳಲ್ಲಿ ಗುಡುಗು, ಮಿಂಚು ಹಾಗೂ ಬಿರುಗಾಳಿ ಸಹಿತ ಭಾರಿ ಮಳೆಯಾಗುವ ಸಾಧ್ಯತೆಗಳಿವೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ರಾಜ್ಯದ ದಕ್ಷಿಣ ಒಳನಾಡಿನಲ್ಲಿ ಮಳೆಯ ಅಬ್ಬರ ಜೋರಾಗಿರಲಿದ್ದು, ಬೆಂಗಳೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.

ರಾಜ್ಯದ ವಿವಿಧೆಡೆ ನಿರಂತರ ಮಳೆ: ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಮುಂಗಾರು ಮಳೆ ಆರಂಭವಾಗಿದ್ದು, ಭಾನುವಾರ ಬೆಳ್ಳಂಬೆಳಗ್ಗೆ ಆರಂಭವಾದ ಧಾರಾಕಾರ ಮಳೆಗೆ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಕಲಬುರಗಿ, ಬೀದರ್, ಕೊಪ್ಪಳ, ಯಾದಗಿರಿ, ರಾಯಚೂರು, ಬೆಳಗಾವಿ, ಬಾಗಲಕೋಟೆ, ವಿಜಯಪುರ, ಧಾರವಾಡ, ಗದಗ, ಹಾವೇರಿ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಮಳೆಯಾಗಿದೆ.

ರಸ್ತೆ ಸಂಚಾರ ಸ್ಥಗಿತ: ರಾಯಚೂರು ಜಿಲ್ಲೆಯಾದ್ಯಂತ ಬೆಳ್ಳಂಬೆಳಗ್ಗೆ ಆರಂಭವಾದ ಧಾರಾಕಾರ ಮಳೆಗೆ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಒಂದೇ ಮಳೆಗೆ ಹಳ್ಳಕೊಳ್ಳಗಳು ತುಂಬಿ ಹರಿಯುತ್ತಿದ್ದು, ಸರಣಿ ಅವಾಂತರಗಳು ಸೃಷ್ಟಿಯಾಗಿವೆ. ರಾಯಚೂರು ತಾಲೂಕಿನ ಇಡಪನೂರಿನಲ್ಲಿ ಹಳ್ಳದ ನೀರು ಕಿರು ಸೇತುವೆ ಮೇಲೆ ಹರಿದಿದ್ದರಿಂದ ಮೀರಾಪೂರ ಹಾಗೂ ಯರಗೇರಾ ಮಾರ್ಗದ ರಸ್ತೆ ಸಂಚಾರ ಸ್ಥಗಿತಗೊಂಡಿದೆ.

ವೀಕೆಂಡ್ ಮೋಜು ಮಸ್ತಿಗೆ ಬ್ರೇಕ್: ಬೆಂಗಳೂರಿನ ವಿವಿಧೆಡೆ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಸುರಿದ ಮಳೆಗೆ ವೀಕೆಂಡ್ ಮೋಜು ಮಸ್ತಿಗೆ ಪ್ಲ್ಯಾನ್ ಮಾಡಿದವರಿಗೆ ನಿರಾಶೆ ಮೂಡಿಸಿದೆ. ನಗರಾದ್ಯಂತ ಗುಡುಗು ಮಿಂಚು ಸಹಿತ ಧಾರಾಕಾರ ಮಳೆ ಸುರಿಯುತ್ತಿದ್ದು, ಜನರು ಮನೆಯಿಂದ ಕಾಲಿಡದಂತಹ ಸ್ಥಿತಿ ಇದೆ. ಪ್ರಮುಖ ರಸ್ತೆಗಳಲ್ಲಿ ಸಂಚಾರ ಅಸ್ತವ್ಯಸ್ತಗೊಂಡಿತು.



ಅಧಿಕಾರಿಗಳ ನಿರ್ಲಕ್ಷ್ಯ, ಸಾರ್ವಜನಿಕರ ಆಕ್ರೋಶ

ರಾಯಚೂರು ಐಡಿಎಸ್ ಎಂಟಿ ಲೇಔಟ್‌ನಲ್ಲಿ ಅವೈಜ್ಞಾನಿಕ ಚರಂಡಿ ಕಾಮಗಾರಿಯಿಂದಾಗಿ ರಸ್ತೆಗಳು ಜಲಾವೃತಗೊಂಡು ವಾಹನ ಸವಾರರು ಪರದಾಡುವಂತಾಗಿದೆ. ಹಲವೆಡೆ ಚರಂಡಿ ಮಿಶ್ರಿತ ಮಳೆನೀರು ನುಗ್ಗಿದ್ದು, ನಿವಾಸಿಗಳು ನೀರು ಹೊರಹಾಕಲು ಹರಸಾಹಸ ಪಡುತ್ತಿದ್ದಾರೆ. ಪಾಲಿಕೆ ಅಧಿಕಾರಿಗಳ ನಿರ್ಲಕ್ಷ್ಯದ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹಲವೆಡೆ ಬಿರುಗಾಳಿ ಸಹಿತ ಭಾರೀ ಮಳೆಯಾಗಿದೆ. ಮಧ್ಯಾಹ್ನವಿಡೀ ಜಿಟಿ ಜಿಟಿ ಮಳೆ, ಸಂಜೆ ಆಗುತ್ತಿದ್ದಂತೆ ಬಿರುಸು ಪಡೆದುಕೊಂಡಿದ್ದು ಮಹಾನಗರವನ್ನು ಮತ್ತಷ್ಟು ತಣ್ಣಗಾಗಿಸಿದೆ. ಆದರೆ, ಈ ದಿಢೀರ್ ಮಳೆಯಿಂದಾಗಿ ಕಚೇರಿ ಮುಗಿಸಿ ಮನೆಗೆ ಮರಳುತ್ತಿದ್ದ ಸಾರ್ವಜನಿಕರು ಹಾಗೂ ರಸ್ತೆ ಬದಿಯ ವ್ಯಾಪಾರಿಗಳು ತೀವ್ರ ತೊಂದರೆ ಅನುಭವಿಸುವಂತಾಯಿತು.

ಕೆಲವೆಡೆ ಟ್ರಾಫಿಕ್ ಜಾಮ್: ಧಾರಾಕಾರ ಮಳೆ ಹಿನ್ನೆಲೆ ನಗರದ ಪ್ರಮುಖ ರಸ್ತೆಗಳು ಕೆರೆಯಂತಾಗಿತ್ತು. ದಿಢೀರ್ ಮಳೆಗೆ ಸಿಲುಕಿದ ನೂರಾರು ಸಾರ್ವಜನಿಕರು ಮತ್ತು ದ್ವಿಚಕ್ರ ವಾಹನ ಸವಾರರು ಕೆ.ಆರ್. ಮಾರ್ಕೆಟ್ ಫ್ಲೈಓವರ್ ಕೆಳಗೆ ನಿಂತು ಆಶ್ರಯ ಪಡೆದರು. ಮಳೆಯಿಂದಾಗಿ ಕೆಲವೆಡೆ ಟ್ರಾಫಿಕ್ ಜಾಮ್ ಉಂಟಾಗಿತ್ತು.

ಮಂಗಳವಾರದಿಂದ ಮಳೆ ಕ್ಷೀಣಿಸಲಿದೆ. ಉತ್ತರ ಒಳನಾಡಿನಲ್ಲಿ ಪ್ರಸ್ತುತ ಒಣ ಹವೆ ಇದ್ದರೂ, ಮುಂದಿನ ದಿನಗಳಲ್ಲಿ ಕೆಲವು ಭಾಗಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಉತ್ತರ ಒಳನಾಡಲ್ಲಿ ಜೂನ್ 15 ರಿಂದ 20 ರವರೆಗೆ ಕೆಲವು ಕಡೆಗಳಲ್ಲಿ ಶೇ50 ಕಡೆ, ಹಗುರದಿಂದ ಸಾಧಾರಣ ಮಳೆಯಾಗಲಿದೆ. ಉತ್ತರ ಒಳನಾಡು ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆ ಇದೆ. ಕಲಬುರಗಿ, ಬೀದರ್, ಕೊಪ್ಪಳ, ಯಾದಗಿರಿ, ರಾಯಚೂರು, ಬೆಳಗಾವಿ, ಬಾಗಲಕೋಟೆ, ವಿಜಯಪುರ, ದಾರವಾಡ, ಗದಗ, ಹಾವೇರಿ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ. ಮೈಸೂರು, ಕೊಡಗು, ಹಾಸನಕ್ಕೆ ಮಂಗಳವಾರ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಕರ್ನಾಟಕ ಪೊಲೀಸರು ರಾಜಸ್ಥಾನ ಎಸಿಬಿ ಬಲೆಗೆ

• **ಬೆಂಗಳೂರು/ಜೈಪುರ:** ವರದಕ್ಷಿಣೆ ಕಿರುಕುಳ ಪ್ರಕರಣದ ತನಿಖೆಗಾಗಿ ರಾಜಸ್ಥಾನದ ಜೈಪುರಕ್ಕೆ ತೆರಳಿದ್ದ ಬೆಂಗಳೂರಿನ ಎಚ್ಎಎಲ್ ಪೊಲೀಸ್ ಠಾಣೆಯ ಮಹಿಳಾ ಸಬ್ ಇನ್ಸ್‌ಪೆಕ್ಟರ್ ಹಾಗೂ ಇಬ್ಬರು ಹೆಡ್ ಕಾನ್‌ಸ್ಟೇಬಲ್‌ಗಳು ಭಾನುವಾರ ಜೈಪುರದ ಹೋಟೆಲೊಂದರಲ್ಲಿ 40,000 ರೂ. ಲಂಚ ಸ್ವೀಕರಿಸುತ್ತಿದ್ದಾಗ ರಾಜಸ್ಥಾನ ಎಸಿಬಿ ಅಧಿಕಾರಿಗಳ ಬಲೆಗೆ ಬಿದ್ದಿದ್ದಾರೆ.

ಬಂಧಿತ ಆರೋಪಿಗಳನ್ನು ಎಚ್ಎಎಲ್ ಪೊಲೀಸ್ ಠಾಣೆಯ ಮಹಿಳಾ ಪಿಎಸ್ಐ ಅನಿತಾ ಕೆ., ಹೆಡ್ ಕಾನ್‌ಸ್ಟೇಬಲ್‌ಗಳಾದ ಉಳ್ಳವಪ್ಪ ತೇಗೂರ್ ಮತ್ತು ಯತೀಶ್ ಎಂದು ಗುರುತಿಸಲಾಗಿದೆ. ಪ್ರಾಥಮಿಕ ಮಾಹಿತಿ ಪ್ರಕಾರ ಜೈಪುರದಲ್ಲಿ ಲಂಚದ ಹಣ ಪಡೆಯುತ್ತಿದ್ದಾಗ ಕಾನ್‌ಸ್ಟೇಬಲ್ ಒಬ್ಬರು ಎಸಿಬಿ ಅಧಿಕಾರಿಗಳಿಗೆ ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾರೆ. ಎಚ್ಎಎಲ್ ಠಾಣೆಯಲ್ಲಿ ದಾಖಲಾಗಿದ್ದ ವರದಕ್ಷಿಣೆ ಕಿರುಕುಳ ಪ್ರಕರಣದ ತನಿಖೆಗಾಗಿ ಈ ಮೂವರು ಸಿಬ್ಬಂದಿ ಅಲ್ಲಿಗೆ ತೆರಳಿದ್ದರು. ಸದ್ಯ ರಾಜಸ್ಥಾನ ಎಸಿಬಿ ಪೊಲೀಸರು ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಕೇಸ್ ಖುಲಾಸೆಗೊಳಿಸಲು 2 ಲಕ್ಷ ರೂ. ಬೇಡಿಕೆ!: ರಾಜಸ್ಥಾನ ಎಸಿಬಿ ಅಧಿಕಾರಿಗಳ ಪ್ರಕಾರ, ಜೈಪುರ ನಿವಾಸಿಯೊಬ್ಬರು ತಮ್ಮ ಮತ್ತು ತಮ್ಮ ಕುಟುಂಬದವರ ವಿರುದ್ಧ ಬೆಂಗಳೂರಿನ ಎಚ್ಎಎಲ್ ಪೊಲೀಸ್ ಠಾಣೆಯಲ್ಲಿ ವರದಕ್ಷಿಣೆ ಕಿರುಕುಳದ ದೂರು ದಾಖಲಾಗಿರುವ ಬಗ್ಗೆ ಮಾಹಿತಿ ನೀಡಿದ್ದರು. ಈ ಪ್ರಕರಣದ ತನಿಖೆಗೆಂದು ಜೈಪುರಕ್ಕೆ ಬಂದಿದ್ದ ಬೆಂಗಳೂರಿನ ಮಹಿಳಾ ಪಿಎಸ್ಐ ನೇತೃತ್ವದ ಮೂವರ ತಂಡ, ಪ್ರಕರಣವನ್ನು ದುರ್ಬಲಗೊಳಿಸಲು ಹಾಗೂ ಕುಟುಂಬದವರ ಹೆಸರನ್ನು ಎಫ್ಐಆರ್ ನಿಂದ ಕೈಬಿಡಲು 2 ಲಕ್ಷ ರೂಪಾಯಿ ಲಂಚದ ಬೇಡಿಕೆ ಇಟ್ಟಿತ್ತು.

ಲಂಚದ ಹಣದೊಂದಿಗೆ ಮರುದಿನ ಬೆಳಗ್ಗೆ ಜೈಪುರದ ಹೋಟೆಲ್‌ಗೆ ಬರುವಂತೆ ದೂರುದಾರರಿಗೆ ಪೊಲೀಸರು ಸೂಚಿಸಿದ್ದರು. ಇದರಿಂದ ಬೇಸತ್ತ ಸಂತ್ರಸ್ತ ಕುಟುಂಬದವರು ತಕ್ಷಣವೇ ರಾಜಸ್ಥಾನದ ಭ್ರಷ್ಟಾಚಾರ ನಿಗ್ರಹ ದಳಕ್ಕೆ ದೂರು ನೀಡಿದ್ದರು. ದೂರಿನ ಆಧಾರದ ಮೇಲೆ ಜೈಪುರದ ದೂರುದಾರರಿಂದ ಮುಂಗಡವಾಗಿ 40,000 ರೂಪಾಯಿ ಲಂಚದ ಹಣವನ್ನು ಪಡೆಯುತ್ತಿದ್ದಾಗ ಹೆಡ್ ಕಾನ್‌ಸ್ಟೇಬಲ್‌ಗಳಾದ ಉಳ್ಳವಪ್ಪ ತೇಗೂರ್ ಅವರನ್ನು ಎಸಿಬಿ ಅಧಿಕಾರಿಗಳು ರೆಡ್ ಹ್ಯಾಂಡ್ ಬಂಧಿಸಿದ್ದಾರೆ. ಬಳಿಕ ನಡೆಸಿದ ತೀವ್ರ ತನಿಖೆಯಲ್ಲಿ ಮಹಿಳಾ ಪಿಎಸ್ಐ ಅನಿತಾ ಹಾಗೂ ಮತ್ತೊಬ್ಬ ಹೆಡ್ ಕಾನ್‌ಸ್ಟೇಬಲ್ ಯತೀಶ್ ಅವರ ಶಾಮೀಲಾತಿ ಸಾಬೀತಾದ ಹಿನ್ನೆಲೆಯಲ್ಲಿ ಅವರಿಬ್ಬರನ್ನೂ ವಶಕ್ಕೆ ಪಡೆಯಲಾಗಿದೆ.

ಬಂಧಿತ ಪೊಲೀಸರ ವಿರುದ್ಧ ರಾಜಸ್ಥಾನದಲ್ಲಿ ಭ್ರಷ್ಟಾಚಾರ ತಡೆ ಕಾಯ್ದೆಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ತನಿಖೆ ಮುಂದುವರಿದಿದೆ. ಲಂಚದ ಹಣಕ್ಕೆ ಕೈಯೊಡ್ಡಿ ಸಿಕ್ಕಿಬಿದ್ದ ಬೆಂಗಳೂರು ಪೊಲೀಸರ ನಡೆ ಇಲಾಖೆಗೆ ತಲೆನೋವಾಗಿದೆ.

ರಾಜ್ಯಕ್ಕೆ ಕೇಂದ್ರದಿಂದ ₹4 ಲಕ್ಷ ಕೋಟಿ ಹಂಚಿಕೆ

ಪುಟ ೧➡ 2014ರಿಂದ 2026ರ ನಡುವೆ 4 ಲಕ್ಷ ಕೋಟಿ ರೂ. ತೆರಿಗೆ ಕರ್ನಾಟಕಕ್ಕೆ ನೀಡಲಾಗಿದೆ. ಅದು 2014ಕ್ಕಿಂತ ಹಿಂದೆ ಯುಪಿಎ ಅವಧಿಯಲ್ಲಿ ನೀಡಿದ್ದಕ್ಕಿಂತ 5 ಪಟ್ಟು ಹೆಚ್ಚಾಗಿದೆ. ಅದೇ ರೀತಿ ಅನುದಾನ ಮತ್ತು ಸಹಾಯಧನ 2014ರಿಂದ 2026ರ ಮಧ್ಯೆ 2.71 ಲಕ್ಷ ಕೋಟಿ ರೂ.ಗಳಾದರೆ ಯುಪಿಎಯ 10 ವರ್ಷದ ಅವಧಿಯಲ್ಲಿ 60 ಸಾವಿರ ಕೋಟಿ ರೂ.ಗಳಾಗಿವೆ. ಪ್ರಸ್ತುತ ಹಣಕಾಸು ವರ್ಷದಲ್ಲಿ ಕರ್ನಾಟಕಕ್ಕೆ 63 ಸಾವಿರ ಕೋಟಿ ರೂ. ಆದಾಯ ಹಂಚಿಕೆಯಾಗಿದೆ ಎಂದು ನಿರ್ಮಲಾ ಸೀತಾರಾಮನ್ ಅಂಕಿ-ಅಂಶ ನೀಡಿದರು.

ಬಂಡವಾಳ ಆಸ್ತಿಗಳಲ್ಲಿ ಹೂಡಿಕೆ ಮಾಡಲು ರಾಜ್ಯಕ್ಕೆ 50 ವರ್ಷಗಳವರೆಗೆ 18 ಸಾವಿರ ಕೋಟಿ ರೂ. ಬಡ್ಡಿರಹಿತ ಸಾಲವನ್ನು ನೀಡಲಾಯಿತು. 8100 ಕಿ.ಮೀ. ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸಲು ರಾಜ್ಯವು 63 ಸಾವಿರ ಕೋಟಿ ರೂ. ಕೇಂದ್ರ ನಿಧಿಯನ್ನು, ರೈಲ್ವೆ ಮೂಲಸೌಕರ್ಯಕ್ಕಾಗಿ 7700 ಕೋಟಿ ರೂ. ಮತ್ತು ಬೆಂಗಳೂರು-ಚೆನ್ನೈ ಕೈಗಾರಿಕಾ ಕಾರಿಡಾರ್ ಯೋಜನೆಗೆ 7 ಸಾವಿರ ಕೋಟಿ ರೂ. ಪಡೆದಿದೆ ಎಂದು ಮಾಹಿತಿ ನೀಡಿದರು.

ಕೊಪ್ಪಳ-ಗದಗ ಹಸಿರು ಇಂಧನ ಕೇಂದ್ರ

ನವೀಕರಿಸಬಹುದಾದ ಇಂಧನ ಯೋಜನೆಗಳನ್ನು ಕೈಗೊಳ್ಳಲು 1,354 ಕೋಟಿ ರೂ.ಗಳನ್ನು ನೀಡಲಾಗಿದೆ. ಮುಂದಿನ ವರ್ಷದ ಜೂನ್ ವೇಳೆಗೆ ಕೊಪ್ಪಳ ಮತ್ತು ಗದಗ ಹಸಿರು ಇಂಧನ ಕೇಂದ್ರಗಳಾಗಲಿವೆ. ಕರ್ನಾಟಕವು ಜನಧನ್, ಮುದ್ರಾ ಸಾಲಗಳು, ಆಯುಷ್ಮಾನ್, ಜಲ ಜೀವನ್ ಮಿಷನ್, ಉಜ್ವಲ, ಕಿಸಾನ್ ಸಮ್ಮಾನ್, ಜನೌಷಧಿ ಕೇಂದ್ರಗಳು ಮತ್ತು ನವೋದ್ಯಮಗಳಿಗೆ ನೀಡಲಾಗುವ ಪ್ರೋತ್ಸಾಹಕಗಳಿಂದ ಪ್ರಯೋಜನ ಪಡೆದಿದೆ ಎಂದು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು.

ಇರಾನ್ ಒಪ್ಪಂದಕ್ಕೆ ಸಹಿ: ರಾಷ್ಟ್ರಗಳ ಭಿನ್ನ ನಿಲುವು

ಪುಟ ೧➡ ಆದರೆ, ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮೈಲ್ ಬಘೈ, ಭಾನುವಾರ ಸಹಿ ಪ್ರಕ್ರಿಯೆ ನಡೆಯುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಆದರೂ, ಮುಂದಿನ ದಿನಗಳಲ್ಲಿ ಒಪ್ಪಂದ ಅಂತಿಮಗೊಳ್ಳುವ ಸಾಧ್ಯತೆಯಿದೆ ಎಂದು ಅವರು ತಿಳಿಸಿದ್ದಾರೆ. ಈ ಪ್ರಸ್ತುತ ಒಪ್ಪಂದದಲ್ಲಿ ಪರಮಾಣು ವಿಷಯಗಳ ಬಗ್ಗೆ ಚರ್ಚಿಸಲಾಗಿಲ್ಲ ಎನ್ನಲಾಗಿದೆ.

ರಾಜತಾಂತ್ರಿಕ ಸಮಾಲೋಚನೆ: ಏಪ್ರಿಲ್ 7 ರಿಂದ ಕದನ ವಿರಾಮ ಜಾರಿಯಲ್ಲಿದೆ. ಸೋಮವಾರದಿಂದ ಆರಂಭವಾಗಲಿರುವ ಜಿ-7 ಶೃಂಗಸಭೆಯ ಸಂದರ್ಭದಲ್ಲಿ ಟ್ರಂಪ್, ಈಜಿಪ್ಟ್, ಕತಾರ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ನಾಯಕರನ್ನು ಭೇಟಿ ಮಾಡಲು ಯೋಜಿಸಿದ್ದಾರೆ. ಯುದ್ಧವನ್ನು ಕೊನೆಗೊಳಿಸುವುದು ಮತ್ತು ಹಾರ್ಮುಜ್ ಜಲಸಂಧಿಯಿಂದ ಮೈನ್‌ಗಳನ್ನು ತೆರವುಗೊಳಿಸುವ ಬಗ್ಗೆ ಈ ಮಾತುಕತೆಗಳಲ್ಲಿ ಚರ್ಚಿಸಲಾಗುವುದು. ಇದಕ್ಕೆ ಬ್ರಿಟನ್ ಮತ್ತು ಫ್ರಾನ್ಸ್ ಸಹಾಯ ನೀಡಲು ಮುಂದಾಗಿವೆ.

ಗೃಹಲಕ್ಷ್ಮಿ, ಗೃಹಜ್ಯೋತಿ ನಿಲ್ಲಲ್ಲ: ಡಿಕೆಶಿ

ಪುಟ ೧➡ ಗ್ಯಾರಂಟಿ ಯೋಜನೆಗಳ ಕುರಿತು ಮಾಧ್ಯಮ ಹೇಳಿಕೆ ನೀಡಿರುವ ಅವರು, ಎಲ್ಲ ಗ್ಯಾರಂಟಿ ಯೋಜನೆಗಳು ಶೇಕಡಾ ನೂರಕ್ಕೆ ನೂರರಷ್ಟು ಮುಂದುವರಿಯುತ್ತವೆ. ಯಾರೂ ಆತಂಕಪಡುವ ಅವಶ್ಯಕತೆ ಇಲ್ಲ, ಈ ಬಗ್ಗೆ ವಿರೋಧ ಪಕ್ಷಗಳು ಹಬ್ಬಿಸುತ್ತಿರುವ ಸುಳ್ಳು ಸುದ್ದಿಗಳಿಗೆ ಸಾರ್ವಜನಿಕರು ಕಿವಿಗೊಡಬಾರದು ಎಂದು ತಿಳಿಸಿದ್ದಾರೆ.

ಕೆಲವರು ಸತ್ತವರ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ, ಖಾತೆ ತೆರೆದು ಯೋಜನೆಯ ಲಾಭ ಪಡೆಯುತ್ತಿದ್ದಾರೆ. ಹೀಗಾಗಿ ಗ್ಯಾರಂಟಿ ಯೋಜನೆ ಫಲಾನುಭವಿಗಳ ದೃಢೀಕರಣಕ್ಕಾಗಿ, ಅವರ ಹೆಸರು, ವಿಳಾಸ, ಅಕೌಂಟ್ ನಂಬರ್ ಖಚಿತಪಡಿಸಿಕೊಳ್ಳಲು ಮತ್ತೆ ಅರ್ಜಿ ಸಲ್ಲಿಸಲು ಹೇಳಲಾಗಿದೆಯೇ ಹೊರತು ಯೋಜನೆಗಳನ್ನು ನಿಲ್ಲಿಸಲು ಅಲ್ಲ ಎಂದು ಮುಖ್ಯಮಂತ್ರಿಗಳು ಮಾಧ್ಯಮ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಜಾಗತಿಕ ಕೊಡುಗೆದಾರ

ಪುಟ ೧➡ ಶನಿವಾರ ರಾತ್ರಿ ಪ್ರಧಾನಿ ಮೋದಿಯವರು ಇಲ್ಲಿಗೆ ಆಗಮಿಸಿದ್ದರು. ಭಾರತ್ ಇನ್ನೋವೇಟ್ಸ್ -2026 ಭಾರತ ಸರಕಾರವು ದೇಶದ ಮಹತ್ವದ ಟೆಕ್ ಸ್ಟಾರ್ಟ್‌ಅಪ್‌ಗಳು ಮತ್ತು ಸಂಶೋಧನಾ ಉದ್ಯಮಗಳನ್ನು ಜಾಗತಿಕ ಮಟ್ಟದಲ್ಲಿ ನಿಲ್ಲಿಸಲು ರೂಪಿಸಿರುವ ವಿಶೇಷ ಯೋಜನೆಯಾಗಿದೆ.

ಸುಧಾರಣಾ ಎಕ್ಸ್‌ಪ್ರೆಸ್ ನಿಲ್ಲದು

ಪುಟ ೧➡ ತಮ್ಮ ಸರಕಾರ ಉನ್ನತ ತಂತ್ರಜ್ಞಾನ, ರಕ್ಷಣೆ ಮತ್ತು ಆವಿಷ್ಕಾರಗಳಂತಹ ಪ್ರಮುಖ ಕ್ಷೇತ್ರಗಳಲ್ಲಿ ಬಹುದೊಡ್ಡ ಸುಧಾರಣೆಗಳನ್ನು ತಂದಿರುವುದನ್ನು ಬೊಟ್ಟು ಮಾಡಿ, ಭಾರತದ 'ಸುಧಾರಣಾ ಎಕ್ಸ್‌ಪ್ರೆಸ್' ಎಂದೂ ನಿಲ್ಲದೆ ನಿರಂತರ ಮುಂದುವರಿದು ವಿಶ್ವಕ್ಕೆ ಒಳಿತನ್ನುಂಟು ಮಾಡಲಿದೆ ಎಂದರು. ಭಾರತ-ಫ್ರಾನ್ಸ್‌ನದು ವಿಶೇಷ ಪಾಲುದಾರಿಕೆಯ ಬಾಂಧವ್ಯ. ಇದು ಸಂಪರ್ಕ, ದೃಢನಿಶ್ಚಯ, ನಾವೀನ್ಯತೆ, ಪ್ರೇರಣೆ ಮತ್ತು ದೃಷ್ಟಿಕೋನದ ಹಂಚಿಕೊಳ್ಳುವಿಕೆಯನ್ನು ಒಳಗೊಂಡಿರುವಂಥದ್ದು ಎಂದರು.

ಗ್ಯಾರಂಟಿಯಿಂದ ಆರ್ಥಿಕತೆಗೆ ಪೆಟ್ಟು

• **ಬೆಂಗಳೂರು:** ಗ್ಯಾರಂಟಿಯಿಂದ ಆರ್ಥಿಕ ಸಂಕಷ್ಟಕ್ಕೆ ಪೆಟ್ಟು ಬಿದ್ದಿದೆ. ಒಂದೊಂದೇ ನೆಪಗಳನ್ನು ಒಡ್ಡಿ ಈಗ ಗ್ಯಾರಂಟಿ ಫಲಾನುಭವಿಗಳ ಸಂಖ್ಯೆಯನ್ನು ಲಕ್ಷ ಲಕ್ಷದಷ್ಟು ಇಳಿಸುವ ದುಸ್ಸಾಹಸಕ್ಕೆ ಕಾಂಗ್ರೆಸ್ ಸರ್ಕಾರ ಕೈ ಹಾಕಿದೆ ಎಂದು ಬಿಜೆಪಿ ಆರೋಪಿಸಿದೆ.



ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಯಾರು ಅರ್ಹರಿದ್ದಾರೋ ಅವರಿಗೆ ಕೊಡಬೇಕು ಎಂಬುದರಲ್ಲಿ ಎರಡು ಮಾತಿಲ್ಲ, ಮೂರು ವರ್ಷದ ಕೆಳಗೆ ಇವರದೇ ಸರ್ಕಾರ ಇತ್ತಲ್ಲವೇ? ಗ್ಯಾರಂಟಿ ಕೊಡುವಾಗ ಅರ್ಹತೆ, ಅನರ್ಹತೆಯನ್ನು ಯಾಕೆ ಯೋಚಿಸಿಲ್ಲ ಎಂದು ಪ್ರಶ್ನಿಸಿದರು.

ಗ್ಯಾರಂಟಿಯಿಂದ ಕ್ಷೇತ್ರದ ಅಭಿವೃದ್ಧಿ ಆಗುತ್ತಿಲ್ಲ ಎಂದು ಕಾಂಗ್ರೆಸ್ಸಿನ ಶಾಸಕ ದೇಶಪಾಂಡೆ ಹೇಳುತ್ತಾರೆ. ಗ್ಯಾರಂಟಿಯಿಂದ ಅಭಿವೃದ್ಧಿ ಆಗದೇ ಆತ್ಮಹತ್ಯೆ ಮಾಡಿಕೊಳ್ಳುವಂಥ ಸ್ಥಿತಿ ಇದೆ ಎಂದು ಕಾಂಗ್ರೆಸ್ ಶಾಸಕರೇ ಹೇಳಿದ್ದಾರೆ. ಹಿಂದಿನ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಯರೆಡ್ಡಿ ಅವರೂ ಗ್ಯಾರಂಟಿಗಳಿಂದ ಸಂಕಷ್ಟ ಆಗಿದೆ ಎಂದು ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದರು. ಸತ್ಯ ಮರೆಮಾಚಿ ಲಕ್ಷ ಲಕ್ಷ ಅನರ್ಹ ಫಲಾನುಭವಿಗಳಿಗೆ ಚುನಾವಣೆ ವೇಳೆ ಗ್ಯಾರಂಟಿ ಕೊಟ್ಟರು ಆಗ ಹೇಳಿದ್ದು ಒಂದು; ಈಗ ಹೇಳುವುದು ಒಂದು. ಮೊದಲು ಅರ್ಹರಾದವರು ಚುನಾವಣೆ ಆದ ನಂತರ ಅನರ್ಹ ಎಂದು ಹೇಳುವುದು ಜನರಿಗೆ ಮಾಡಿದ ಅಪಮಾನ. ಇದು ಸರಿ ಅಲ್ಲ ಎಂದು ವಿವರಿಸಿದರು.

ಕಾಂಗ್ರೆಸ್ ಸರ್ಕಾರದಲ್ಲಿ ದುಡ್ಡಿಲ್ಲ: ಸದಾನಂದಗೌಡ

• **ಗದಗ:** ಗೃಹಜ್ಯೋತಿ, ಗೃಹಲಕ್ಷ್ಮಿ ಯೋಜನೆ ಮರು ಅರ್ಜಿ ಸಲ್ಲಿಕೆ ನೋಡಿದ್ರೆ, ಆಡಳಿತ ವೈಫಲ್ಯವಾದಾಗ ಕಾಂಗ್ರೆಸ್‌ನವರು ಇಂತಹ ಹೊಸ ಸ್ವರೂಪ ಕೊಡುತ್ತಾರೆ. ಅದು ಜನ ವಿರೋಧಿಯಾಗಲಿ, ಮತ್ತೊಂದಾಗಲಿ ಅದು ಕಾಂಗ್ರೆಸ್‌ನವರ ಚಟ ಎಂದು ಮಾಜಿ ಸಿಎಂ ಡಿ.ವಿ.ಸದಾನಂದಗೌಡ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು. ನಗರದ ಹೊರವಲಯದ ಖಾಸಗಿ ರೆಸಾರ್ಟ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದಲ್ಲಿ ಈಗ ದುಡ್ಡಿಲ್ಲ, ಬೇಡವಾದಕ್ಕೆ ಖರ್ಚು ಮಾಡುತ್ತಾರೆ. ಇಂತಹ ಯೋಜನೆಗಳಿಗೆ ಖರ್ಚು ಮಾಡೋಕೆ ಅವರಲ್ಲಿ ದುಡ್ಡಿಲ್ಲ, ದಾರಿ ತಪ್ಪಿಸುವ ಕೆಲಸ ಮಾಡೋದು ಕಾಂಗ್ರೆಸ್‌ನವರ ಸಣ್ಣ ಪ್ರಯತ್ನ, ಇದು ಆಗಬಾರದು ಎಂದು ಹೇಳಿದರು.

ಬಿಡದಿ ಟೌನ್ ಶಿಪ್ ಜಟಾಪಟಿ: ರೈತರು ದೇಶದ ಬೆನ್ನೆಲುಬು. ಇತ್ತೀಚೆಗೆ ದೇವನಹಳ್ಳಿಯಲ್ಲಿ ಸಿದ್ದರಾಮಯ್ಯ ಅವರಿಗೆ ಇದೇ ರೀತಿ ಪರಿಸ್ಥಿತಿ ಎದುರಾಗಿತ್ತು. ರೈತರ ಒತ್ತಡಕ್ಕೆ ಮಣಿದು ಅದನ್ನೆಲ್ಲ ಹಿಂದಕ್ಕೆ ತೆಗೆದುಕೊಂಡರು. ಆದರೆ, ಸಿಎಂ ಡಿಕೆಶಿ ಅವರಿಗೆ ಇಡಿ ನೋಟಿಫಿಕೇಶನ್ ಸಂಬಂಧಗಳು ಸ್ವಲ್ಪ ಜಾಸ್ತಿ ಗೊತ್ತು. ಹಾಗಾಗಿ ಏನಾದ್ರೂ ಮಾಡಬಹುದು. ರಾಮನಗರ, ಬಿಡದಿ ಅವರ ಕಾರ್ಯಕ್ಷೇತ್ರಕ್ಕೊಳಪಡುತ್ತದೆ. ಹಾಗಾಗಿ ಇವರಲ್ಲಿ ಅವರ ಸ್ವಾರ್ಥ ಅಡಗಿದೆ ಅಂತ ಅನಿಸುತ್ತದೆ ಎಂದರು.

ಕಾರ್ಯಕರ್ತರ ಸೇವೆ ನೆನೆದು ಶರಣಪ್ರಕಾಶ ಪಾಟೀಲ ಭಾವುಕ

• **ಕಲಬುರಗಿ:** ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ಸ್ವಕ್ಷೇತ್ರಕ್ಕೆ ಆಗಮಿಸಿದ ಸಚಿವ ಡಾ.ಶರಣಪ್ರಕಾಶ ಪಾಟೀಲ ಅವರು ಕಾರ್ಯಕ್ರಮದ ವೇದಿಕೆಯಲ್ಲೇ ಭಾವುಕರಾಗಿ ಕಣ್ಣೀರಿಟ್ಟ ಘಟನೆ ಸೇಡಂ ಪಟ್ಟಣದಲ್ಲಿ ನಡೆದಿದೆ.

ಜಿಲ್ಲೆಯ ಸೇಡಂ ಪಟ್ಟಣದ ಶ್ರೀಕೊತ್ತಲ ಬಸವೇಶ್ವರ ದೇವಾಲಯದಲ್ಲಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿದ್ದ ವೇಳೆ ಅವರು ಪಕ್ಷದ ನಿಷ್ಠಾವಂತ ಕಾರ್ಯಕರ್ತರ ಸೇವೆಯನ್ನು ಸ್ಮರಿಸಿ ಭಾವುಕರಾದರು. ಮೂರನೇ ಬಾರಿ ಸಚಿವ ಸ್ಥಾನ ದೊರೆತ ಹಿನ್ನೆಲೆ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಪಕ್ಷದ ಬೆಳವಣಿಗೆ ಹಾಗೂ ತಮ್ಮ ರಾಜಕೀಯ ಪಯಣದಲ್ಲಿ ಸಾವಿರಾರು ಕಾರ್ಯಕರ್ತರ ನಿಸ್ವಾರ್ಥ ಸೇವೆ ಮಹತ್ತರ ಪಾತ್ರ ವಹಿಸಿದೆ. ಎಲ್ಲ ಕಾರ್ಯಕರ್ತರಿಗೂ ಹುದ್ದೆ ನೀಡುವುದು ಸಾಧ್ಯವಾಗದಿದ್ದರೂ, ಅವರ ತ್ಯಾಗ, ಶ್ರಮ ಮತ್ತು ನಿಷ್ಠೆ ಅಮೂಲ್ಯವಾಗಿದ್ದು, ಅದನ್ನು ಎಂದಿಗೂ ಮರೆಯುವುದಿಲ್ಲ ಎಂದು ತಿಳಿಸಿದರು.

ಸಚಿವರ ಭಾವನಾತ್ಮಕ ಮಾತುಗಳಿಂದ ಸಮಾರಂಭದಲ್ಲಿ ಉಪಸ್ಥಿತರಿದ್ದ ಕಾರ್ಯಕರ್ತರ ಕಣ್ಣಲ್ಲೂ ನೀರು ತರಿಸಿತು. ಕಾರ್ಯಕರ್ತರ ಸೇವೆಗೆ ತಾವು ಸದಾ ಬದ್ಧರಾಗಿದ್ದು, ಕ್ಷೇತ್ರದ ಅಭಿವೃದ್ಧಿಗಾಗಿ ಪ್ರಾಮಾಣಿಕ ಪ್ರಯತ್ನ ನಡೆಸುವುದಾಗಿ ಭರವಸೆ ನೀಡಿದ ಅವರು, ಗ್ರಾಮಗಳ ಸಮಸ್ಯೆಗಳು ಹಾಗೂ ಅಭಿವೃದ್ಧಿ ಅಗತ್ಯಗಳನ್ನು ಸರ್ಕಾರದ ಗಮನಕ್ಕೆ ತರಲು ಕಾರ್ಯಕರ್ತರು ಸಕ್ರಿಯವಾಗಿ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಸಮಾಜ ಸಂಘಟನೆ ಗುರಿ: ಭಾಗವತ್

ಪುಟ ೧➡ ಸಮಾಜದೊಳಗಿನ ಒಡಕಿನಿಂದಾಗಿ ಇಂತಹ ಸವಾಲುಗಳು ದೇಶಕ್ಕೆ ಎದುರಾಗುತ್ತಿದೆ. ಇಂತಹ ಸವಾಲುಗಳನ್ನು ಒಗ್ಗಟ್ಟಿನ, ಸಂಘಟಿತ ಮತ್ತು ಅನುಶಾಸನ ಬದ್ಧ ಸಮಾಜದಿಂದ ಮಾತ್ರವೇ ಎದುರಿಸಿ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂಬುದನ್ನು ಆರೆಸ್ಸೆಸ್ ಸಂಸ್ಥಾಪಕ ಡಾ.ಕೇಶವ ಬಲಿರಾಮ್ ಹೆಡಗೇವಾರ್ ಅವರು ಸುದೀರ್ಘ ಚಿಂತನೆ, ಸಮಾಲೋಚನೆ, ಅಧ್ಯಯನಗಳಿಂದ ಕಂಡುಕೊಂಡಿದ್ದರು ಎಂದು ಅವರು ನೆನಪಿಸಿದರು.

ಸಮಾಜ ಒಗ್ಗಟ್ಟಿನಿಂದ ಸಂಘಟಿತವಾಗಿರಬೇಕು. ಇದರಿಂದ ಸಮಾಜ ಸಶಕ್ತವಾಗುತ್ತದೆ. ಇದರಿಂದ ಜನರು ಎಲ್ಲ ವ್ಯತ್ಯಾಸಗಳ ಹೊರತಾಗಿಯೂ ಪರಸ್ಪರ ಒಟ್ಟಾಗಿ ತಮ್ಮ ಶ್ರೇಯಸ್ಸನ್ನು ಸಾಧಿಸಲು ಸಾಧ್ಯ. ಭಾರತದ ನಾಗರಿಕತೆ ಮತ್ತು ಸಾಂಸ್ಕೃತಿಕ ಅಸ್ಮಿತೆಯು ಈ ರಾಷ್ಟ್ರೀಯ ಏಕತೆಯನ್ನೇ ಆಧರಿಸಿದೆ ಎಂಬ ನಂಬಿಕೆಯಿಂದಲೇ ಆರೆಸ್ಸೆಸ್ ಸ್ಥಾಪನೆಯಾಗಿದೆ. ಸಮಾಜ ಕಟ್ಟುವುದು ನಮ್ಮ ಕೆಲಸ. ಒಂದು ಬಾರಿ ಸಮಾಜ ಸಂಘಟಿತವಾಗಿ ಮತ್ತು ಜಾಗೃತವಾಗಿ ಎದ್ದು ನಿಂತರೆ ಸಹಜವಾಗಿಯೇ ರಾಷ್ಟ್ರಕ್ಕೆ ಎದುರಾಗಿರುವ ಎಲ್ಲ ಸವಾಲುಗಳಿಗೆ ಸಹಜವಾಗಿಯೇ ಪರಿಹಾರ ಲಭಿಸುತ್ತದೆ ಎಂದು ಅವರು ನುಡಿದರು. ನಾವೆಲ್ಲರೂ ಒಂದು ಸಮಾನ ನಾಗರಿಕ ನೀತಿ ತತ್ತ್ವದೊಂದರ ಮೂಲಕ ಜೋಡಿಸಲ್ಪಟ್ಟಿದ್ದೇವೆ. ಈ ಸಾಂಸ್ಕೃತಿಕ ಏಕತೆಯೇ ರಾಷ್ಟ್ರಜೀವನವಾಗಿದೆ. ಸಂಘದ ಹಿಂದುತ್ವ ಯಾವುದೇ ಮತೀಯ ಸಮುದಾಯವನ್ನು ವಿರೋಧಿಸುವ ತತ್ವವಲ್ಲ, ಹಿಂದು ವರ್ಸಸ್ ಮುಸ್ಲಿಂ ಅಥವಾ ಕ್ರಿಶ್ಚಿಯನ್ ಕೂಡ ಅಲ್ಲ, ಬದಲಿಗೆ ವಸುಧೈವ ಕುಟುಂಬಕಮ್ ಪರಿಕಲ್ಪನೆಯನ್ನು ಆಧರಿಸಿದ್ದು, ಎಲ್ಲ ವೈವಿಧ್ಯತೆಗಳ ಹೊರತಾಗಿಯೂ ಸೌಹಾರ್ದ, ಸಾಮರಸ್ಯದ ಸಹಬಾಳ್ವೆ ಸಾಧ್ಯ ಎಂಬುದು ಸಂಘದ ನಂಬಿಕೆ ಎಂದರು.

ಈ ಹಿನ್ನೆಲೆಯಲ್ಲೇ ಸಂಘ ಚಾರಿತ್ರ್ಯ ನಿರ್ಮಾಣವನ್ನು ಪ್ರಧಾನ ಕಾರ್ಯವನ್ನಾಗಿರಿಸಿಕೊಂಡಿದೆ. ರಾಷ್ಟ್ರೀಯ ಸೇವೆಗೆ ಬದ್ಧವಾದ ವ್ಯಕ್ತಿಗಳನ್ನು ಬೆಳೆಸುವುದು ಸಂಘದ ಕಾರ್ಯವಾಗಿದೆ. ಇದಕ್ಕಾಗಿಯೇ ಸಂಘ ಆರಂಭದಲ್ಲಿ ಪ್ರಾಮಾಣಿಕ, ನಿಸ್ವಾರ್ಥ, ಅನುಶಾಸನಬದ್ಧ ಹಾಗೂ ಸಮಾಜಕ್ಕೆ ಸಮರ್ಪಿತ ವ್ಯಕ್ತಿಗಳ ನಿರ್ಮಾಣಕ್ಕೆ ಆದ್ಯತೆ ನೀಡಿದ್ದು, ಇದರ ಫಲವಾಗಿಯೇ ಇಂದು ದೇಶದಲ್ಲಿ ಸಂಘಪ್ರೇರಿತವಾದ 1.30 ಲಕ್ಷಕ್ಕೂ ಅಧಿಕ ಸೇವಾ ಯೋಜನೆಗಳು ಸಮಾಜದ ಎಲ್ಲ ಕ್ಷೇತ್ರಗಳನ್ನು ಒಳಗೊಂಡು ನಡೆಯುತ್ತಿದ್ದು, ಜನರ ಬದುಕನ್ನು ಎತ್ತರಿಸುವ ಕೆಲಸ ನಡೆಯುತ್ತಿದೆ ಎಂದು ಅವರು ವಿವರಿಸಿದರು.

ವ್ಯಕ್ತಿಗಳನ್ನು ರಾಷ್ಟ್ರ ಸೇವೆಗೆ ಬದ್ಧವಾಗಿರುವಂತೆ ಬೆಳೆಸುವುದು ಸಂಘದ ಕಾರ್ಯವೇ ವಿನಾ ಅವರ ಸಾಧನೆಗಳಿಗೆ ಮನ್ನಣೆ ಪಡೆಯುವುದಲ್ಲ, ಸ್ವಯಂಸೇವಕರು ಸಮಾಜದ ವಿಭಿನ್ನ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಾರೆ. ಅವರು ಏನು ಸಾಧನೆಗೈಯ್ಯುತ್ತಿದ್ದಾರೆಯೋ ಅದು ಅವರದೇ ಸಾಧನೆ. ಅದರ ಕೀರ್ತಿ ಸಂಘಕ್ಕೆ ಬೇಕಾಗಿಲ್ಲ ಎಂದ ಅವರು, ಸ್ವಯಂಸೇವಕ ಪ್ರಧಾನಿ ನರೇಂದ್ರ ಮೋದಿಯವರ ಸಾಧನೆಯ ನಿದರ್ಶನವನ್ನು ಉಲ್ಲೇಖಿಸಿದರು.

ಭಾರತದ ಭವಿಷ್ಯವು ಕೇವಲ ಸರಕಾರಗಳ ಮೇಲೆ ಅವಲಂಬಿತವಾಗಿಲ್ಲ, ಬದಲಿಗೆ ಸಾಮಾನ್ಯ ನಾಗರಿಕರ ಚಾರಿತ್ರ್ಯ ಮತ್ತು ರಾಷ್ಟ್ರನಿರ್ಮಾಣದಲ್ಲಿ ಅವರ ಸಹಭಾಗಿತ್ವವನ್ನು ಅವಲಂಬಿಸಿದೆ. ಸಮಾಜ ಅಭಿವೃದ್ಧಿಯಾದಾಗ ರಾಷ್ಟ್ರವೂ ಅಭಿವೃದ್ಧಿ ಹೊಂದುತ್ತದೆ. ರಾಷ್ಟ್ರೀಯ ಪುನರುತ್ಥಾನದ ಹೊಣೆ ಪ್ರತಿ ನಾಗರಿಕನದಾಗಿದೆ. ಒಬ್ಬ ವ್ಯಕ್ತಿ ವೈಯಕ್ತಿಕ ನೆಲೆಯಲ್ಲಿ ಇನ್ನೊಂದು ನಂಬಿಕೆಯನ್ನು ಆಯ್ಕೆ ಮಾಡಿಕೊಂಡರೆ ಆರೆಸ್ಸೆಸ್ ಆಕ್ಷೇಪಿಸದು. ಆದರೆ ವಂಚನೆ, ಪ್ರಲೋಭನೆ, ಆಮಿಷ, ಸಂಚಿಕೆ, ಪರಂಪರೆಗಳ ಅವಹೇಳನ, ಬಲವಂತದ ನೆಲೆಯಲ್ಲಿ ಮತಾಂತರ ಚಟುವಟಿಕೆಗಳು ನಡೆಯುತ್ತಿರುವುದು ಕಳವಳದ ಅಂಶವಾಗಿದೆ. ಭಾರತದಲ್ಲಿ ವಾಸಿಸುವ ಯಹೂದಿ ಸಮುದಾಯಗಳ ಐತಿಹಾಸಿಕ ಅನುಭವವನ್ನು ಬೊಟ್ಟು ಮಾಡಿದ ಅವರು, ಮುಸ್ಲಿಮರು, ಹಿಂದುಗಳು ಶತಮಾನಗಳಿಂದ ಇಲ್ಲಿ ಒಟ್ಟಾಗಿ ವಾಸಿಸುತ್ತಿದ್ದಾರೆ ಎಂದರು.

ಭಕ್ತಿ ಮೂಲಕ ಯುವಜನರನ್ನು ಸೆಳೆಯುತ್ತಿದೆ ಇಸ್ಕಾನ್: ಸ್ವಾಮೀಜಿ

ಬೆಂಗಳೂರು: ಇಸ್ಕಾನ್ ಸಂಸ್ಥೆಯು ಭಕ್ತಿಯ ಮೂಲಕ ಯುವಜನರನ್ನು ಸೆಳೆಯುತ್ತಿದೆ. ಆ ಮೂಲಕ ಯುವಕರು ಮೋಜು-ಮಸ್ತಿ, ವ್ಯಸನಗಳಿಗೆ ದಾಸರಾಗುವುದನ್ನು ತಡೆಯುತ್ತಿದೆ ಎಂದು ಉಡುಪಿ ಅದಮಾರು ಮಠದ ಶ್ರೀ ಈಶಪ್ರಿಯ ತೀರ್ಥ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ರಾಜಾಜಿನಗರದ ಇಸ್ಕಾನ್ ವತಿಯಿಂದ ಭಾನುವಾರ ಆಯೋಜಿಸಿದ್ದ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ವಿರಚಿತ ಇಸ್ಕಾನ್ ಸಂಸ್ಥಾಪಕ ಶ್ರೀಲ ಪ್ರಭುಪಾದರ ಸಮಗ್ರ ಜೀವನ ಚರಿತ್ರೆಯನ್ನು ಒಳಗೊಂಡ ಶ್ರೀಲ ಪ್ರಭುಪಾದ ಚರಿತಾಮೃತಮ್ ಕನ್ನಡ ಮಹಾಕಾವ್ಯ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಭಕ್ತಿಯ ಮೂಲಕ ಅಸಂಖ್ಯ ಯುವಜನರನ್ನು ಇಸ್ಕಾನ್ ಸೆಳೆಯುತ್ತಿದೆ. ಅವರ ಸಾಧನೆಗಳಿಗೆ ಇಸ್ಕಾನ್ ಸ್ಫೂರ್ತಿಯಾಗುತ್ತಿದೆ. ಯುವಜನರು ಮೋಜ-ಮಸ್ತಿ ಮಾಡುತ್ತಾ ವ್ಯಸನಗಳಿಗೆ ದಾಸರಾಗದಂತೆ ತಡೆಯುತ್ತಿದೆ. ಆ ಮೂಲಕ ಸದೃಢ ಸಮಾಜ ನಿರ್ಮಾಣಕ್ಕೆ ಅಪಾರ ಕೊಡುಗೆ ನೀಡುತ್ತಿದೆ. ಪ್ರತಿಯೊಬ್ಬರಿಗೂ ದೇವರು ವಿಶೇಷ ಶಕ್ತಿ ನೀಡಿದ್ದು ಅದನ್ನು ಬಳಸಿಕೊಂಡು ಸಾಧನೆ ಮಾಡಬೇಕು ಎಂದು ಕರೆ ನೀಡಿದರು. ಶ್ರೀಲ ಪ್ರಭುಪಾದರ ಅಸಾಧಾರಣ ಸಾಧನೆ ಇಂದಿಗೂ ಜನಮಾನಸದಲ್ಲಿ ಪ್ರೇರಣೆಯನ್ನು ತುಂಬುವ ಶಕ್ತಿಯಾಗಿದೆ. ಇಸ್ಕಾನ್ ಬೆಂಗಳೂರು ಸಂಸ್ಥೆಯು ಅವರ ಹಾದಿಯನ್ನೇ ಅನುಸರಿಸಿ ಹರಿನಾಮ ಸಂಕೀರ್ತನೆ, ಪುಸ್ತಕ ವಿತರಣೆ ಮತ್ತು ಅನ್ನದಾನದಂತಹ ಕಾರ್ಯಕ್ರಮಗಳ ಮೂಲಕ ವಿಶ್ವಮಟ್ಟದಲ್ಲಿ ಗಮನ ಸೆಳೆದಿದೆ. ಮುಂದಿನ ದಿನಗಳಲ್ಲಿ ಇಂತಹ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತಷ್ಟು ವಿಸ್ತಾರಗೊಳ್ಳಲಿ ಎಂದು ಶುಭ ಹಾರೈಸಿದರು.

ಇಸ್ಕಾನ್ ಬೆಂಗಳೂರು ಸಂಸ್ಥೆಯ ಅಧ್ಯಕ್ಷ ಮಧು ಪಂಡಿತದಾಸ, ಖ್ಯಾತ ಶಿಕ್ಷಣತಜ್ಞ ಡಾ.ಗುರುರಾಜ ಕರ್ಜಗಿ, ಲೇಖಕ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಮತ್ತಿತರರು ಉಪಸ್ಥಿತರಿದ್ದರು.

ಸ್ವಚ್ಛ ಭಾರತ



ನಗರದ ಮೈಸೂರು ಬ್ಯಾಂಕ್ ವೃತ್ತದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಭಾನುವಾರ ಬಿಜೆಪಿ ವತಿಯಿಂದ ಸ್ವಚ್ಛ ಭಾರತ ಕಾರ್ಯಕ್ರಮ ನಡೆಸಲಾಯಿತು. ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸಂಸದ ಪಿ.ಸಿ. ಮೋಹನ್, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿ ಗೌಡ, ಮುಖಂಡರು, ಕಾರ್ಯಕರ್ತರು ಸ್ವಚ್ಛತಾ ಕಾರ್ಯದಲ್ಲಿ ಇದ್ದರು.

ನಾನು, ಶಿವಕುಮಾರ್ ಒರಿಜಿನಲ್ ಜೋಡೆತ್ತುಗಳು: ಡಾ.ಪರಮೇಶ್ವರ್

ಕೊರಟಗೆರೆ: ನಾನು ಮತ್ತು ಡಿಕೆ ಶಿವಕುಮಾರ್ ಮೂಲ ಕಾಂಗ್ರೆಸ್‌ನ ಒರಿಜಿನಲ್ ಜೋಡೆತ್ತುಗಳು ಅವರು ಸಿಎಂ ನಾನು ಡಿಸಿಎಂ ನಾವು ರಾಜ್ಯದಲ್ಲಿ ಬದಲಾವಣೆ ಮಾಡುತ್ತೇವೆ. ಪಕ್ಷ ಮತ್ತು ರಾಜ್ಯ ಹಿತವನ್ನು ನಾವು ಎಂದೂ ಮರೆಯುವುದಿಲ್ಲ ಎಂದು ಡಿಸಿಎಂ ಡಾ.ಜಿ ಪರಮೇಶ್ವರ್ ತಿಳಿಸಿದರು. ಕೊರಟಗೆರೆ ಪಟ್ಟಣದ ಜೂನಿಯರ್ ಕಾಲೇಜು ಆವರಣದಲ್ಲಿ ಭಾನುವಾರ ಕಾಂಗ್ರೆಸ್ ಕಾರ್ಯಕರ್ತರು ಹಮ್ಮಿಕೊಂಡಿದ್ದ ಅಭಿನಂದನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.



ಸಿಎಂ ಓರ್ವ ಸಾಮಾನ್ಯ ಕಾರ್ಯಕರ್ತ, ಅದೇ ರೀತಿ ಬಿ.ಕೆ ಹರಿಪ್ರಸಾದ್ ಮತ್ತು ನಾನೂ ಸಹ ಸಾಮಾನ್ಯ ಕಾರ್ಯಕರ್ತರೇ ನಾವು ಕಟ್ಟಾ ಕಾಂಗ್ರೆಸಿಗರು ನಮ್ಮನ್ನು ನಮ್ಮ ಪಕ್ಷ ಗುರುತಿಸಿ ಮೂವರಿಗೂ ಗುರುತ್ತರ ಜವಾಬ್ದಾರಿ ನೀಡಿದೆ. ನಮ್ಮದು ಮುಂದುರಿದ ಸರ್ಕಾರ ನಿರ್ಗಮಿತ ಸಿಎಂ ಸಿದ್ದರಾಮಯ್ಯ, 3 ವರ್ಷ ಉತ್ತಮ ಆಡಳಿತವನ್ನು ನೀಡಿ ಕಾಂಗ್ರೆಸ್ ಸಿದ್ದಾಂತಕ್ಕೆ, ಹೈ ಕಮಾಂಡ್ ತೀರ್ಮಾನಕ್ಕೆ ರಾಜೀನಾಮೆ ನೀಡಿದ್ದಾರೆ. ಅವರನ್ನು ಗೌರವಿಸುತ್ತೇನೆ.

ಈ ಹಿಂದೆ ಸರ್ಕಾರದ ಎಲ್ಲಾ ಹಳೆ ಯೋಜನೆಗಳನ್ನು ಮುಂದುವರಿಸುತ್ತಾ ಹಲವು ಹೊಸ ಜನಪರ ಯೋಜನೆಗಳನ್ನು ರೂಪಿಸುತ್ತೇವೆ ಎಂದರು. ನಾನು ಮತ್ತು ಸಿಎಂ ಇಬ್ಬರೂ ಸೇರಿಯೇ ಎಲ್ಲಾ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆ ಜೋಡೆತ್ತುಗಳಾಗಿ ನಾವು ರಾಜ್ಯವನ್ನು ಮುನ್ನಡೆಸುತ್ತೇವೆ. ಶಿವಕುಮಾರ್ ಅವರಿಗೂ ಅಪಾರ ಅನುಭವಿದೆ. ಈಗಾಗಲೇ ಅಧಿಕಾರಿಗಳಿಗೆ ಶಿಸ್ತಿನ ಪಾಠವನ್ನು ತಿಳಿಸಿದ್ದಾರೆ. ಸರ್ಕಾರಿ ನೌಕರರಾಗಿ ಜನಪರ ಕೆಲಸವನ್ನು ಮಾಡುವಂತೆ ತಾಕೀತು ಮಾಡಿದ್ದಾರೆ. ಜನರ ಸಂಪರ್ಕಕ್ಕೆ ಬರದ ಅಧಿಕಾರಿಗಳಿಗೆ ಗೇಟ್ ಪಾಸ್ ನೀಡುವ ಎಚ್ಚರಿಗೆ ನೀಡಿದ್ದು ಆಡಳಿತದಲ್ಲಿ ಇದೊಂದು ದೊಡ್ಡ ಸಂಚಲವನ್ನು ಸೃಷ್ಟಿಸಲಿದೆ ಎಂದು ಹೇಳಿದರು.

ಕಿರುಸುದ್ದಿ

ಕಲುಷಿತ ಆಹಾರ: 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಸ್ವಸ್ಥ

ಬೆಳಗಾವಿ: ಬೆಳಗಾವಿಯ ಮಚ್ಚೆ ಗ್ರಾಮದ ಡಾ.ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯ-6ರಲ್ಲಿ ಕಲುಷಿತ ಆಹಾರ ಸೇವಿಸಿದ ಪರಿಣಾಮ 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಸ್ವಸ್ಥಗೊಂಡ ಘಟನೆ ಬೆಳಕಿಗೆ ಬಂದಿದೆ. ಘಟನೆಯ ಬಳಿಕ ವಾರ್ಡನ್ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡದ ಹಿನ್ನೆಲೆಯಲ್ಲಿ ಆಕ್ರೋಶಗೊಂಡ ವಿದ್ಯಾರ್ಥಿಗಳು ಶನಿವಾರ ತಡರಾತ್ರಿ, ವಸತಿ ನಿಲಯದ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು. ಶನಿವಾರ ರಾತ್ರಿ ಹಾಸ್ಟೆಲ್‌ನಲ್ಲಿ ನೀಡಲಾದ ಆಹಾರ ಸೇವಿಸಿದ ಕೆಲವೇ ಸಮಯದಲ್ಲಿ ಸುಮಾರು 30ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತೀವ್ರ ಹೊಟ್ಟೆನೋವು, ವಾಂತಿ ಹಾಗೂ ಅಸ್ವಸ್ಥತೆ ಕಾಣಿಸಿಕೊಂಡಿದೆ. ವಿದ್ಯಾರ್ಥಿಗಳು ಚಿಕಿತ್ಸೆಗಾಗಿ ಆಸ್ಪತ್ರೆಗೆ ತೆರಳಿ ವೈದ್ಯಕೀಯ ನೆರವು ಪಡೆದಿದ್ದಾರೆ. ಆದರೆ, ಇಷ್ಟೊಂದು ಗಂಭೀರ ಘಟನೆ ನಡೆದಿದ್ದರೂ ಹಾಸ್ಟೆಲ್ ವಾರ್ಡನ್ ಅಥವಾ ಸಮಾಜ ಕಲ್ಯಾಣ ಇಲಾಖೆಯ ಯಾವುದೇ ಹಿರಿಯ ಅಧಿಕಾರಿಗಳು ವಿದ್ಯಾರ್ಥಿಗಳ ಆರೋಗ್ಯ ವಿಚಾರಿಸಲು ಸ್ಥಳಕ್ಕೆ ಆಗಮಿಸಿಲ್ಲ ಎಂದು ವಿದ್ಯಾರ್ಥಿಗಳು ಆರೋಪಿಸಿದ್ದಾರೆ. ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಉದಾಸೀನತೆಯ ಧೋರಣೆಯಿಂದ ಆಕ್ರೋಶಗೊಂಡ ವಿದ್ಯಾರ್ಥಿಗಳು ಹಾಸ್ಟೆಲ್ ಆವರಣದಲ್ಲೇ ಧರಣಿ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಲೈಂಗಿಕ ಕಿರುಕುಳ: ವ್ಯಕ್ತಿ ಕೊಲೆ

ಬಳ್ಳಾರಿ: ಲೈಂಗಿಕ ಕಿರುಕುಳ ಆರೋಪಕ್ಕೆ ಸಂಬಂಧಿಸಿ ವ್ಯಕ್ತಿಯೊಬ್ಬನನ್ನು ಕೊಲೆ ಮಾಡಿದ ಘಟನೆ ಸಮೀಪದ ಮೋಕ ಗ್ರಾಮದ ಕಾಲುವೆ ಬಳಿ ನಡೆದಿದೆ. ನೆರೆಯ ಆಂಧ್ರಪ್ರದೇಶದ ಬಲಗುಡ್ಡ ಗ್ರಾಮದ ಬಸವನಗೌಡ ಪಾಟೀಲ್(27) ಕೊಲೆಯಾದ ಯುವಕ. ನಗರದ ಖಾಸಗಿ ಲ್ಯಾಬ್‌ನಲ್ಲಿ ಬಸವನಗೌಡ ಪಾಟೀಲ್ ಕೆಲಸ ನಿರ್ವಹಿಸುತ್ತಿದ್ದ, ತಾಲೂಕಿನ ಎಂ.ಗೋನಾಳ ಗ್ರಾಮದ ಮಹಿಳೆಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ. ಬೇಸತ್ತ ಮಹಿಳೆ ತಮ್ಮ ಸಹೋದರ, ಸಂಬಂಧಿಕರಿಗೆ ಮಾಹಿತಿ ಕೊಲೆ ಮಾಡಿದ್ದಾಳೆ ಎನ್ನುವ ಆರೋಪಗಳು ಕೇಳಿ ಬಂದಿವೆ. ಈ ಕುರಿತು ಪ್ರಕರಣ ದಾಖಲಿಸಿಕೊಂಡ ಮೋಕ ಪೊಲೀಸ್ ಠಾಣೆ ಅಧಿಕಾರಿಗಳು ತನಿಖೆ ನಡೆಸಿದ್ದು, ವೈ.ದೊಡ್ಡ ಬಸವನಗೌಡ, ಶ್ವೇತಾ, ವಿಜಯ್ ಎನ್ನುವ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ್ದಾರೆ.

ಮಗನನ್ನೇ ಕದ್ದೊಯ್ದ ತಂದೆ: ತಾಯಿಯಿಂದ ದೂರು

ಮಡಿಕೇರಿ: ತಂದೆಯೇ ತನ್ನ ಮಗುವನ್ನು ಅಪಹರಿಸಿರುವ ಆರೋಪ ಕೇಳಿ ಬಂದಿದೆ. ಮೂರ್ನಾಡಿನಲ್ಲಿ ಜೂ.10ರಂದು ಈ ಘಟನೆ ನಡೆದಿದ್ದು, ಜಗಳವಾಡಿಕೊಂಡು ಗಂಡನ ಮನೆ ಬಿಟ್ಟು ತಾಯಿ ಮನೆಯಲ್ಲಿದ್ದ ಭವ್ಯಾ ಎಂಬವರ ಐದು ವರ್ಷದ ಮಗುವನ್ನು ಆಕೆಯ ಗಂಡ ತಿಮ್ಮಯ್ಯ ಕಾರಿನಲ್ಲಿ ಅಪಹರಿಸಿರುವುದಾಗಿ ಹೇಳಲಾಗಿದೆ. ಈ ಸಂಬಂಧ ಭವ್ಯಾ ಮೂರ್ನಾಡು ಉಪ ಠಾಣೆಗೆ ದೂರು ನೀಡಿದ್ದಾರೆ. ಮಡಿಕೇರಿ ತಾಲೂಕಿನ ಕಟ್ಟೆಮಾಡು ಗ್ರಾಮದ ತಿಮ್ಮಯ್ಯ ಎಂಬವರೊಂದಿಗೆ 6 ವರ್ಷಗಳ ಹಿಂದೆ ಕಾಂತೂರಿನ ಭವ್ಯಾ ಅವರ ವಿವಾಹವಾಗಿತ್ತು. ಗಂಡು ಮಗುವೂ ಜನಿಸಿತ್ತು. ಆದಾದ ಬಳಿಕ ಕ್ರಮೇಣ ಇವರ ಸಂಸಾರದಲ್ಲಿ ಬಿರುಕು ಮೂಡಿದ್ದು, ಯಾವಾಗಲೂ ಮದ್ಯಪಾನ ಮಾಡಿ ಮನೆಯಲ್ಲೇ ಇರುತ್ತಿದ್ದ ತಿಮ್ಮಯ್ಯನಿಗೆ ತಾನು ದುಡಿದು ತಂದ ಸಂಬಳವನ್ನೆಲ್ಲಾ ನೀಡಬೇಕಾಗಿತ್ತು. ಅಲ್ಲದೆ, ಮಗುವಿನ ಬಗ್ಗೆಯೂ ಆತ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ, ಹಲ್ಲೆ ಮಾಡುತ್ತಿದ್ದ ಮತ್ತು ಮಗುವಿಗೂ ಜೀವ ಬೆದರಿಕೆ ಹಾಕುತ್ತಿದ್ದ ಎಂದು ಭವ್ಯಾ ಅವರ ಆರೋಪವಾಗಿದೆ.

ರೈಸ್ ಕಾನ್‌ಕ್ಲೇವ್ ಸಮಾರೋಪದಲ್ಲಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ

ನಾವೀನ್ಯತೆಗೆ ಉತ್ತೇಜನ

ಬೆಂಗಳೂರು: ನಾವೀನ್ಯತೆ-ಚಾಲಿತ ಉತ್ಪಾದನೆ, ಸ್ಥಳೀಯ ತಂತ್ರಜ್ಞಾನಗಳು ಮತ್ತು ಉದ್ಯಮಶೀಲತೆಯ ಮೂಲಕ ಸ್ವಾವಲಂಬಿ ಮತ್ತು ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಿಸಲು ಕೊಡುಗೆ ನೀಡಬೇಕೆಂದು ನಾವೀನ್ಯಕಾರರು, ಉದ್ಯಮಿಗಳು ಮತ್ತು ಸಂಶೋಧಕರಿಗೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಕರೆ ನೀಡಿದರು.

ರಾಷ್ಟ್ರೀಯ ಪ್ರಾದೇಶಿಕ ವಿಜ್ಞಾನ ಪ್ರಯೋಗಾಲಯ, ಸಿಎಸ್‌ಐಆರ್-ಫೋರ್ತ್ ಪ್ಯಾರಾಡೈಮ್ ಇನ್ಸ್ಟಿಟ್ಯೂಟ್ ಮತ್ತು ಸಿಎಸ್‌ಐಆರ್-ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ ಸಂಯುಕ್ತ ಆಶ್ರಯದಲ್ಲಿ ಶನಿವಾರ ವಿ.ಎ. ಘಾಟಗೆ ಕನ್ವೆನ್ಷನ್ ಸೆಂಟರ್‌ನಲ್ಲಿ ಹಮ್ಮಿಕೊಂಡ ರೈಸ್ ಕಾನ್‌ಕ್ಲೇವ್ 2026 ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಭಾರತವು ವೈಜ್ಞಾನಿಕ ಪ್ರಗತಿ, ತಾಂತ್ರಿಕ ನಾವೀನ್ಯತೆ ಮತ್ತು ಯುವ ಜನತೆಯ ಆಕಾಂಕ್ಷೆಗಳಿಂದ ಚಾಲಿತವಾಗಿರುವ ಪರಿವರ್ತನಾತ್ಮಕ ಹಂತಕ್ಕೆ ಸಾಕ್ಷಿಯಾಗುತ್ತಿದೆ. ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಬಲಪಡಿಸುವ, ಉತ್ಪಾದನಾ ಸಾಮರ್ಥ್ಯಗಳನ್ನು ವಿಸ್ತರಿಸುವ ಮತ್ತು ನಾವೀನ್ಯತೆಯ ಸಂಸ್ಕೃತಿಯನ್ನು ಉತ್ತೇಜಿಸುವ ಅಗತ್ಯವಾಗಿದೆ.

ರಾಷ್ಟ್ರೀಯ ಆದ್ಯತೆಗಳನ್ನು ಪರಿಣಾಮಕಾರಿಯಾಗಿ ಪೂರೈಸಲು ಭಾರತದೊಳಗೆ ವಿನ್ಯಾಸಗೊಳಿಸಿದ ಮತ್ತು ಅಭಿವೃದ್ಧಿಪಡಿಸಿದ ಪರಿಹಾರಗಳ ಅಗತ್ಯವಿದೆ ಎಂದರು. ಭಾರತವನ್ನು ಜಾಗತಿಕ ನಾವೀನ್ಯತೆಯ ಕೇಂದ್ರವನ್ನಾಗಿ ಮಾಡಲು ಸಂಶೋಧನೆ ಮತ್ತು ಉದ್ಯಮ ಒಟ್ಟಾಗಿ ಕೆಲಸ ಮಾಡುವ ಅಗತ್ಯವಾಗಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೇಳಿದರು.



ವಿಕಸಿತ ಭಾರತಕ್ಕೆ ನಾವೀನ್ಯತೆ ಪಾತ್ರ ಅನನ್ಯ

ವಿಕಸಿತ ಭಾರತ 2047ರ ಗುರಿ ತಲುಪಲು ಕೃಷಿ ಆಹಾರ ತಂತ್ರಜ್ಞಾನ ಮತ್ತು ನಾವೀನ್ಯತೆಗಳ ಪಾತ್ರ ಅತಿ ದೊಡ್ಡದಾಗಿದೆ. ತಂತ್ರಜ್ಞಾನಗಳು ಮಾರುಕಟ್ಟೆಯನ್ನು ತಲುಪಿ ಸಾಮಾನ್ಯ ಜನರ ಜೀವನವನ್ನು ಸುಗಮಗೊಳಿಸಬೇಕು. ಈ ನಿಟ್ಟಿನಲ್ಲಿ ಸಿಎಸ್‌ಐಆರ್ ಸಂಸ್ಥೆಗಳ ಕೊಡುಗೆ ಅತ್ಯಂತ ಶ್ಲಾಘನೀಯ.

> **ವೈಜ್ಞಾನಿಕ ಆವಿಷ್ಕಾರಗಳನ್ನು ತಂತ್ರಜ್ಞಾನಗಳು, ಉದ್ಯಮಗಳು ಮತ್ತು ಸಾಮಾಜಿಕ ಪ್ರಯೋಜನಗಳಾಗಿ ಪರಿವರ್ತಿಸಲು ಅನುಕೂಲವಾಗುವಂತಹ ಪೂರಕ ಪರಿಸರ ವ್ಯವಸ್ಥೆಯ ಅಗತ್ಯವಾಗಿದೆ ಎಂದು ಹೇಳಿದರು.**
> ■ ಡಾ.ಗಿರಿಧರ್ ಪರ್ವತಮ್, ಸಿಎಸ್‌ಐಆರ್-ಸಿಎಫ್‌ಟಿಆರ್‌ಐ ನಿರ್ದೇಶಕ

ಶನಿವಾರ ಹಾಗೂ ಭಾನುವಾರ ನಡೆದ ರೈಸ್ ಕಾನ್‌ಕ್ಲೇವ್‌ನಲ್ಲಿ 60 ಕ್ಕೂ ಹೆಚ್ಚಿನ ನವೋದ್ಯಮವಿತ್ತು. ಅದರಲ್ಲಿ ಪ್ರಮುಖವಾಗಿ ವಾಣಿಜ್ಯ ಪೈಲಟ್ ಪರವಾನಗಿಗಾಗಿ ದೇಶಿಯವಾಗಿ ವಿನ್ಯಾಸಗೊಳಿಸಲಾದ ತರಬೇತಿ ವಿಮಾನ ಹಂಸ-3, ಹೈ ಆಲ್ಟಿಟ್ಯೂಡ್ ಪ್ಲಾಟ್‌ಫಾರ್ಮ್ ಎಂಬ ನಿರಂತರ ಕಣ್ಗಾವಲು ನಡೆಸಲು ಸೌರಶಕ್ತಿಯಿಂದ ಚಲಿಸುವ ಡ್ರೋನ್ ತಂತ್ರಜ್ಞಾನ, ಚಂದ್ರಯಾನ -4 ಮಾದರಿ, ಅಗ್ನಿಶಾಮಕ ಡ್ರೋನ್ ಮುಂತಾದವುಗಳ ಗಮನ ಸೆಳೆಯಿತು.

ಇಸ್ರೋ ಅಧ್ಯಕ್ಷ ಡಾ.ನಾರಾಯಣನ್, ಸಿಎಸ್‌ಐಆರ್ - ಎನ್‌ಎಎಲ್ ನಿರ್ದೇಶಕರಾದ ಅಭಯ್ ಪಾಶ್ಲೇಕರ್, ಸಿಎಸ್‌ಐಆರ್ - ಎಚ್‌ಪಿಐ ನಿರ್ದೇಶಕರಾದ ಡಾ ಗೋಪಾಲಕೃಷ್ಣ ಪತ್ರ ಮುಂತಾದವರಿದ್ದರು.

ವಿಕಸಿತ ಭಾರತಕ್ಕೆ ಎಲ್ಲರ ಕನಸು ಸಹಭಾಗಿತ್ವ ಅಗತ್ಯ

ಬೆಂಗಳೂರು: ವಿಕಸಿತ ಭಾರತದ ಕನಸು ಸಾಕಾರಗೊಳ್ಳಲು ಸರ್ಕಾರದ ಜತೆಗೆ ಸಮಾಜದ ಎಲ್ಲ ವಲಯಗಳ ಸಹಭಾಗಿತ್ವ ಅಗತ್ಯ ಎಂದು ಎಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಕರೆ ನೀಡಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸರ್ಕಾರವು 12 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಬೆಂಗಳೂರಿನ ಜಯನಗರದಲ್ಲಿ ಭಾನುವಾರ ಏರ್ಪಡಿಸಿದ ವಿಕಸಿತ ಭಾರತ ಸಂಕಲ್ಪ ಸಮಾವೇಶ ಉದ್ಘಾಟಿಸಿದ ಅವರು, 2047ರ ಅಭಿವೃದ್ಧಿ ಗುರಿ ಸಾಧನೆಗೆ ನಾವೀನ್ಯತೆ ಮತ್ತು ಸಾಮೂಹಿಕ ಪ್ರಯತ್ನ ಅಗತ್ಯ ಎಂದರು.

ಪಶ್ಚಿಮ ಏಷ್ಯಾದ ಉದ್ವಿಗ್ನತೆ, ಜಾಗತಿಕ ಒತ್ತಡ, ಕಚ್ಚಾ ತೈಲ ಬೆಲೆ ಏರಿಳಿತ ಮತ್ತು ಸಾಗಣೆ ವೆಚ್ಚ ಹೆಚ್ಚಳದಂತಹ ಸಮಸ್ಯೆಗಳ ನಡುವೆಯೂ ದೇಶದ ಪೂರೈಕೆ ವ್ಯವಸ್ಥೆ ಮತ್ತು ಆರ್ಥಿಕ ಸ್ಥಿರತೆ ಕಾಪಾಡಲಾಗಿದೆ. ತ್ರೈಮಾಸಿಕದಿಂದ ತ್ರೈಮಾಸಿಕಕ್ಕೆ, ವರ್ಷದಿಂದ ವರ್ಷಕ್ಕೆ ಭಾರತವು ಜಾಗತಿಕ ಮಟ್ಟದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಮುನ್ನಡೆಯುತ್ತಿದೆ ಎಂದು ತಿಳಿಸಿದರು.

ಕಳೆದ ಹಣಕಾಸು ವರ್ಷದಲ್ಲಿ (2025-26) ಭಾರತದ ಒಟ್ಟು ಆಂತರಿಕ ಉತ್ಪಾದನೆ (ಜಿಡಿಪಿ) ಪ್ರಗತಿ ದರವು ಶೇ. 7.7ಕ್ಕೆ ಏರಿಕೆಯಾಗಿದೆ. ಇದು ಅದರ ಹಿಂದಿನ ವರ್ಷ ದಾಖಲಾಗಿದ್ದ ಶೇ. 7.1 ಕ್ಕಿಂತ ಗಣನೀಯ ಪ್ರಮಾಣದ ಪ್ರಗತಿ ತೋರಿಸುತ್ತದೆ. ಪ್ರಸಕ್ತ ಸಾಲಿನ ಜನವರಿ-ಮಾರ್ಚ್ ಅವಧಿಯ ನಾಲ್ಕನೇ ತ್ರೈಮಾಸಿಕದಲ್ಲಿ ಆರ್ಥಿಕತೆಯು ಶೇ. 7.8ರಷ್ಟು ಪ್ರಗತಿ ಸಾಧಿಸಿದೆ.

ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ, ಯುವ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಹಾಗೂ ಸಂಸದ ತೇಜಸ್ವಿ ಸೂರ್ಯ, ಶಾಸಕ ಸಿ.ಕೆ. ರಾಮಮೂರ್ತಿ, ವಿಧಾನ ಪರಿಷತ್ ಸದಸ್ಯ ಗೋಪಿನಾಥ್ ರೆಡ್ಡಿ, ಪದಾಧಿಕಾರಿಗಳು ಉಪಸ್ಥಿತರಿದ್ದರು.



ಪೋಲಿಯೊ: ಜೂ.25ರಂದು ಜಾಥಾ

ಬೆಂಗಳೂರು: ರಾಜ್ಯದಲ್ಲಿ ಜೂ.28ರಂದು ನಡೆಯಲಿರುವ ಪಲ್ಸ್ ಪೋಲಿಯೊ ಲಸಿಕಾ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸುತ್ತೋಲೆ ಹೊರಡಿಸಿದ್ದು, ರಾಜ್ಯದ ಎಲ್ಲ ಶಾಲೆಗಳಲ್ಲಿ ಜೂ. 25 ರಂದು ಪಲ್ಸ್ ಪೋಲಿಯೋ ಕುರಿತು ಜಾಗೃತಿ ಜಾಥಾ ಆಯೋಜಿಸುವಂತೆ ಹಾಗೂ ಜೂ. 28 ರಂದು ನಡೆಯಲಿರುವ ಲಸಿಕಾ ಕಾರ್ಯಕ್ರಮಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲಾಗಿದೆ. ಜೂ. 28ರಂದು ಮಕ್ಕಳಿಗೆ ಪೋಲಿಯೋ ಲಸಿಕೆ ನೀಡಲು ಸೂಕ್ತ ವ್ಯವಸ್ಥೆ ಕಲ್ಪಿಸುವಂತೆ ಶಾಲೆಗಳಿಗೆ ನಿರ್ದೇಶನ ನೀಡಲಾಗಿದೆ. ಅಲ್ಲದೇ, ಪಾಲಕರು ತಮ್ಮ ಮೊದಲ ಕಾರ್ಯವಾಗಿ ಮಕ್ಕಳಿಗೆ ಪೋಲಿಯೋ ಹನಿ ಹಾಕಿಸುವ ಮೂಲಕ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಬೇಕು ಎಂದು ಇಲಾಖೆ ಮನವಿ ಮಾಡಿದೆ.

ಕೈದಿಗಳಿಂದ ವಾರ್ಡನ್ ಮೇಲೆ ಹಲ್ಲೆ

- ವಿಚಾರಣಾಧೀನ ಕೈದಿಗಳ ಉದ್ಧಟತನ
- ವಾರ್ಡನ್ ಸ್ಥಿತಿ ಗಂಭೀರ

ಧಾರವಾಡ: ಒಂದಿಲ್ಲೊಂದು ವಿವಾದಗಳಿಂದ ಸುದ್ದಿಯಲ್ಲಿರುವ ಧಾರವಾಡದ ಕೇಂದ್ರ ಕಾರಾಗೃಹದಲ್ಲಿ ಇದೀಗ ಮತ್ತೊಂದು ಘಟನೆ ನಡೆದಿದೆ. ಜೈಲಿನ ವಾರ್ಡರ್ ಮೇಲೆ ವಿಚಾರಣಾಧೀನ ಕೈದಿಗಳು ಗುಂಪಾಗಿಯೇ ಹಲ್ಲೆ ನಡೆಸಿರುವುದು ತಡವಾಗಿ ಬೆಳಕಿಗೆ ಬಂದಿದೆ. ಕಿರಣ ಫೋರ್ಪಡೆ ಎಂಬುವರೇ ಹಲ್ಲೆಗೆ ಒಳಗಾದ ಕೇಂದ್ರ ಕಾರಾಗೃಹದ ವಾರ್ಡನ್. ಹಲ್ಲೆಯಿಂದಾಗಿ ಕಿರಣ ಅವರ ಮುಖ, ತಲೆ ಭಾಗಕ್ಕೆ ತೀವ್ರ ಪೆಟ್ಟಾಗಿದೆ.



ಘಟನೆ ಹಿನ್ನೆಲೆ?: ಶಿವಮೊಗ್ಗದ ಬಜರಂಗದಳದ ಕಾರ್ಯಕರ್ತ ಹರ್ಷ ಕೊಲೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ ಕಾರಾಗೃಹ ಸೇರಿದ ರಿಹಾನ್, ಕಾಶಿಫ್ ಮತ್ತು ಉಡುಪಿ ಡ್ರಗ್ಸ್ ಪ್ರಕರಣದಲ್ಲಿ ಜೈಲಿನಲ್ಲಿದ್ದ ಫೈಜಲ್ ಎಂಬ ಮೂವರು ಸೇರಿಯೇ ವಾರ್ಡನ್ ಕಿರಣ ಮೇಲೆ ಹಲ್ಲೆ ಮಾಡಿದ್ದಾರೆ.

ವಿಚಾರಣಾಧೀನ ಕೈದಿಗಳ ದುರ್ನಡತೆ ಹಿನ್ನೆಲೆ ಅವರನ್ನು ಬಿಗಿ ಭದ್ರತಾ ಸೆಲ್‌ನಲ್ಲಿ ಇರಿಸಿತ್ತು. ಹೊರಗಡೆ ಬಿಡುವಂತೆ ಸಿಬ್ಬಂದಿಗೆ ಪೀಡಿಸುತ್ತಿದ್ದು, ಜೂ.11ಕ್ಕೆ ತಮ್ಮನ್ನು ಹೊರಗಡೆ ಬಿಡುವಂತೆ ಒತ್ತಾಯಿಸಿದಾಗ ವಾರ್ಡರ್ ಕಿರಣ ಫೋರ್ಪಡೆ ನಿರಾಕರಣೆ ಮಾಡಿದ್ದಾರೆ. ಕುಪಿತಗೊಂಡ ಕೈದಿಗಳು ಸೆಲ್ ಗೋಡೆ ಜಿಗಿದು ಬಂದು ವಾರ್ಡನ್ ಮೇಲೆ ಲಾಠಿ ಮೂಲಕ ಮನಸೋ ಇಚ್ಛೆ ಹಲ್ಲೆ ಮಾಡಿದ್ದು, ಹಲ್ಲೆ ಮಾಡಿದ ಮೂವರು ಆರೋಪಿಗಳ ವಿರುದ್ಧವೂ ಧಾರವಾಡ ಉಪನಗರ ಠಾಣೆಯಲ್ಲಿ ಕರ್ತವ್ಯಕ್ಕೆ ಅಡ್ಡಿಪಡಿಸಿರುವ ದೂರು ದಾಖಲಾಗಿದೆ.

3ನೇ ಸಿಎಂ ಬಂದರೂ ಅಚ್ಚರಿಯಿಲ್ಲ: ಬಿವೈವಿ

ಮಡಿಕೇರಿ: ರಾಜ್ಯದಲ್ಲಿ ನೂತನವಾಗಿ ಅಧಿಕಾರಕ್ಕೆ ಬಂದಿರುವ ಡಿ.ಕೆ.ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರಕಾರ ಯಾವುದೇ ಸಂದರ್ಭ ಉರುಳುವ ಸಾಧ್ಯತೆ ಇದ್ದು, ಮೂರನೇ ಮುಖ್ಯಮಂತ್ರಿ ಅಧಿಕಾರಕ್ಕೇರಿದರೂ ಅಚ್ಚರಿ ಪಡಬೇಕಾಗಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಭವಿಷ್ಯ ನುಡಿದರು. ಶನಿವಾರಸಂತೆ ಸಮೀಪದ ಖಾಸಗಿ ರೆಸಾರ್ಟ್ ಒಂದರಲ್ಲಿ ನಡೆದ ಕೊಡಗು ಜಿಲ್ಲಾ ಬಿಜೆಪಿ ಕಾರ್ಯಕಾರಿಣಿ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.



ಕಾಂಗ್ರೆಸ್ ಸರಕಾರದಲ್ಲಿ ಸಚಿವ ಸ್ಥಾನ ಪಡೆಯಲು ಪೇಮೆಂಟ್ ಮತ್ತು ಮ್ಯಾನೇಜ್‌ಮೆಂಟ್ ಕೋಟಾ ಎಂದು ಕಾಂಗ್ರೆಸ್ ವಿಂಗಡಣೆ ಮಾಡಿದೆ. ಅದರಂತೆ ಈಗಾಗಲೇ ಅನೇಕ ಶಾಸಕರು ದೆಹಲಿಯಲ್ಲಿ ಸಚಿವ ಸ್ಥಾನಕ್ಕಾಗಿ ಲಾಬಿ ನಡೆಸುತ್ತಿದ್ದಾರೆ. ಈ ಎರಡು ಕೋಟಾದಡಿ ಯಾವ ಶಾಸಕರು ಬೇಕಾದರೂ ಸಚಿವರಾಗಬಹುದು ಎಂದು ಅವರು ಟೀಕಿಸಿದರು. ಡಿ.ಕೆ.ಶಿವಕುಮಾರ್ ಅವರ ಬಾಯಿಯಲ್ಲಿ ರೌಡಿಗಳನ್ನು ಮಟ್ಟ ಹಾಕುವ ಹೇಳಿಕೆ ಬಂದಿರುವುದು ಅಚ್ಚರಿ ಮೂಡಿಸಿದೆ ಎಂದರು. ರಾಜ್ಯದ ಬೊಕ್ಕಸ ಬರಿದಾಗಿದ್ದು, ಈ ಸರಕಾರದಿಂದ ರಾಜ್ಯದಲ್ಲಿ ಅಭಿವೃದ್ಧಿ ಸಾಧ್ಯವಿಲ್ಲ ಎಂದು ನುಡಿದರು.

ಟೌನ್‌ಶಿಪ್ ಹೆಸರಲ್ಲಿ ಹಣ ಲೂಟಿ ಹುನ್ನಾರ: ಎಚ್‌ಡಿಕೆ

ಮಂಡ್ಯ: ಬಿಡದಿ ಟೌನ್‌ಶಿಪ್ ಯೋಜನೆ ಸರ್ಕಾರಿ ರಿಯಲ್ ಎಸ್ಟೇಟ್ ಯೋಜನೆಯಾಗಿದೆ. ಇದು ಸಂಪೂರ್ಣವಾಗಿ ಹಣ ಲೂಟಿ ಮಾಡುವ ಯೋಜನೆಯಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಡದಿ ಟೌನ್‌ಶಿಪ್ ನಾಡಿನ ಹಿತಾಸಕ್ತಿ ಅಡಗಿಲ್ಲ, ಭೂ ಮಾಫಿಯ ಹಾಗೂ ಭೂ ಲೂಟಿಕೋರರಿಗೆ ಲಾಭ ಮಾಡಿಕೊಡಲು ಇದನ್ನು ರೂಪಿಸಲಾಗಿದೆ.

ಹೀಗಾಗಿ ಇದನ್ನು ನಾನು ಸರಕಾರಿ ರಿಯಲ್ ಎಸ್ಟೇಟ್ ದಂಧೆ ಎಂದು ಕರೆಯುತ್ತೇನೆ ಎಂದು ಹೇಳಿದರು. ರಸ್ತೆಗಳಲ್ಲಿ ಮೊಣಕಾಲುದ್ದ ಗುಂಡಿಗಳು ಬಿದ್ದು ವಾಹನ ಸಂಚಾರ ದೊಡ್ಡ ಪ್ರಯಾಸವಾಗಿದೆ. ಅದೇನೋ ಬ್ರ್ಯಾಂಡ್ ಬೆಂಗಳೂರು ಎಂದು ಹೇಳುತ್ತಿದ್ದರಲ್ಲ, ಅದನ್ನು ಮಾಡುವುದು ಬಿಟ್ಟು ಬಿಡದಿ ರೈತರ ಬದುಕಿಗೆ ಬೆಂಕಿ ಹಾಕಲು ಹೊರಟಿದ್ದಾರೆ ಎಂದು ಅವರು ಕಟುವಾಗಿ ಟೀಕಿಸಿದರು.

ಬೆಂಗಳೂರು ಅಭಿವೃದ್ಧಿಗೆ ಎಳ್ಳಷ್ಟು ಉಪಯೋಗ ಆಗದ ಈ ಯೋಜನೆಯನ್ನು ತಮ್ಮ ಸ್ವಾರ್ಥಕ್ಕಾಗಿ, ರಿಯಲ್ ಎಸ್ಟೇಟ್ ಮಾಫಿಯಾ ದೊಂದಿಗೆ ಕೈಜೋಡಿಸಿ ರೈತರ ಭೂಮಿಯನ್ನು ಲೂಟಿ ಹೊಡೆಯಲು ಹೊರಟಿದ್ದಾರೆ. ಈ ಹಿನ್ನೆಯಲ್ಲಿ ನಮ್ಮ ಪಕ್ಷ ರೈತರ ಪರವಾಗಿ ನಿಲ್ಲುತ್ತದೆ. ಅವರ ಜತೆ ನಿಂತು ಕಾನೂನು ಹೋರಾಟ ನಡೆಸುತ್ತದೆ ಎಂದು ಕೇಂದ್ರ ಸಚಿವರು ಹೇಳಿದರು.



> **ನಾನು ಚಿಂತನೆ ಮಾಡಿದ್ದು 2006ರಲ್ಲಿ, ಈಗ ನಾವು ಇರುವುದು 2026. 20 ವರ್ಷಗಳಲ್ಲಿ ಎಷ್ಟು ಬದಲಾವಣೆಯಾಗಿದೆ, ಎಷ್ಟೊಂದು ಅಭಿವೃದ್ಧಿಯಾಗಿದೆ. ಇಷ್ಟು ವರ್ಷಗಳಲ್ಲಿ ಏನೆಲ್ಲಾ ಆಯಿತು ಎನ್ನುವುದನ್ನು ಈ ಸರ್ಕಾರ ಅರ್ಥ ಮಾಡಿಕೊಳ್ಳಬೇಕು.**
> ■ ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಯುವ ಸಂಕಲ್ಪದ ಅನುಪಮ ಉದಾಹರಣೆ-ಆನಂದಪುರ ಭಾಲಿ

ಸುಬ್ರಾಯ ನಂದೋಡಿ

ಹರಿಯಾಣದ ರೋಹ್ತಕ್ ಜಿಲ್ಲೆಯ ಈ ಗ್ರಾಮವು ಒಂದು ಕಾಲದಲ್ಲಿ ರಾಜಕೀಯ ದ್ವೇಷದ ನೆಲೆಯಾಗಿತ್ತು. ಪರಿಸ್ಥಿತಿ ಹೇಗಿತ್ತು ಎಂದರೆ ಗ್ರಾಮದ ಹೆಚ್ಚಿನ ಯುವಕರಿಗೆ ಜೈಲು ಮತ್ತು ಪೊಲೀಸ್ ಠಾಣೆಗಳ ಪರಿಚಯ ಚೆನ್ನಾಗಿತ್ತು. ಬಸ್ ಕಂಡಕ್ಟರ್ ಇವರನ್ನು ಬಸ್ಸಿನಲ್ಲಿ ಕೂರಿಸಿಕೊಳ್ಳುತ್ತಿರಲಿಲ್ಲ, ಅವರು ಕುಳಿತರೂ ಟಿಕೆಟ್ ಹಣ ಕೇಳಲು ಹೆದರುತ್ತಿದ್ದರು.

ಆದರೆ ಇಂದು ಇಲ್ಲಿನ ಕೆಲವು ಯುವಕರ ಸಾರ್ಥಕ ಪ್ರಯತ್ನದ ಫಲವಾಗಿ ಹಳ್ಳಿಯ ಚಿತ್ರಣವೇ ಬದಲಾಗಿದೆ. ಗ್ರಾಮದ ಮಧ್ಯದಲ್ಲಿ ನಿರ್ಮಿಸಲಾದ ಮೂರು ಅಂತಸ್ತಿನ ಕೇಶವ ಭವನ ಮತ್ತು ಅದರಲ್ಲಿ ನಡೆಯುತ್ತಿರುವ ತಕ್ಷಶಿಲಾ ವಿದ್ಯಾ ಮಂದಿರ, ಆರ್ಯಭಟ್ಟ ಅಧ್ಯಯನ ಕೇಂದ್ರ, ಲೆಫ್ಟಿನೆಂಟ್ ಅತುಲ್ ಪವಾರ್ ಕಂಪ್ಯೂಟರ್ ಸೆಂಟರ್ ಅಥವಾ ಹುತಾತ್ಮ ಪೈಲಟ್ ಸಂದೀಪ್ ಪಲಡವಾಲ್ ಗ್ರಂಥಾಲಯ ಇವು ಗ್ರಾಮದಲ್ಲಿನ ಬದಲಾವಣೆಯ ಕಥೆ ಹೇಳುತ್ತಿವೆ. ಭಾಲಿ ಆನಂದಪುರದ ಈ ಹೊಸ ರೂಪದ ಯಶಸ್ಸು ಹರಿಯಾಣ ಪ್ರಾಂತದ, ಪ್ರಾಂತ ಸಹಗ್ರಾಮ ವಿಕಾಸ ಪ್ರಮುಖ್ ಅನೂಪ್ ಸಿಂಗ್ ಮತ್ತು ಅವರ ಸಹಕಾರಿಗಳಿಗೆ ಸಲ್ಲುತ್ತದೆ. ಈ ಯುವಕರಿಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದಿಂದ ಮತ್ತು ಸೇವಾಭಾರತಿಯಿಂದ ಪ್ರೇರಣೆ ದೊರೆತಾಗ ಬದಲಾವಣೆಯ ತಂಗಾಳಿ ಬೀಸಲಾರಂಭಿಸಿತು. ಹಳ್ಳಿಯ ಬಯಲುಗಳಲ್ಲಿ ಹಿರಿಯರಿಗೆ ಪತ್ರಿಕೆ ಹಂಚುವ ಮೂಲಕ ಪ್ರಾರಂಭಿಸಿದ ಸೇವಾ ಪ್ರಯಾಣಕ್ಕೆ ಹೊಸ ಆಯಾಮಗಳು ಸೇರುತ್ತಾ ಹೋಯಿತು ಮತ್ತು ಹುತಾತ್ಮ ಚಂದ್ರಶೇಖರ್ ಆಜಾದ್ ಸೇವಾ ಸಮಿತಿ ಜನ್ಮ ತಾಳಿತು.



ಸೇವಾಗಾಥ
ಕಥೆ-9

ತಕ್ಷಶಿಲಾ ಅಧ್ಯಯನ ಕೇಂದ್ರದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಿದ ಗ್ರಾಮದ 48 ಯುವಕರು ಇಂದು ಸರ್ಕಾರಿ ಕೆಲಸಗಳನ್ನು ಮಾಡುತ್ತಿದ್ದಾರೆ. ರಾಷ್ಟ್ರೀಯ ಸೇವಾ ಭಾರತಿಗೆ ಸಂಬಂಧಿಸಿದ ಈ ಸಂಸ್ಥೆಯ ಯಶಸ್ಸನ್ನು ನಾವು ಇದರಿಂದಲೇ ತಿಳಿಯಬಹುದು. ಹರಿಯಾಣದ ಹೆಣ್ಣುಮಕ್ಕಳು, ಕುಸ್ತಿಯಿಂದ ಹಿಡಿದು ಅಥ್ಲೆಟಿಕ್ಸ್‌ವರೆಗೆ ತಮ್ಮ ವಿಜಯ ಪತಾಕೆಯನ್ನು ದೇಶದೆಲ್ಲೆಡೆ ಹಾರಿಸಿದ್ದಾರೆ.

ಆದ್ದರಿಂದ ಭಾಲಿ ಆನಂದಪುರದ ಹೆಣ್ಣುಮಕ್ಕಳು ದುರ್ಗಾ ಕ್ರೀಡಾ ಕೇಂದ್ರದಲ್ಲಿ, ತರಬೇತುದಾರರ ಮೇಲ್ವಿಚಾರಣೆಯಲ್ಲಿ ಫುಟ್ಬಾಲ್ ಮತ್ತು ಇತರ ಕ್ರೀಡೆಗಳನ್ನು ನಿಯಮಿತವಾಗಿ ಆಡುತ್ತಾರೆ. ಇದರ ಪರಿಣಾಮವಾಗಿ, ನಿಶು, ಮಂಜು ಮತ್ತು ಕಾಜಲ್ ಸೇರಿದಂತೆ 5 ಬಾಲಕಿಯರು ರಾಷ್ಟ್ರೀಯ ತಂಡದಲ್ಲಿ ಆಡುತ್ತಿದ್ದಾರೆ.

ಅಲ್ಲಿನ ಪ್ರಾಂತ ಸೇವಾ ಪ್ರಮುಖರಾದ ಕೃಷ್ಣಕುಮಾರ್ ಗ್ರಾಮದ ಅಗತ್ಯತೆಗೆ ತಕ್ಕಂತೆ ಸೇವೆಯ ಹೊಸ ಆಯಾಮಗಳನ್ನು ಜೋಡಿಸುತ್ತಾ ಹೋದರು. 3ನೇ ತರಗತಿಯಿಂದ ಹನ್ನೆರಡನೇ ತರಗತಿಯ ಮಕ್ಕಳಿಗಾಗಿ, ವಿವೇಕಾನಂದ ಸಂಸ್ಕಾರ ಕೇಂದ್ರವನ್ನು 6 ವರ್ಷಗಳಿಂದ ನಡೆಸಿಕೊಂಡು ಬರಲಾಗುತ್ತಿತ್ತು. ನಂತರ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗಾಗಿ ಅಧ್ಯಯನ ಮಾಡಲು ಹವಾನಿಯಂತ್ರಿತ ಸಭಾಂಗಣವನ್ನು ನಿರ್ಮಿಸಲಾಯಿತು.

ಅಲ್ಲಿಗೆ ಹತ್ತಿರದ ಗ್ರಾಮಗಳಾದ ಗಢಿ, ಖೇಡಿ, ಬನಿಯಾನಿ ಮತ್ತು ದೋಬ್‌ನಿಂದ ಯುವಕರು ಬಂದು ಓದುತ್ತಿದ್ದಾರೆ. ಹುತಾತ್ಮ ಪೈಲಟ್ ಸಂದೀಪ ಪಲಡವಾಲ್ ಗ್ರಂಥಾಲಯದಲ್ಲಿ 5000 ಪುಸ್ತಕಗಳ ಭಂಡಾರ ಗ್ರಾಮದ ವಿದ್ಯಾರ್ಥಿಗಳಿಗೆ ಪುಸ್ತಕ-ಬ್ಯಾಂಕ್ ಆಗಿ ಕಾರ್ಯನಿರ್ವಹಿಸುತ್ತಿದೆ. ಗ್ರಂಥಾಲಯವು ಸ್ಪರ್ಧಾತ್ಮಕ ಪರೀಕ್ಷೆಯ ತಯಾರಿಗಾಗಿ ಎಲ್ಲಾ ಪ್ರಮುಖ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳನ್ನು ಸಹ ಹೊಂದಿದೆ. ಬರೇಲಿಯ, ಸ್ಟೇಷನ್ ಮಾಸ್ಟರ್ ಮೋನು ರೋಸ್ ಅಥವಾ ಸಿಬಿಎಫ್‌ನ ಸಬ್ ಇನ್ಸ್‌ಪೆಕ್ಟರ್ ಸುಮಿತ್ ರೋಸ್‌ರಲ್ಲಿ, ಈ ಪುಸ್ತಕಗಳು ಮತ್ತು ತಕ್ಷಶಿಲಾ ಅಧ್ಯಯನಕೇಂದ್ರವು ಅವರ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿವೆ.

ಯುವಕರು, ವಯಸ್ಕರು ಮತ್ತು ಮಹಿಳೆಯರಿಗಾಗಿ ಹಲವಾರು ವರ್ಷಗಳಿಂದ ನಡೆಯುತ್ತಿರುವ ಸಂಘ ಮತ್ತು ಸಮಿತಿಯ ಶಾಖೆಯು ಗ್ರಾಮದಲ್ಲಿ ಸಾಮರಸ್ಯ ಮತ್ತು ಅಭಿವೃದ್ಧಿಯ ಹೊಸ ಕಥೆಯನ್ನು ಬರೆದಿದೆ. ಜನವರಿ 2013ರಂದು ಹುತಾತ್ಮ ಸಬ್ ಲೆಫ್ಟಿನೆಂಟ್ ಅತುಲ್ ಪವಾರ್ ಕಂಪ್ಯೂಟರ್ ಸೆಂಟರ್ ನ್ನು ಪ್ರಾರಂಭಿಸಿದಾಗ, ಕೆಲವು ಕಂಪ್ಯೂಟರ್‌ಗಳನ್ನು ಸೇವಾಭಾರತಿಯಿಂದ ಮತ್ತು ಕೆಲವು ಗ್ರಾಮದ ಜನರೇ ನೀಡಿದರು. ಕೇಶವ ಭವನಕ್ಕೆ ಭೂಮಿಯನ್ನು ಸಹ ಪಂಚಾಯತಿಯೆ ಸಮಿತಿಗೆ ನೀಡಿತು. ಸಾವಯವ ಕೃಷಿಯನ್ನು ಉತ್ತೇಜಿಸಲು, ಬಲರಾಮ್ ಕಿಸಾನ್ ಸೇವಾ ಕೇಂದ್ರವನ್ನು ಪ್ರಾರಂಭಿಸಲಾಯಿತು. ಇದರ ಮೂಲಕ ಮನೆಮನೆಗಳಲ್ಲಿ ಸಾವಯವ ಗೊಬ್ಬರ ತಯಾರಿಸಲು ಗ್ರಾಮದಲ್ಲಿ ತರಬೇತಿ ನೀಡಲಾಗುತ್ತಿದೆ. ಮಹಿಳೆಯರಿಗಾಗಿ ನಡೆಯುತ್ತಿವ ರಾಣಿ ಲಕ್ಷ್ಮೀಬಾಯಿ ಹೊಲಿಗೆ ಕೇಂದ್ರದ ವಿಶೇಷತೆಯೆಂದರೆ, ಒಂದು ಬ್ಯಾಚ್ ಪೂರ್ಣಗೊಂಡ ನಂತರ ಅದು ಹಳ್ಳಿಯ ಮತ್ತೊಂದು ಸ್ಥಳಕ್ಕೆ ಸ್ಥಳಾಂತರಗೊಳ್ಳುತ್ತದೆ. ಇದರಿಂದಾಗಿ ಅಲ್ಲಿನ ಎಲ್ಲಾ ಮಹಿಳೆಯರು ಸುಲಭವಾಗಿ ಹೊಲಿಗೆ ಕಲಿಯಬಹುದಾಗಿದೆ.

ಸೇವೆ ಪಡೆದವರಲ್ಲಿ ಸೇವಾ ಭಾವದ ಜಾಗೃತಿ ಮಾಡುವುದು ಸಂಘದ ಮೂಲ ಮಂತ್ರ. ಅದನ್ನು ನಾವು ಭಾಲಿ ಆನಂದಪುರದಲ್ಲಿ ನೋಡಬಹುದು. ರೈಲ್ವೆಯಲ್ಲಿ ನೌಕರಿ ಮಾಡುತ್ತಿರುವ ಸಮುಂದರ್ ಗಿಲ್ಡ್ ಆಗಿರಲಿ ಅಥವಾ ಬಾಲಕಿಯರ ಕೋಚ್ ನರೇಂದ್ರ ಪಲಡ್ವಾಲ್ ಆಗಿರಲಿ, ಎಲ್ಲಾ ಯುವಕರೂ ಸಹ ಗ್ರಾಮದಲ್ಲಿ ನಡೆಯುತ್ತಿರುವ ಈ ಸೇವಾ ಕಾರ್ಯಗಳಿಗೆ ಸಮಯವನ್ನು ನೀಡುತ್ತಾರೆ. ಜಲ ಸಂರಕ್ಷಣೆಯಿಂದ ಹಿಡಿದು ವೃಕ್ಷಾರೋಪಣದವರೆಗೆ ಪ್ರತಿಯೊಂದು ಚಟುವಟಿಕೆಯಲ್ಲೂ ಗ್ರಾಮಸ್ಥರ ಸಂಪೂರ್ಣ ಬೆಂಬಲ ದೊರೆಯುತ್ತದೆ ಎಂದು ಈ ಸೇವಾಕಾರ್ಯಗಳ ಸೂತ್ರಧಾರ ಅನೂಪ್ ಹೇಳುತ್ತಾರೆ. ಕಳೆದ 5ವರ್ಷಗಳಿಂದ ನಡೆಯುತ್ತಿರುವ ಗ್ರಾಮೋತ್ಸವವು ವಿವಿಧ ಬಣಗಳಾಗಿ ವಿಭಜನೆಯಾಗಿದ್ದ ಭಾಲಿ ಆನಂದಪುರವನ್ನು ಒಂದುಗೂಡಿಸಿದೆ ಎಂದು ಅವರು ಹೇಳುತ್ತಾರೆ.

ಸಂಪರ್ಕ-ಅನೂಪ್ ಸಿಂಗ್, 9034729351

ಕಿರುಸುದ್ದಿ

ಭೀಕರ ರಸ್ತೆ ಅಪಘಾತ: ದಂಪತಿಗೆ ಗಾಯ



• **ಮಂಡ್ಯ :** ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ಇಂದು ಮತ್ತೊಂದು ಭೀಕರ ರಸ್ತೆ ಅಪಘಾತ ಸಂಭವಿಸಿದ್ದು, ಕಾರಿನಲ್ಲಿ ಪ್ರಯಾಣಿಸುತ್ತಿದ್ದ ದಂಪತಿ ಗಾಯಗೊಂಡಿರುವ ಘಟನೆ ಮದ್ದೂರು ತಾಲೂಕಿನ ಗೆಜ್ಜಲಗೆರೆ ಬಳಿ ನಡೆದಿದೆ. ಲಾರಿಯೊಂದನ್ನು ಓವರ್‌ಟೇಕ್ ಮಾಡಲು ಹೋಗಿ ಕಾರು ನಿಯಂತ್ರಣ ತಪ್ಪಿ ಪಲ್ಟಿಯಾಗಿದ್ದು, ಕಾರಿನಲ್ಲಿ ದಂಪತಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಾಳು ದಂಪತಿಗಳು ಮೈಸೂರಿನಿಂದ ಬೆಂಗಳೂರು ಕಡೆಗೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದರು. ಹನಕೆರೆ ಸಮೀಪ ತಲುಪಿದಾಗ ಮುಂಭಾಗದಲ್ಲಿದ್ದ ಲಾರಿಯನ್ನು ಓವರ್ ಟೇಕ್ ಮಾಡಲು ಕಾರು ಚಾಲಕ ಯತ್ನಿಸಿದ್ದಾರೆ. ಈ ವೇಳೆ ನಿಯಂತ್ರಣ ತಪ್ಪಿದ ಕಾರು ಪಲ್ಟಿಯಾಗಿದೆ. ಪಲ್ಟಿಯಾದ ರಭಸಕ್ಕೆ ಕಾರು ರಸ್ತೆ ಮಧ್ಯದ ಡಿವೈಡರ್ ದಾಟಿ, ವಿರುದ್ಧ ದಿಕ್ಕಿನ (ಬೆಂಗಳೂರಿನಿಂದ ಮೈಸೂರಿಗೆ ಹೋಗುವ) ರಸ್ತೆಗೆ ಹೋಗಿ ಬಿದ್ದಿದೆ. ಅಪಘಾತದ ರಭಸಕ್ಕೆ ಕಾರು ಸಂಪೂರ್ಣ ನಜ್ಜು-ಗುಜ್ಜಾಗಿದ್ದು, ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡ ದಂಪತಿಗಳನ್ನು ತಕ್ಷಣವೇ ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ದಾಖಲಿಸಿ, ತುರ್ತು ಚಿಕಿತ್ಸೆ ನೀಡಲಾಗುತ್ತಿದೆ. ಗಾಯಾಳುಗಳ ಸ್ಥಿತಿ ಗಂಭೀರವಾಗಿದೆ ಎಂದು ತಿಳಿದುಬಂದಿದೆ. ಎಕ್ಸ್‌ಪ್ರೆಸ್‌ವೇನ ಮಧ್ಯದಲ್ಲೇ ಕಾರು ನಜ್ಜುಗುಜ್ಜಾಗಿ ಬಿದ್ದಿದ್ದರಿಂದ ಹೆದ್ದಾರಿಯ ಉಭಯ ಮಾರ್ಗಗಳಲ್ಲಿ ಸಂಚಾರ ಸಂಪೂರ್ಣ ಸ್ಥಗಿತಗೊಂಡಿತ್ತು. ಘಟನಾ ಸ್ಥಳದ ಎರಡು ಬದಿಯಲ್ಲೂ ಕಿಲೋಮೀಟರ್ ಗಟ್ಟಲೆ ವಾಹನಗಳು ಸಾಲುಗಟ್ಟಿ ನಿಂತಿದ್ದು, ಭಾರೀ ಟ್ರಾಫಿಕ್ ಜಾಮ್ ಉಂಟಾಗಿತ್ತು. ಮಾಹಿತಿ ತಿಳಿದು ಸ್ಥಳಕ್ಕೆ ಧಾವಿಸಿದ ಪೊಲೀಸರು, ಸಾರ್ವಜನಿಕರ ಸಹಾಯದಿಂದ ವಾಹನವನ್ನು ಪಕ್ಕಕ್ಕೆ ಸರಿಸಿ ಸಂಚಾರ ದಟ್ಟಣೆ ನಿಯಂತ್ರಿಸಲು ಹರಸಾಹಸ ಪಟ್ಟರು. ಈ ಸಂಬಂಧ ಮದ್ದೂರು ಸಂಚಾರಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸಿಡಿಲು ಬಡಿದು ರೈತ ಸಾವು

• **ಮೈಸೂರು:** ಸಿಡಿಲು ಬಡಿದು ರೈತನೊಬ್ಬ ಮೃತಪಟ್ಟಿರುವ ಘಟನೆ ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಸಂಗರಶೆಟ್ಟಿಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿಯಾದ ಎಸ್.ಟಿ.ಆನಂದ್ (60) ಮೃತಪಟ್ಟ ರೈತ. ಇವರು ಜಮೀನಿನಲ್ಲಿ ತಂಬಾಕು ಬೆಳೆಗೆ ನೀರು ಹಾಯಿಸುತ್ತಿದ್ದಾಗ ಗುಡುಗು ಸಿಡಿಲು ಸಹಿತ ಮಳೆ ಬಂದಾಗ ರಕ್ಷಣೆಗಾಗಿ ಮರದ ಕೆಳಗೆ ನಿಂತಿದ್ದಾಗ ಸಿಡಿಲು ಬಡಿದು ಅಸ್ವಸ್ಥಗೊಂಡಿದ್ದರು. ಕೂಡಲೇ ಅವರನ್ನು ಗ್ರಾಮಸ್ಥರು ಕೆ.ಆರ್.ನಗರದ ಆಸ್ಪತ್ರೆಗೆ ಸಾಗಿಸುವಾಗ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾರೆ.

ಮಂತ್ರಿ ಸ್ಥಾನಕ್ಕೆ ಪಟ್ಟು: ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ

• **ಮೈಸೂರು:** ರಾಜ್ಯ ಸರ್ಕಾರದ ನೂತನ ಮಂತ್ರಿ ಮಂಡಲ ರಚನೆ ಗೊಂದಲದ ವಿರುದ್ಧ ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಭಾನುವಾರ ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. ರಾಜ್ಯ ಕಾಂಗ್ರೆಸ್ ಸರ್ಕಾರ ಸಂಪೂರ್ಣ ಕತ್ತಲೆಯಲ್ಲಿದೆ. ರಾಜ್ಯದ ನೂತನ ಮಂತ್ರಿ ಮಂಡಲ ಕುಂಟುತ್ತಾ ಸಾಗುತ್ತಿದೆ. ಸಚಿವ ಸಂಪುಟ ರಚನೆ ಮಾಡಲು ಹೈಕಮಾಂಡ್ ಹಾಗೂ ವಿವಿಧ ವಲಯಗಳಿಂದ ವಿಪರೀತ ಒತ್ತಡವಿದೆ. ಮಂತ್ರಿಗಳು ತಮಗೆ ಬೇಕಾದ ಆದಾಯದ ಇಲಾಖೆಗಳಿಗಾಗಿ ಪಟ್ಟು ಹಿಡಿದು ಕುಳಿತಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕವಾಗಿದೆ. ಮಂತ್ರಿಗಳ ಇಲಾಖಾ ವ್ಯಾಮೋಹದಿಂದಾಗಿ ರಾಜ್ಯದ ಆಡಳಿತ ಯಂತ್ರ ಸಂಪೂರ್ಣ ಹದಗೆಟ್ಟಿದ್ದು, ಅಭಿವೃದ್ಧಿ ಕುಂಠಿತಗೊಂಡಿದೆ ಎಂದು ಆರೋಪಿಸಿದರು. ಪ್ರಾಮಾಣಿಕ ವ್ಯಕ್ತಿಯಾದ ಸಿದ್ದರಾಮಯ್ಯನವರನ್ನು ಅಧಿಕಾರದಿಂದ ಹೊರಗೆ ಕಳುಹಿಸಿರುವುದು ಸರಿಯಾದ ನಿರ್ಧಾರವಲ್ಲ, ಇಂದು ಜನಸಾಮಾನ್ಯರು ಒಂದೊತ್ತು ಊಟ ಮಾಡಲು ಪರದಾಡುತ್ತಿದ್ದಾರೆ, ಆದರೆ ರಾಜಕಾರಣಿಗಳು ಮಾತ್ರ ಮಜಾ ಮಾಡುತ್ತಿದ್ದಾರೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಬಡವರನ್ನು ದರೋಡೆ ಮಾಡುತ್ತಿದ್ದು, ಬಡವರ ಮಕ್ಕಳಿಗೆ ಓದಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರಿ ಆಸ್ಪತ್ರೆಗಳು ಯಮಲೋಕದಂತಾಗಿದ್ದು, ಚಿಕಿತ್ಸೆ ಸರಿಯಾಗಿ ಸಿಗುತ್ತಿಲ್ಲ, ಆಸ್ಪತ್ರೆಗಳಲ್ಲಿ ಯಾರಾದರೂ ಮೃತಪಟ್ಟರೆ, ಹಣ ಪಾವತಿಸುವವರೆಗೂ ಹೆಣ ಕೊಡುವುದಿಲ್ಲ, ರಾಜ್ಯದಲ್ಲಿ ಸ್ಮಶಾನಕ್ಕೂ ಜಾಗವಿಲ್ಲದಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಮೂಗೂರು ನಂಜುಂಡಸ್ವಾಮಿ ಸೇರಿದಂತೆ ಹಲವರು ಭಾಗಿಯಾಗಿದ್ದರು.

ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಪ್ರತಿಭಟನೆ

ಸನ್ಮಾನ ಕಾರ್ಯಕ್ರಮದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿವಿಯ ಡಾ.ಎಂ.ಪ್ರಸನ್ನಕುಮಾರ್ ಕರೆ

ಮೊಬೈಲ್ ಬಿಡಿ, ಪುಸ್ತಕ ಹಿಡಿ ಸಂದೇಶ ಪಾಲಿಸಿ

• **ಮಂಡ್ಯ:** ಮೊಬೈಲ್ ಬಿಡಿ, ಪುಸ್ತಕ ಹಿಡಿ ಎನ್ನುವ ಸಂದೇಶವನ್ನು ಸಮಾಜಕ್ಕೆ ಹೇಳುವ ಮೂಲಕ ಜೀವನದಲ್ಲೂ ಅಳವಡಿಸಿಕೊಳ್ಳಬೇಕು ಎಂದು ಮೈಸೂರಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಡಾ.ಎಂ.ಪ್ರಸನ್ನಕುಮಾರ್ ಹೇಳಿದರು.

ನಗರದ ಕರ್ನಾಟಕ ಭವನದಲ್ಲಿ ಡಾ.ಈ.ಸಿ.ನಿಂಗರಾಜ್‌ಗೌಡ ಫೌಂಡೇಷನ್ ವತಿಯಿಂದ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ಪ್ರಸ್ತುತ ತಂತ್ರಜ್ಞಾನದಿಂದ ಸಾಮಾಜಿಕ ಮೌಲ್ಯಗಳು, ಸಂಬಂಧಗಳು, ಜವಾಬ್ದಾರಿಗಳು ಕಡಿಮೆಯಾಗುತ್ತಿವೆ. ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಂಡು ನಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಹೋಗುವ ಪ್ರಜ್ಞೆ ಎಲ್ಲರಲ್ಲೂ ಮೂಡಬೇಕು ಎಂದು ತಿಳಿಸಿದರು.

ಮೊಬೈಲ್‌ನ್ನು ಜೀವನದ ಅವಿಭಾಜ್ಯ ಅಂಗವಾಗಿಸಿಕೊಳ್ಳದೆ ಸಂಬಂಧಗಳನ್ನು ಗಟ್ಟಿಗೊಳಿಸಿಕೊಳ್ಳಬೇಕು. ಪುಸ್ತಕಗಳನ್ನು ಓದುವ ಮೂಲಕ ಸಂಸ್ಕಾರವಂತರಾಗಬೇಕು. ವ್ಯಕ್ತಿತ್ವವನ್ನು ಅರಳಿಸಿಕೊಳ್ಳಬೇಕು. ಇದರಿಂದ ಸಾಮಾಜಿಕ ಜವಾಬ್ದಾರಿ ಹೆಚ್ಚಾಗುತ್ತದೆ. ಆಗ ಸಮಾಜಕ್ಕೆ ಏನಾದರೂ ಕೊಡುಗೆ ನೀಡಲು, ಜೀವನದಲ್ಲಿ ಏನಾದರೂ ಸಾಧನೆ ಮಾಡಲು ಸಾಧ್ಯವಾಗಲಿದೆ ಎಂದರು.

ಪ್ರತಿಯೊಬ್ಬ ನಾಗರೀಕ ಉತ್ತಮವಾಗಿ ಕಾರ್ಯನಿರ್ವಹಿಸಲು ಶಿಕ್ಷಣ ಬಹಳ ಮುಖ್ಯ. ಶಿಕ್ಷಣಕ್ಕೆ ಮೌಲ್ಯ ಹಾಗೂ ಉತ್ತೇಜನ ಕೊಟ್ಟಾಗ ಸಮಾಜ ಅಭಿವೃದ್ಧಿಯತ್ತ ಮುನ್ನಡೆಯಲಿದೆ ಎಂದರು.



ಜಿಬಿಳಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ.ಎಚ್.ಎಸ್. ಮುದ್ದೇಗೌಡರು, ರಾಜಕಾರಣ ಕೇವಲ ರಾಜಕಾರಣಿಯಾಗಿ ಉಳಿಯದೆ ಮುತ್ಸದ್ದಿಯಾಗಬೇಕು. ಮುಂದಿನ ಜನಾಂಗಕ್ಕೆ ಏನು ಕೊಡಬೇಕೆಂದು ಆಲೋಚಿಸುವವನೇ ಮುತ್ಸದ್ದಿ ಎಂದು ಹೇಳಿದರು.

ಅಧಿಕಾರ, ಅವಕಾಶಗಳು ಸಿಗಬೇಕು. ಆಗ ಅವರು ಏನನ್ನಾದರೂ ಮಾಡಿ ತೋರಿಸುತ್ತಾರೆ. ಹಣ, ಅಧಿಕಾರಕ್ಕೆ ಪ್ರಾಧಾನ್ಯತೆಯನ್ನು ನೀಡದೆ ಅಭಿವೃದ್ಧಿಗೆ ಪ್ರಾಮುಖ್ಯತೆ ನೀಡುವವರ ಸಂಖ್ಯೆ ಕಡಿಮೆಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಬಿಜೆಪಿ ಪ್ರಭಾರ ವಕ್ತಾರ ಡಾ.ಈ.ಸಿ.ನಿಂಗರಾಜ್‌ಗೌಡ ಮಾತನಾಡಿ, ಭಾರತೀಯ ಸಂಸ್ಕೃತಿ ಪರಂಪರೆ ಮೇಲೆ ಭಾರತವನ್ನು ನಿರ್ಮಾಣ ಮಾಡಬೇಕು. ಯುವಕರನ್ನು ಕಟ್ಟಬೇಕು. ಕೇವಲ ರಾಜಕೀಯ ಅಧಿಕಾರ ಪಡೆಯುವುದಕ್ಕಷ್ಟೇ ಇದನ್ನು ಮಾಡದೆ ವಿಶ್ವದಲ್ಲಿ ಶಾಂತಿ, ಸಮೃದ್ಧಿ, ಮಾನವ ಸಂಬಂಧಗಳು ಉಳಿಯಬೇಕೆಂಬುದು ನಮ್ಮೆಲ್ಲರ ಆಶಯವಾಗಿದೆ. ಮಹಾಪುರುಷರನ್ನು ಪ್ರೇರಣೆಯಾಗಿಟ್ಟುಕೊಂಡು ಕೆಲಸ ಮಾಡಬೇಕು ಎಂದರು.

ಸ್ವಾಮಿ ವಿವೇಕಾನಂದರನ್ನು ಓದಿಕೊಂಡು ಬೆಳೆದಿದ್ದೇವೆ. ಅವರಂತೆ ನಾವಾಗದಿದ್ದರೂ ಭಾರತ ವಿಶ್ವಗುರು ಆಗಬೇಕು. ನರೇಂದ್ರ ಮೋದಿ ಪ್ರಧಾನಿಯಾದ ನಂತರ ಭಾರತದ ಘನತೆ-ಗೌರವ ವಿಶ್ವದಲ್ಲಿ ಹೆಚ್ಚಿದೆ. ಎಲ್ಲಾ ಕ್ಷೇತ್ರದಲ್ಲೂ ಸಾಧನೆ ಮಾಡುತ್ತಿದ್ದೇವೆ.

ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ಕಾರ್ಯಕಾರಿ ಮಂಡಳಿ ಸದಸ್ಯ ಡಾ.ಸಿದ್ದರಾಮಯ್ಯ, ಅಲೈಯನ್ಸ್ ಕ್ಲಬ್ ಅಧ್ಯಕ್ಷ ಕೆ.ಟಿ.ಹನುಮಂತು, ಡಿ.ಶ್ರೀಕಂಠೇಗೌಡ ನೆಲಮನೆ, ವೈ.ಎಚ್.ಲೋಹಿತ್‌ಕುಮಾರ್, ಮನುಕುಮಾರ್ ಇತರರಿದ್ದರು.

ಸಾಧಕರಿಗೆ ಅಭಿನಂದನೆ

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ನಿವೃತ್ತ ಪ್ರಾಧ್ಯಾಪಕ ಡಾ.ಎಚ್.ಎಸ್.ಮುದ್ದೇಗೌಡ, ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕ ಜಿ.ಎಂ.ಶಿವರಾಮೇಗೌಡ, ಮಮತೆಯ ಮಡಿಲು ಮಂಗಲ ಯೋಗೀಶ್, ರೈತರ ಶಾಲೆಯ ಡಾ.ಸತ್ಯಮೂರ್ತಿ, ವಿದ್ಯಾರ್ಥಿನಿ ಕೀರ್ತಿ ಮುರಳೀಧರ್ ಅವರನ್ನು ಅಭಿನಂದಿಸಲಾಯಿತು.

ಆರೋಪಿಯನ್ನು ಹಿಡಿದು ಪೊಲೀಸರ ವಶಕ್ಕೆ ಒಪ್ಪಿಸಿದ ಗ್ರಾಮಸ್ಥರು

ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ

• **ಚಾಮರಾಜನಗರ:** ತಾಲೂಕಿನ ಮಸಗಾಪುರ ಗ್ರಾಮದಲ್ಲಿ ಯುವಕನೊಬ್ಬ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಸಗಣಿ ಬಳಿದ ಪರಾರಿಯಾಗಲು ಯತ್ನಿಸಿ, ಗ್ರಾಮಸ್ಥರೇ ಆರೋಪಿಯನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ ಪ್ರಕರಣ ಭಾನುವಾರ ಬೆಳಗ್ಗೆ ನಡೆದಿದೆ.

ಮಸಗಾಪುರ ಗ್ರಾಮದ ನಿವಾಸಿ ಚಂದ್ರು, ಬಂಧಿತ ಆರೋಪಿ. ಈತ ಅಂಬೇಡ್ಕರ್ ಯುವಕ ಸಂಘದ ನಾಮಫಲಕದಲ್ಲಿ ಅಂಬೇಡ್ಕರ್ ಭಾವಚಿತ್ರವಿರುವ ನಾಮಫಲಕಗಳಿಗೆ ಸಗಣಿ ಬಳಿದು, ನಾಮಫಲದಲ್ಲಿ ಅಳವಡಿಸಿದ್ದ ಲೈಟ್ ಗಳನ್ನು ಹೊಡೆದು ಹಾಕಿದ್ದಾನೆ. ಬೆಳಗಿನ ಜಾವ ಏಕಾಏಕಿ ಭಾವಚಿತ್ರಕ್ಕೆ ಸಗಣಿ ಬಳಿದು, ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದ ಎನ್ನಲಾಗಿದೆ.

ಮುಂಜಾನೆಯ ವೇಳೆಯಲ್ಲಿ ಈ ಶಬ್ದವನ್ನು ಆಲಿಸಿದ ಕೆಲವು ಸಾರ್ವಜನಿಕರು, ಆತನನ್ನು ಯಾಕೇ ಈಗೇ ಮಾಡುತ್ತಿದ್ದೀಯಾ ಎಂದು ಪ್ರಶ್ನಿಸಿದ್ದಾರೆ. ಯುವಕ ಸಾರ್ವಜನಿಕರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸುವುದು ಅಲ್ಲದೇ, ಅಂಬೇಡ್ಕರ್ ನಾಮಫಲಕಕ್ಕೆ ಸಗಣಿಯನ್ನೂ ಬಳಿದಿದ್ದಾನೆ. ಈ ವೇಳೆ ಸಾರ್ವಜನಿಕರು ಮತ್ತು ಯುವಕನ ನಡುವೆ ಮಾತಿನ ಚಕಮಕಿ ನಡೆದು, ಸಾರ್ವಜನಿಕರು ಯುವಕನನ್ನು ಹಿಡಿದು ಚೆನ್ನಾಗಿ ಥಳಿಸಿ, ಕಂಬಕ್ಕೆ ಕಟ್ಟಿ ಹಾಕಿದ್ದಾರೆ. ಪೊಲೀಸರಿಗೆ ಮಾಹಿತಿ ನೀಡಿ, ಆತನನ್ನು ಬಂಧಿಸಿದ್ದಾರೆ.

ಯಳಂದೂರು ಮತ್ತು ಚಾಮರಾಜನಗರ ಮುಖ್ಯರಸ್ತೆಯನ್ನು ಸಂಪೂರ್ಣ ಬಂದ್ ಮಾಡುವ ಮೂಲಕ ಅಂಬೇಡ್ಕರ್ ಅಭಿಮಾನಿಗಳು ರಸ್ತೆಯಲ್ಲೇ ಪ್ರತಿಭಟನೆಯನ್ನು ನಡೆಸಿದರು. ಮಸಗಾಪುರ ಗ್ರಾಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನವಾಗಿದೆ ಎಂಬ ಸುದ್ದಿ ತಿಳಿಯುತ್ತಲೇ, ಸುತ್ತಮುತ್ತಲಿನ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರಿಂದ ಸ್ಥಳದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು. ಕಡಿಮೆ ಸಂಖ್ಯೆಯಲ್ಲಿ ಇದ್ದ ಪೊಲೀಸರು ಜನರನ್ನು ನಿಯಂತ್ರಿಸಲು ಸಾಕಷ್ಟು ಶ್ರಮ ವಹಿಸಬೇಕಾಯಿತು.

ಈ ಸಂದರ್ಭದಲ್ಲಿ ಎಸ್ಪಿ ಎಂ.ಮುತ್ತುರಾಜು ಮಾತನಾಡಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಮೇಲಿನ ಇಂತಹ ಕೃತ್ಯ ಅತ್ಯಂತ ಖಂಡನೀಯ. ಈಗಾಗಲೇ ಆರೋಪಿಯನ್ನು ವಶಕ್ಕೆ ಪಡೆದು ತನಿಖೆ ಕೈಗೊಂಡಿದ್ದೇವೆ. ಆತನಿಗೆ ತಕ್ಕ ಶಿಕ್ಷೆಯನ್ನು ವಿಧಿಸಲು ಕ್ರಮ ವಹಿಸುತ್ತೇವೆ. ಮುಂದುವರಿದು ಆತನನ್ನು ಗಡಿಪಾರು ಮಾಡುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಭೇಟಿ: ಗ್ರಾಮಸ್ಥರು ಪ್ರತಿಭಟನೆ ನಡೆಸುತ್ತಿದ್ದ ಸ್ಥಳಕ್ಕೆ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರು ಭೇಟಿ ನೀಡಿ ಸಮಸ್ಯೆ ಆಲಿಸಿದರು. ಈ ಸಂದರ್ಭದಲ್ಲಿ ಅವರು ಮಾತನಾಡಿ, ದೇಶದಲ್ಲೇ ಅಂಬೇಡ್ಕರ್ ಅವರ ಮೇಲೆ ಇಂತಹ ಅಪಮಾನಗಳು ನಡೆಯುತ್ತಿದೆ. ಹೆಚ್ಚಿನ ಪ್ರಕರಣದಲ್ಲಿ ಆರೋಪಿಗಳು ಪತ್ತೆಯಾಗುವುದೇ ಇಲ್ಲ, ಮಸಗಾಪುರ ಪ್ರಕರಣದಲ್ಲಿ ಆರೋಪಿಯನ್ನು ಗ್ರಾಮಸ್ಥರೇ ಹಿಡಿದಿದ್ದು, ಆತನನ್ನು ಕಠಿಣ ಶಿಕ್ಷೆಗೆ ಗುರಿಪಡಿಸಬೇಕು. ಅದರಲ್ಲೂ ನನ್ನ ಕ್ಷೇತ್ರದಲ್ಲಿ ಇಂತಹ ಕೃತ್ಯ ನಡೆದಿರುವುದು ಅತ್ಯಂತ ಖಂಡನೀಯ. ಆರೋಪಿಯನ್ನು ಗಡಿಪಾರು ಮಾಡುವ ನಿಟ್ಟಿನಲ್ಲಿ ಪೊಲೀಸರು ಕ್ರಮವಹಿಸಬೇಕು ಎಂದು ಸೂಚನೆ ನೀಡಿದರು.



ಆರೋಪಿ ಗಡಿಪಾರಿಗೆ ಆಗ್ರಹ

ವಿಷಯ ತಿಳಿದು ಸ್ಥಳಕ್ಕೆ ತಕ್ಷಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಮುತ್ತುರಾಜು ಭೇಟಿ ನೀಡಿ, ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರುವಲ್ಲಿ ಯಶಸ್ವಿಯಾದರು. ಈ ವೇಳೆ ಗ್ರಾಮಸ್ಥರೊಬ್ಬರು ಮಾತನಾಡಿ, ನಮ್ಮ ಜಿಲ್ಲೆಯಲ್ಲಿ ಪದೇ ಪದೇ ಇಂತಹ ಕೃತ್ಯಗಳು ನಡೆಯುತ್ತಿದೆ. ನಮ್ಮ ಗ್ರಾಮದಲ್ಲಿ ಎಂದಿಗೂ ಇಂತಹ ಘಟನೆ ಸಂಭವಿಸಿರಲಿಲ್ಲ, ಈ ನಿಟ್ಟಿನಲ್ಲಿ ಆರೋಪಿಯನ್ನು ಕೂಡಲೇ ಗಡಿಪಾರು ಮಾಡಬೇಕು. ಆತನ ಮೇಲೆ ರಾಷ್ಟ್ರದ್ರೋಹದ ಕಾಯ್ದೆಯಡಿ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು ಎಂದು ಒತ್ತಾಯಿಸಿದರು.

ಹರಿಹರ ಪ್ರಾಧಿಕಾರದ ಆಯುಕ್ತ ಆರ್.ಯೋಗಾನಂದ ಅಭಿಪ್ರಾಯ

ಅಧ್ಯಾತ್ಮ ಅನುಸರಣೆಯಿಂದ ನೆಮ್ಮದಿ ಜೀವನ

• **ಮಂಡ್ಯ:** ಪ್ರತಿಯೊಬ್ಬರೂ ಅಧ್ಯಾತ್ಮವನ್ನು ಅನುಸರಿಸುವುದರಿಂದ ನೆಮ್ಮದಿಯ ಜೀವನ ನಡೆಸಬಹುದು ಎಂದು ಹರಿಹರ ಪ್ರಾಧಿಕಾರದ ಆಯುಕ್ತ ಆರ್.ಯೋಗಾನಂದ ಅವರು ತಿಳಿಸಿದರು.

ನಗರದ ಹೊರವಲಯದಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಡಾ.ರಾಮಚಂದ್ರ ಗುರೂಜಿ ನೇತೃತ್ವದಲ್ಲಿ ಆಯೋಜಿಸಿದ್ದ ಅಂತರ್ ಮನಸ್ಸಿನ ಅದ್ಭುತ ಶಕ್ತಿಗಳು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಅಧ್ಯಾತ್ಮವನ್ನು ಅನುಸರಿಸುವಾಗ ಆಗುವ ಅನುಭವವೇ ಬೇರೆ. ಅದರಿಂದ ನಮ್ಮಲ್ಲಿ ಒಳ್ಳೆಯ ಚಿಂತನೆಗಳು, ಆಲೋಚನೆಗಳು, ಬೆಳವಣಿಗೆಗಳು ನಮ್ಮಲ್ಲಿ ಮೂಡುತ್ತವೆ. ಧರ್ಮಮಾರ್ಗದಲ್ಲಿ ನಡೆಯುವುದರಿಂದ ತಪ್ಪುಗಳಂತೆ ಕಡಿಮೆಯಾಗುತ್ತವೆ. ದೌರ್ಬಲ್ಯಗಳನ್ನು ದೂರವಾಗಿಸಲು ಅಧ್ಯಾತ್ಮ ಸಹಕಾರಿಯಾಗಿದೆ ಎಂದು ನುಡಿದರು.

ಇಂದಿನ ಒತ್ತಡದ ಜೀವನದಿಂದ ಪಾರಾಗುವುದಕ್ಕೆ ಅಧ್ಯಾತ್ಮವೊಂದೇ ಪರ್ಯಾಯ ಮಾರ್ಗವಾಗಿದೆ. ಯೋಗ, ಧ್ಯಾನ ಮಾಡುವುದರಿಂದ ಮನಸ್ಸು ನಿರ್ಮಲವಾಗುತ್ತದೆ. ಏಕಾಗ್ರತೆ ಮೂಡುತ್ತದೆ. ಒತ್ತಡವನ್ನು ದೂರವಾಗಿಸಿ ನೆಮ್ಮದಿಯನ್ನು ಮೂಡಿಸುತ್ತದೆ. ಅಧ್ಯಾತ್ಮದ ಅನುಭವ ಪಡೆದವರಿಗೆ ಅದರ ಶಕ್ತಿ ಏನೆಂಬುದು ಗೊತ್ತಿರುತ್ತದೆ. ಎಲ್ಲರೂ ಅಧ್ಯಾತ್ಮ ಮಾರ್ಗದಲ್ಲಿ ಮುನ್ನಡೆದಾಗ ಒಳ್ಳೆಯ ಜೀವನವನ್ನು ಕಂಡುಕೊಳ್ಳಬಹುದು ಎಂದು ತಿಳಿಸಿದರು.



ಅಂತಾರಾಷ್ಟ್ರೀಯ ಖ್ಯಾತಿಯ ಪಾಸ್ಟ್‌ಲೈವ್ ರಿಗ್ರೇಷನ್ ಥೆರಪಿಸ್ಟ್ ಡಾ.ರಾಮಚಂದ್ರ ಗುರೂಜಿ ಮಾತನಾಡಿ, ದೈವಿಕ ಭಾವನೆ ಮನಸ್ಸನ್ನು ಪ್ರಶಾಂತಗೊಳಿಸುತ್ತದೆ. ಒಳ್ಳೆಯದನ್ನು ಆಲೋಚಿಸುವುದರತ್ತ ಮನಸ್ಸನ್ನು ಕೇಂದ್ರೀಕರಿಸುತ್ತದೆ. ಅಧ್ಯಾತ್ಮದಿಂದ ಆರೋಗ್ಯವಂತ ಜೀವನ ನಡೆಸುವ ಎಲ್ಲಾ ಅವಕಾಶಗಳಿದ್ದರೂ ಅದರ ಮಹತ್ವ ಇನ್ನೂ ಹೆಚ್ಚಿನವರಿಗೆ ತಿಳಿದಿಲ್ಲ ಎಂದು ತಿಳಿಸಿದರು.

ಅಧ್ಯಾತ್ಮದಿಂದ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳುವ ಶಕ್ತಿ ಬರುತ್ತದೆ. ಶಾಂತಿಯನ್ನು ಬಯಸುತ್ತಾ ಒಳ್ಳೆಯದನ್ನೇ ಆಲೋಚಿಸುವುದರಿಂದ ಸಮಾಜದಲ್ಲಿ ಶಾಂತಿ ನೆಲೆಸುತ್ತದೆ. ಜನರ ಮನಸ್ಥಿತಿಯೂ ಉತ್ತಮವಾಗಿರುತ್ತದೆ.

ಕಾರ್ಯಕ್ರಮದಲ್ಲಿ ಆರ್.ಯೋಗಾನಂದ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಡಾ.ಮನು, ಹಿಮ ಮನು, ಸ್ವೀತಿ, ಮಧುಸೂದನ್, ಅನುಪಮಾ ಇದ್ದರು.

ಕಾರ್ಯಕ್ರಮದಲ್ಲಿ ಹಾರ್ಟ್ ಸಂಸ್ಥೆ ಅಧ್ಯಕ್ಷ ಶಿವಕುಮಾರ್ ಹೇಳಿಕೆ

ಹೈನುಗಾರಿಕೆಯಲ್ಲಿ ವೈಜ್ಞಾನಿಕ ಜ್ಞಾನಕ್ಕೆ ಉತ್ತೇಜನ

• **ಮೈಸೂರು:** ಗ್ರಾಮೀಣ ರೈತರ ಆರ್ಥಿಕ ಸಬಲೀಕರಣ ಮತ್ತು ವೈಜ್ಞಾನಿಕ ಹೈನುಗಾರಿಕೆ ಉತ್ತೇಜಿಸುವ ಉದ್ದೇಶದಿಂದ ಹಾರ್ಟ್ ಸಂಸ್ಥೆಯ ವತಿಯಿಂದ "ಹಸು ಸಾಕಾಣಿಕೆ ಮತ್ತು ಗುಣಮಟ್ಟದ ಹಾಲು ಉತ್ಪಾದನೆ" ಕುರಿತು ಒಂದು ದಿನದ ವಿಶೇಷ ತರಬೇತಿ ಕಾರ್ಯಕ್ರಮವನ್ನು ಮೈಸೂರಿನ ರಿಂಗ್ ರೋಡ್ ಸಮೀಪವಿರುವ ಹಾರ್ಟ್ ಸಂಸ್ಥೆ ಯಶಸ್ವಿಯಾಗಿ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಹಾರ್ಟ್ ಸಂಸ್ಥೆಯ ಅಧ್ಯಕ್ಷ ಶಿವಕುಮಾರ್ ಮಾತನಾಡಿ, ಹೈನುಗಾರಿಕೆ ಗ್ರಾಮೀಣ ಆರ್ಥಿಕತೆಯ ಪ್ರಮುಖ ಆಧಾರವಾಗಿದ್ದು, ರೈತರು ಸಾಂಪ್ರದಾಯಿಕ ವಿಧಾನಗಳ ಜೊತೆಗೆ ವೈಜ್ಞಾನಿಕ ಪಶುಪಾಲನಾ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದು ಹೇಳಿದರು.

ಉತ್ತಮ ತಳಿಯ ಹಸುಗಳ ಸಾಕಾಣಿಕೆ, ಸಮರ್ಪಕ ಪೌಷ್ಟಿಕ ಆಹಾರ ನಿರ್ವಹಣೆ, ಆರೋಗ್ಯ ರಕ್ಷಣೆ ಹಾಗೂ ಸ್ವಚ್ಛ ಹಾಲು ಉತ್ಪಾದನೆಯ ಮೂಲಕ ರೈತರು ಹೆಚ್ಚಿನ ಆದಾಯ ಗಳಿಸಿ ಸ್ವಾವಲಂಬಿಗಳಾಗಬಹುದು ಎಂದು ತಿಳಿಸಿದರು. ಗ್ರಾಮೀಣಾಭಿವೃದ್ಧಿ ಮತ್ತು ಜೀವನಮಟ್ಟ ಸುಧಾರಣೆಗೆ ಹಾರ್ಟ್ ಸಂಸ್ಥೆ ನಿರಂತರವಾಗಿ ವಿವಿಧ ತರಬೇತಿ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದಸಂಪನ್ಮೂಲವ್ಯಕ್ತಿಯಾಗಿಭಾಗವಹಿಸಿದ್ದ ಪ್ರಸನ್ನ ಮಾತನಾಡಿ, ಅತ್ಯಂತ ಪರಿಣಾಮಕಾರಿ ಮತ್ತು ಪ್ರೇರಣಾದಾಯಕ ತರಬೇತಿ ಅಧಿವೇಶನ ನಡೆಸಿದರು. ಹಸುಗಳ ಆಯ್ಕೆ, ತಳಿ ಅಭಿವೃದ್ಧಿ, ಸಮತೋಲಿತ ಆಹಾರ ನಿರ್ವಹಣೆ, ರೋಗ ನಿರೋಧಕ ಕ್ರಮಗಳು, ಲಸಿಕಾ ಕಾರ್ಯಕ್ರಮಗಳು, ಹಾಲಿನ ಗುಣಮಟ್ಟ ಹೆಚ್ಚಿಸುವ ತಂತ್ರಗಳು ಹಾಗೂ ಹೈನುಗಾರಿಕೆಯನ್ನು ಲಾಭದಾಯಕ ಉದ್ಯಮವಾಗಿ ರೂಪಿಸುವ ಕುರಿತು ಸವಿಸ್ತಾರವಾಗಿ ಮಾಹಿತಿ ನೀಡಿದರು. ರೈತರೊಂದಿಗೆ ನೇರ ಸಂವಾದ ನಡೆಸಿ ಅವರ ಪ್ರಶ್ನೆಗಳಿಗೆ ಪ್ರಾಯೋಗಿಕ ಉತ್ತರಗಳನ್ನು ನೀಡುವ ಮೂಲಕ ಉತ್ತಮ ಮಾರ್ಗದರ್ಶನ ಒದಗಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ಭಾಗವಹಿಸಿದ ಎಲ್ಲಾ ರೈತರು ಮತ್ತು ಅತಿಥಿಗಳಿಗೆ ಕೃತಜ್ಞತೆ ಸಲ್ಲಿಸಲಾಯಿತು. ಇಂತಹ ತರಬೇತಿ ಕಾರ್ಯಕ್ರಮಗಳು ಗ್ರಾಮೀಣ ರೈತರ ಆದಾಯ ಹೆಚ್ಚಳ, ಸ್ವಯಂ ಉದ್ಯೋಗ ಸೃಷ್ಟಿ ಹಾಗೂ ಸುಸ್ಥಿರ ಹೈನುಗಾರಿಕೆ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಲಿವೆ ಎಂಬ ವಿಶ್ವಾಸ ವ್ಯಕ್ತಪಡಿಸಲಾಯಿತು.



ಹೊಸ ಕೌಶಲ ಕಲಿಕೆಗೆ ಉತ್ತಮ ಅವಕಾಶ

ತರಬೇತಿಯ ಸಂದರ್ಭದಲ್ಲಿ ಪ್ರಾಯೋಗಿಕ ಉದಾಹರಣೆಗಳು, ಅನುಭವ ಹಂಚಿಕೆ ಮತ್ತು ಸಂವಾದಾತ್ಮಕ ಚರ್ಚೆಗಳು ನಡೆದವು. ಭಾಗವಹಿಸಿದ್ದ ರೈತರು ಮತ್ತು ಯುವಕರು ತರಬೇತಿ ಕಾರ್ಯಕ್ರಮ ಹೈನುಗಾರಿಕೆಯಲ್ಲಿ ಹೊಸ ಜ್ಞಾನ ಹಾಗೂ ಕೌಶಲ್ಯಗಳನ್ನು ಪಡೆದುಕೊಳ್ಳಲು ಇದು ಉತ್ತಮ ಅವಕಾಶವಾಗಿದೆ ಎಂದು ಅಭಿಪ್ರಾಯಪಟ್ಟರು. ವಿಶೇಷವಾಗಿ, ಗುಣಮಟ್ಟದ ಹಾಲು ಉತ್ಪಾದನೆ ಮತ್ತು ವೈಜ್ಞಾನಿಕ ಹಸು ಸಾಕಾಣಿಕೆ ಕುರಿತು ಪಡೆದ ಮಾಹಿತಿಯು ತಮ್ಮ ದೈನಂದಿನ ಹೈನುಗಾರಿಕಾ ಚಟುವಟಿಕೆಗಳಿಗೆ ಬಹಳ ಉಪಯುಕ್ತವಾಗಲಿದೆ ಎಂದುಪ್ರಸನ್ನ ತಿಳಿಸಿದರು.

ಉತ್ತರಾದಿ ಮಠದ ಶ್ರೀ ಸತ್ಯಾತ್ಮ ತೀರ್ಥ ಸ್ವಾಮೀಜಿ ಅಭಿಮತ

ಬದುಕಿಗೆ ಹಿರಿಯರ ಮಾರ್ಗದರ್ಶನ ಅವಶ್ಯ

• **ಮೈಸೂರು:** ಮಕ್ಕಳು ಹೆತ್ತವರ ಮಾತನ್ನು ಕೇಳಬೇಕು. ಯಾವಾಗಲೂ ಹಿರಿಯರ ಮಾರ್ಗದರ್ಶನದಲ್ಲಿಯೇ ಜೀವನ ನಿರ್ವಹಣೆ ಮಾಡಬೇಕು ಎಂದು ಶ್ರೀಮನ್ ಮಧ್ವಾಚಾರ್ಯ ಮೂಲ ಮಹಾಸಂಸ್ಥಾನಉತ್ತರಾದಿಮಠದಶ್ರೀಸತ್ಯಾತ್ಮತೀರ್ಥಸ್ವಾಮೀಜಿಹೇಳಿದರು. ಅಧಿಕ ಜ್ಯೇಷ್ಠ ಮಾಸದ ಅಂಗವಾಗಿ ಉತ್ತರಾದಿ ಮಠವು ಮೈಸೂರಿನ ಅಗ್ರಹಾರದ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣದ ಬೃಹತ್ ವೇದಿಕೆಯಲ್ಲಿ ಹಮ್ಮಿಕೊಂಡಿರುವ ಧರ್ಮ ಸಭೆಯಲ್ಲಿ ಅವರು ಭಾಗವತ ಸಂದೇಶ ನೀಡಿದರು.

ಗೋಕುಲದಲ್ಲಿ ಬೆಳೆಯುತ್ತಿದ್ದ ಶ್ರೀ ಕೃಷ್ಣ, ಎಲ್ಲರ ಮನೆಯಲ್ಲಿ ಮೊಸರು, ಬೆಣ್ಣೆ ಕದಿಯುತ್ತಿದ್ದ. ಯಾವವಸ್ತು ಅತ್ಯಂತಶ್ರೇಷ್ಠವೋ ಅದು ಭಗವಂತನಿಗೆ ಅರ್ಪಣೆ ಆಗಬೇಕು ಎಂಬ ತಾತ್ಪರ್ಯ ಇಲ್ಲಿ ಅಡಗಿದೆ. ಕೃಷ್ಣ ಬರುತ್ತಾನೆ ಎಂದೇ ಕೆಲವರು ಮೊಸರು, ಬೆಣ್ಣೆಯನ್ನು ಇಡುತ್ತಲೇ ಇರಲಿಲ್ಲ, ಅಂಥವರಮನೆಯಮಕ್ಕಳನ್ನು ಚಿವುಟಿಹೋಗುತ್ತಿದ್ದ. ದೇವರ ನೈವೇದ್ಯಕ್ಕೆ ಸುವಸ್ತುಗಳನ್ನು ಸಮರ್ಪಣೆ ಮಾಡದಿದ್ದರೆ, ನಿಮ್ಮ ಮನೆಯಲ್ಲಿಗೋಳು ತಪ್ಪಿದ್ದಲ್ಲ ಎಂಬ ಸಂದೇಶ ನೀಡಿದ ಎಂದು ಅವರು ದಶಮ ಸ್ಕಂದದಲ್ಲಿ ಬರುವ ಬಾಲ ಕೃಷ್ಣನ ಕಥೆಯನ್ನು ನಿರೂಪಿಸಿದರು. ಸಾಕ್ಷಾತ್ ಭಗವಂತನೇ ಆಗಿದ್ದರೂ ತಾಯಿ ಯಶೋಧೆಯಿಂದ ಪೆಟ್ಟು ತಿಂದ. ಆಕೆಯು ಒರಳಿಗೆ ಕಟ್ಟಿ ಹಾಕಿದರೂ ಸುಮ್ಮನಿದ್ದ. ಮಕ್ಕಳಿಗೆ ಹಿರಿಯರು ದಂಡನೆ ಮಾಡಬೇಕು. ಅದನ್ನು ಎಳೆಯರು ಒಪ್ಪಿಕೊಳ್ಳಬೇಕು ಎಂಬ ಸಂದೇಶ ಇಲ್ಲಿ ಅಡಕವಾಗಿದೆ. ಮಣ್ಣು ತಿಂದ ಎಂದು ತಾಯಿ ಏಟು ಕೊಟ್ಟಳು. ಇಡೀ ಬ್ರಹ್ಮಾಂಡವೇ ನನ್ನ ಒಳಗೆ ಇದೆ ಎಂದು ಆಕೆಗೆ ದರ್ಶನ ಮಾಡಿಸಿದ.

ಮುಂಜಾನೆ ಶ್ರೀಗಳಿಗೆ ಪಾದಪೂಜೆ, ಮುದ್ರಾಧಾರಣೆ, ಶ್ರೀಗಳಿಂದ ಸಂಸ್ಥಾನ ಪೂಜೆ ನೆರವೇರಿತು. ಪಂಡಿತ ಬಾದರಾಯಣಾಚಾರ್ಯ-ಭಾಗ್ಯಾ ದಂಪತಿಗಳ ನೇತೃತ್ವದಲ್ಲಿ ನೂರಾರು ಭಕ್ತರು ಪತ್ನೀ ಸಹಿತರಾಗಿ ಶ್ರೀ ಧನ್ವಂತರಿ ಹೋಮ ಮಾಡಿದರು.



ವಿಜೃಂಭಣೆಯ ಕಲ್ಯಾಣ ಮಹೋತ್ಸವ

ಬೆಂಗಳೂರಿನ ಶ್ರೀವಾರಿ ಫೌಂಡೇಷನ್‌ನ ವೆಂಕಟೇಶಮೂರ್ತಿ ಮತ್ತು ತಂಡದವರಿಂದ 2 ತಾಸುಗಳ ಶ್ರೀನಿವಾಸ ಕಲ್ಯಾಣ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು. ನೂರಾರು ಭಕ್ತರು ಇದಕ್ಕೆ ಸಾಕ್ಷಿಯಾದರು.

ಕೃತಿ ಬಿಡುಗಡೆ ಸಮಾರಂಭದಲ್ಲಿ ಸಾಹಿತಿ ನಾಡೋಜ ಬರಗೂರು ರಾಮಚಂದ್ರಪ್ಪ ಬೇಸರ

ಜಾತಿ ಆಧಾರಿತ ಆಡಳಿತ ಸಮಾಜಕ್ಕೆ ಮಾರಕ

• **ಮಂಡ್ಯ:** ಸಾಮಾಜಿಕವಾಗಿ ಸರ್ಕಾರಗಳು ಆಳುವ ವರ್ಗಗಳಾಗಿ ಜಾತಿ, ಪುರೋಹಿತಶಾಹಿಯನ್ನೇ ಮುಖ್ಯವನ್ನಾಗಿಸಿಕೊಂಡಿವೆ. ಅದರಂತೆ ಸಾಂಸ್ಕೃತಿಕವಾಗಿ ಧರ್ಮ, ಸಂಸ್ಕೃತಿ ಎಂಬ ಹೆಸರಿನಲ್ಲಿ ಸಮೂಹ ಸನ್ನಿ ಸೃಷ್ಟಿಸಿ ತಮಗೆ ಬೇಕಾದಂತೆ ಭೌತಿಕ ಹಾಗೂ ಬೌದ್ಧಿಕವಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದು ಹಿರಿಯ ಸಾಹಿತಿ ನಾಡೋಜ ಬರಗೂರು ರಾಮಚಂದ್ರಪ್ಪ ಬೇಸರ ವ್ಯಕ್ತಪಡಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಡಾ.ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನ ವತಿಯಿಂದ 'ಡಾ.ಬೆಸಗರಹಳ್ಳಿ ರಾಮಣ್ಣ ಕಥಾ ಸಂಕಲನ ಪ್ರಶಸ್ತಿ ಪ್ರದಾನ ಹಾಗೂ 'ಕಕರುಡಿ ಉಗಾದಿ ತೆಲುಗು ಅನುವಾದ ಕೃತಿ ಬಿಡುಗಡೆ ಸಮಾರಂಭ ಉದ್ಘಾಟಿಸಿ ಮಾತನಾಡಿ, ಗಾಂಧೀಜಿಯವರು ಶ್ರೀರಾಮನ ಭಕ್ತರಾಗಿದ್ದರು. ಆದರೆ ಎಂದೂ ಶ್ರೀರಾಮನನ್ನು ತಮ್ಮ ವೈಯಕ್ತಿಕ ಪ್ರಚಾರಕ್ಕೆ ಹಾಗೂ ಸ್ವಾತಂತ್ರ್ಯ ಹೋರಾಟಕ್ಕೆ ಬಳಸಿಕೊಳ್ಳಲಿಲ್ಲ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಯಜಮಾನಿಕೆಯನ್ನು ಆಳುವವರ್ಗಗಳು ಹಾಗೂ ರಾಜಕೀಯದವರು ಚೆನ್ನಾಗಿ ಬಳಸಿಕೊಳ್ಳುತ್ತಾರೆ ಎಂದು ವಿಶ್ಲೇಷಿಸಿದರು.

ಡಾ.ಬೆಸಗರಹಳ್ಳಿ ರಾಮಣ್ಣ ಅವರು ಮಾನವೀಕರಣ ಹಾಗೂ ಪ್ರಜಾಪ್ರಭುತ್ವೀಕರಣದ ಕೇಂದ್ರ ಪ್ರಜ್ಞೆ ಇಟ್ಟುಕೊಂಡು ಕಥೆಗಳನ್ನು ರಚಿಸುತ್ತಿದ್ದರು. ಇವರ ಕಥೆಗಳಲ್ಲಿ ಸಾಮಾಜಿಕ ನೈತಿಕತೆ, ಬದ್ಧತೆ ಇತ್ತು. ಅವರ ಕಥೆಗಳಲ್ಲಿ ಬರುಕು, ಬೇಸಗೆ, ಹಳ್ಳಿ, ನಗರ, ಶೋಷಿತರು, ದಲಿತರು, ಸಂತ್ರಸ್ತರ ಪರವಾಗಿರುವುದನ್ನು ಮಾನವೀಕರಣ ಹಾಗೂ ಪ್ರಜಾಪ್ರಭುತ್ವೀಕರಣ ಕಥೆಗಳನ್ನು ನೀಡುತ್ತಿದ್ದರು. ಲೇಖಕನಿಗಿಂತ ಮನುಷ್ಯತ್ವ ಹೆಚ್ಚಿತ್ತು ಎಂದು ಶ್ಲಾಘಿಸಿದರು.

ಪ್ರಜಾಪ್ರಭುತ್ವೀಕರಣದಲ್ಲಿ ಸಂವಾದ ಹೆಚ್ಚಾಗಬೇಕು. ಆದರೆ ಪ್ರಸ್ತುತ ಪ್ರಜಾಪ್ರಭುತ್ವಕ್ಕಿಂತ ವಾಗ್ವಾದಗಳು ಹೆಚ್ಚಾಗಿವೆ. ವಾಗ್ವಾದಗಳನ್ನು ಸಂವಾದಗೊಳಿಸುವ ಶಕ್ತಿ ಪ್ರಜಾಪ್ರಭುತ್ವಕ್ಕೆ ಇದೆ. ಬೆಸಗರಹಳ್ಳಿ ರಾಮಣ್ಣನವರಲ್ಲಿ ಗಾಂಧಿತನವೂ ಇತ್ತು. ಸಂವಾದವೂ ಕೂಡ ಇತ್ತು. ಡಾ.ಬೆಸಗರಹಳ್ಳಿ ರಾಮಣ್ಣನವರು ಕಾಲದ ಜೊತೆಗೆ ಕಳಕಳಿ ಮತ್ತು ಕಾಳಗ ಮಾಡಿಕೊಂಡು ಬಂದಿದ್ದರು. ಪ್ರಸ್ತುತ ಸೋಷಿಯಲ್ ಕರೆನ್ಸಿ ಸಂಸ್ಕೃತಿ ಹೆಚ್ಚಾಗಿ ಬಳಸಿಕೊಳ್ಳಲಾಗುತ್ತಿದೆ. ಇದರಿಂದ ಜಾತಿ, ಧರ್ಮ, ಸಂಸ್ಕೃತಿಯ ನಡುವಿನ ಕಲಹ ಹೆಚ್ಚಾಗಿದೆ. ಜನರ ಜೀವನದ ವಿಧಾನವೇ ಸಂಸ್ಕೃತಿಯಾಗಿದೆ. ಆದರೆ ಸಾಮಾಜಿಕ ವಹಿವಾಟಿನ ಸಂಸ್ಕೃತಿ ಹೆಚ್ಚಾದಂತೆ ಜನರ ಜೀವನ ವಿಧಾನದ ಸಂಸ್ಕೃತಿಯೇ ಇಲ್ಲದಂತಾಗಲಿದೆ ಎಂದು ಎಚ್ಚರಿಸಿದರು.

ಡಾ.ಬೆಸಗರಹಳ್ಳಿ ರಾಮಣ್ಣ ಕಥಾ ಸಂಕಲನ ಪ್ರಶಸ್ತಿಗೆ ಆಯ್ಕೆಯಾಗಿರುವ ರಘುನಾಥ್.ಚ.ಹ ಅವರ 'ಇಲ್ಲಿಂದ ಮುಂದೆಲ್ಲ ಕಥೆಯು ಬೆಸಗರಹಳ್ಳಿ ರಾಮಣ್ಣ ಅವರ ಕಥೆಗಳಿಗೆ ಹೋಲಿಕೆಯಾಗುತ್ತದೆ. ರಾಮಣ್ಣನವರ ಕಥೆಗಳು ಲೋಕಾಂತದಿಂದ ಏಕಾಂತಕ್ಕೆ ಕೊಂಡೊಯ್ದರೆ, ರಘುನಾಥ್.ಚ.ಹ ಅವರ ಕಥೆಗಳು ಏಕಾಂತದಿಂದ ಲೋಕಾಂತಕ್ಕೆ ಕರೆದೊಯ್ಯುತ್ತವೆ ಎಂದು ಹೇಳಿದರು.



ಕೃತಿ ಬಿಡುಗಡೆ

ಸಮಾರಂಭದಲ್ಲಿ ಸಾಹಿತಿ ರಘುನಾಥ್.ಚ.ಹ ಅವರ 'ಇಲ್ಲಿಂದ ಮುಂದೆಲ್ಲ ಕಥೆ ಕೃತಿ ಕುರಿತಂತೆ ಪುಸ್ತಕ ಆಯ್ಕೆ ಸಮಿತಿಯ ಕನ್ನಡ ಪ್ರಾಧ್ಯಾಪಕ ಡಾ.ನಿತ್ಯಾನಂದ ಬಿ.ಶೆಟ್ಟಿ ಮಾತನಾಡಿದರು. ಡಾ. ಬೆಸಗರಹಳ್ಳಿ ರಾಮಣ್ಣ ಕಥಾ ಸಂಕಲನ ಪ್ರಶಸ್ತಿಯನ್ನು ರಘುನಾಥ್. ಚ.ಹ ಅವರಿಗೆ ಪ್ರದಾನ ಮಾಡಲಾಯಿತು. 'ಕಕರುಡಿ ಉಗಾದಿ ತೆಲುಗು ಅನುವಾದ ಕೃತಿಯನ್ನು ಬಿಡುಗಡೆ ಮಾಡಲಾಯಿತು.

ಸಾಮಾಜಿಕ ಹೋರಾಟಗಾರ ಗ್ರಾಮೀಣ ಮಹೇಶ್ ಹೇಳಿಕೆ

ಉತ್ತಮ ಅಭ್ಯಾಸದಿಂದ ಮಾದರಿ ವ್ಯಕ್ತಿತ್ವ

• **ಸರಗೂರು:** ತಾನು ರೂಢಿಸಿಕೊಳ್ಳುವ ಉತ್ತಮ ಅಭ್ಯಾಸದಿಂದ ಮನುಷ್ಯ ಮಾದರಿ ವ್ಯಕ್ತಿಯಾಗಿ ರೂಪುಗೊಳ್ಳಲಿ ದ್ದಾನೆ ಎಂದು ಸಾಮಾಜಿಕ ಹೋರಾಟಗಾರ ಗ್ರಾಮೀಣ ಮಹೇಶ್ ಹೇಳಿದರು.

ತಾಲೂಕು ಮುಳ್ಳೂರು ಗ್ರಾಮದಲ್ಲಿ ಗ್ರಾಮೀಣ ವಿಕಾಸ ಸಂಸ್ಥೆಯಿಂದ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಗ್ರಾಮ ವಿಕಾಸ ಸಂಸ್ಥೆಯು ಗ್ರಾಮೀಣ ಮಟ್ಟದಲ್ಲಿ ಉತ್ತಮ ಪರಿಸರವನ್ನು ನಿರ್ಮಿಸಲು ಶ್ರಮಿಸುತ್ತಿದೆ. ಅದೇ ರೀತಿ ತಾಲೂಕಿನ ವಿವಿಧ ಗ್ರಾಮಗಳ ಸೇವಾನಿರತ ಮಹಿಳೆಯರು ಸ್ವಯಂ ಪ್ರೇರಣೆಯಿಂದ ಪರಿಸರ ಕಾಪಾಡುವ ನಿಟ್ಟಿನಲ್ಲಿ, ದೇಶಿ ಆಟಗಳನ್ನು ಉಳಿಸುವಲ್ಲಿ ಮುಂದೆ ಬಂದಿರುವುದು ಬಹಳ ಬೆಳವಣಿಗೆಯಾಗಿದೆ ಎಂದು ತಿಳಿಸಿದರು.



ನಿತ್ಯ ಬೇಗನೆ ಏಳುವುದು. ಸ್ವಚ್ಛವಾಗುವುದು. ಮನೆಯ ಹಿತ್ತಲಿನಲ್ಲಿ, ರಾಸಾಯನಿಕ ಬಳಸದೇ ಸಾವಯವ ಮಾದರಿಯಲ್ಲಿ ಕೈತೋಟ ನಿರ್ಮಿಸಿ ತರಕಾರಿ ಬೆಳೆಯುವುದು. ಶುದ್ಧವಾದ ಅಡುಗೆ ತಯಾರಿಸುವುದು. ಉತ್ತಮ ಪುಸ್ತಕಗಳನ್ನು ಓದುವುದು. ಒಳ್ಳೆಯ ಮಾತುಗಳನ್ನು ಆಡುವುದು. ಉತ್ತಮವಾದ ಚಿಂತನೆಗಳನ್ನು ಮಾಡುವುದು. ಪರಿಸರ ಸಂರಕ್ಷಣೆ ಮಾಡುವುದು. ಮಕ್ಕಳೊಂದಿಗೆ ಒಳ್ಳೆಯ ನಡೆ-ನುಡಿ, ವ್ಯಾಯಾಮ ಮಾಡುವುದು. ದೈನಂದಿನ ಚಟುವಟಿಕೆಗಳು ಉತ್ತಮವಾಗಿರಬೇಕು ಎಂದು ಸಲಹೆ ನೀಡಿದರು. ಗ್ರಾಮ ವಿಕಾಸ ಜಿಲ್ಲಾ ಸಂಯೋಜಕ ಮಣಿರಾಜು, ಸಂಯೋಜಕ ಶಿವಕುಮಾರ್, ತಾಲೂಕು ಸಂಯೋಜಕ ಗಣೇಶ, ನಾಡಗೌಡಿಕೆ ಶಿವಕುಮಾರ ಹಾಜರಿದ್ದರು.

> **ವ್ಯಕ್ತಿ ವಿಕಾಸಗೊಂಡರೆ ಗ್ರಾಮ ವಿಕಾಸಗೊಳ್ಳುತ್ತದೆ. ಗ್ರಾಮ ವಿಕಾಶಗೊಂಡರೆ, ದೇಶ ವಿಕಾಶಗೊಳ್ಳುತ್ತದೆ. ಇಂತಹ ಉದ್ದೇಶಗಳನ್ನೊಳಗೊಂಡ ಈ ಸಂಸ್ಥೆ ಕಾರ್ಯಗಳು ಮೆಚ್ಚುವಂತಾಗಿದೆ. ಹೀಗೆ ಎಲ್ಲರೂ ಒಳ್ಳೆಯತನದಿಂದ ಮುಂದುವರಿದರೆ ದೇಶ ಅಭಿವೃದ್ಧಿಯಾಗಲು ಸಾಧ್ಯ. ಈ ನಿಟ್ಟಿನಲ್ಲಿ ಎಲ್ಲರೂ ಮೈಗೂಡಿಸಿಕೊಂಡು ಜೀವನ ನಡೆಸಬೇಕು**
>
> ■ **ಗ್ರಾಮೀಣ ಮಹೇಶ್, ಸಾಮಾಜಿಕ ಹೋರಾಟಗಾರ**

ಭಾರತ ಜತೆ ತಂತ್ರಜ್ಞಾನ ಬಂಧ: ಮ್ಯಾಕ್ರಾನ್

ತಾಂತ್ರಿಕ ಪ್ರಗತಿಯಲ್ಲಿ ಭಾರತ ಮಹಾನ್ ಶಕ್ತಿ



ಫ್ರಾನ್ಸ್‌ನ ನೈಸ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿಯವರನ್ನು ಭಾರತೀಯ ಅನಿವಾಸಿಗಳು ಆತ್ಮೀಯವಾಗಿ ಬರಮಾಡಿಕೊಂಡರು.

• **ಪ್ಯಾರಿಸ್:** ಜಾಗತಿಕ ತಾಂತ್ರಿಕ ಪ್ರಗತಿಯಲ್ಲಿ ಭಾರತವನ್ನು ಪ್ರಮುಖ ಶಕ್ತಿ ಎಂದು ಶ್ಲಾಘಿಸಿದ ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್, ಉಭಯ ದೇಶಗಳ ನಡುವಿನ ಸಹಕಾರದ ಸಂಬಂಧವನ್ನು ಬಲಪಡಿಸುವ ಬದ್ಧತೆಯನ್ನು ಪುನರುಚ್ಚರಿಸಿದರು.

ಪ್ರಧಾನಿ ನರೇಂದ್ರ ಮೋದಿಯೊಂದಿಗೆ ನೈಸ್‌ನಲ್ಲಿ ನಡೆದ ಭಾರತ್ ಇನ್ನೋವೇಟ್ಸ್ 2026 ಸಮ್ಮೇಳನ ಉದ್ದೇಶಿಸಿ ಮಾತನಾಡಿದ ಮ್ಯಾಕ್ರಾನ್, ಭಾರತದ ಸಂಶೋಧನಾ ಸಾಮರ್ಥ್ಯ ಅಪಾರ ಇಂಜಿನಿಯರಿಂಗ್ ಪ್ರತಿಭೆಯನ್ನು ಶ್ಲಾಘಿಸಿದರು. ಭಾರತ ವಾರ್ಷಿಕವಾಗಿ 10 ಲಕ್ಷಕ್ಕೂ ಹೆಚ್ಚು ಇಂಜಿನಿಯರ್‌ಗಳನ್ನು ಉತ್ಪಾದಿಸುತ್ತದೆ, ಇದು ಯುರೋಪ್ ಮತ್ತು ಯುನೈಟೆಡ್ ಸ್ಟೇಟ್ಸ್‌ನ ಒಟ್ಟು ಉತ್ಪಾದನೆಗೆ ಸಮಾನ ಎಂದು ಅವರು ಉಲ್ಲೇಖಿಸಿದರು. ಜಾಗತಿಕ ಪಾಲುದಾರರ ಮುಂದಿರುವ ಪ್ರಮುಖ ಪ್ರಶ್ನೆ ಭಾರತ ಆವಿಷ್ಕಾರ ಮಾಡುತ್ತದೆಯೇ ಎಂದಲ್ಲ, ಬದಲಿಗೆ ಯಾರು ಭಾರತದೊಂದಿಗೆ ಆವಿಷ್ಕಾರ ಮಾಡುತ್ತಾರೆ ಎಂದು ಅವರು ಬಣ್ಣಿಸಿದರು.

ಜೂನ್ 14ರಿಂದ 16ರವರೆಗೆ ನಡೆಯಲಿರುವ ಮೂರು ದಿನಗಳ ಈ ಸಮ್ಮೇಳನದ ಮೊದಲ ಅಂತಾರಾಷ್ಟ್ರೀಯ ಆವೃತ್ತಿಯನ್ನು ಫ್ರಾನ್ಸ್ ಆಯೋಜಿಸುತ್ತಿದೆ. ಮೋದಿ ಮತ್ತು ಮ್ಯಾಕ್ರಾನ್ ಜಂಟಿಯಾಗಿ ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು, ಇದು ಉಭಯ ದೇಶಗಳ ಸ್ಟಾರ್ಟ್‌ಅಪ್‌ಗಳು, ಹೂಡಿಕೆದಾರರು, ನೀತಿ ನಿರೂಪಕರು ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ಒಟ್ಟುಗೂಡಿಸುತ್ತದೆ. ಇದೇ ವೇಳೆ, ಭಾರತದ ದೀರ್ಘಾವಧಿಯ ಚುನಾಯಿತ ಪ್ರಧಾನ ಮಂತ್ರಿಯಾಗಿ ದಾಖಲೆ ಬರೆದ ಮೋದಿಯವರನ್ನು ಅಭಿನಂದಿಸಿದರು.

ದ್ವಿಪಕ್ಷೀಯ ಸಹಕಾರ: ದ್ವಿಪಕ್ಷೀಯ ಸಹಕಾರ ಪ್ರಮುಖವಾಗಿ ಕೃತಕ ಬುದ್ಧಿಮತ್ತೆಯ(ಎಐ) ಮೇಲೆ ಕೇಂದ್ರೀಕೃತವಾಗಿದ್ದು, ಎರಡೂ ದೇಶಗಳು ಮುಕ್ತ, ಬಹುಭಾಷಾ ಮತ್ತು ಸಹಯೋಗದ ಮಾದರಿಯನ್ನು ಬೆಂಬಲಿಸುತ್ತವೆ. ಸುಧಾರಿತ ಕೃತಕ ಬುದ್ಧಿಮತ್ತೆ ತಂತ್ರಜ್ಞಾನಗಳಿಗೆ ಪ್ರವೇಶವನ್ನು ನಿರ್ಬಂಧಿಸುವ ಜಾಗತಿಕ ಪ್ರವೃತ್ತಿಯ ವಿರುದ್ಧ ಮ್ಯಾಕ್ರಾನ್ ಎಚ್ಚರಿಸಿದರು. ಜತೆಗೆ, ಇಂಧನ ಸ್ವಾವಲಂಬನೆಯನ್ನು ಖಚಿತಪಡಿಸಿಕೊಳ್ಳಲು ಅಂತಾರಾಷ್ಟ್ರೀಯ ಸೌರ ಒಕ್ಕೂಟ ಮತ್ತು ಪರಮಾಣು ಇಂಧನ ವಲಯಗಳ ಮೂಲಕ ಪಾಲುದಾರಿಕೆಗಳನ್ನು ಯೋಜಿಸಲಾಗಿದೆ.

ಎನ್‌ಡಿಎಗೆ ಟಿಎಂಸಿ ಬಣ ಬೆಂಬಲ

• **ಹೊಸದಿಲ್ಲಿ:** ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ಬಂಡಾಯ ಸಂಸದರು ಸಂಖ್ಯೆ 22ಕ್ಕೇರಿದ್ದು, ನ್ಯಾಷಲಿಸ್ಟ್ ಸಿಟಿಜೆನ್ಸ್ ಪಾರ್ಟಿಯಲ್ಲಿ ವಿಲೀನವಾಗಿ ಬಿಜೆಪಿ ನೇತೃತ್ವದ ಎನ್‌ಡಿಎ ಬೆಂಬಲಿಸುವುದಾಗಿ ಭಾನುವಾರ ಘೋಷಿಸಿದ್ದಾರೆ. ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರನ್ನು ಭೇಟಿಯಾಗಿ, ಸಂಸತ್‌ನಲ್ಲಿ ಪ್ರತ್ಯೇಕ ಆಸನ ವ್ಯವಸ್ಥೆಯನ್ನು ಕಲ್ಪಿಸಬೇಕೆಂದು ಮನವಿ ಸಲ್ಲಿಸಿದ್ದಾರೆ.

ಸ್ಪೀಕರ್ ಓಂ ಬಿರ್ಲಾ ಭೇಟಿ ಬಳಿಕ ಮಾತನಾಡಿದ ಬಂಡಾಯ ಸಂಸದೆ ಕಾಕೋಲಿ ಘೋಷ್ ದಸ್ತಿದಾರ್, ಮೂರನೇ ಎರಡು ಭಾಗದಷ್ಟು ಟಿಎಂಸಿ ಸಂಸದರನ್ನು ಲೋಕಸಭೆಯಲ್ಲಿ ಪ್ರತ್ಯೇಕ ಗುಂಪನ್ನಾಗಿ ಗುರುತಿಸಬೇಕು. ನಮಗೆ ಪ್ರತ್ಯೇಕ ಆಸನ ವ್ಯವಸ್ಥೆಯನ್ನು ಕಲ್ಪಿಸಬೇಕು ಎಂದು ಮನವಿ ಮಾಡಿದ್ದೇವೆ. ನಾವು ನ್ಯಾಷನಲಿಸ್ಟ್ ಸಿಟಿಜೆನ್ಸ್ ಪಾರ್ಟಿಯಲ್ಲಿ ವಿಲೀನರಾಗಲಿದ್ದು, ಎನ್‌ಡಿಎಗೆ ಬೆಂಬಲ ನೀಡಲಿದ್ದೇವೆ ಎಂದರು. ಹಿರಿಯ ಟಿಎಂಸಿ ನಾಯಕ ಮತ್ತು ಸಂಸದ ಸುದೀಪ್ ಬಂಡೋಪಾಧ್ಯಾಯ ತಮ್ಮ ಬಂಡಾಯ ಸಂಸದರ ಗುಂಪು ಪ್ರಾದೇಶಿಕ ಪಕ್ಷವೊಂದರಲ್ಲಿ ವಿಲೀನವಾಗಿರುವುದಾಗಿ ಹೇಳಿದ್ದಾರೆ. ಯಾವುದು ನಿಜವಾದ ಟಿಎಂಸಿ ಎಂಬುದನ್ನು ನ್ಯಾಯಾಲಯದಲ್ಲಿ ತೀರ್ಮಾನ ಆಗಲಿದೆ, ಎರಡು ಹೂವುಗಳ ಪಕ್ಷದ ಚುನಾವಣಾ ಚಿಹ್ನೆಯನ್ನೂ ಕಾನೂನಾತ್ಮಕ ಹೋರಾಟದ ಮೂಲಕ ಪಡೆಯುವುದಾಗಿ ಸುದೀಪ್ ತಿಳಿಸಿದ್ದಾರೆ.

ಗುರುತಿಸಬೇಡಿ: ಟಿಎಂಸಿ ನಾಯಕರಾದ ಕೀರ್ತಿ ಆಜಾದ್, ಸಾಗರಿಕಾ ಘೋಷ್ ಸಹ ಸ್ಪೀಕರ್ ಬಿರ್ಲಾ ಭೇಟಿಯಾಗಿ, ಬಂಡಾಯ ಸಂಸದರನ್ನು ಗುರುತಿಸದಂತೆ ಟಿಎಂಸಿ ನಾಯಕ ಅಭಿಷೇಕ್ ಬ್ಯಾನರ್ಜಿ ಬರೆದ ಪತ್ರವನ್ನು ಸಲ್ಲಿಸಿದ್ದಾರೆ.



ಬ್ರಿಟಿಷ್ ಕಾಲದ ಸಮವಸ್ತ್ರ ಪದ್ಧತಿಗೆ ತಿಲಾಂಜಲಿ

ಬಂಡಿ ಜಾಕೆಟ್ ಹಾಗೂ ಹೊಸ ನಿಯಮಗಳ ಜಾರಿ

ಭಾರತ ಸೇನೆಯಲ್ಲಿ ನೂತನ ವಸ್ತ್ರ ಪದ್ಧತಿ

ಭಾರತೀಯ ಸೇನೆ ತನ್ನ ಸಮವಸ್ತ್ರ ನಿಯಮಗಳಲ್ಲಿ ಭಾರಿ ಬದಲಾವಣೆಗಳನ್ನು ತಂದಿದ್ದು, ಬ್ರಿಟಿಷರ ಕಾಲದ ಸಂಪ್ರದಾಯಗಳ ಬದಲಿಗೆ ದೇಶದ ರಾಷ್ಟ್ರೀಯ ಗುರುತನ್ನು ಬಿಂಬಿಸುವ ಹೊಸ ವಸ್ತ್ರ ಪದ್ಧತಿಗಳನ್ನು ಜಾರಿಗೆ ತಂದಿದೆ. ಈ ಪರಿಷ್ಕೃತ ನಿಯಮಗಳು ಸೇನೆಯ ಎಲ್ಲಾ ಶ್ರೇಣಿಗಳಿಗೂ ಅನ್ವಯವಾಗಲಿದ್ದು, ಮಿಲಿಟರಿ ಪರಂಪರೆಯನ್ನು ಭಾರತೀಯ ಮೌಲ್ಯಗಳಿಗೆ ಅನುಗುಣವಾಗಿ ಬದಲಿಸುವ ಉದ್ದೇಶ ಹೊಂದಿವೆ.

ಬಂಡಿ ಜಾಕೆಟ್ ಅಧಿಕೃತ ಸೇರ್ಪಡೆ

ಅಧಿಕಾರಿಗಳ ಅಧಿಕೃತ ಉಡುಪಿನ ಭಾಗವಾಗಿ ಮುಚ್ಚಿದ ಕತ್ತಿನ ಬಂಡಿ ಜಾಕೆಟ್(ನೆಹರು ಜಾಕೆಟ್) ಅನ್ನು ಅಧಿಕೃತವಾಗಿ ಸೇರಿಸಿರುವುದು ಒಂದು ಪ್ರಮುಖ ಬದಲಾವಣೆ. ಮಿಲಿಟರಿ ಕಾರ್ಯಕ್ರಮಗಳಿಗೆ ಸಂಪೂರ್ಣ ಭಾರತೀಯ ಶೈಲಿಯ ಸ್ಪರ್ಶ ನೀಡಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಈ ಜಾಕೆಟ್ ಸರಳ ಹಾಗೂ ಸಭ್ಯ ಬಣ್ಣದ್ದಾಗಿದ್ದು, ಅದಕ್ಕೆ ಹೊಂದುವ ಪ್ಯಾಂಟ್ ಮತ್ತು ಮುಚ್ಚಿದ ಶೂಗಳೊಂದಿಗೆ ಧರಿಸಬೇಕು ಎಂದು ಕೈಪಿಡಿಯಲ್ಲಿ ತಿಳಿಸಲಾಗಿದೆ. ಇದನ್ನು ಅಧಿಕಾರಿಗಳು ಬಂದ್ ಗಲಾ, ಲೌಂಜ್ ಸೂಟ್ ಅಥವಾ ಟೈ ಧರಿಸುವ ಶರ್ಟ್-ಪ್ಯಾಂಟ್ ಜೊತೆಗೆ ಆಯ್ಕೆಯಾಗಿ ಬಳಸಬಹುದು.



ಹೊಸ ಕೈಪಿಡಿ, ಹೊಸ ಹಾದಿ

ಎಂಟು ವರ್ಷಗಳ ನಂತರ ಬಿಡುಗಡೆಯಾಗಿರುವ ಆರ್ಮಿ ಯುನಿಫಾರ್ಮ್ಸ್-2026 ಎಂಬ 174 ಪುಟಗಳ ಹೊಸ ಕೈಪಿಡಿ, ಕಳೆದ ಸುಮಾರು ಒಂದು ದಶಕದಲ್ಲೇ ಮಿಲಿಟರಿ ಉಡುಪಿನ ಶೈಲಿಯಲ್ಲಿ ಮಾಡಲಾದ ಅತ್ಯಂತ ಪ್ರಮುಖ ಬದಲಾವಣೆಗಳಲ್ಲಿ ಒಂದಾಗಿದೆ. ಸೇನೆಯ ಪ್ರಮುಖ ಸಂಪ್ರದಾಯಗಳು ಮತ್ತು ಕಾರ್ಯಾಚರಣೆಯ ಅಗತ್ಯಗಳನ್ನು ಉಳಿಸಿಕೊಂಡೇ, ವಸಾಹತುಶಾಹಿ ಕಾಲದ ಉಳಿಕೆಗಳನ್ನು ತೆಗೆದುಹಾಕಲು ಈ ಬದಲಾವಣೆಗಳನ್ನು ರೂಪಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಡ್ಜಟಂಟ್ ಜನರಲ್ ಲೆಫ್ಟಿನೆಂಟ್ ಜನರಲ್ ವಿಪಿಎಸ್ ಕೌಶಿಕ್ ಈ ಕೈಪಿಡಿಯ ಮುನ್ನುಡಿಯಲ್ಲಿ, ವಸಾಹತುಶಾಹಿ ಕಾಲದ ಆಚರಣೆಗಳು, ಅಲಂಕಾರಗಳು ಮತ್ತು ಪದಕೋಶಗಳನ್ನು ಹಂತಹಂತವಾಗಿ ತೆಗೆದುಹಾಕುವ ಮೂಲಕ ಸೇನೆಯ ಸಮವಸ್ತ್ರ ನಿಯಮಾವಳಿಗಳನ್ನು ಸಮಕಾಲೀನ ಭಾರತೀಯ ಮೌಲ್ಯಗಳಿಗೆ ಅನುಗುಣವಾಗಿಸಲು ಇಟ್ಟಿರುವ ಒಂದು ಚಿಂತನಾಶೀಲ ಹೆಜ್ಜೆ ಇದಾಗಿದೆ ಎಂದು ಹೊಸ ಆವೃತ್ತಿಯನ್ನು ವಿವರಿಸಿದ್ದಾರೆ. ಈ ಬದಲಾವಣೆಗಳು ದೇಶದ ಭಾವನೆಗಳನ್ನು ಮತ್ತು ವಿಕಸನಗೊಳ್ಳುತ್ತಿರುವ ಸಾರ್ವಭೌಮ ಗುರುತನ್ನು ಪ್ರತಿಬಿಂಬಿಸುತ್ತವೆ ಎಂದೂ ಕೈಪಿಡಿಯಲ್ಲಿ ತಿಳಿಸಲಾಗಿದೆ.

ಬ್ರಿಟಿಷ್ ಸಂಕೇತಗಳಿಗೆ ಎಳ್ಳು-ನೀರು

ವಸಾಹತುಶಾಹಿ ಕಾಲದ ಸಂಕೇತಗಳನ್ನು ದೂರವಿಡುವ ಭಾಗವಾಗಿ ಮಿಲಿಟರಿ ಪದಕೋಶದಿಂದ ರಾಯಲ್ ಎಂಬ ಪದದ ಬಳಕೆಯನ್ನು ಸಂಪೂರ್ಣವಾಗಿ ಕೈಬಿಡಲಾಗಿದೆ. ಇನ್ನು ಮುಂದೆ ಪರೇಡ್‌ಗಳ ಪರಿಶೀಲನೆ ನಡೆಸುವ ಅಧಿಕಾರಿಗಳು ಕತ್ತಿ (ಸ್ವೋರ್ಡ್) ಹಿಡಿಯುವ ಅಗತ್ಯವಿರುವುದಿಲ್ಲ. ಇದರೊಂದಿಗೆ, ರಾಜ್ಯಮಟ್ಟದ ಕಾರ್ಯಕ್ರಮಗಳು ಮತ್ತು ಅಧಿಕೃತ ಮಿಲಿಟರಿ ಔತಣಕೂಟಗಳಲ್ಲಿ ಧರಿಸುವ ಮೆಸ್ ಡ್ರೆಸ್ ಸಂಖ್ಯೆ 5 ಮತ್ತು 6ರ ಸಮವಸ್ತ್ರಗಳಿಂದ ಪೌಚ್ ಬೆಲ್ಟ್‌ಗಳನ್ನು ತೆಗೆದುಹಾಕಲಾಗಿದೆ. ಆದರೆ, ನಿರ್ದಿಷ್ಟ ರೆಜಿಮೆಂಟ್‌ಗಳ ಆಚರಣೆಗಳಲ್ಲಿ ಇವುಗಳನ್ನು ಬಳಸಲು ವಿನಾಯಿತಿ ನೀಡಲಾಗಿದೆ.



ಚಳಿಗಾಲದ ಹೊಸ ಸಮವಸ್ತ್ರ

ಎಲ್ಲಾ ಶ್ರೇಣಿಯ ಸಿಬ್ಬಂದಿಗೆ ಡ್ರೆಸ್ 3ಬಿ ಎಂಬ ಚಳಿಗಾಲದ ಹೊಸ ಸಮವಸ್ತ್ರವನ್ನು ಪರಿಚಯಿಸಲಾಗಿದೆ. ಇದು ಆಂಗೋಲಾ ಶರ್ಟ್, ಬ್ಯಾಟಲ್ ಜಾಕೆಟ್ ಮತ್ತು ಬೆರೆಟ್ ಟೋಪಿಯನ್ನು ಒಳಗೊಂಡಿರುತ್ತದೆ. ಈ ನಿಯಮ ಎಲ್ಲಾ ವಿಭಾಗಗಳಲ್ಲಿ ಸಮಾನತೆ ತರಲು ಸಹಕಾರಿಯಾಗಲಿದೆ.

ಮಹಿಳಾ ಅಧಿಕಾರಿಗಳ ಉಡುಪಿನ ಮಾರ್ಗಸೂಚಿ

ಮಹಿಳಾ ಅಧಿಕಾರಿಗಳು ಸಭ್ಯ ಬಣ್ಣದ ಸೀರೆ ಅಥವಾ ಕುರ್ತಾ-ಸಲ್ವಾರ್ ಜತೆಗೆ ದುಪಟ್ಟಾ ಮತ್ತು ನೇರವಾದ ಪ್ಯಾಂಟ್‌ಗಳನ್ನು ಧರಿಸಲು ಅವಕಾಶವಿದೆ. ಆದರೆ ಸ್ಲೀವ್‌ಲೆಸ್ ಕುರ್ತಾಗಳು, ಪಲಾಜೊ ಮತ್ತು ಸಿಗರೇಟ್ ಪ್ಯಾಂಟ್‌ಗಳನ್ನು ನಿಷೇಧಿಸಲಾಗಿದೆ. ಸಮವಸ್ತ್ರದಲ್ಲಿರುವಾಗ ಲಿಪ್‌ಸ್ಟಿಕ್, ನೈಲ್ ಪಾಲಿಷ್, ಬಿಂದಿ ಮತ್ತು ಮೂಗುತಿ ಧರಿಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಟೋಪಿಯ ಕೆಳಗೆ ಕಾಣಿಸದ ರೀತಿಯಲ್ಲಿ ಸಣ್ಣದಾಗಿ ಸಿಂಧೂರ ಇಡಲು ಅವಕಾಶ ನೀಡಲಾಗಿದೆ.

ಕಟ್ಟುನಿಟ್ಟಿನ ಅಂದಚೆಂದದ ನಿಯಮಗಳು

ಸೇನಾ ಸಿಬ್ಬಂದಿಯ ಶಿಸ್ತು ಕಾಯ್ದುಕೊಳ್ಳಲು ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತರಲಾಗಿದೆ. ಹಚ್ಚೆ(ಟ್ಯಾಟೂ) ಮತ್ತು ಬಾಡಿ ಪಿಯರ್ಸಿಂಗ್ ಅನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಧಾರ್ಮಿಕ ಕಾರ್ಯಕ್ರಮದ ದಿನದಂದು ಧರಿಸುವ ಪವಿತ್ರ ದಾರಕ್ಕೆ ಮಾತ್ರ ವಿನಾಯಿತಿ ಇದ್ದು, ಸಮವಸ್ತ್ರದಲ್ಲಿರುವಾಗ ಯಾವುದೇ ಬಳೆ ಅಥವಾ ಕಡಗಗಳನ್ನು ಧರಿಸುವಂತಿಲ್ಲ. ಸಿಖ್ ಸಿಬ್ಬಂದಿಗೆ ಇರುವ ನಿರ್ದಿಷ್ಟ ವಿನಾಯಿತಿಗಳನ್ನು ಹೊರತುಪಡಿಸಿ, ಧಾರ್ಮಿಕ ಲಾಂಛನಗಳಿಗೆ ಅನುಮತಿಯಿಲ್ಲ. ಮೀಸೆಗಳ ಗರಿಷ್ಠ ಉದ್ದವನ್ನು 12 ಸೆಂಟಿಮೀಟರ್‌ಗಳಿಗೆ ಸೀಮಿತಗೊಳಿಸಲಾಗಿದೆ. ಸಮವಸ್ತ್ರದಲ್ಲಿರುವಾಗ ಆಫ್ಟರ್ ಶೇವ್ ಲೋಷನ್ ಬಳಸಬಹುದು, ಆದರೆ ಡಿಯೋಡರೆಂಟ್ ಮತ್ತು ಪರ್ಫ್ಯೂಮ್ ಬಳಕೆಯನ್ನು ನಿಷೇಧಿಸಲಾಗಿದೆ.

ರಾಷ್ಟ್ರೀಯ ನೀತಿಗೆ ಪೂರಕ



ಪ್ರಧಾನಿ ನರೇಂದ್ರ ಮೋದಿ, ಇತ್ತೀಚಿನ ವರ್ಷಗಳಲ್ಲಿ ಸಶಸ್ತ್ರ ಪಡೆಗಳು ಬ್ರಿಟಿಷ್ ಕಾಲದ ಪದ್ಧತಿಗಳಿಂದ ಹೊರಬಂದು ಭಾರತೀಯ ಸಂಪ್ರದಾಯಗಳನ್ನು ಅಳವಡಿಸಿಕೊಳ್ಳಬೇಕು ಎಂದು ನೀಡಿದ್ದ ಕರೆಗೆ ಅನುಗುಣವಾಗಿ ಈ ಬದಲಾವಣೆಗಳನ್ನು ತರಲಾಗಿದೆ. ಮಿಲಿಟರಿ ಸಿದ್ಧಾಂತ ಮತ್ತು ಆಚರಣೆಗಳನ್ನು ಭಾರತೀಯಕರಣಗೊಳಿಸುವ ಸರ್ಕಾರದ ವಿಶಾಲ ಯೋಜನೆಯ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ.

ಪ್ರಮುಖ ಪರಿಷ್ಕರಣೆಗಳು

- ಬಂಡಿ ಜಾಕೆಟ್‌ಗಳನ್ನು ಧರಿಸಲು ಅಧಿಕೃತ ಅನುಮತಿ
- ಪರೇಡ್ ವೇಳೆ ಅಧಿಕಾರಿಗಳು ಕತ್ತಿ ಹಿಡಿಯುವ ಅಗತ್ಯವಿಲ್ಲ
- ಮೆಸ್ ಸಮವಸ್ತ್ರಗಳಿಂದ ಪೌಚ್ ಬೆಲ್ಟ್‌ಗಳಿಗೆ ಕೊಕ್
- ಚಳಿಗಾಲದ ಹೊಸ ಡ್ರೆಸ್ 3ಬಿ ಪರಿಚಯ
- ಮೀಸೆಯ ಗರಿಷ್ಠ ಉದ್ದ 12 ಸೆಂಟಿಮೀಟರ್‌ಗೆ ಸೀಮಿತ

ಕಿರುಸುದ್ದಿ

ಬಂಗೀ ಜಂಪ್: ಸುರಕ್ಷತಾ ಹಗ್ಗ ಕಟ್ಟದ ಸಿಬ್ಬಂದಿ, ಸಾವು

• **ಸಾವೊ ಪೌಲೋ(ಬ್ರೆಜಿಲ್):** ಬಂಗೀ ಜಂಪ್ ವೇಳೆ ಸುರಕ್ಷತಾ ಹಗ್ಗ ಕಟ್ಟದೇ 130 ಅಡಿ ಎತ್ತರದಿಂದ ಸಿಬ್ಬಂದಿ ಎಸೆದಿದ್ದರಿಂದ 21ರ ಯುವತಿ ಮಾರಿಯಾ ಎಡುರ್ಡ ರಾಡ್ರಿಗ್ಸ್ ಸ್ಥಳದಲ್ಲೇ ದಾರುಣವಾಗಿ ಮೃತಪಟ್ಟಿದ್ದಾರೆ. ಲಿಮೇರಾ ಎಂಬಲ್ಲಿ ಬಂಗೀ ಜಂಪ್ ವೇಳೆ ಸಿಬ್ಬಂದಿ ಸುರಕ್ಷತಾ ಹಗ್ಗವನ್ನೇ ಮರೆತು ಬೇಜವಾಬ್ದಾರಿ ಮೆರೆದಿದ್ದು, ಮಾರಿಯಾರನ್ನು ಸ್ಟೆಲಿಟಾನ್ ಸೇತುವೆಯ ಮೇಲಿಂದ ಕೆಳಕ್ಕೆ ಎಸೆದಿದ್ದಾರೆ. ಸುರಕ್ಷತಾ ಹಗ್ಗವಿಲ್ಲದ ಕಾರಣ ಯುವತಿ ಸಾವಿಗೀಡಾಗಿದ್ದಾರೆ. ಇತರ ಸಿಬ್ಬಂದಿ ವಿಡಿಯೋ ಮಾಡಿದ್ದು, ಯುವತಿಯನ್ನು ಸೇತುವೆಯಿಂದ ಎಸೆದ ಬಳಿಕ ಆಕೆಯ ಹಗ್ಗ ಎಂದು ಕಿರುಚಿದ್ದಾರೆ. ಆದರೆ ಅಷ್ಟಾಗಲೇ ಎಲ್ಲವೂ ಮುಗಿದಿತ್ತು. ಈ ದೃಶ್ಯ ವೈರಲ್ ಆಗಿದ್ದು, ವಿಶ್ವದೆಲ್ಲೆಡೆ ಜನರನ್ನು ಆತಂಕಕ್ಕೀಡು ಮಾಡಿದೆ. ಖಾಸಗಿ ಕಂಪನಿಯೊಂದು ಚಟುವಟಿಕೆಯನ್ನು ಆಯೋಜಿಸಿದ್ದು, ಸ್ಥಳೀಯ ಪೊಲೀಸರು ಪ್ರಕರಣ ದಾಖಲಿಸಿ 6 ಮಂದಿಯನ್ನು ಬಂಧಿಸಿದ್ದಾರೆ. ದುರಂತ ಸ್ಥಳದಲ್ಲಿದ್ದ ಮಾರಿಯಾ ವಿವಾಹವಾಗಲಿರುವ ಯುವಕ ಆಘಾತದಿಂದ ತೀವ್ರ ಅಸ್ವಸ್ಥರಾಗಿದ್ದಾರೆ.

ವಿಶ್ವದ 2ನೇ ದೊಡ್ಡ ರಷ್ಯಾ ತೈಲ ಖರೀದಿದಾರ ಭಾರತ

• **ಹೊಸದಿಲ್ಲಿ:** ಭಾರತೀಯ ತೈಲ ಸಂಸ್ಕರಣಾ ಕಂಪನಿಗಳು ರಷ್ಯಾದಿಂದ ಭಾರೀ ಮೌಲ್ಯದ ಹೈಡ್ರೋಕಾರ್ಬನ್ ಖರೀದಿಸಿದ್ದು, ಮೇನಲ್ಲೂ ವಿಶ್ವದ ಎರಡನೇ ಅತಿ ದೊಡ್ಡ ರಷ್ಯಾ ಕಚ್ಚಾ ತೈಲ ಖರೀದಿದಾರ ರಾಷ್ಟ್ರವಾಗಿ ಭಾರತ ಉಳಿದುಕೊಂಡಿದೆ ಎಂದು ಐರೋಪ್ಯ ಚಿಂತನಾ ಚಾವಡಿ ಶುದ್ಧ ಗಾಳಿ ಮತ್ತು ಇಂಧನ ಸಂಶೋಧನಾ ಕೇಂದ್ರ (ಸಿಆರ್‌ಇಎ) ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

ಮೇನಲ್ಲಿ ಭಾರತೀಯ ತೈಲ ಕಂಪನಿಗಳು ಸುಮಾರು 5.8 ಶತಕೋಟಿ ಯೂರೋ (6.7 ಶತಕೋಟಿ ಡಾಲರ್) ಅಥವಾ ಅಂದಾಜು 57ರಿಂದ 58,000 ಕೋಟಿ ರೂ. ವೆಚ್ಚದ ಹೈಡ್ರೋಕಾರ್ಬನ್ ಅನ್ನು ರಷ್ಯಾದಿಂದ ಆಮದು ಮಾಡಿಕೊಂಡಿವೆ. ಆಮದು ಮಾಡಿಕೊಂಡ ಸಗಟು ಹೈಡ್ರೋಕಾರ್ಬನ್‌ನಿಂದ ಕಚ್ಚಾ ತೈಲ ತೆಗೆಯಲಾಗುತ್ತದೆ.

ಮೇ ತಿಂಗಳಲ್ಲಿ ಒಟ್ಟು ಮಾರಾಟವಾದ ರಷ್ಯಾ ತೈಲದ ಶೇ.83ರಷ್ಟು ಭಾರತವೇ ಆಮದು ಮಾಡಿಕೊಂಡಿದ್ದು, ಇದರ ವೆಚ್ಚ 4.8 ಶತಕೋಟಿ ಯೂರೋ (47,500 ಕೋಟಿ ರೂ.) ಆಗಿದೆ. ಉಳಿದಂತೆ ರಷ್ಯಾದಿಂದ 550 ದಶಲಕ್ಷ ಯೂರೋ (5,500 ಕೋಟಿ ರೂ.) ವೆಚ್ಚದಲ್ಲಿ ಪೆಟ್ರೋಲಿಯಂ ಉತ್ಪನ್ನಗಳು ಮತ್ತು 429 ದಶಲಕ್ಷ ಯೂರೋ (4,250 ಕೋಟಿ ರೂ.) ವೆಚ್ಚದಲ್ಲಿ ಕಲ್ಲಿದ್ದಲು ಆಮದು ಮಾಡಿಕೊಂಡಿದೆ.

ಭಾರತದ ಒಟ್ಟಾರೆ ಕಚ್ಚಾ ತೈಲ ಆಮದು ಮೇನಲ್ಲಿ ಶೇ.8ರಷ್ಟು ಏರಿಕೆ ಕಂಡಿದ್ದು, ಭಾರತದ ರಷ್ಯಾ ತೈಲ ಆಮದು ಶೇ.21 ಏರಿಕೆಯನ್ನು ಕಂಡಿದೆ.

ಹಿಮಾಲಯ ತಪ್ಪಲಿನಲ್ಲಿ ಸೈನಿಕರ ಯೋಗಾಭ್ಯಾಸ



• **ಡೆಹ್ರಾಡೂನ್:** ಅಂತಾರಾಷ್ಟ್ರೀಯ ಯೋಗ ದಿನ ಸಮೀಪಿಸುತ್ತಿರುವ ಸಂದರ್ಭದಲ್ಲಿ, ಹಿಮಾಲಯದ ಎತ್ತರದ ಪ್ರದೇಶಗಳಲ್ಲಿ ಸೇವೆ ಸಲ್ಲಿಸುತ್ತಿರುವ ಗೋಲ್ಡನ್ ಕೀ ಡಿವಿಷನ್‌ನ ಯೋಧರು ಯೋಗಾಭ್ಯಾಸ ನಡೆಸಿ ತಮ್ಮ ಸಹಿಷ್ಣುತೆ, ಏಕಾಗ್ರತೆ ಮತ್ತು ಆಂತರಿಕ ಶಕ್ತಿಯನ್ನು ಮತ್ತಷ್ಟು ಬಲಪಡಿಸಿದರು. ಸವಾಲಿನ ಕಾರ್ಯಾಚರಣಾ ಭೌಗೋಳಿಕ ಪ್ರದೇಶದಲ್ಲಿ, ಯೋಗವು ದೈಹಿಕ ಸನ್ನದ್ಧತೆ, ಮಾನಸಿಕ ಚುರುಕುತನ ಹಾಗೂ ಭಾವನಾತ್ಮಕ ಕ್ಷೇಮವನ್ನು ವೃದ್ಧಿಸಿ, ರಾಷ್ಟ್ರಸೇವೆಯಲ್ಲಿ ತೊಡಗಿರುವ ಯೋಧರು ತಮ್ಮ ಶ್ರೇಷ್ಠ ಸಾಮರ್ಥ್ಯವನ್ನು ಪ್ರದರ್ಶಿಸಲು ನೆರವಾಗುತ್ತದೆ.

ಕೇರಳದಲ್ಲಿ ಮಹಿಳೆಯರಿಗೆ ಉಚಿತ ಯಾನ ಇಂದಿನಿಂದ

• **ತಿರುವನಂತಪುರಂ:** ಕೇರಳದಲ್ಲಿ ಮಹಿಳೆಯರು ಮತ್ತು ತೃತೀಯ ಲಿಂಗಿಗಳಿಗೆ ಸಾಮಾನ್ಯ ಕೆಎಸ್ಆರ್‌ಟಿಸಿ ಬಸ್ಸುಗಳಲ್ಲಿ ಉಚಿತ ಪ್ರಯಾಣ ಸೌಲಭ್ಯ ಪ್ರಿಯದರ್ಶಿನಿ ಯೋಜನೆಯನ್ನು ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಸೋಮವಾರ ಥಂಪನ್ನೂರ್ ಕೆಎಸ್‌ಆರ್‌ಟಿಸಿ ಬಸ್ಸು ನಿಲ್ದಾಣದಲ್ಲಿ ಉದ್ಘಾಟಿಸಲಿದ್ದಾರೆ. ಇದೇ ವೇಳೆ, ಕೇವಲ ರಾಜಕೀಯ ಉದ್ದೇಶಕ್ಕಾಗಿ ಸರಕಾರದ ಈ ಪಕ್ಷಪಾತಿ ನಡೆಯನ್ನು ಪ್ರತಿಭಟಿಸಿ ಕೇರಳದ ಖಾಸಗಿ ಬಸ್ಸೊಂದು ಪುರುಷರಿಗೂ ಒಂದು ದಿನ ಉಚಿತ ಪ್ರಯಾಣ ಸೌಕರ್ಯವನ್ನು ಘೋಷಿಸಿದ ಘಟನೆಯೂ ಇದೀಗ ಗಮನ ಸೆಳೆದಿದೆ.

ಕುಟುಂಬದ ಇತರ ಸದಸ್ಯರು ಟಿಕೆಟ್ ಮಾಡಿ ಜೊತೆಯಲ್ಲಿದ್ದ ಮಹಿಳೆಯರಿಗೆ ಉಚಿತ ಪ್ರಯಾಣ ಸೌಕರ್ಯ ಕಲ್ಪಿಸುವ 'ಪ್ರಿಯದರ್ಶಿನಿಯೋಜನೆ'ಯನ್ನು ಯುಡಿಎಫ್ ಇತ್ತೀಚಿನ ಚುನಾವಣೆಯ ಸಂದರ್ಭ ನೀಡಿದ 'ಗ್ಯಾರಂಟಿ'ಭರವಸೆಯಲ್ಲಿ ತಿಳಿಸಿತ್ತು. ಇದರಂತೆ ರಾಜ್ಯಮಟ್ಟದ ಈ ಯೋಜನೆಯನ್ನು ಮುಖ್ಯಮಂತ್ರಿಯವರು ಉದ್ಘಾಟಿಸುವರು. ವಿಧಾನಸಭಾಧ್ಯಕ್ಷ ತಿರುವಾಂಕೂರ್ ರಾಧಾಕೃಷ್ಣನ್ ಅವರು ಕೊಟ್ಟಾಯಂನಲ್ಲಿ ಉದ್ಘಾಟಿಸಲಿದ್ದು, ಪ್ರಥಮ ಉಚಿತ ಪ್ರಯಾಣ ಸೌಲಭ್ಯದ ಬಸ್ಸು ಕೊಟ್ಟಾಯಂನಿಂದ ಕುಮರಕಾಮ್ ಆಗಿ ಚೇರ್ತಲಕ್ಕೆ ಪ್ರಯಾಣಿಸಲಿದೆ.

ಇದರಡಿ ಮಹಿಳೆಯರು ಮತ್ತು ತೃತೀಯಲಿಂಗಿಗಳಿಗೆ ಬಸ್ಸು ನಿರ್ವಾಹಕರು 'ಶೂನ್ಯ ಟಿಕೆಟ್' ನೀಡಲಿದ್ದಾರೆ. ಅವರು ಯಾವುದೇ ಐಡಿ ಕಾರ್ಡ್ ಅಥವಾ ಇತರ ದಾಖಲೆಗಳನ್ನು ತೋರಿಸಬೇಕಾಗಿಲ್ಲ, ರಾಜ್ಯವ್ಯಾಪಿ 3125 ಬಸ್ಸುಗಳಲ್ಲಿ ಈ ಸೌಲಭ್ಯ ಇರಲಿದೆ.

ಮನೆಗೇ ನುಗ್ಗಿ ಬಿಜೆಪಿ ಸದಸ್ಯನ ಹತ್ಯೆಗೈದ ಮುಸ್ಲಿಂ

• **ಡೆಹ್ರಾಡೂನ್:** ಉತ್ತರಾಖಂಡ್‌ನ ಸ್ಥಳೀಯ ಬಿಜೆಪಿ ಕಾರ್ಯಕರ್ತ ವಿನೋದ್ (44) ಅವರನ್ನು ಅದೇ ಗ್ರಾಮದ ಇಮ್ತಿಯಾಜ್ ನೇತೃತ್ವದ 40 ಮುಸ್ಲಿಮರ ಗುಂಪೊಂದು ಮನೆಗೆ ನುಗ್ಗಿ ಹತ್ಯೆ ನಡೆಸಿದ್ದು, ವಿನೋದ್ ಕುಟುಂಬದ ಮೂವರು ಸದಸ್ಯರೂ ಗಂಭೀರ ಗಾಯಗೊಂಡಿದ್ದಾರೆ. ಆರೋಪಿಗಳಿಗೆ ಸೇರಿದ ಕಾನೂನುಬಾಹಿರ ಕಟ್ಟಡಗಳನ್ನು ಬುಲ್ಡೋಜರ್ ಬಳಸಿ ನೆಲಸಮಗೊಳಿಸಲಾಗಿದೆ. ಘಟನೆ ಡೆಹ್ರಾಡೂನ್‌ನ ಬೈರಾಗಿವಾಲಾ ಗ್ರಾಮದಲ್ಲಿ ಶನಿವಾರ ನಡೆದಿದೆ.

ಹೊಲದಲ್ಲಿ ನೀರಾವರಿ ವಿಚಾರದಲ್ಲಿ ಭಿನ್ನಾಭಿಪ್ರಾಯ ಮೂಡಿತ್ತೆಂದು ಪೊಲೀಸರು ಹೇಳಿದ್ದಾರೆ. ವಿನೋದ್ ಹತ್ಯೆ ಖಂಡಿಸಿ ಬಿಜೆಪಿ ಕಾರ್ಯಕರ್ತರು ಜೈ ಶ್ರೀರಾಮ್ ಘೋಷಣೆ ಕೂಗಿ ದೊಡ್ಡ ಪ್ರತಿಭಟನೆ ನಡೆಸಿದ್ದಾರೆ. ವಿನೋದ್ ನಿವಾಸದಲ್ಲಿ ದಾಂಧಲೆ ನಡೆಸಿದ ಮುಸ್ಲಿಮ್ ಗುಂಪು ಲಾಠಿ, ಮರದ ದೊಣ್ಣೆ, ಸುತ್ತಿಗೆಗಳು, ಸಲಿಕೆ ಇತ್ಯಾದಿಗಳನ್ನು ತಂದಿದ್ದರು.

ಹುಲಿ ಅಭಯಾರಣ್ಯದ ಕೆಳಭಾಗದಲ್ಲಿ 4.9 ಕಿಮೀ ಹೆದ್ದಾರಿ ನಿರ್ಮಾಣ

ಮೊದಲ 8 ಪಥ ಸುರಂಗ ಮಾರ್ಗ ಸಿದ್ಧ

• **ಹೊಸದಿಲ್ಲಿ:** ಭಾರತದ ಮೊದಲ ಎಂಟು ಪಥಗಳ ಸುರಂಗ ಹೆದ್ದಾರಿ ರಾಜಸ್ಥಾನದ ಕೋಟಾ ಸಮೀಪ ಉದ್ಘಾಟನೆಗೆ ಸಿದ್ಧವಾಗಿದೆ. ಇದು 4.9 ಕಿ.ಮೀ. ಉದ್ದದ ಎಂಟು ಪಥಗಳ ಸುರಂಗ ಹೆದ್ದಾರಿಯಾಗಿದೆ. ದಿಲ್ಲಿ-ಮುಂಬೈ ಎಕ್ಸ್‌ಪ್ರೆಸ್‌ವೇನಲ್ಲಿ ಮುಕುಂದರ ಪರ್ವತ ಹುಲಿ ಅಭಯಾರಣ್ಯ ಪ್ರದೇಶದ ಕೆಳಭಾಗದಲ್ಲಿ ಎಂಟು ಪಥಗಳ ಸುರಂಗ ರಸ್ತೆಯನ್ನು ನಿರ್ಮಾಣ ಮಾಡಲಾಗಿದೆ.

1,386 ಕಿ.ಮೀ. ಉದ್ದದ ದಿಲ್ಲಿ-ಮುಂಬೈ ಎಕ್ಸ್‌ಪ್ರೆಸ್‌ವೇ ಕಾಮಗಾರಿ ಕೆಲಸಗಳು ಪೂರ್ಣಗೊಂಡಿದ್ದು, ಜೂ.20ರಂದು ತೆರೆಯಲಾಗುವುದು. ಬರೋಬ್ಬರಿ 95,000 ಕೋಟಿ ರೂ. ವೆಚ್ಚದಲ್ಲಿ ದಿಲ್ಲಿ-ಮುಂಬೈ ಎಕ್ಸ್‌ಪ್ರೆಸ್ ಹೆದ್ದಾರಿಯನ್ನು ನಿರ್ಮಾಣ ಮಾಡಲಾಗಿದೆ.

ಸದ್ಯದ ಪರಿಸ್ಥಿತಿಯಲ್ಲಿ ದಿಲ್ಲಿ ಮತ್ತು ಮುಂಬೈ ನಡುವಿನ ಪ್ರಯಾಣವು ಸುಮಾರು 24 ಗಂಟೆಗೂ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುತ್ತದೆ. ಆದರೆ ನೂತನ ದಿಲ್ಲಿ-ಮುಂಬೈ ಎಕ್ಸ್‌ಪ್ರೆಸ್‌ವೇ ಕಾರಿಡಾರ್ ಸಂಪೂರ್ಣ ಕಾರ್ಯಾರಂಭಗೊಂಡ ನಂತರ ಕೇವಲ 12 ಗಂಟೆಯನ್ನಷ್ಟೇ ತೆಗೆದುಕೊಳ್ಳಲಿದೆ.



- ಎಂಟು ಪಥ ಸುರಂಗ ಹೆದ್ದಾರಿಯ ಉದ್ದ 4.9 ಕಿ.ಮೀ.
- ದಿಲ್ಲಿ-ಮುಂಬೈ ಎಕ್ಸ್‌ಪ್ರೆಸ್‌ವೇ ಉದ್ದ 1,386 ಕಿ.ಮೀ.
- 95,000 ಕೋಟಿ ರೂ. ವೆಚ್ಚದಲ್ಲಿ ಎಕ್ಸ್‌ಪ್ರೆಸ್‌ವೇ ನಿರ್ಮಾಣ

ವನ್ಯಜೀವಿಗಳಿಗೆ ಹಾನಿಯಿಲ್ಲ

ವನ್ಯಜೀವಿಗಳಿಗೆ ಯಾವುದೇ ಹಾನಿಯಾಗದಂತೆ ಹಾಗೂ ತಿರುವು-ಮುರುವಾದ ಮಾರ್ಗವನ್ನು ತಪ್ಪಿಸುವ ಉದ್ದೇಶದಿಂದ ಹುಲಿ ಅಭಯಾರಣ್ಯದ ಕೆಳಭಾಗದಲ್ಲಿ ಎಂಟು ಪಥಗಳ ಸುರಂಗ ರಸ್ತೆ ನಿರ್ಮಿಸಲಾಗಿದೆ. ತಡೆರಹಿತ ಪ್ರಯಾಣಕ್ಕಾಗಿ ಕೋಟಾ ಪ್ರದೇಶವೊಂದೇ ಹೆದ್ದಾರಿ ಯೋಜನೆಯಲ್ಲಿ ಬಾಕಿಯಾಗಿತ್ತು. ಹುಲಿ ಅಭಯಾರಣ್ಯದ ಪರಿಸರದ ಸೂಕ್ಷ್ಮ ಸ್ವಭಾವವನ್ನು ಗಮನದಲ್ಲಿಟ್ಟುಕೊಂಡು ಸುರಂಗ ನಿರ್ಮಾಣಕ್ಕೆ ಸುಮಾರು ನಾಲ್ಕೂವರೆ ಐದು ವರ್ಷಗಳ ಕಾಲ ಬೇಕಾಯಿತು.

ಸಮಯ ಉಳಿತಾಯ

ದಿಲ್ಲಿ-ಮುಂಬೈ ಎಕ್ಸ್‌ಪ್ರೆಸ್‌ವೇ ಸಹಾಯದಿಂದ ಪ್ರಯಾಣಿಕರ ಪ್ರಯಾಣದ ಸಮಯ ಉಳಿತಾಯ ಆಗಲಿದೆ. ಇದಲ್ಲದೆ, ಸರಕು ಸಾಗಣೆ ವೆಚ್ಚ ಅಗ್ಗವಾಗಲಿದೆ. ಹರ್ಯಾಣ, ರಾಜಸ್ಥಾನ, ಮಧ್ಯಪ್ರದೇಶ, ಗುಜರಾತ್ ಮತ್ತು ಮಹಾರಾಷ್ಟ್ರ ನಡುವಿನ ಸಾಮಾನ್ಯ ಜನರಿಗೆ ಪ್ರಯಾಣ ಸಂಪರ್ಕ ಬೆಳೆಸಲಿದೆ.

ಒಮಾನ್‌ನಲ್ಲಿ ಭಾರತೀಯ ಧ್ವಜದ ಹಡಗಿನ ಎಂಜಿನ್ ವೈಫಲ್ಯ

ಎಲ್ಲಾ 14 ಭಾರತೀಯ ಸಿಬ್ಬಂದಿ ರಕ್ಷಣೆ

• **ದುಬೈ:** ಒಮಾನ್ ಕರಾವಳಿಯ ಸಮುದ್ರ ಪ್ರದೇಶದಲ್ಲಿ ಎಂಜಿನ್ ವೈಫಲ್ಯಕ್ಕೊಳಗಾದ ಭಾರತೀಯ ಧ್ವಜದ ವಾಣಿಜ್ಯ ಹಡಗಿನಿಂದ ಎಲ್ಲಾ 14 ಭಾರತೀಯ ಸಿಬ್ಬಂದಿಯನ್ನು ಭಾನುವಾರ ರಕ್ಷಿಸಲಾಗಿದೆ.

ಈ ಘಟನೆ ಭಾರತೀಯ ಧ್ವಜದ ವ್ಯಾಪಾರ ಹಡಗು ವಿರಾಟ್ 1ರಲ್ಲಿ ಸಂಭವಿಸಿದೆ. ಮಸ್ಕಟ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯ ಮಾಹಿತಿ ಪ್ರಕಾರ, ಹಡಗಿನಲ್ಲಿದ್ದ ಎಲ್ಲಾ 14 ಸಿಬ್ಬಂದಿಯನ್ನು ಸಮುದ್ರದಲ್ಲಿ ನಡೆಸಲಾದ ರಕ್ಷಣಾ ಕಾರ್ಯಾಚರಣೆಯ ಮೂಲಕ ಸುರಕ್ಷಿತವಾಗಿ ರಕ್ಷಿಸಲಾಗಿದೆ.

ರಾಯಭಾರ ಕಚೇರಿ ನೀಡಿದ ಮಾಹಿತಿಯಂತೆ, ಹಡಗಿನಲ್ಲಿ ಎಂಜಿನ್ ವೈಫಲ್ಯ ಉಂಟಾಗಿತ್ತು. ಇದರ ಪರಿಣಾಮವಾಗಿ ಸಿಬ್ಬಂದಿ ಸುರಕ್ಷಿತವಾಗಿ ಲೈಫ್ ರಾಫ್ಟ್‌ಗೆ ಸ್ಥಳಾಂತರಗೊಂಡಿದ್ದರು. ಒಮಾನ್ ಅಧಿಕಾರಿಗಳ ಸಮನ್ವಯದಲ್ಲಿ ಸಮೀಪದಲ್ಲಿದ್ದ ಹಡಗುಗಳ ನೆರವಿನಿಂದ ರಕ್ಷಣಾ ಕಾರ್ಯಾಚರಣೆ ಕೈಗೊಳ್ಳಲಾಯಿತು ಎಂದು ಭಾರತೀಯ ರಾಯಭಾರ ಕಚೇರಿ ತಿಳಿಸಿದೆ.

ಈ ಘಟನೆ ಗಲ್ಫ್ ಪ್ರದೇಶದಲ್ಲಿ ಉದ್ವಿಗ್ನತೆ ಹೆಚ್ಚುತ್ತಿರುವ ಸಂದರ್ಭದಲ್ಲಿ ನಡೆದಿದೆ. ಕಳೆದ ವಾರ ಒಮಾನ್ ಕರಾವಳಿಯ ಸಮುದ್ರ ಪ್ರದೇಶದಲ್ಲಿ ಭಾರತೀಯ ಸಿಬ್ಬಂದಿ ಇದ್ದ ಮೂರು ಹಡಗುಗಳು ಅಮೆರಿಕದ ದಾಳಿಗೆ ಒಳಗಾಗಿದ್ದವು. ಆ ಘಟನೆಗಳಲ್ಲಿ ಒಂದರಲ್ಲಿ ಭಾರತದ ಮೂವರು ನಾವಿಕರು ಮೃತಪಟ್ಟಿದ್ದರು.



ಶುಕ್ರವಾರ ಭಾರತ ಅಮೆರಿಕದ ಚಾರ್ಜ್ ಡಿ ಅಫೇರ್ಸ್ ಜೇಸನ್ ಮಿಲ್ಸ್ ಅವರನ್ನು ಒಂದು ವಾರದ ಅವಧಿಯಲ್ಲಿ ಎರಡನೇ ಬಾರಿ ಕರೆಸಿಕೊಂಡಿತ್ತು. ಭಾರತೀಯ ಸಿಬ್ಬಂದಿ ಇದ್ದ ವಾಣಿಜ್ಯ ಹಡಗುಗಳ ಮೇಲೆ ಒಮಾನ್ ಕರಾವಳಿಯ ಸಮುದ್ರ ಪ್ರದೇಶದಲ್ಲಿ ಅಮೆರಿಕ ಸೇನೆ ನಡೆಸಿದ ದಾಳಿಗಳು ಸ್ವೀಕಾರಾರ್ಹವಲ್ಲ ಎಂದು ಭಾರತ ತಿಳಿಸಿತ್ತು. ಇಂತಹ ಕ್ರಮಗಳು ಅಂತಾರಾಷ್ಟ್ರೀಯ ಸಮುದ್ರ ವಾಣಿಜ್ಯದ ಸುರಕ್ಷತೆ, ಭದ್ರತೆ ಮತ್ತು ಸ್ಥಿರತೆಯನ್ನು ದುರ್ಬಲಗೊಳಿಸುತ್ತವೆ ಎಂದು ಭಾರತ ಆಕ್ಷೇಪ ವ್ಯಕ್ತಪಡಿಸಿತ್ತು.

ಸಂಪಾದಕೀಯ

ಅಮೆರಿಕದ ಉದ್ಧಟತನಕ್ಕೆ ಕಡಿವಾಣ ಅಗತ್ಯ

ಜಾಗತಿಕ ಮಟ್ಟದಲ್ಲಿ ಸ್ನೇಹ, ಸಹಕಾರ ಮತ್ತು ಪರಸ್ಪರ ಗೌರವದ ಮಾತುಗಳನ್ನು ಆಡುವ ರಾಷ್ಟ್ರಗಳು ತಮ್ಮ ನಡೆ-ನುಡಿಗಳಲ್ಲೂ ಅದನ್ನೇ ಪ್ರತಿಬಿಂಬಿಸಬೇಕು. ಆದರೆ ಇತ್ತೀಚೆಗೆ ಭಾರತೀಯ ತೈಲ ಹಡಗಿನ ಮೇಲೆ ಅಮೆರಿಕದ ಸೇನೆ ನಡೆಸಿರುವ ದಾಳಿ ಹಾಗೂ ಅದರ ಬಳಿಕ ವ್ಯಕ್ತವಾಗಿರುವ ಧೋರಣೆ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಎರಡು ದೇಶಗಳು ಉತ್ತಮ ರಾಜತಾಂತ್ರಿಕ ಮತ್ತು ಆರ್ಥಿಕ ಸಂಬಂಧಗಳನ್ನು ಹೊಂದಿರುವ ಸಂದರ್ಭದಲ್ಲಿ ಇಂತಹ ಘಟನೆ ನಡೆಯುವುದು ಸಮಂಜಸವಲ್ಲ. ಇದು ಪರಸ್ಪರ ವಿಶ್ವಾಸಕ್ಕೆ ಧಕ್ಕೆ ತರುವುದರ ಜತೆಗೆ ರಾಷ್ಟ್ರಗಳ ನಡುವೆ ಅಪನಂಬಿಕೆಯ ವಾತಾವರಣವನ್ನೂ ಸೃಷ್ಟಿಸುತ್ತದೆ.



ಘಟನೆಯ ಬಳಿಕ ವಿಷಾದ ವ್ಯಕ್ತಪಡಿಸುವುದು ಅಥವಾ ಸ್ಪಷ್ಟನೆ ನೀಡುವ ಬದಲು ತಾನು ಮಾಡಿದ ಕ್ರಮವೇ ಸರಿ ಎಂಬ ರೀತಿಯಲ್ಲಿ ಅಮೆರಿಕ ವರ್ತಿಸುತ್ತಿರುವುದು ಮತ್ತಷ್ಟು ಆತಂಕಕಾರಿ. ಜಾಗತಿಕ ಶಕ್ತಿಯಾಗಿರುವುದರಿಂದ ಏನು ಮಾಡಿದರೂ ನಡೆಯುತ್ತದೆ ಎಂಬ ಮನೋಭಾವ ಇಂದಿನ ಜಗತ್ತಿನಲ್ಲಿ ಯಾರಿಗೂ ಅನುಕೂಲಕರವಲ್ಲ. ಅದರ ಪರಿಣಾಮಗಳನ್ನು ಅಮೆರಿಕ ಈಗಾಗಲೇ ಹಲವು ಸಂದರ್ಭಗಳಲ್ಲಿ ಅನುಭವಿಸಿದೆ.

ವಿಶೇಷವಾಗಿ ಇರಾನ್ ವಿಚಾರದಲ್ಲಿ ಅಮೆರಿಕದ ಲೆಕ್ಕಾಚಾರಗಳು ಹಲವು ಬಾರಿ ತಪ್ಪಾಗಿವೆ. ತನ್ನ ಪ್ರಾಬಲ್ಯದಿಂದ ಎಲ್ಲವನ್ನೂ ಸಾಧಿಸಬಹುದು ಎಂಬ ಅಹಂಕಾರಕ್ಕೆ ಅಲ್ಲಿನ ಬೆಳವಣಿಗೆಗಳು ಸವಾಲು ಹಾಕಿವೆ. ಶಾಂತಿ ಮಾತುಕತೆಗಳ ಪ್ರಯತ್ನಗಳು ನಿರೀಕ್ಷಿತ ಫಲ ನೀಡದಿರುವುದು ಕೂಡ ಇದೇ ವಾಸ್ತವವನ್ನು ತೋರಿಸುತ್ತದೆ. ಅಂತಾರಾಷ್ಟ್ರೀಯ ಸಂಬಂಧಗಳು ಕೇವಲ ಸೇನಾ ಬಲ ಅಥವಾ ಆರ್ಥಿಕ ಶಕ್ತಿಯ ಮೇಲೆ ನಿಂತಿರುವುದಿಲ್ಲ, ಪರಸ್ಪರ ಗೌರವ, ವಿಶ್ವಾಸ ಮತ್ತು ಜವಾಬ್ದಾರಿಯುತ ನಡವಳಿಕೆಗಳು ಅವುಗಳ ಅಡಿಪಾಯವಾಗಿವೆ. ದೊಡ್ಡ ರಾಷ್ಟ್ರಗಳು ತಮ್ಮ ಪ್ರಭಾವವನ್ನು ಬಳಸುವಾಗ ಇನ್ನಷ್ಟು ಎಚ್ಚರಿಕೆಯಿಂದ ವರ್ತಿಸಬೇಕಾಗುತ್ತದೆ. ಇಲ್ಲವಾದರೆ ಸಣ್ಣ ಘಟನೆಗಳೇ ದೊಡ್ಡ ರಾಜತಾಂತ್ರಿಕ ಬಿಕ್ಕಟ್ಟುಗಳಿಗೆ ಕಾರಣವಾಗುವ ಸಾಧ್ಯತೆ ಇರುತ್ತದೆ.

ಭಾರತವು ಕಳೆದ ಕೆಲವು ವರ್ಷಗಳಲ್ಲಿ ಜಾಗತಿಕ ವೇದಿಕೆಯಲ್ಲಿ ತನ್ನದೇ ಆದ ಸ್ಥಾನವನ್ನು ನಿರ್ಮಿಸಿಕೊಂಡಿದೆ. ಆರ್ಥಿಕತೆ, ಭದ್ರತೆ, ತಂತ್ರಜ್ಞಾನ ಹಾಗೂ ವಿದೇಶಾಂಗ ನೀತಿಯಲ್ಲಿ ದೇಶ ಮಹತ್ವದ ಪ್ರಗತಿಯನ್ನು ಸಾಧಿಸಿದೆ. ಇಂತಹ ಸಂದರ್ಭದಲ್ಲಿ ಭಾರತದ ಹಿತಾಸಕ್ತಿಗಳಿಗೆ ಧಕ್ಕೆಯಾಗುವ ಯಾವುದೇ ಕ್ರಮವನ್ನು ದೇಶ ಸುಮ್ಮನೆ ಒಪ್ಪಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಸ್ನೇಹಪರ ಸಂಬಂಧಗಳನ್ನು ಕಾಪಾಡಿಕೊಳ್ಳುವ ಇಚ್ಛೆ ಇದ್ದರೂ ರಾಷ್ಟ್ರೀಯ ಹಿತಾಸಕ್ತಿಯ ವಿಚಾರದಲ್ಲಿ ಭಾರತ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ. ಅಮೆರಿಕವೂ ಈ ವಾಸ್ತವವನ್ನು ಅರ್ಥಮಾಡಿಕೊಳ್ಳಬೇಕಿದೆ. ಸ್ನೇಹಿತ ರಾಷ್ಟ್ರಗಳೊಂದಿಗೆ ವ್ಯವಹರಿಸುವಾಗ ದರ್ಪ ಮತ್ತು ಪ್ರಾಬಲ್ಯದ ರಾಜಕಾರಣಕ್ಕಿಂತ ಸಮಾನತೆಯ ಮನೋಭಾವ ಅಗತ್ಯ. ತಪ್ಪು ನಡೆದಿದ್ದರೆ ಅದನ್ನು ಒಪ್ಪಿಕೊಳ್ಳುವ ಮತ್ತು ತಿದ್ದುಪಡಿ ಕ್ರಮ ಕೈಗೊಳ್ಳುವ ಪ್ರೌಢತೆ ವಿಶ್ವ ನಾಯಕತ್ವದ ಲಕ್ಷಣವಾಗಬೇಕು. ಇಲ್ಲವಾದರೆ ವಿಶ್ವಾಸದ ಬಿರುಕುಗಳು ಮತ್ತಷ್ಟು ಆಗಲವಾಗುವ ಅಪಾಯವಿದೆ.

ಹೀಗಾಗಿ ಅಮೆರಿಕ ತನ್ನ ನಡೆ-ನುಡಿಗಳನ್ನು ಮರುಪರಿಶೀಲಿಸಬೇಕಾದ ಸಮಯ ಇದು. ಶಕ್ತಿಯ ಪ್ರದರ್ಶನಕ್ಕಿಂತ ಸಂವಾದ ಮತ್ತು ಸಹಕಾರದ ಮಾರ್ಗವೇ ಶಾಶ್ವತ ಪರಿಹಾರವನ್ನು ನೀಡಬಲ್ಲದು. ಭಾರತ ಸೇರಿದಂತೆ ಸ್ನೇಹ ರಾಷ್ಟ್ರಗಳ ಭಾವನೆಗಳಿಗೆ ಗೌರವ ನೀಡುವ ಮೂಲಕವೇ ಅಮೆರಿಕ ತನ್ನ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳಲು ಸಾಧ್ಯ. ಜಾಗತಿಕ ಶಾಂತಿ ಮತ್ತು ಸ್ಥಿರತೆಯ ದೃಷ್ಟಿಯಿಂದಲೂ ಇದೇ ಸೂಕ್ತ ಮಾರ್ಗವಾಗಿದೆ.

ಮುರಿಯಲಾಗದ ನೆಹರೂ ಮಹಾನ್ ದಾಖಲೆಗಳು!

ಮೋದಿ ಸಾಧನೆಗಳನ್ನು ಟೀಕಿಸುವ ಕಾಂಗ್ರೆಸಿಗರು ನೆಹರು ಸಾಧಿಸಿದ ಈ ಕೆಲವು ಋಣಾತ್ಮಕ ಸಾಧನೆಗಳನ್ನು ಕೂಡಾ ಅರಿಯಬೇಕಾಗಿದೆ.

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com

ಪ್ರಧಾನಿಯಾಗಿ ಮೋದಿಯ ದೀರ್ಘಾವಧಿ ಆಡಳಿತದ ಚರ್ಚೆ ಆರೋಗ್ಯಪೂರ್ಣ ಹಂತ ದಾಟಿ ಇನ್ನೆಲ್ಲಿಗೋ ಸಾಗಿದೆ. ಇಟಲಿ ಪ್ರಧಾನಿ ಮೆಲೋನಿಗೆ ಮೆಲೋಡಿ ಚಾಕಲೇಟ್ ನೀಡಿದ್ದೊಂದೇ ಪ್ರಧಾನಿ ಮೋದಿಯ ದಾಖಲೆ ಎಂಬಲ್ಲಿವರೆಗೂ ಕಾಂಗ್ರೆಸ್ ಮುಖಂಡರೆನಿಸಿಕೊಂಡವರಿಂದ ಅತ್ಯಂತ ಕುತ್ಸಿತ ಟೀಕೆಗಳು ವ್ಯಕ್ತವಾಗುತ್ತಲೇ ಇವೆ. ಆದರೆ ದೇಶದ ಮೊದಲ ಪ್ರಧಾನಿ ನೆಹರು ಅವರು ಸಾಧಿಸಿದ ದಾಖಲೆಗಳನ್ನು ಮೋದಿ ಇರಲಿ, ಇನ್ನಾರಿಗೂ ಮುರಿಯಲು ಸಾಧ್ಯವೇ ಇಲ್ಲ ಎಂಬ ಅಸಲಿ ಸತ್ಯ ಸಂಗತಿಗಳು ಈಗಿನ ಕಾಂಗ್ರೆಸ್ ಮುಖಂಡರಿಗೆ ಖಂಡಿತ ಗೊತ್ತಿರಲಿಕ್ಕಿಲ್ಲ. ಅದೇನಾದರೂ ಗೊತ್ತಾದರೆ ಅವರೆಲ್ಲ ಹೌಹಾರಿ, ದಂಗಾಗಬಹುದು.

ಹೌದು. ನೆಹರು ಅವರ ಅಂತಹ ದಾಖಲೆಗಳು ಒಂದೆರಡಲ್ಲ. ಅಂತಹ ಕೆಲವು ದಾಖಲೆಗಳನ್ನಾದರೂ ಪರಿಶೀಲಿಸೋಣ. ಆದು ಸ್ವಾತಂತ್ರ್ಯ ಬಂದ ಹೊಸತು. ಕಾಶ್ಮೀರ ಇನ್ನೂ ಭಾರತದೊಳಗೆ ವಿಲೀನವಾಗಿರಲಿಲ್ಲ. ಗೃಹಮಂತ್ರಿ ಸರ್ದಾರ್ ಪಟೇಲರ ಸತತ ಪ್ರಯತ್ನ ಈ ದಿಸೆಯಲ್ಲಿ ನಡೆದೇ ಇತ್ತು. ಪಟೇಲರನ್ನು ಅವರಷ್ಟಕ್ಕೇ ಬಿಟ್ಟಿರುತ್ತಿದ್ದರೆ, ನೆಹರೂ ನಡುವೆ ಮೂಗು ತೂರಿಸದಿರುತ್ತಿದ್ದರೆ ಕಾಶ್ಮೀರ ಸಮಸ್ಯೆ ಪೆಡಂಭೂತವಾಗಿ ಕಾಡುತ್ತಲೇ ಇರಲಿಲ್ಲ. ಹೈದ್ರಾಬಾದ್, ಜುನಾಗಢದಂತಹ ಸ್ವತಂತ್ರ ಸಂಸ್ಥಾನಗಳನ್ನು ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ವಿಲೀನಗೊಳಿಸಿದ ಪಟೇಲರಿಗೆ ಕಾಶ್ಮೀರವನ್ನೂ ಅದೇ ರೀತಿ ವಿಲೀನಗೊಳಿಸುವುದು ಏನೇನೂ ಕಷ್ಟದ ಸಂಗತಿಯಾಗಿರಲಿಲ್ಲ. ಆಗ ಕಾಶ್ಮೀರದ ರಾಜನಾಗಿದ್ದವನು ರಾಜಾ ಹರಿಸಿಂಗ್. ಆದರೆ ಸಂಸ್ಥಾನದ ಶೇ. 77 ಮಂದಿ ಪ್ರಜೆಗಳು ಮುಸ್ಲಿಮರಾಗಿದ್ದರು. ಇದೇ ಕಾರಣಕ್ಕೆ ನೆರೆಯ ಪಾಕಿಸ್ತಾನ ಕಾಶ್ಮೀರದ ಮೇಲೆ ದಾಳಿ ಎಸಗಿತು. ರಾಜಾ ಹರಿಸಿಂಗ್ ರಕ್ಷಣೆಗಾಗಿ ಪಟೇಲರ ಬಳಿ ಧಾವಿಸಿ ಬಂದರು. ಕೊಡಗಿನ ಕಲಿ ಜನರಲ್ ತಿಮ್ಮಯ್ಯ ಕಾಶ್ಮೀರದ ರಕ್ಷಣೆಯ ಸಂಪೂರ್ಣ ಹೊಣೆ ಹೊತ್ತಿದ್ದರು. ಪಾಕಿಸ್ತಾನ ವಶಪಡಿಸಿಕೊಂಡ ಐದನೇ ಎರಡು ಭಾಗ ಕಾಶ್ಮೀರವನ್ನು (ಪಿಒಕೆ) ಮರಳಿ ಪಡೆಯಲು ಸೈನ್ಯದೊಂದಿಗೆ ಸಜ್ಜಾಗಿದ್ದರು. ಆದರೆ ಅವರ ಈ ಸಾಹಸಕ್ಕೆ ಅಡ್ಡಿಯಾದವರು ಸನ್ಮಾನ್ಯ ನೆಹರು ಅವರು. ಇದ್ದಕ್ಕಿದ್ದಂತೆ ನೆಹರು ಕದನ ವಿರಾಮ ಘೋಷಿಸಿಬಿಟ್ಟರು. ಅನಂತರ ಕಾಶ್ಮೀರ ಸಮಸ್ಯೆಯನ್ನು ವಿಶ್ವಸಂಸ್ಥೆಗೊಯ್ದು ಅದನ್ನೊಂದು ಅಂತಾರಾಷ್ಟ್ರೀಯ ಸಮಸ್ಯೆಯನ್ನಾಗಿಸಿದರು. ಜಮ್ಮು-ಕಾಶ್ಮೀರಕ್ಕೆ 370ನೇ ವಿಧಿ ಕರುಣಿಸಿ, ವಿಶೇಷ ಸ್ಥಾನಮಾನ ನೀಡಿ ಒಂದೇ ದೇಶದಲ್ಲಿ ಇಬ್ಬರು ಪ್ರಧಾನಿ, ಎರಡು ಸಂವಿಧಾನ, ಎರಡು ರಾಷ್ಟ್ರಧ್ವಜಗಳಿರುವಂತೆ ನೋಡಿಕೊಂಡರು. ನೆಹರು ಎಸಗಿದ ಈ ಪ್ರಮಾದವನ್ನು ಸರಿಪಡಿಸಲು 73 ವರ್ಷ ಬೇಕಾಯ್ತು. ನೆಹರೂ ಅವರ ಈ ದಾಖಲೆಯನ್ನು ಸರಿಗಟ್ಟಲು ಸಾಧ್ಯವೆ?

ಕಲಾತ್ ವಿಲೀನಕ್ಕೆ ತಿರಸ್ಕಾರ : 1947ರಲ್ಲಿ ಬಲೂಚಿಸ್ತಾನದ ಒಂದು ರಾಜ ಸಂಸ್ಥಾನವಾಗಿದ್ದ ಕಲಾತ್ ಅನ್ನು ಭಾರತದಲ್ಲಿ ವಿಲೀನಗೊಳಿಸಲು ಆ ಸಂಸ್ಥಾನದ ಮುಖ್ಯಸ್ಥ ಅಹಮದ್ ಯಾರ್ಖಾನ್ ಎಲ್ಲ ಬಗೆಯ ಸಿದ್ಧತೆಗಳೊಡನೆ ನೆಹರು ಬಳಿಗೆ ಬಂದಿದ್ದರು. ಸಮ್ಮತಿ ಪತ್ರಕ್ಕೆ ನೆಹರು ಸಹಿ ಹಾಕಿದ್ದರೆ ಸಾಕಿತ್ತು. ಆದರೆ ಯಾವುದೋ ಕಾರಣಕ್ಕೆ ನೆಹರು ಸಹಿ ಹಾಕಲೇ ಇಲ್ಲ. ಇದನ್ನೇ ಕಾಯುತ್ತಿದ್ದ ಪಾಕಿಸ್ತಾನ ಕಲಾತ್ ಮೇಲೆ ದಾಳಿ ನಡೆಸಿ ಅದನ್ನು ತನ್ನ ವಶಪಡಿಸಿಕೊಂಡಿತು. ಭಾರತದ ಭಾಗವೇ ಆಗಿಹೋಗುತ್ತಿದ್ದ ಬಲೂಚಿಸ್ತಾನ್ ಹೀಗೆ ಪಾಕ್‌ಗೆ ಸೇರಿಹೋಯಿತು. ಇದೆಂತಹ ದಾಖಲೆ ನೆಹರು ಅವರದು!

ಹೈದ್ರಾಬಾದ್ ವಿಲೀನಕ್ಕೂ ವಿರೋಧ : ನಿಜಾಮನ ಆಳ್ವಿಕೆಯಲ್ಲಿದ್ದ ಹೈದ್ರಾಬಾದ್ ಸಂಸ್ಥಾನದ ವಿಲೀನಕ್ಕೂ ನೆಹರು ತೀವ್ರ ವಿರೋಧವಿತ್ತು. ಆದರೆ ಗೃಹಮಂತ್ರಿ, ಪಟೇಲರು ನೆಹರು ವಿರೋಧಕ್ಕೆ ಮಣಿಯಲಿಲ್ಲ. ನಿಜಾಮನ ವಿರುದ್ಧ ಮಿಲಿಟರಿ ಕಾರ್ಯಾಚರಣೆ ಕೈಗೊಂಡು ಅದನ್ನು ಭಾರತದೊಳಗೆ ವಿಲೀನ ಗೊಳಿಸಿದರು. ಜಾತ್ಯತೀತ ರಾಷ್ಟ್ರವಾದ ಭಾರತದಲ್ಲಿ ನೀವೇಕೆ ಕೋಮುವಾದಿ ಎಂಬ ಹಣೆಪಟ್ಟಿ ಅಂಟಿಸಿಕೊಳ್ಳಲು ಹೊರಟಿದ್ದೀರಿ? ಎಂದು ಪಟೇಲರನ್ನು ನೆಹರು ಹಂಗಿಸಿದ್ದರು. ಉಕ್ಕಿನ ಮನುಷ್ಯ ಪಟೇಲ್ ಅದಕ್ಕೆ ಸೊಪ್ಪು ಹಾಕಲಿಲ್ಲ. ನೆಹರು ಅವರ ಈ 'ಸೆಕ್ಯುಲರ್' ದಾಖಲೆ ಮುರಿಯಲು ಮೋದಿಗೆ ಸಾಧ್ಯವೆ?

ಕಾಬೋ ಕಣಿವೆ ಬರ್ಮಾಕ್ಕೆ ಬಹುಮಾನ : ಫಲವತ್ತಾದ, ಸಮೃದ್ಧ ಹಸಿರು ನಳನಳಿಸುವ 11 ಸಾವಿರ ಚ.ಕಿ.ಮೀ. ವಿಸ್ತೀರ್ಣದ ಮಣಿಪುರ ರಾಜಧಾನಿಯ ಭಾಗವಾಗಿದ್ದ ಕಾಬೋ ಕಣಿವೆ 1450ರಿಂದಲೂ ಭಾರತದ ಭಾಗವಾಗಿಯೇ ಇತ್ತು. ಬ್ರಿಟಿಷರು ಮಣಿಪುರವನ್ನು ವಶಪಡಿಸಿಕೊಂಡ ಬಳಿಕ ಕಾಬೋ ಕಣಿವೆಯನ್ನು 1834ರಲ್ಲಿ ಬರ್ಮಾಕ್ಕೆ ಭೋಗ್ಯಕ್ಕೆ ನೀಡಿದ್ದರು. ಸ್ವಾತಂತ್ರ್ಯ ಬಂದ ಬಳಿಕ ಭೋಗ್ಯಕ್ಕೆ ನೀಡಲಾದ ಕಾಬೋ ಕಣಿವೆಯನ್ನು ಬರ್ಮಾದಿಂದ ಮರಳಿ ಪಡೆಯುವ ಎಲ್ಲಾ ಅವಕಾಶಗಳೂ ಮುಕ್ತವಾಗಿತ್ತು. ಸೂಕ್ತ ಪರಿಹಾರ ನೀಡಿದ್ದರೆ ಬರ್ಮಾ ಅದನ್ನು ಭಾರತಕ್ಕೆ ಬಿಟ್ಟುಕೊಡುತ್ತಿತ್ತು. ಆದರೆ ನೆಹರೂಗೆ ತಾನೊಬ್ಬ ದಾನಶೂರ ಕರ್ಣನೆಂದು ಬಿಂಬಿಸಿಕೊಳ್ಳಬೇಕಿತ್ತು. ಬರ್ಮಾಕ್ಕೆ ಅದನ್ನು ಬಹುಮಾನವಾಗಿ ಬಳುವಳಿ ನೀಡಿಬಿಟ್ಟರು. ನಮ್ಮ ನೆಹರು ಎಂತಹ ತ್ಯಾಗಮಯಿ! ಎಂತಹ ದಾಖಲೆವೀರ.

ಕೋಕೋ ದ್ವೀಪಗಳು ಬರ್ಮಾಕ್ಕೆ ದಾನ : ಅಂಡಮಾನ್‌ನ ಭಾಗವಾಗಿದ್ದ ಎರಡು ಕೋಕೋ ದ್ವೀಪಗಳನ್ನೂ ಸ್ವಾತಂತ್ರ್ಯ ಬಂದ ಕೂಡಲೇ ನೆಹರು ಬರ್ಮಾಕ್ಕೆ ದಾನ ಮಾಡಿಬಿಟ್ಟರು. ಬರ್ಮಾ ಅವುಗಳನ್ನು ಚೀನಾ ದೇಶಕ್ಕೆ ಕೊಡುಗೆಯಾಗಿ ನೀಡಿತು. ಚೀನಾ ಮಾತ್ರ ಭಾರತದ ಮಿಲಿಟರಿ ಕಾರ್ಯಾಚರಣೆ ಮೇಲೆ ಕಣ್ಣಿಡಲು ಆ ದ್ವೀಪದಲ್ಲೊಂದು ಎಲೆಕ್ಟ್ರಾನಿಕ್ ಸರ್ವಿಯಲೆನ್ಸ್ ಸ್ಟೇಷನ್ ಸ್ಥಾಪಿಸಿದೆ. ಬಂಗಾಳ ಕೊಲ್ಲಿಯಲ್ಲಿ ಭಾರತದ ನೌಕಾಪಡೆಯ ಯಾವುದೇ ಚಟುವಟಿಕೆ ನಡೆದರೂ ಚೀನಾಕ್ಕೆ ತಕ್ಷಣ ತಿಳಿಯುತ್ತದೆ. ಅದು ಭಾರತದಲ್ಲೇ ಇದ್ದಿದ್ದರೆ ಭಾರತದ ಮಿಲಿಟರಿ ಕಾರ್ಯಾಚರಣೆಗೆ ಅದೊಂದು ವ್ಯೂಹಾತ್ಮಕ ಕೇಂದ್ರವಾಗಿರುತ್ತಿತ್ತು. ನೆಹರೂ ಮತ್ತೊಮ್ಮೆ ತ್ಯಾಗಮಯಿಯಾದರು!

ವಿಶ್ವಸಂಸ್ಥೆಯ ಖಾಯಂ ಸ್ಥಾನ ಬೇಡವೆಂದರು : 1950ರಲ್ಲಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಭಾರತವನ್ನು ಖಾಯಂ ಸದಸ್ಯನನ್ನಾಗಿ ಮಾಡಿಕೊಳ್ಳಲು ಅಮೆರಿಕ ಆಹ್ವಾನ ನೀಡಿತ್ತು. ನೆಹರು ಮಾತ್ರ ಅದನ್ನು ತಿರಸ್ಕರಿಸಿದರು. ಚೀನಾಕ್ಕೆ ಖಾಯಂ ಸ್ಥಾನ ನೀಡದಿದ್ದರೆ ಭಾರತಕ್ಕೂ ಬೇಡ ಎಂದರು. 1955ರಲ್ಲಿ ಅಮೆರಿಕ ಮತ್ತೊಮ್ಮೆ ರಷ್ಯಾದೊಂದಿಗೆ ಸೇರಿ ಭಾರತಕ್ಕೆ ಖಾಯಂ ಸ್ಥಾನ ನೀಡಲು ಮುಂದಾಗಿತ್ತು. ಆಗಲೂ ನೆಹರು ಅವರದ್ದು ಅದೇ ಹಠ. ಹೀಗಾಗಿ ನೆಹರು ಕೃಪೆಯಿಂದ ಚೀನಾಕ್ಕೆ ಖಾಯಂ ಸ್ಥಾನ ಸಿಕ್ಕಿಬಿಟ್ಟಿತು. ಇದಂತೂ ನೆಹರೂ ಅವರ ತ್ಯಾಗದ ಪರಾಕಾಷ್ಠೆಯ ದಾಖಲೆ!

ಗ್ವಾದರ್ ಬಂದರು, ಬೇಡವೆಂದರು: 1958ರಲ್ಲಿ ಓಮನ್ ದೇಶದ ಸುಲ್ತಾನರು ಆಯಕಟ್ಟಿನ ಗ್ವಾದರ್ ಬಂದರು ಪ್ರದೇಶವನ್ನು ಭಾರತಕ್ಕೆ ನೀಡಲು ಸಿದ್ಧರಾಗಿದ್ದರು. ನೆಹರು ಅವರೇ ಬೇಡವೆಂದರು. ಕೂಡಲೇ ಪಾಕಿಸ್ತಾನ ಅದನ್ನು ಖರೀದಿಸಿತು. ಇದೀಗ ಗ್ವಾದರ್ ಬಂದರು ಚೀನಾದ ಎಲ್ಲಾ ರಸ್ತೆ ನಿರ್ಮಾಣ ಯೋಜನೆಗಳಿಗೆ ಹೆಬ್ಬಾಗಿಲಿನಂತಾಗಿದೆ. ಚೀನಾದ ಸಾಮ್ರಾಜ್ಯಶಾಹಿ ದಾಹಕ್ಕೆ ಕಡಿವಾಣ ಹಾಕಬಹುದಾಗಿದ್ದ ಗ್ವಾದರ್ ಬಂದರು ಖರೀದಿಸದ ನೆಹರು ದಾಖಲೆ ಮೀರುವವರಾರು?

ನೇಪಾಳ ವಿಲೀನಕ್ಕೂ ಅಡ್ಡಿ: ಹಿಂದು ದೇಶವಾಗಿದ್ದ, ಹಿಂದು ಸಂಸ್ಕೃತಿ ಪರಂಪರೆಗಳನ್ನೇ ಹಾಸಿ ಹೊದ್ದಿರುವ ನೇಪಾಳವನ್ನು ಭಾರತದಲ್ಲಿ ವಿಲೀನಗೊಳಿಸಲು ಅಲ್ಲಿನ ರಾಜ ತ್ರಿಭುವನ ಬೀರು ಬಿಕ್ರಂ ಶಹಾದೇವ್ (1906-1955) ಅವರು 1950ರಲ್ಲಿ ಬಯಸಿದ್ದರು. ಭಾರತದಲ್ಲಿ ವಿಲೀನವಾದರೆ ನೇಪಾಳದ ಸರ್ವಾಂಗೀಣ ವಿಕಾಸ ಸಾಧ್ಯವೆಂದು ತ್ರಿಭುವನ್ ನಂಬಿದ್ದರು. ಆದರೆ ನೆಹರುಗೆ ಅದು ಬೇಕಿರಲಿಲ್ಲ. ವಿಲೀನಕ್ಕೆ ಒಪ್ಪಲಿಲ್ಲ. ಇವತ್ತು ಮಾವೋವಾದಿಗಳ ಹಿಡಿತದಲ್ಲಿ ನೇಪಾಳ ತೊಳಲಾಡಬೇಕಾದ ಅನಿವಾರ್ಯತೆಗೆ ನೆಹರು ಅವರ ಈ ಕೆಟ್ಟ ನಿರ್ಧಾರವೇ ಕಾರಣ.

ಭಾರತ ಪರಮಾಣುಶಕ್ತಿ ರಾಷ್ಟ್ರವಾಗದಂತೆ ತಡೆ: ಚೀನಾ ದೇಶಕ್ಕೂ ಮೊದಲು ಭಾರತ ಪರಮಾಣುಶಕ್ತಿ ರಾಷ್ಟ್ರವಾಗಲು ಅಮೆರಿಕ ಅಧ್ಯಕ್ಷರಾಗಿದ್ದ ಜಾನ್ ಎಫ್. ಕೆನಡಿ ರಾಜಸ್ಥಾನದ ಮರಳುಗಾಡಿನಲ್ಲಿ ಪರಮಾಣು ಬಾಂಬ್ ಪರೀಕ್ಷೆಗೆ ನೆರವು ನೀಡುವುದಾಗಿ ಭರವಸೆ ನೀಡಿದ್ದರು. ಆದರೆ ನೆಹರುಗೆ ಭಾರತ ನ್ಯೂಕ್ಲಿಯರ್ ಪವರ್ ದೇಶವಾಗುವುದು ಬೇಡ ಎಂಬ ಬಯಕೆ ಇತ್ತು. ಹೀಗಾಗಿಯೇ 1962ರಲ್ಲಿ ಚೀನಾ ಜೊತೆಗೆ ಯುದ್ಧ ಸಂಭವಿಸಿ ಭಾರತದ ಸಾವಿರಾರು ಚದರ ಕಿ.ಮೀ. ಭೂಭಾಗ ಕೈತಪ್ಪಿತು. ಹಿಂದಿ-ಚೀನಿ ಭಾಯಿ ಭಾಯಿ ಎಂಬ ನೆಹರು ಅವರ ಭೋಳೆತನದ ಈ ದಾಖಲೆಯನ್ನು ಯಾರಿಗಾದರೂ ಮುರಿಯಲು ಸಾಧ್ಯವೇ?

ಸೋಮನಾಥ ಪುನರ್ ನಿರ್ಮಾಣಕ್ಕೂ ವಿರೋಧ: ಮೋದಿ ಪ್ರಧಾನಿಯಾದ ಬಳಿಕ ಹಿಂದುಗಳ ಅಸ್ಮಿತೆ, ಶ್ರದ್ಧಾ ಕೇಂದ್ರವಾಗಿದ್ದ ಅಯೋಧ್ಯೆ ಶ್ರೀರಾಮ ಮಂದಿರ ಜನ್ಮಸ್ಥಾನದಲ್ಲೇ ಪುನರ್ ನಿರ್ಮಾಣ ಆಗುವಂತೆ ತಾರ್ಕಿಕ ಅಂತ್ಯಕ್ಕೆ ಸಹಕರಿಸಿದರು.

ಕಾಶಿ ವಿಶ್ವನಾಥ ಮಂದಿರಕ್ಕೆ ವಿಶೇಷ ಕಾರಿಡಾರ್ ನಿರ್ಮಿಸಿದರು. ಆದರೆ ನೆಹರು ನಮ್ಮ ಪ್ರಮುಖ ಜ್ಯೋತಿರ್ಲಿಂಗಗಳಲ್ಲಿ ಒಂದಾಗಿರುವ ಸೌರಾಷ್ಟ್ರದ ಸೋಮನಾಥ ಮಂದಿರದ ಪುನರ್ ನಿರ್ಮಾಣಕ್ಕೆ ಉಗ್ರ ವಿರೋಧ ವ್ಯಕ್ತಪಡಿಸಿದ್ದರು. ತನ್ಮೂಲಕ ತಾನೊಬ್ಬ 'ಸೆಕ್ಯುಲರ್' ಪ್ರಧಾನಿ ಎಂಬ ದಾಖಲೆ ಬರೆಯಲು ಹೊರಟಿದ್ದರು. ಆದರೆ ಗೃಹಮಂತ್ರಿ ಪಟೇಲರು ಪಟ್ಟು ಹಿಡಿದು ಈ ಹಿಂದು ಶ್ರದ್ಧಾ ಕೇಂದ್ರದ ಪುನರ್ ನಿರ್ಮಾಣ ಪೂರ್ತಿಗೊಳಿಸಿದ್ದರು.

ಅತ್ಯರತಿಯ ಪರಾಕಾಷ್ಠೆ: 1947ರಿಂದ ಹೆಚ್ಚು ಕಡಿಮೆ 2000 ಇಸವಿಯವರೆಗೆ ದೇಶದ ದೊಡ್ಡ ಯೋಜನೆಗಳು, ಬೃಹತ್ ಸೇತುವೆಗಳು, ವಿದ್ಯುತ್ ಕೇಂದ್ರಗಳು, ವಿವಿಗಳು, ಆಸ್ಪತ್ರೆಗಳು, ರಸ್ತೆಗಳು, ಉದ್ಯಾನವನಗಳು ಎಲ್ಲವೂ ನೆಹರು ಸಂತತಿಮಯ. ನೆಹರು ಹೆಸರು ಬಿಟ್ಟರೆ ಬೇರೆ ಪುಣ್ಯಾತ್ಮರ ಹೆಸರೇ ಹೊಳೆಯಲಿಲ್ಲ. ಮೋದಿ ಕಾಲದಲ್ಲಿ ನೂರಾರು ವಿವಿಗಳು, ಆಸ್ಪತ್ರೆಗಳು, ವಿಮಾನ ನಿಲ್ದಾಣಗಳು, ಹೊಸ ರೈಲುಗಳು, ಬೃಹತ್ ಸೇತುವೆಗಳ ನಿರ್ಮಾಣವಾಯಿತು. ಆದರೆ ಯಾವುದಕ್ಕೂ ಮೋದಿಯ ಹೆಸರಿಡಲಿಲ್ಲ (ಅಹ್ಮದಾಬಾದಿನ ನರೇಂದ್ರ ಮೋದಿ ಕ್ರಿಕೆಟ್ ಸ್ಟೇಡಿಯಂ ಮಾತ್ರ ಇದಕ್ಕೆ ಅಪವಾದ). ನೆಹರು ತಮಗೆ ತಾವೇ 'ಭಾರತ ರತ್ನ' ಪುರಸ್ಕಾರ ಸಿಗುವಂತೆ ನೋಡಿಕೊಂಡರು. ಅತ್ಯರತಿಯ ಪರಾಕಾಷ್ಠೆಯ ಈ ನೆಹರು ದಾಖಲೆ ಸದಾ ಕಾಲಕ್ಕೂ ಅಬಾಧಿತ.

ಇಲ್ಲಿ ದಾಖಲಿಸಿದ ನೆಹರೂ ಕುರಿತ ದಾಖಲೆಗಳು ಖಂಡಿತ ಉತ್ಪ್ರೇಕ್ಷೆಯದಲ್ಲ. ಬಾಬು ರಾಜೇಂದ್ರ ಪ್ರಸಾದರ 'ಇಂಡಿಯಾ ಡಿವೈಡೆಡ್', ಲೋಹಿಯಾ ಅವರ 'ಗಿಲ್ಟಿಮೆನ್ ಆಫ್ ಪಾರ್ಟೀಶನ್', ದಳವಿಯವರ 'ದಿ ಹಿಮಾಲಯನ್ ಬ್ಲಂಡರ್', ಎಂ. ಓ. ಮಥಾಯ್ ಬರೆದ 'ರೆಮಿನಿಸೆನ್ಸಸ್ ಆಫ್ ದಿ ನೆಹರು ಏಜ್', ಬಂದೋಪಾಧ್ಯಾಯರ 'ದಿ ಮೇಕಿಂಗ್ ಆಫ್ ಇಂಡಿಯಾಸ್ ಫಾರಿನ್ ಪಾಲಿಸಿ' ಮುಂತಾದ ಕೃತಿಗಳಲ್ಲಿ ನೆಹರು ಅವರ ದ್ವಂದ್ವ ನಿಲುವುಗಳು, ದೇಶವಿರೋಧಿ ನೀತಿಗಳ ಬಗ್ಗೆ ಬೆಳಕು ಚೆಲ್ಲಲಾಗಿದೆ.

ನೆಹರು ಅವರ ಇನ್ನಷ್ಟು ದಾಖಲೆಗಳಿವೆ. ಪ್ರಧಾನಿಯಾಗಿ ಮಾಡಬಾರದಿದ್ದ ಹಲವು ಸಂಗತಿಗಳಿವೆ. ಈ ಲೇಖನದಲ್ಲಿ ದಾಖಲಿಸಲಾಗದ 'ದಾಖಲೆಗಳೂ' ಇವೆ! ನೆಹರು ಅಂಧಾಭಿಮಾನಿಗಳು ಬೇಕಿದ್ದರೆ ಅವನ್ನೆಲ್ಲ ಹುಡುಕಿ ಓದಿ, ಜನ್ಮ ಪಾವನ ಮಾಡಿಕೊಳ್ಳಲಿ.

ಹರೆಯದವರು ಮತ್ತು ಲೈಂಗಿಕ ವಿಜ್ಞಾನ-1

ಹರೆಯದಲ್ಲಿ ಲೈಂಗಿಕ ಅಂಗಾಂಗಗಳು ವಿಕಾಸಗೊಳ್ಳುತ್ತವೆ. ಅದಕ್ಕಾಗಿ ಹರೆಯದವರಿಗೆ ಲೈಂಗಿಕ ವಿಜ್ಞಾನದ ಅರಿವು ಅನಿವಾರ್ಯ.

ತಾರುಣ್ಯ ತಲ್ಲಣ
• ಡಾ.ಕೆ.ಆರ್. ಶ್ರೀಧರ್
drkrsridhar208@gmail.com

ಹರೆಯದವರಿಗೆ ಲೈಂಗಿಕ ವಿಜ್ಞಾನದ ಕುರಿತು ಲೇಖನವನ್ನು ಬರೆದರೆ ಸರಿಯೇ ಎಂದು ಓದುಗರು ಪ್ರಶ್ನೆಮಾಡಬಹುದು. ನಮ್ಮ ದೇಶದಲ್ಲಿ ವಿಶೇಷವಾಗಿ ಹತ್ತನೇ ವಯಸ್ಸಿನಿಂದ ಹತ್ತೊಂಭತ್ತನೇ ವಯಸ್ಸಿನ ಹರೆಯದವರು ಜನಸಂಖ್ಯೆಯ ಸುಮಾರು ಐದನೇ ಒಂದು ಭಾಗದಷ್ಟಿದ್ದಾರೆ. ನಮ್ಮ ಸಮಾಜದಲ್ಲಿ ಶತಮಾನಗಳಿಂದ ಮಕ್ಕಳು ಮತ್ತು ಹರೆಯದವರಿಗೆ ಲೈಂಗಿಕತೆ ಕುರಿತು ಹೇಳುವುದು ಅಪಾಯ. ಲೈಂಗಿಕ ವಿಚಾರಗಳನ್ನು ಹಂಚಿಕೊಳ್ಳುವುದು ನಾಚಿಕೆಗೇಡು. ಅವರಿಗೆ ಲೈಂಗಿಕತೆ ಕುರಿತು ಮಾಹಿತಿ ನೀಡಿದರೆ, ದಾರಿ ತಪ್ಪಿದ ಮಕ್ಕಳಾಗುತ್ತಾರೆ ಎಂದು ಹಿರಿಯರು ಭಾವಿಸುತ್ತಾರೆ. ಅದರೊಂದಿಗೆ ಪುರುಷ-ಸ್ತ್ರೀ ಮಧ್ಯೆ ಇರುವ ಲಿಂಗಭೇದ ಮತ್ತು ಪುರುಷ ಪ್ರಧಾನ ಸಮಾಜ ಹೀಗೆ ಕೆಲವು ಅಂಶಗಳಿಂದ ಪೋಷಕರಾಗಲೀ, ಸ್ನೇಹಿತರಾಗಲೀ ಹರೆಯದವರನ್ನು ಲೈಂಗಿಕ ಜ್ಞಾನದಿಂದ ದೂರವಿಡಲು ಪ್ರಯತ್ನಿಸುತ್ತಾರೆ. ಹಾಗಾಗಿ ಹರೆಯದವರು ಲೈಂಗಿಕ ಅಂಗಾಂಗಗಳ ಬೆಳವಣಿಗೆ, ಲೈಂಗಿಕ ಪ್ರಕ್ರಿಯೆ, ಲೈಂಗಿಕ ಅಜ್ಞಾನ ಮತ್ತು ತಪ್ಪು ಕಲ್ಪನೆಗಳು, ಮತ್ತು ಅದರ ಸಾಧಕ-ಬಾಧಕಗಳನ್ನು ಕುರಿತು ಸಂದೇಹ ಮತ್ತು ಒತ್ತಡಗಳಿಂದ ಬಳಲುವುದನ್ನು ನಾವು ಸಮಾಜದಲ್ಲಿ ಕಾಣುತ್ತೇವೆ. ಇದಕ್ಕೆ ಅವರಲ್ಲಿ ಇರುವ ಲೈಂಗಿಕ ಅಜ್ಞಾನ ಮತ್ತು ತಪ್ಪು ಕಲ್ಪನೆಗಳೇ ಕಾರಣ. ಈಗ ನಮ್ಮದು ನಾಗರೀಕ ಸಮಾಜ. ಎಲ್ಲರೂ ಲೈಂಗಿಕ ಜ್ಞಾನ ಉಳ್ಳವರೆಂದು ಜನರು ಭಾವಿಸುತ್ತಾರೆ. ಆದರೆ ಅರ್ಧಕ್ಕಿಂತ ಹೆಚ್ಚು ಮಂದಿ ಹಿರಿಯರು ಲೈಂಗಿಕತೆ ಕುರಿತು ಹರೆಯದ ಮಕ್ಕಳೊಂದಿಗೆ ಸಹಜ ಜ್ಞಾನವನ್ನು ಹಂಚಿಕೊಂಡು ಅವರ ಸಂದೇಹಗಳನ್ನು ನಿವಾರಿಸಲು ನಾಚಿಕೊಳ್ಳುತ್ತಾರೆ. ಇದು ಕೇವಲ ಅವಿದ್ಯಾವಂತರು ಮತ್ತು ಹಳ್ಳಿಗಳಲ್ಲಿ ಒಂದೇ ಅಲ್ಲ, ವಿದ್ಯಾವಂತರು ಎನಿಸಿಕೊಂಡವರಲ್ಲೂ ವ್ಯಾಪಕವಾಗಿ ಕಾಣಬಹುದು. ಈ ದಿಶೆಯಲ್ಲಿ ಒಂದೆರಡು ಉದಾಹರಣೆಗಳನ್ನು ತಿಳಿಯೋಣ.



ಎರಡನೇ ಪಿಯುಸಿಯಲ್ಲಿ ಓದುತ್ತಿದ್ದ ಹದಿನಾರು ವರ್ಷದ ರವಿಗೆ ಇದ್ದಕ್ಕಿದ್ದಂತೆ ಹೊಟ್ಟೆ ನೋವು ಕಾಣಿಸಿಕೊಂಡಿತು. ರವಿ ಹೊಟ್ಟೆನೋವೆಂದು ಹೇಳಿದಾಗ ಮೊದಲಿಗೆ ಮನೆ ಮದ್ದು ಮಾಡಿದ ತಂದೆ ತಾಯಿಗಳು ಮಗನಿಗೆ ತರಗತಿಯಲ್ಲಿ ಓದುವುದು ಕಷ್ಟವಾಗಿ ಹೀಗೆ ಹೇಳುತ್ತಿದ್ದಾನೆಂದು ಭಾವಿಸಿದರು. ದಿನಕಳೆದಂತೆ ರವಿಯ ಹೊಟ್ಟೆನೋವು ಹೆಚ್ಚಾಗಿ ಸುಸ್ತು ಎಂದು ಹೇಳಲು ಪ್ರಾರಂಭಿಸಿದ. ಹಸಿವಿಲ್ಲದೇ ಊಟ ಕಡಿಮೆ ಮಾಡುತ್ತಿದ್ದ. ನಿದ್ದೆ ಬರುವುದಿಲ್ಲ ಮತ್ತು ನಿದ್ದೆಗೆ ಹೋದರೆ ಭಯ ಎಂದ. ಆದರೂ ಕಾಲೇಜಿಗೆ ಹೋಗುತ್ತಿದ್ದ. ಕ್ರಮೇಣ ಓದಿನಲ್ಲಿ ನಿರಾಸಕ್ತಿ, ಏಕಾಗ್ರತೆಯ ಕೊರತೆ, ಸುಸ್ತು ಎಂದು ಹೇಳಿ, ಮನೆಯಲ್ಲೇ ಉಳಿಯುತ್ತಿದ್ದ. ಗತ್ಯಂತರವಿಲ್ಲದೇ ರವಿಯನ್ನು ವೈದ್ಯರಲ್ಲಿ ಕರೆದೊಯ್ದರು. ಅಲ್ಲಿ ಎಲ್ಲ ವೈದ್ಯಕೀಯ ಪರೀಕ್ಷೆಗಳೂ ನಾರ್ಮಲ್ ಆಗಿದ್ದವು. ಹೊಟ್ಟೆ ಸ್ಕ್ಯಾನ್, ಎಂ.ಆರ್.ಐ. ಹೀಗೆ ವೈದ್ಯರ ಶಾಪಿಂಗ್ ಪ್ರಾರಂಭವಾಗಿ ಎರಡು ಮೂರು ತಿಂಗಳುಗಳೇ ಕಳೆದವು. ಆದರೆ ರವಿಯ ತೊಂದರೆ ವಾಸಿಯಾಗಲಿಲ್ಲ. ಯಾರೋ ಏನೋ ಮಾಡಿಸಿರಬೇಕೆಂದು ಮಂತ್ರ-ತಂತ್ರ, ಮಾಟ ಎಲ್ಲವೂ ನಡೆಯಿತು. ಕೊನೆಗೆ ಕೈಮದ್ದು ಹಾಕಿಸಿದ್ದಾರೆಂದು, ಔಷಧ ನೀಡಿ ವಾಂತಿ ಮಾಡಿಸಿದರು. ವಾಂತಿಯಲ್ಲಿದ್ದ ಒಂದು ಗಡ್ಡೆ ನೋಡಿ, ಇನ್ನೇನು ತಮ್ಮ ಮಗ ಅಂತೂ ಇಂತೂ ಬಚಾವಾದ ಎಂದು ಅಂದುಕೊಂಡರು. ಆದರೆ ಹದಿನೈದು ದಿನಗಳ ನಂತರ ಒಂದು ರಾತ್ರಿ ರವಿ ಎದ್ದು ಬಂದು ಅಮ್ಮನ ಹತ್ತಿರ ತನಗೆ ಇರುವುದೇ ಬೇಡ ಅನಿಸುತ್ತದೆ ಎಂದ. ಕೂಡಲೇ ರವಿಯನ್ನು ಕುಟುಂಬ ವೈದ್ಯರ ಹತ್ತಿರ ಕರೆದೊಯ್ದರು. ಕುಟುಂಬ ವೈದ್ಯರು ರವಿಯನ್ನು ಪರೀಕ್ಷಿಸಿ ಮನೋವೈದ್ಯರ ಹತ್ತಿರ ಕರೆದುಕೊಂಡು ಹೋಗಲು ಹೇಳಿದರು. ಒಲ್ಲದ ಮನಸ್ಸಿನಿಂದ ರವಿಯ ಅಪ್ಪ ಅಮ್ಮ ರವಿಯನ್ನು ಮನೋವೈದ್ಯರಲ್ಲಿಗೆ ಕರೆದೊಯ್ದರು.

ವಿವರವಾದ ಮಾಹಿತಿಗಳನ್ನು ಪಡೆದ ವೈದ್ಯರು ರವಿಯ ಮನಃಪರೀಕ್ಷೆ ಮಾಡಿದರು. ರವಿಗೆ ಇತ್ತೀಚೆಗೆ ನಿದ್ದೆಯಲ್ಲಿ ವೀರ್ಯ ಸ್ಖಲನವಾಗಿ ಅದರಿಂದ ತಾನು ಮುಂದೆ ನಪುಂಸಕನಾಗುತ್ತೇನೆಂಬ ಭಯವೇ ಕಾರಣ. ಅದರಿಂದ ರವಿಗೆ ಈ ವಿಧದ ತೊಂದರೆಗಳು ಪ್ರಾರಂಭವಾಗಿವೆ ಎಂದು ತಿಳಿಯಿತು. ರವಿಯ ಅಪ್ಪ ಅಮ್ಮನನ್ನು ಕರೆದು ರವಿಯ ತೊಂದರೆಯನ್ನು ವಿವರಿಸಿ, ರವಿಗೆ ಆಪ್ತ ಸಲಹೆ ಮತ್ತು ಚಿಕಿತ್ಸೆಗೆ ಅವಶ್ಯವಾದ ಔಷಧ ಅವಶ್ಯವೆಂದು ತಿಳಿಸಿದರು. ಇದನ್ನು ಕೇಳಿದ ರವಿಯ ತಾಯಿ, ನಮ್ಮ ರವಿ ಬಹಳ ಬುದ್ಧಿವಂತ ಹುಡುಗ, ಅವನಿಗೆ ಇದು ಸಹಜ ಎನ್ನೋದು ಗೊತ್ತಿರಬೇಕು. ಅದನ್ನೆಲ್ಲಾ ಹೇಗೆ ನಾವು ದೊಡ್ಡವರು ಹೇಳೋದು ಹೇಳಿ ಸಾರ್ ಎಂದರು. ವೈದ್ಯರು ಅದರ ಕುರಿತು ವಿವರಿಸಿದ ನಂತರ ಮಗನಿಗೆ ಚಿಕಿತ್ಸೆ ಕೊಡಿಸಲು ಒಪ್ಪಿದರು. ಚಿಕಿತ್ಸೆಯ ನಂತರ ರವಿ ಪೂರ್ಣ ಗುಣಮುಖನಾಗಿ ಚೆನ್ನಾಗಿ ಓದಿ ಪರೀಕ್ಷೆಯಲ್ಲಿ ಒಳ್ಳೆಯ ಅಂಕ ಗಳಿಸಿದನು.

ಹದಿನಾಲ್ಕು ವರ್ಷ ವಯಸ್ಸಿನ ವಿದ್ಯಾರ್ಥಿನಿಯೊಬ್ಬಳು ಹನ್ನೆರಡು ವರ್ಷಕ್ಕೆ ಋತುಮತಿಯಾದಳು. ಏಕಮಾತ್ರ ಪುತ್ರಿ. ಇಷ್ಟು ಬೇಗ ಋತುಮತಿಯಾದಳಲ್ಲಾ, ಎಂದು ಒಂದೆಡೆ ಅಪ್ಪ ಅಮ್ಮನಿಗೆ ಗಾಬರಿ. ಎಷ್ಟೋ ಜನ ಗೆಳತಿಯರು "ಹದಿಮೂರು -ಹದಿನಾಲ್ಕು ವರ್ಷವಾದರೂ ಇನ್ನೂ ಋತುಮತಿಯಾಗಿಲ್ಲ, ಅದು ನಮಗೆ ದೊಡ್ಡ ಚಿಂತೆ ಆಗಿದೆ" ಎಂದು ಹೇಳುವುದನ್ನು ಕೇಳಿದಾಗ, ತಮ್ಮ ಮಗಳು ಋತುಮತಿಯಾದಳು, ತಾನೆಷ್ಟು ಅದೃಷ್ಟವಂತೆ ಎಂದು ಮನದಲ್ಲೇ ತಾಯಿ ಸಂತಸಪಟ್ಟರು. ಹೇಗಿದ್ದರೂ ಮಗಳು ಬುದ್ಧಿವಂತೆ, ಮಗಳಿಗೆ ಋತುಮತಿಯಾಗುವುದರ ಅರ್ಥ ಏನು? ಅದರಿಂದ ಭವಿಷ್ಯದಲ್ಲಿ ಏನಾಗುತ್ತದೆ ಎಂಬುದನ್ನು ಅವಳೇ ತಿಳಿದುಕೊಳ್ಳುತ್ತಾಳೆ. ತಾನು ಹೇಳುವ ಅವಶ್ಯಕತೆ ಇಲ್ಲ ಎಂದು ಮಗಳಿಗೆ ವಿವರಿಸಲೇ ಇಲ್ಲ. ಒಂದು ದಿನ ಮಗಳು (ಹೆಸರು ನಮೂದಿಸುವುದು ಸರಿಯಲ್ಲ, ಆದರೆ ಇದು ನೈಜ ಘಟನೆ) ಇದ್ದಕ್ಕಿದ್ದಂತೆ ಬೆಳಿಗ್ಗೆ ಎದ್ದು, ತನಗೆ ಯಾಕೋ ಏನೋ ಹೊಟ್ಟೆಯಲ್ಲಿ ವಾಕರಿಕೆ ಆಗುತ್ತಿದೆ ಎಂದಳು. ರಾತ್ರಿ ಏನೋ ತಿಂದಿದ್ದು ಅಜೀರ್ಣ ಆಗಿರಬಹುದು ಎಂದು ತಾಯಿ ಮಾತ್ರೆಗಳನ್ನು ಕೊಟ್ಟರು. ಆದರೆ ಮೂರನೇ ದಿನ ಪುನಃ ವಾಂತಿ ಆದಾಗ, ಮಗಳು ಕಳೆದ ಎರಡು ತಿಂಗಳಿಂದ ಮುಟ್ಟಾಗಿಲ್ಲ ಎಂಬುದು ನೆನಪಿಗೆ ಬಂದು ಮಗಳನ್ನು ಕೇಳಿದಳು. ಅದಕ್ಕೆ ಮಗಳು ಏನೇನೋ ಕಾರಣ ಹೇಳಿ ಸುಮ್ಮನಾದಳು. ಮೂರು ದಿನಗಳಾದರೂ ವಾಕರಿಕೆ ನಿಲ್ಲದಿದ್ದಾಗ ವೈದ್ಯರ ಹತ್ತಿರ ಕರೆದೊಯ್ದರು. ವಿದ್ಯಾರ್ಥಿನಿಯನ್ನು ಪರೀಕ್ಷಿಸಿದ ವೈದ್ಯರು ಹುಡುಗಿಯ ರಕ್ತ ಪರೀಕ್ಷೆ ಮಾಡಿದಾಗ, ಮಗಳು ಎರಡು ತಿಂಗಳ ಗರ್ಭಿಣಿ ಎಂದು ತಿಳಿದುಬಂತು. ಇದನ್ನು ತಿಳಿಸಿದಾಗ ತಾಯಿಗೆ ಶಾಕ್. ಅದು ಯಾಕೆಂದು ಮಗಳನ್ನು ವಿಚಾರಿಸಿದಾಗ ತನಗೆ ಫೇಸ್ ಬುಕ್‌ನಲ್ಲಿ ಒಬ್ಬ ಡಿಗ್ರಿ ಹುಡುಗನ ಪರಿಚಯವಾಗಿ ಒಂದು ದಿನ ಇಬ್ಬರೂ ಕಾಫಿಗೆಂದು ಹೋದಾಗ ನಡೆದ ಘಟನೆ ಎಂದು ವಿವರಿಸಿ ಅಳುವುದಕ್ಕೆ ಪ್ರಾರಂಭಿಸಿದಳು. ನಂತರ ಅದನ್ನು ಯಾರಿಗೂ ಹೇಳಬಾರದೆಂದೂ, ಇತರರಿಗೆ ತಿಳಿದರೆ ತಮ್ಮ ಮಾನ ಹೋಗುತ್ತದೆಂದೂ ಕೂಡಲೇ ಗರ್ಭಪಾತ ಮಾಡಿಸಬೇಕೆಂದು ವೈದ್ಯರಿಗೂ ತಿಳಿಸದೇ ಅಲ್ಲಿಂದ ಪಲಾಯನ ಮಾಡಿದರು. ಮುಂದೇನಾಯಿತು ಎಂಬುದರ ಕುರಿತು ವೈದ್ಯರಿಗೂ ಮಾಹಿತಿ ಸಿಗಲಿಲ್ಲ. ಇಂತಹ ಎಷ್ಟೋ ಉದಾಹರಣೆಗಳನ್ನು ತಿಳಿಸಬಹುದು.

ಮೇಲಿನ ಉದಾಹರಣೆಗಳು ಹರೆಯದವರು ಹೇಗೆ ಲೈಂಗಿಕ ಅಜ್ಞಾನದಿಂದ ಬೇರೆಯವರ ಶೋಷಣೆಗಳಿಗೊಳಗಾಗುತ್ತಾರೆ ಎಂಬುದು ಓದುಗರಿಗೆ ಈಗ ಸ್ಪಷ್ಟವಾಗಿರಲು ಸಾಕು.

ಹರೆಯದಲ್ಲಿ ಲೈಂಗಿಕ ಅಂಗಾಂಗಗಳು ವಿಕಾಸಗೊಳ್ಳುತ್ತವೆ. ಇದರಿಂದ ಹರೆಯದವರ ಮನಸ್ಸಿನಲ್ಲಿ ತಡೆಯಲಾಗದ ಗೊಂದಲಗಳುಂಟಾಗುತ್ತದೆ. ಸಂದೇಹಗಳು ಪುಟಿದೇಳುತ್ತವೆ. ಸಂದೇಹಗಳನ್ನು ಹಿರಿಯರ ಅಥವಾ ಗೆಳೆಯರ ಹತ್ತಿರ ಕೇಳಲು ನಾಚಿಕೆ. ಸಾಮಾಜಿಕ ಜಾಲತಾಣಗಳಲ್ಲಿ ತೋರಿಸುವ ದೃಶ್ಯಗಳು ಮನಸ್ಸನ್ನು ಮತ್ತಷ್ಟು ಒತ್ತಡಕ್ಕೀಡು ಮಾಡುತ್ತವೆ. ಇದರಿಂದ ಹಲವಾರು ದುಷ್ಪರಿಣಾಮಗಳಾಗುತ್ತವೆ. ಅದಕ್ಕಾಗಿ ಹರೆಯದವರಿಗೆ ಲೈಂಗಿಕ ವಿಜ್ಞಾನದ ಅರಿವು ಅನಿವಾರ್ಯ.

ಕೆಲವು ದಶಕಗಳ ಹಿಂದೆ ವಿದ್ಯಾರ್ಥಿಗಳಿಗೆ ಲೈಂಗಿಕ ಶಿಕ್ಷಣ ಅವಶ್ಯವೇ ಎಂಬುದರ ಕುರಿತು ಸರ್ಕಾರಿ ಹಂತದಲ್ಲಿ ಚರ್ಚೆ ನಡೆಯಿತು. ಕೆಲವರು ವಿದ್ಯಾರ್ಥಿಗಳಿಗೆ ಲೈಂಗಿಕ ಶಿಕ್ಷಣ ಅವಶ್ಯ ಎಂದು ವಾದಿಸಿದರೆ, ಕೆಲವರು ಅದು ಅಪಾಯ ಎಂದು ವಾದಿಸಿದರು. ಶಾಲೆಗಳಲ್ಲಿ ಯಾವ ಹಂತದಲ್ಲಿ ಲೈಂಗಿಕ ಶಿಕ್ಷಣವನ್ನು ಕೊಡಬೇಕು ಎಂಬುದರ ಕುರಿತು ಪುನಃ ಚರ್ಚೆಯಾಯಿತು. ಪ್ರೌಢಶಾಲಾ ಹಂತದಲ್ಲಿ ಲೈಂಗಿಕ ಶಿಕ್ಷಣ ನೀಡುವುದು ಒಳ್ಳೆಯದು ಎಂದು ತೀರ್ಮಾನಿಸಿದರು. ಅದನ್ನು ವಿದ್ಯಾರ್ಥಿಗಳಿಗೆ ಹೇಳುವುದು ಕಷ್ಟ ಎಂಬ ಅಭಿಪ್ರಾಯ ಉಪಾಧ್ಯಾಯರಿಂದ ಬಂತು. ಅಂತೂ ಈಗ ಲೈಂಗಿಕ ಶಿಕ್ಷಣವನ್ನು ಪಠ್ಯ ಪುಸ್ತಕದಲ್ಲಿ ಅಳವಡಿಸಲಾಗಿದೆ ಎಂಬುದು ಸಮಾಧಾನದ ಸಂಗತಿ.

(ಮುಂದುವರಿಯುವುದು)

ಬಿಡುವಿಲ್ಲ, ಈ ಬೆರಳುಗಳು ಭಲೇ ಬ್ಯುಸಿ!

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com

ನಮ್ಮ ದೇಹದ ಪ್ರತಿಯೊಂದು ಅಂಗಗಳ ಮೇಲೂ ನಮಗೆ ಒಂದಲ್ಲ ಒಂದು ರೀತಿಯ ನಿಯಂತ್ರಣ ಇರುವ ವಿಚಾರ ಗೊತ್ತಿರುವಂಥದ್ದೇ. ಆ ಅಂಗಗಳ ಮೇಲಿನ ಹಾಗೊಂದು ನಿಯಂತ್ರಣದ ಅಗತ್ಯ, ಅವಶ್ಯಕತೆ ಹಾಗೂ ಪರಿಣಾಮಗಳ ಅರಿವೂ ನಮ್ಮಲ್ಲಿ ಬಹುತೇಕರಿಗೆ ಇರುತ್ತದೆ. ಆದಾಗ್ಯೂ ನಮ್ಮ ದೇಹದ ಯಾವುದಾದರೂ ಒಂದು ಅಂಗ ಮಾತ್ರ ನಮ್ಮ ಮಾತನ್ನೇ ಕೇಳದೇ ಆಗಾಗ ತನ್ನದೇ ಚಟುವಟಿಕೆಗಳಲ್ಲಿ - ಚಟುವಟಿಕೆ ಅನ್ನುವುದಕ್ಕಿಂತಲೂ ಕಿತಾಪತಿಯಲ್ಲಿ- ತೊಡಗಿಸಿಕೊಳ್ಳುತ್ತದೆ ಎಂದರೆ ಅದು ನಮ್ಮ ಬೆರಳುಗಳು. "ಇದು ಬೇಡ...., ಅದು ಬೇಡ....., ಬೇಡಪ್ಪಾ ಮಾಡಬೇಡ" ಎಂದು ಅದೆಷ್ಟೇ ಹೇಳಿದರೂ, ಮನಸ್ಸು ಆ ಕುರಿತು ಜಾಗೃತವಾಗಿದ್ದರೂ ಕೂಡಾ ಅವು ಅದು ಹೇಗೋ ನಮ್ಮ ಗಮನವನ್ನು ತಪ್ಪಿಸಿಕೊಂಡು ಒಂದಿಲ್ಲೊಂದು ಇಂಥ ಕೀಟಲೆಗಳಲ್ಲಿ ತೊಡಗಿಸಿಕೊಳ್ಳದೇ ಇರಲಾರವು!

ನೀವು ಸುಮ್ಮನೇ ಇದ್ದರೂ, ನಿಮ್ಮ ಮೆದುಳು ಕೊಂಚ ವಿರಾಮ ತೆಗೆದುಕೊಳ್ಳೋಣ ಅಂದುಕೊಂಡರೂ, ಈ ಬೆರಳುಗಳು ಮಾತ್ರ, 'ಇಲ್ಲ ಇಲ್ಲ, ನಮಗಂತೂ ಏನೂ ಮಾಡದೇ ಸುಮ್ಮನೇ ನಿಶ್ಚಲ ಸ್ಥಿತಿಯಲ್ಲಿ ಇರಲೂ ಸಾಧ್ಯವೇ ಇಲ್ಲ' ಎಂದೆನ್ನುತ್ತಾ ಏನಾದರೊಂದು ಕಾರುಬಾರಿಗೆ ಇಳಿದೇ ಇಳಿಯುತ್ತವೆ. ಆಗಷ್ಟೇ ಶಾಲೆಗೆ ಸೇರಿದ ಪುಟ್ಟ ಪುಟ್ಟ ಮಕ್ಕಳಿಗೆ ಟೀಚರ್, 'ಏನೂ ಮಾಡಬೇಡಿ, ಸುಮ್ಮನೇ ಕುಳಿತುಕೊಳ್ಳಿ, ಮಾತಾಡಬೇಡಿ' ಎಂದು ಅದೆಷ್ಟೇ ಸಲ, ಪರಿ ಪರಿಯಾಗಿ ಹೇಳಿದರೂ ಆ ಪುಟಾಣಿ ಪಿಳ್ಳೆಗಳು ಏನಾದರೊಂದು ನಾನ್‌ಸ್ಟಾಪ್ ಕೆಲಸದಲ್ಲಿ ಇನ್ನಿಲ್ಲದಂತೆ ತೊಡಗಿಸಿಕೊಳ್ಳುತ್ತವಲ್ಲ ಹಾಗೆಯೇ ನಮ್ಮ ಬೆರಳುಗಳು. 'ಐ ಹ್ಯಾವ್ ನಥಿಂಗ್ ಟು ಡೂ' ಎಂದು ಈ ನರಮಾನವರಾದರೂ ಆಗಾಗ ಹೇಳುತ್ತಲೇ ಇರುತ್ತಾರೆ. ಏನೇನೋ ಮಾಡಲು ಇದ್ದರೂ ಮಾಡಲು ಏನೂ ಇಲ್ಲವೇ ಇಲ್ಲ ಎಂದು ನೆಪ ಹೇಳಿಯಾದರೂ ಕೆಲವೊಮ್ಮೆ ಸುಮ್ಮನೇ ಖಾಲಿ ಖಾಲಿಯಾಗಿ ಕುಳಿತುಕೊಳ್ಳುವುದೂ ಇದೆಯೆನ್ನಿ. ಆದರೆ ಈ ನಮ್ಮ ಬೆರಳುಗಳೋ ತಾವೆಂದೂ 'ಐ ಹ್ಯಾವ್ ನಥಿಂಗ್ ಟು ಡೂ' ಎಂದು ಹೇಳಿಕೊಂಡವರೂ ಅಲ್ಲ, ಹಾಗೆ ನಡೆದುಕೊಂಡವರೂ ಅಲ್ಲ ಎಂದು ಪರಮ ಬಿಗುಮಾನದಿಂದ ಹೇಳಿ ಬೀಗಿಕೊಳ್ಳಬಹುದು. ಆ ಮಟ್ಟಿಗೆ ಅವು ಒಂದಿಲ್ಲೊಂದು ಕೆಲಸದಲ್ಲಿ ಸದಾ ವ್ಯಸ್ತ. ಹಾಗಾದರೆ ಈ ಬೆರಳುಗಳು ಬಿಡುವಿನಲ್ಲಿ ಏನೇನು ಮಾಡುತ್ತವೆ? ಬನ್ನಿ ಒಂದೊಂದಾಗಿ ನೋಡೋಣ.

ಬೆರಳುಗಳ ಚೆಂಡೆ-ಮದ್ದಳೆ ನಾದ: ಮಾಡಲು ತಮಗೇನೂ ಕೆಲಸ ಇಲ್ಲ ಎನ್ನುವುದು ಖಾತ್ರಿಯಾದ ತಕ್ಷಣ ಬೆರಳುಗಳು ಮಾಡಲಿಳಿಯುವ ಮೊದಲ ಕೆಲಸವೇ ಸಿಕ್ಕ ಸಿಕ್ಕಲ್ಲಿ ಸಣ್ಣಗೆ ಬಡಿಯುತ್ತಾ, ಸಂಗೀತ ರಸ ಧಾರೆ ಹರಿಸುತ್ತಾ ಯಾವುದೋ ವಾದ್ಯ ತಂಡದ ಸದಸ್ಯರಂತೆ ವರ್ತಿಸುವುದು. ಯಾವ ಮೇಲ್ಮೈ ಆದರೂ ಸರಿಯೇ ಬೆರಳುಗಳಿಗೆ ಅವು ಒಂದು ಬಗೆಯಲ್ಲಿ ಚೆಂಡೆ, ಮದ್ದಳೆ, ತಮಟೆ, ಡ್ರಮ್‌ನಂತೆ ಕಾಣಿಸಲಾರಂಭಿಸುತ್ತವೆ. ಮತ್ತೆ ಆರೆಕ್ಷಣವೂ ತಡಮಾಡದೇ ಬೆರಳುಗಳು ಅವುಗಳ ಮೇಲೆ ಹಾರಿ ಹಾರಿ ಕುಣಿದು, ನೆಗೆಯುತ್ತಾ ಬಗೆ ಬಗೆಯ ಶಬ್ದ ಹೊರಡಿಸುವಲ್ಲಿ ನಿರತರಾಗುತ್ತವೆ. ತಮಾಷೆ ಅಂದರೆ ಬೆರಳುಗಳು ಈ ಪರಿ ಸಂಗೀತ ಕಚೇರಿ, ಪರಸ್ಪರ ಜುಗಲ್‌ಬಂಧಿಯಲ್ಲಿ ತೊಡಗಿಸಿಕೊಂಡರೂ ಅದು ಕೆಲವೊಮ್ಮೆ ನಮಗೇ ಗೊತ್ತಾಗುವುದಿಲ್ಲ!

ಗಡ್ಡ ಸೇವರಿಸೋ 'ದಾಡಿ'ಗಾರ್ಡ್: ಕೆಲಸ ಇಲ್ಲದ ಬೆರಳುಗಳು ಮಾಡೋ ಇನ್ನೊಂದು ಕೆಲಸ ಗಡ್ಡ ಸೇವರಿಸುವುದು. ಆರಂಭದಲ್ಲಿ ನಯವಾಗಿ, ವಿನಯವಾಗಿ ಗಡ್ಡವನ್ನು ಸೇವರಿಸಲಾರಂಭಿಸಿ, ಕ್ರಮೇಣ ಅದು ಪರ ಪರನೇ ಗಡ್ಡ ಕೆರೆಯುವವರೆಗೂ ಮುಂದುವರಿದೀತು. ಸದಾ ಗಡ್ಡದ ಅಕ್ಕಪಕ್ಕವೇ ಸುಳಿದಾಡುವ ಈ ಬೆರಳುಗಳ ನಡೆ ನುಡಿಯನ್ನು ಗಮನಿಸುತ್ತಿದ್ದರೆ, ಇವುಗಳನ್ನು 'ದಾಡಿ'ಗಾರ್ಡ್ ಎಂದು ಕರೆಯಬಹುದು ನೋಡಿ. ಆಲೋಚನೆ, ಅಸಹಾಯಕತೆ, ಕೋಪ, ನಿಟ್ಟುಸಿರು ಹೀಗೆ ಒಂದೊಂದಕ್ಕೂ ಒಂದೊಂದು ರೀತಿಯಲ್ಲಿ ಗಡ್ಡದ ಕಡೆಗೆ ಬೆರಳುಗಳು ದೌಡಾಯಿಸುತ್ತವೆ. ವಿಶೇಷವೆಂದರೆ ಇದಾವುದೂ ಇಲ್ಲದೇ ಇರುವಾಗಲೂ ಆಗಾಗ ಗಡ್ಡವೆಂಬ ಗುಡ್ಡವನ್ನು ಹತ್ತದೇ ಹೋದರೆ ಬೆರಳುಗಳಿಗೆ ಸಮಾಧಾನವೇ ಇರಲಾರದು.

ಪರಿ ಪರಿ ಪೆನ್ ಆಟ: ಅತ್ಯಂತ ಗಂಭೀರವಾಗಿ ನಡೆಯುತ್ತಿದ್ದ ಮೀಟಿಂಗ್ ಒಂದು ನೀರಸವಾಗುತ್ತಿರುವುದರ ನಿಜ ದ್ಯೋತಕ ಯಾವುದು ಗೊತ್ತೇ? ಯಾವುದೆಂದರೆ ಆ ಮೀಟಿಂಗ್‌ನಲ್ಲಿ ಭಾಗಿಯಾದವರ ಬೆರಳುಗಳು ಪೆನ್ ಜೊತೆಗೆ ಆಟಕ್ಕೆ ಇಳಿಯುವುದು. ಅಷ್ಟೊತ್ತೂ ಸುಮ್ಮನೇ ಎಲ್ಲೋ ನೋಟ್‌ಪ್ಯಾಡ್ ಅಥವಾ ಡೈರಿಯ ನಡುವಿನಲ್ಲಿದ್ದ ಪೆನ್ನು ಬೆರಳುಗಳ ಸುಪರ್ದಿಗೆ ಬಂದು, ಬೆರಳುಗಳು ಒಂದೇ ಸಮನೆ ಪೆನ್‌ನ ಜೊತೆಗೆ ಸರಸ ಸಲ್ಲಾಪಕ್ಕೆ ಇಳಿದಿವೆ ಎಂದರೆ ಮೀಟಿಂಗ್ ಬೋರ್ ಹೊಡೆಸಲಾರಂಭಿಸಿದೆ ಎಂದೇ ಅರ್ಥ. ಬೆರಳುಗಳು ಪೆನ್ನನ್ನು ಅತ್ತಿಂದಿತ್ತ ಲಾಗ ಹಾಕಿಸುತ್ತಾ ಥೇಟ್ ಜಿಮ್ನಾಸ್ಟಿಕ್ ಪಟುವಿನಂತೆ ನಡೆಸಿಕೊಳ್ಳಲಾರಂಭಿಸುತ್ತವೆ ಹಾಗೂ ಲೆಕ್ಕವಿಲ್ಲದಷ್ಟು ಸಲ ಸುಮ್ಮ ಸುಮ್ಮನೆ 'ಟಿಕ್ ಟಾಕ್.. ಟಿಕ್ ಟಾಕ್' ಎಂದು ಕ್ಲಿಕ್ ಮಾಡಿಸಿಕೊಳ್ಳಬೇಕಾದ ಅನಿವಾರ್ಯತೆ ಅವುಗಳದ್ದು.

ಸರಿ ಸರಿ ಕೂದಲ ಸರಿಸು: ವಾಹನಗಳಲ್ಲಿ ವೈಪರ್‌ಗಳಿರುತ್ತವೆ. ಗಾಜಿನ ಮೇಲೆ ಬೀಳುವ ನೀರನ್ನು ಬದಿಗೆ ಸಾರಿಸುವುದು ಅವುಗಳ ಕೆಲಸ. ಕೆಲವರ ಬೆರಳುಗಳದ್ದೂ ಅದೇ ಕೆಲಸ. ಅದರಲ್ಲಿ ಎರಡು ವಿಧಗಳು. ಆಗಾಗ ಮುಖಕ್ಕೆ ಅಡ್ಡ ಬರುವ ಕೂದಲನ್ನು ಥಟ್ಟನೇ ಬದಿಗೆ ಸರಿಸುವುದು ಒಂದಾದರೆ, ಇನ್ನೊಂದು ಕೂದಲು ಅಡ್ಡ ಬರದಿದ್ದರೂ ಸುಮ್ಮನೇ ಆಗಾಗ ಸರಿಸದೇ ಹೋದರೆ ಅದೇನೋ ಬೆರಳುಗಳಿಗೆ ಸಮಾಧಾನವೇ ಇಲ್ಲ, ಮತ್ತೆ ಮತ್ತೆ ಇಳಿಯುತ್ತದೆ ಎಂದು ಗೊತ್ತಿದ್ದರೂ ಸರಿಸುವ ಈ ಕಾಯಕದಲ್ಲಿ ಬೆರಳುಗಳು ಭಾರೀ ಬ್ಯುಸಿ.

ನಟಿಕೆ ಮುರಿಯೋಣು ಬಾ: ಬೆರಳುಗಳು ತಮ್ಮ ಈ ಬಗೆಯ ಕೀಟಲೆಗಳಿಗೆ ಬೇರೆ ವಸ್ತು ಅಥವಾ ಸಾಮಾಗ್ರಿಯ ಸಾಥ್ ದೊರಕದೇ ಇದ್ದಾಗ ಅವು ತಮ್ಮಲ್ಲೇ ಏನಾದರೂ ಬದಲೀ ವ್ಯವಸ್ಥೆ ಮಾಡಿಕೊಳ್ಳಲು ಮುಂದಾಗುತ್ತವೆ. ಅದರ ಪರಿಣಾಮವೇ ನಟಿಕೆ ಮುರಿಯೋದು. ಈ ಕೈಯ ಬೆರಳಿನಿಂದ ಆ ಕೈಯ ಬೆರಳುಗಳ, ಹಾಗೂ ಆ ಕೈಯ ಬೆರಳಿನಿಂದ ಈ ಕೈಯ ಬೆರಳುಗಳ ನಟಿಕೆ ಮುರಿಯುವ ವೈಖರಿ ನೀ ನನಗಾದರೆ ನಾ ನಿನಗಾಗುವೆ ಎಂಬ ತತ್ವವನ್ನು ನೆನಪಿಸುವಂತಿದೆ. ಮುರಿಯುವುದು ಒಳ್ಳೆಯದಲ್ಲ ಎಂದರೂ ಈ ನಟಿಕೆ ಮುರಿಯುವುದು ಅವುಗಳ ಪ್ರಕಾರ ಆ ಪರಿಧಿಯ ಹೊರಗೆ ನಿಲ್ಲುವಂಥದ್ದು.

ನಿಲ್ಲದ ಉಗುರು ಕಚ್ಚಾಟ: ಗುರುತರ ಹೊಣೆಗಾರಿಕೆ ಇರುವ ಬಗ್ಗೆ ಕೇಳಿರುತ್ತೇವೆ. ಆದರೆ ಎಲ್ಲೋ ಕೆಲವರಲ್ಲಿ ಒಂದು ಬಗೆಯ 'ಉಗುರು'ತರ ಹೊಣೆಯೂ ಇದೆ ಎನ್ನುವುದನ್ನು ಹೊರ ಪ್ರಪಂಚಕ್ಕೆ ಸಾಧಿಸಿ ತೋರಿಸುವ ದೀಕ್ಷೆ ತೊಟ್ಟಿರುವಂತೆ ಬೆರಳುಗಳು ತಮ್ಮ ಉಗುರನ್ನು ಕಚ್ಚುವಂತೆ ಮತ್ತೆ ಮತ್ತೆ ಹಲ್ಲಿಗೆ ಸುಪಾರಿ ನೀಡುತ್ತವಿರಬೇಕು. ಉಗುರು ಕತ್ತರಿಸಿಕೊಳ್ಳಲು ಬಿಡುವು ಮಾಡಿಕೊಳ್ಳುವ ಬದಲಾಗಿ, ಚೂರೇ ಚೂರು ಬಿಡುವು ಸಿಕ್ಕರೂ ಹೀಗೆ ಉಗುರು ಒಂದೇ ಸಮನೆ ಕತ್ತರಿಸಿಕೊಳ್ಳಲ್ಪಡುವುದರಿಂದ ಆ ಉಗುರುಗಳ ನಿರ್ನಾಮವೇ ಆಗಿರುತ್ತದೆ. ಉಗುರು ಕಚ್ಚುವುದು ಒಳ್ಳೆಯ ಅಭ್ಯಾಸವಲ್ಲ ಎಂದು ಯಾರೇ ಗುರ್ರ್ ಎಂದರೂ ಬೆರಳುಗಳು ಅದಕ್ಕೆಲ್ಲಾ ಸೊಪ್ಪು ಹಾಕದೇ, ಈ ಕಚ್ಚುವ ಕ್ರಿಯೆಗೆ ಶರಣಾಗುತ್ತಲೇ ಇರುತ್ತವೆ.

ಆಗೆಯುವ ಕೆಲಸ ಪ್ರಗತಿಯಲ್ಲಿದೆ: ಬೆರಳುಗಳು ತಮಗಿನ್ನು ಬಿಡುವು ಎಂದಾಕ್ಷಣ ಅವು ಕೇವಲ ಬೆರಳಾಗಿ ಉಳಿಯದೇ ಅಕ್ಷರಶಃ ಡ್ರಿಲ್ಲಿಂಗ್ ಯಂತ್ರವೇನೋ ಎನಿಸುವಂತೆ ಪರಿವರ್ತನೆ ಹೊಂದುವುದೂ ಇದೆ. ಆಗಾಗ ಹೀಗೆ ಮೂಗು, ಕಿವಿಯ ತೂಳೆತ್ತದೇ ಹೋದರೆ, ಬೆರಳುಗಳು ತಮ್ಮ ಬಿಡುವಿನ ಸಮಯ ಸಾಗುವುದೇ ಇಲ್ಲವೇನೋ ಎನ್ನುವುದನ್ನು ನಿರ್ಧರಿಸಿದಂತೆ ವರ್ತಿಸುತ್ತವೆ. ಬೆರಳಿನ ಈ ಕ್ರಿಯೆ ಅದೆಷ್ಟೋ ಬಾರಿ ಮುಜುಗರಕ್ಕೆ ಕಾರಣವಾದರೂ ಅವು ಮಾತ್ರ, ಜಗ್ಗುವ ಮಾತೇ ಇಲ್ಲ ಎಂದೆನ್ನಬಹುದು. ಇದೋ ಎಂದೂ ಪೂರ್ಣಗೊಳ್ಳದ ಕಾಮಗಾರಿ ಎಂದರೆ ಬಹುಶಃ ಯಾರೂ ಮೂಗುಮುರಿಯಲಿಕ್ಕಿಲ್ಲ.

ಮೊಬೈಲ್ ಮೇಲೆ ನಲಿದಾಡೋ: ಈ ಮೇಲೆ ಹೇಳಿದ್ದೆಲ್ಲವನ್ನೂ ಮೀರಿಸುವಂತೆ ಬೆರಳು ಇನ್ನೊಂದು ಬಹುಮುಖ್ಯ ಕೆಲಸದಲ್ಲಿ ಸದಾ ನಿರತವಾಗಿರುತ್ತದೆ. ಅದುವೇ ಮೊಬೈಲ್ ಮೇಲೆ ನಲಿದಾಡುವುದು. ಅದನ್ನು ಸುಮ್ಮನೆ ಕೈಯಲ್ಲಿ ಎತ್ತಿಕೊಳ್ಳುವುದು, ಸ್ಕ್ರೀನ್ ನೋಡುವುದು, ಪವರ್ ಆನ್ ಮಾಡುವುದು, ಮತ್ತೆ ಅನ್‌ಲಾಕ್ ಮಾಡುವುದು, ಹತ್ತು-ಹದಿನೈದು ಸೆಕೆಂಡ್ ಬಿಟ್ಟು ಲಾಕ್ ಮಾಡಿ ಬದಿಗಿರಿಸುವುದು. ಅದಾಗಿ ಐದಾರು ನಿಮಿಷವೂ ಆಗಿರುವುದಿಲ್ಲ, ಮತ್ತೊಮ್ಮೆ ಅದೆಲ್ಲವನ್ನೂ ಇನ್ನೊಮ್ಮೆ ಸರಣಿಯಂತೆ ಮಾಡಿ ಮುಗಿಸುವುದು. ಹೀಗೆ ಇನ್ನೊಂದು, ಮತ್ತೊಂದು, ಮಗದೊಂದು ಸಿರೀಸ್ ಮುಂದುವರಿಯುತ್ತಲೇ ಇರುತ್ತದೆ, ನಿಜವಾಗಿಯೂ ಏನಾದರೊಂದು ಮಾಡಲೇಬೇಕಾದ ಕೆಲಸ ಸಿಕ್ಕುವ ತನಕವೂ. ಮೊಬೈಲ್‌ನ ಕಾರಣದಿಂದ ಬೆರಳುಗಳಿಗಂತೂ ಈಗ ಫುಲ್ ಟೈಮ್ ಎಂಪ್ಲಾಯ್‌ಮೆಂಟ್ ಎಂದರೆ ತಪ್ಪಾಗಲಾರದು!

ಈಗ ಸುಮ್ಮನೆ ಯೋಚಿಸಿ. ನೀವು ಏನೇನೂ ಕೆಲಸವಿಲ್ಲವೆಂದು ಭಾರೀ ಬಿಡುವಿನ, ರಿಲ್ಯಾಕ್ಸ್ ಮೂಡ್‌ನಲ್ಲಿ ಇರುವಾಗ, ನಿಮ್ಮ ಅಣತಿಗೆ ಕಾಯದ ಬೆರಳುಗಳು ಇನ್ನು ಅದ್ಯಾವ್ಯಾವ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತವೆ ಎನ್ನುವುದನ್ನು ಒಂದೊಂದಾಗಿ ಗುರುತಿಸಿ ನೋಡೋಣ.

ಓವರ್‌ಡೋಸ್: ಎಲ್ಲರೂ ಉದ್ಯೋಗ ಸೃಷ್ಟಿಯ ಬಗ್ಗೆ ಮಾತನಾಡುತ್ತಾರೆ. ಆದರೆ ತಮಗೆ ಬೇಕಾದ ಉದ್ಯೋಗವನ್ನು ತಾವೇ ಸೃಷ್ಟಿಸಿಕೊಳ್ಳುವ ಸ್ವಾವಲಂಬನೆಯನ್ನು ಸಾಧಿಸುವಲ್ಲಿ ಬೆರಳುಗಳು ಎಂದೋ ಯಶಸ್ವಿಯಾಗಿವೆ!

ಕಿರುಸುದ್ದಿ

ಮಕ್ಕಳು ಒಂದು ದೇಶದ ಆಸ್ತಿ: ವಿಜಯಾ



• **ಚನ್ನರಾಯಪಟ್ಟಣ:** ಮಕ್ಕಳು ಒಂದು ದೇಶದ ಆಸ್ತಿ. ಈ ಆಸ್ತಿಯನ್ನು ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ನಾವೆಲ್ಲರೂ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಿ ಮಕ್ಕಳನ್ನು ದೇಶದ ಶ್ರೇಷ್ಠ ಆಸ್ತಿಯನ್ನಾಗಿ ಮಾಡೋಣ ಎಂದು ಸಮಾಜ ವಿಜ್ಞಾನ ಶಿಕ್ಷಕಿ ವಿಜಯಾ ಕರೆ ನೀಡಿದರು. ತಾಲೂಕಿನ ದಂಡಿಗನಹಳ್ಳಿ ಹೋಬಳಿ ಆನೆಕೆರೆ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ವಿಶ್ವ ಬಾಲಕಾರ್ಮಿಕ ವಿರೋಧಿ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಮುಖ್ಯಗುರುಗಳಾದ ಉಮೇಶ್ ವಹಿಸಿದ್ದರು. ವಿದ್ಯಾರ್ಥಿನಿ ಕುಮಾರಿ ಭೂಮಿಕಾ ಬಾಲಕಾರ್ಮಿಕ ವಿರೋಧಿ ದಿನದ ಉದ್ದೇಶಗಳನ್ನು ವಿವರಿಸಿದರು.

ಶಿಕ್ಷಕ ಸುರೇಶ್ ಕುಮಾರ್ ಮಾತನಾಡಿ, ಮಕ್ಕಳ ರಕ್ಷಣೆ ನಮ್ಮೆಲ್ಲರ ಹೊಣೆ ಎಂದು ತಿಳಿಸುತ್ತಾ, ಶಾಲೆಯಲ್ಲಿ ಮಕ್ಕಳ ಸುರಕ್ಷತೆಗಾಗಿ ಹಮ್ಮಿಕೊಂಡಿರುವ ವಿವಿಧ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ಶಿಕ್ಷಕಿ ಕಲಾವತಿ ಅವರು ನೆರೆದಿದ್ದ ಎಲ್ಲರಿಗೂ ಬಾಲಕಾರ್ಮಿಕ ವಿರೋಧಿ ದಿನದ ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕರಾದ ನಾಗರಾಜು, ಎಂ.ಆರ್. ದೊರೆಸ್ವಾಮಿ, ಆಶಾರಾಣಿ, ದಿಲೀಪ್ ಎಸ್.ಕೆ. ಸೇರಿದಂತೆ ಇತರರು ಉಪಸ್ಥಿತರಿದ್ದರು.

ಆರೋಗ್ಯ ಉಚಿತ ತಪಾಸಣೆ



• **ಚನ್ನರಾಯಪಟ್ಟಣ:** ರೋಗಗಳು ಬಂದ ಮೇಲೆ ಸಂಕಷ್ಟ ಅನುಭವಿಸುವುದಕ್ಕಿಂತಲೂ, ರೋಗ ಬಾರದಂತೆ ಶಿಸ್ತುಬದ್ಧ ಜೀವನಶೈಲಿ ರೂಢಿಸಿಕೊಳ್ಳುವುದು ಮತ್ತು ಮುನ್ನೆಚ್ಚರಿಕೆ ವಹಿಸುವುದು ಮುಖ್ಯ, ಎಂದು ರಾಜ್ಯ ಮಾರಾಟ ಮಹಾಮಂಡಲದ ನಿರ್ದೇಶಕ ಸಿ.ಎನ್. ಪುಟ್ಟಸ್ವಾಮಿಗೌಡ ತಿಳಿಸಿದರು.

ಪಟ್ಟಣದ ಕಂಟ್ರಾಕ್ಟರ್ ಅಸೋಸಿಯೇಷನ್ ಅಂಡ್ ಕ್ಲಬ್ ತನ್ನ 200 ಮಂದಿ ಸದಸ್ಯರಿಗಾಗಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣೆ, ನೇತ್ರ ಪರೀಕ್ಷೆ ಹಾಗೂ ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಕ್ಲಬ್ ಕಳೆದ 22 ವರ್ಷಗಳಿಂದ ಕೇವಲ ಮನರಂಜನೆಗೆ ಸೀಮಿತವಾಗದೆ ಕಲೆ, ಕ್ರೀಡೆ, ಸಾಹಿತ್ಯ ಹಾಗೂ ರಂಗಭೂಮಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಮಾಜಮುಖಿ ಕೆಲಸಗಳನ್ನು ಮಾಡುತ್ತಾ ಬಂದಿದೆ ಎಂದರು.

ಕ್ಲಬ್ ಅಧ್ಯಕ್ಷ ತೋಪೇಗೌಡ ಮಾತನಾಡಿ, ಕ್ಲಬ್ ಆರಂಭವಾಗಿ 22 ವರ್ಷಗಳಾಗಿದ್ದು, ಸದಸ್ಯರ ಉತ್ತಮ ಆರೋಗ್ಯದ ದೃಷ್ಟಿಯಿಂದ ಮೊದಲ ಬಾರಿಗೆ ಈ ಆರೋಗ್ಯ ತಪಾಸಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಕ್ಲಬ್‌ನ ಗೌರವಾಧ್ಯಕ್ಷ ಸಿ.ವೈ. ಪ್ರವೀಣ್, ಉಪಾಧ್ಯಕ್ಷರಾದ ಯೋಗಣ್ಣ, ಎನ್. ರಂಗಸ್ವಾಮಿ, ಕಾರ್ಯದರ್ಶಿ ಎಸ್.ಎಲ್. ರಮೇಶ್, ಜಂಟಿ ಕಾರ್ಯದರ್ಶಿ ಪಿ.ಜೆ. ರಾಮಕೃಷ್ಣೇಗೌಡ, ಖಜಾಂಚಿ ಸಿ.ಎನ್. ಪಾಂಡು, ನಿರ್ದೇಶಕರಾದ ವೆಂಕಟೇಗೌಡ, ಕೆ.ಎನ್. ಶಂಕರ್, ರಾಜು, ಧರಣೇಶ್, ಗಂಗಾಧರ್, ಸಿ.ಆರ್. ನಂಜಪ್ಪ, ರಾಜ್ಯ ಸಂಘಟನಾ ಕಾರ್ಯದರ್ಶಿ ಎಸ್.ಬಿ. ಜಗದೀಶ್ ಹಾಗೂ ಡಾ. ಮಹೇಶ್ ಉಪಸ್ಥಿತರಿದ್ದರು.

ಹೇಮಾವತಿ ಹಿನ್ನೀರಿನಲ್ಲಿ ಈಜಲು ಹೋಗಿ ಮೂವರ ಸಾವು

• **ಹಾಸನ:** ಪ್ರವಾಸಕ್ಕೆಂದು ಬಂದು, ಈಜಲು ನದಿಗೆ ಇಳಿದಿದ್ದ ಬೆಂಗಳೂರು ಮೂಲದ ಮೂವರು ಯುವಕರು ನೀರುಪಾಲಾಗಿರುವ ದಾರುಣ ಘಟನೆ ಹಾಸನ ತಾಲ್ಲೂಕಿನ ಶೆಟ್ಟಿಹಳ್ಳಿ ಚರ್ಚ್ ಸಮೀಪದ ಹೇಮಾವತಿ ಜಲಾಶಯದ ಹಿನ್ನೀರಿನಲ್ಲಿ ನಡೆದಿದೆ. ನೀರಿನಲ್ಲಿ ಮುಳುಗಿ ಮೃತಪಟ್ಟ ಯುವಕರನ್ನು ಚರಣ್ (20), ಮಿಲನ್ (23) ಹಾಗೂ ಮಣಿಕಂಠ (20) ಎಂದು ಗುರುತಿಸಲಾಗಿದೆ. ಬೆಂಗಳೂರು ಮೂಲದ ಒಟ್ಟು ಹತ್ತು ಜನ ಯುವಕರ ತಂಡವೊಂದು ಟಿಟಿ ವಾಹನದಲ್ಲಿ ಧರ್ಮಸ್ಥಳಕ್ಕೆ ಪ್ರವಾಸಕ್ಕೆಂದು ತೆರಳಿ ದೇವರ ದರ್ಶನ ಮುಗಿಸಿ ಹಿಂತಿರುಗುವ ಮಾರ್ಗಮಧ್ಯೆ, ಹಾಸನ ಜಿಲ್ಲೆಯ ಹೇಮಾವತಿ ಹಿನ್ನೀರಿನಲ್ಲಿರುವ ಪ್ರಸಿದ್ಧ ಶೆಟ್ಟಿಹಳ್ಳಿ ಚರ್ಚ್ ವೀಕ್ಷಿಸಲು ಬಂದಿದ್ದರು.

ಈ ವೇಳೆ ಚರ್ಚ್ ಬಳಿಯ ಹೇಮಾವತಿ ನದಿಯ ಹಿನ್ನೀರಿನಲ್ಲಿ ಯುವಕರು ಈಜಲು ನೀರಿಗೆ ಇಳಿದಿದ್ದಾರೆ. ನೀರಿಗೆ ಇಳಿದ ಯುವಕರಲ್ಲಿ ಮೃತಪಟ್ಟ ಮೂವರಿಗೆ ಈಜು ಬರುತ್ತಿರಲಿಲ್ಲ ಎನ್ನಲಾಗಿದೆ. ನೀರಿನ ಆಳದ ಅರಿವಿಲ್ಲದೆ ಇಳಿದ ಪರಿಣಾಮ ಚರಣ್, ಮಿಲನ್ ಮತ್ತು ಮಣಿಕಂಠ ನೀರಿನಲ್ಲಿ ಮುಳುಗಲಾರಂಭಿಸಿದ್ದಾರೆ. ತಮ್ಮ ಮೂವರು ಸ್ನೇಹಿತರು ಕಣ್ಣುಂದೆಯೇ ನೀರಿನಲ್ಲಿ ಮುಳುಗುತ್ತಿರುವುದನ್ನು ಕಂಡು ಆಘಾತಗೊಂಡ ಉಳಿದ ಸ್ನೇಹಿತರು, ಕೂಡಲೇ ದಡಕ್ಕೆ ಬಂದು ರಕ್ಷಣೆಗಾಗಿ ಕಿರುಚಾಡಿದ್ದಾರೆ. ಆದರೆ, ಅಷ್ಟರಲ್ಲಾಗಲೇ ಆ ಮೂವರೂ ಯುವಕರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಘಟನೆಯ ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಗೊರೂರು ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಆಟೋ ಚಾಲಕರಿಗೆ ಅಕ್ಕಿ ವಿತರಿಸಿದ ಜಿಲ್ಲಾ ನೋಡಲ್ ಅಧಿಕಾರಿ ನವೀನ್ ಚಂದ್ರ

ಚಾಲಕರಿಂದ ಕುಡಿವ ನೀರಿನ ಘಟಕ ಉದ್ಘಾಟನೆ



• **ಕೋಲಾರ:** ನಗರದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಬಳಿ ತ್ರಿಚಕ್ರ ವಾಹನ ಚಾಲಕರ ಸಂಘದ ವತಿಯಿಂದ ಉಚಿತ ಕುಡಿಯುವ ನೀರಿನ ತಣ್ಣೀರ ಚಪ್ಪರ ಉದ್ಘಾಟನೆಗೆ ಹಾಗೂ ಆಟೋ ಚಾಲಕರಿಗೆ ಅಕ್ಕಿ ವಿತರಣೆಯನ್ನು ಜಿಲ್ಲಾ ನೋಡಲ್ ಅಧಿಕಾರಿಗಳು, ನಗರಾಭಿವೃದ್ಧಿ ಕೋಶ ಜಿ. ನವೀನ ಚಂದ್ರ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿ, ಆಟೋಚಾಲಕರು ಇತ್ತೀಚಿನ ಗಲ್ಫ್ ಯುದ್ಧದ ಪರಿಣಾಮ ತೈಲೋತ್ಪನ್ನಗಳ ಬೆಲೆ ಹೆಚ್ಚಳ ದಿಂದಾಗಿ ಆಟೋ ರಿಕ್ಷಾ ನಡೆಸುವುದು ಕಷ್ಟವಾಗಿದ್ದು, ಗೃಹ ಉಪಯೋಗಿ ಗ್ಯಾಸ್ ಬೆಲೆ ಏರಿಕೆಯಿಂದ ಕುಟುಂಬ ನಿರ್ವಹಣೆ ದುಸ್ತರದ ಪರಿಸ್ಥಿತಿಯಲ್ಲಿ ಆಟೋ ಚಾಲಕರಿಗೆ ಅಕ್ಕಿವಿತರಣೆ ಮಾಡುತ್ತಿರುವುದು ಶ್ಲಾಘನೀಯ ವಾಗಿದ್ದು,

ಈ ಚಾಲಕರು ಜಿಲ್ಲೆ ಎಂ.ವಿ ರವಿ ಯವರ ನಿರ್ದೇಶನದಂತೆ ಸ್ವಯಂ ಪ್ರೇರಿತರಾಗಿ ಕುಡಿಯುವ ನೀರಿನ ಘಟಕ ಪ್ರಾರಂಭಿಸಿ ವರ್ಷದ 365 ದಿನ ಉಚಿತ ನೀರಿನ ವ್ಯವಸ್ಥೆ ಮಡಿರುವುದು ಇವರ ಸೇವಾ ಮನೋಭಾವಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಾನೂ ಸಹ ಆಟೋ ಚಾಲಕರ ಕುಟುಂಬದಿಂದ ಬಂದಿದ್ದು, ನಮ್ಮ ತಂದೆ ಚಿಂತಾಮಣಿಯಲ್ಲಿ ಆಟೋ ಚಾಲಕರ ಸಂಘದ ಸ್ಥಾಪಕ ಗೋಪಾಲ ಅಧ್ಯಕ್ಷರಾಗಿದ್ದು, ನಂತರ ಪುರಸಭೆಯ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದು, ನನಗೆ ಹೆಮ್ಮೆ ತಂದಿದೆ ಎಂದು ಬಣ್ಣಿಸಿದರು.

ಕರ್ನಾಟಕ ರಾಜ್ಯ ಆಟೋ ಚಾಲಕರ ಸಂಘದ ರಾಜ್ಯ ಅಧ್ಯಕ್ಷರು ಹಾಗೂ ಕರ್ನಾಟಕ ಪ್ರದೇಶ ಅಸಂಘಟಿತ ಕಾರ್ಮಿಕ ಪರಿಷತ್ ಅಧ್ಯಕ್ಷ ಕೆ.ವಿ ಸುರೇಶ್ ಕುಮಾರ್ ಮಾತನಾಡಿ, ಸುಮಾರು 40 ವರ್ಷ ಹೋರಾಟದ ಫಲವಾಗಿ ಸರ್ಕಾರದ ಮಟ್ಟದಲ್ಲಿ ಕರ್ನಾಟಕ ರಾಜ್ಯ ವಾಣಿಜ್ಯ ವಾಹನ ಚಾಲಕರ ಕಲ್ಯಾಣ ಮಂಡಳಿ ರಚನೆಯಾಗಿದ್ದು, ನೋಂದಾಯಿತ ಆಟೋ ಚಾಲಕರಿಗೆ ಸರ್ಕಾರದ ವತಿಯಿಂದ ಸಾಮಾಜಿಕ ಭದ್ರತಾ ಯೋಜನೆಗಳು ಜಾರಿಯಾಗುತ್ತಿದೆ ಎಂದರು. ಕರ್ನಾಟಕ ಸರ್ಕಾರ ಕರೋನಾ ಸಂದರ್ಭದಲ್ಲಿದಂತೆ ಈ ಜಾಗತಿಕ ಯುದ್ಧ ಸಂದರ್ಭದಲ್ಲಿ ತೈಲ ಬೆಲೆ ಹೆಚ್ಚಳವಾಗಿರುವುದರಿಂದ ಚಾಲಕರಿಗೆ 10 ಸಾವಿರ ರೂಗಳ ನೆರವು ನೀಡಿವುವ ಮೂಲಕ ಚಾಲಕರ ಕುಟುಂಬದ ಪೋಷಣೆಯ ನೆರವಿಗೆ ಧಾವಿಸಬೇಕೆಂದು ಆಗ್ರಹಿಸಿದರು.

ನಗರಸಭಾ ಮಾಜಿ ಸದಸ್ಯ ಕೆ.ವಿ ಮಂಜುನಾಥ ರವರು ಮಾತನಾಡಿ ಚಾಲಕರಿಗೆ ನಿವೇಶನಗಳನ್ನು ವಿತರಿಸಬೇಕೆಂದು ಸಹಕಾರ ಸಂಘ ಪ್ರಾರಂಭಿಸಲು ಸಲಹೆ ನೀಡಿದರು.

ಮಾಜಿ ನಗರಸಭಾ ಸದಸ್ಯ ಡೆಕೊರೇಷನ್ ಕೃಷ್ಣ, ಎನ್ ಮುನಿಸ್ವಾಮಿ, ತ್ರಿ. ಚ.ವಾ.ಚಾ.ಅಧ್ಯಕ್ಷ ಜಿ. ಮಂಜುನಾಥ, ಪ್ರಧಾನ ಕಾರ್ಯದರ್ಶಿ ಪಿ. ಸುಧಾಕರ, ಮುಖ್ಯ ಕರಾದ ಸೂರಿ-ಒಬಿಲಿ ಮಂಜು ಹಾಗೂ ಮುರಳಿ, ಮಲ್ಲಿಕಾರ್ಜುನ, ಹರೀಶ್, ಸತೀಶ ಮತ್ತು ಮುಂತಾದ ಎಲ್ಲಾ ಆಟೋ ಚಾಲಕರು ಭಾಗವಹಿಸಿದ್ದರು. ಗುರುತಿನ ಚೀಟಿ ಪಡೆದುಕೊಂಡ ಚಾಲಕರು ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು- ಅಫಘಾತದಿಂದ ಆಸ್ಪತ್ರೆ, ಚಿಕಿತ್ಸೆಗೆ 2 ಲಕ್ಷ ರೂಗಳ ವರೆಗೆ ನೆರವು- ಅಫಘಾತದಿಂದ ಮರಣ ಹೊಂದಿದರೆ 5 ಲಕ್ಷ ರೂಗಳ ವರೆಗೆ ಪರಿಹಾರ- ಸಹಜ ಮರಣ ಹೊಂದಿದರೆ 25 ಸಾವಿರ ರೂಗಳ ಅಂತ್ಯ ಕ್ರಿಯೆಗೆ ನೆರವು ಪಡೆಯಲು ಕೋರಿದರು. ಜಿ. ನವೀನ ಚಂದ್ರ, ಜಿಲ್ಲಾ ನೋಡಲ್ ಅಧಿಕಾರಿಗಳು, ನಗರಾಭಿವೃದ್ಧಿ ಕೋಶ

ವಿದ್ಯಾರ್ಥಿಗಳಿಗೆ ಪುರಸ್ಕಾರ



• **ಬೇಲೂರು:** ಸಂಘಟನೆಯ ಒಗ್ಗಟ್ಟು, ಪ್ರಾಮಾಣಿಕ ಸೇವೆ ಹಾಗೂ ಸದಸ್ಯರ ನಿರಂತರ ಸಹಕಾರ ದಿಂದ ಹೊಯ್ಸಳ ವಿದ್ಯುತ್ ಉಪಕರಣಗಳ ರಿಪೇರಿದಾರರ ಕಾರ್ಮಿಕರ ಸಂಘವು ಇಡೀ ರಾಜ್ಯದಲ್ಲೇ ಮಾದರಿಯಾಗಿ ಗುರುತಿಸಿಕೊಂಡಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಶಶಿಕುಮಾರ್ ಉಪ್ಪೋರ್ ಶ್ಲಾಘಿಸಿದರು.

ಪಟ್ಟಣದಲ್ಲಿ ಆಯೋಜಿಸಿದ್ದ ಸಂಘದ ಬೇಲೂರು ಘಟಕದ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮುಖ್ಯ ಅತಿಥಿಯಾಗಿದ್ದ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಬಿ.ಬಿ. ಶಿವರಾಜು ಮಾತನಾಡಿ, ಸಂಘವು ವ್ಯಾಪಾರವನ್ನು ಕೇವಲ ಲಾಭದ ದೃಷ್ಟಿಯಿಂದ ನೋಡದೆ, ಉತ್ತಮ ಗುಣಮಟ್ಟದ ಸೇವೆ ನೀಡುವ ಮೂಲಕ ಸಾರ್ವಜನಿಕರ ವಿಶ್ವಾಸಗಳಿಸಿದೆ ಎಂದರು. ತಾಲೂಕು ಕಾರ್ಮಿಕ ಇಲಾಖೆ ಅಧಿಕಾರಿ ಶಶಿಕಲಾ ಅವರು ಮಾತನಾಡಿ, ವಿದ್ಯುತ್ ಉಪಕರಣಗಳ ರಿಪೇರಿ ವೇಳೆ ಅಪಘಾತಗಳನ್ನು ತಪ್ಪಿಸಲು ಕೆಲಸದ ಸಮಯದಲ್ಲಿ ಮೊಬೈಲ್ ಬಳಕೆಯನ್ನು ಕಡ್ಡಾಯವಾಗಿ ತ್ಯಜಿಸಬೇಕು ಎಂದು ಸಲಹೆ ನೀಡಿದರು. ಇದೇ ಸಂದರ್ಭದಲ್ಲಿ ಎಸ್ ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳಿಸಿದ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಪುರಸ್ಕಾರ ನೀಡಿ ಗೌರವಿಸಲಾಯಿತು.

ಬಿ.ಬಿ. ಶಿವರಾಜು ಮಾತನಾಡಿ,ಅನರ್ಹರು ಕಾರ್ಮಿಕ ಕಾರ್ಡ್ ಹೊಂದುವುದರಿಂದ ನೈಜ ಕಾರ್ಮಿಕರು ಸರ್ಕಾರದ ಸೌಲಭ್ಯಗಳಿಂದ ವಂಚಿತ ರಾಗುತ್ತಿದ್ದಾರೆ. ಕಾರ್ಮಿಕ ಇಲಾಖೆಯು ಸೂಕ್ತ ಪರಿಶೀಲನೆ ನಡೆಸಿ ಅರ್ಹ ಫಲಾನುಭವಿಗಳನ್ನು ಗುರುತಿಸಬೇಕು ಎಂದು ಆಗ್ರಹಿಸಿದರು.

ಸಭೆಯಲ್ಲಿ ರಾಜ್ಯ ಕಾರ್ಯದರ್ಶಿ ಜಯರಾಮ್, ಹಾಸನದ ಕಾರ್ಮಿಕ ಇಲಾಖೆಯ ಕಾವ್ಯ, ತಾಲೂಕು ಅಧ್ಯಕ್ಷ ಕೇಬಲ್ ವಿಜಯ ಕುಮಾರ್, ಮುರಳಿ ಹವ್ವಾರ್, ಶ್ರೀಹರಿ, ನಜೀರುದ್ದೀನ್ ಶಹಜಾದ್, ಅಚ್ಯುತರಾವ್ ಮತ್ತಿತರರು ಉಪಸ್ಥಿತರಿದ್ದರು.

ವಾರ್ಷಿಕೋತ್ಸವದಲ್ಲಿ ಶ್ರೀಕಾಂತಾನಂದ ಸರಸ್ವತಿ ಸ್ವಾಮೀಜಿ ಅಭಿಮತ

ಮನಸ್ಸಿಗೆ ಕಾವಿ ತೊಟ್ಟವನೇ ನಿಜವಾದ ಸನ್ಯಾಸಿ



• **ಹೊಳೇನರಸೀಪುರ:** ಸೃಷ್ಟಿ, ಸ್ಥಿತಿ, ಲಯವೇ ಬ್ರಹ್ಮ, ವಿಷ್ಣು, ಮಹೇಶ್ವರರು. ಇವುಗಳಲ್ಲೇ ನಾವು ದೇವರನ್ನು ಕಾಣಬೇಕು. ಯಾವುದೇ ವ್ಯಕ್ತಿಗೆ ಸನ್ಯಾಸತ್ವವನ್ನು ಯಾರೂ ನೀಡಲು ಸಾಧ್ಯವಿಲ್ಲ, ಅದು ಅವರವರೇ ಪಡೆದುಕೊಳ್ಳಬೇಕಾದದ್ದು. ಆದರೆ ಲೌಕಿಕ ಜಗತ್ತಿಗೆ ಸನ್ಯಾಸಿ ಎಂದು ಪರಿಚಯಿಸಲು ಮಾತ್ರ ದೀಕ್ಷಾ ಸಮಾರಂಭಗಳು ನಡೆಯುತ್ತವೆ ಎಂದು ಶ್ರೀಕಾಂತಾನಂದ ಸರಸ್ವತಿ ಸ್ವಾಮೀಜಿ ನುಡಿದರು.

ಪಟ್ಟಣದ ಶಂಕರಮಠದಲ್ಲಿ ನಡೆದ 16ನೇ ವರ್ಷದ ಸನ್ಯಾಸ ಸ್ವೀಕಾರದ ವಾರ್ಷಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ನಾನು 1998ರಲ್ಲೇ ಮಾನಸಿಕವಾಗಿ ಸನ್ಯಾಸತ್ವವನ್ನು ಪಡೆದುಕೊಂಡಿದ್ದೆ. ಆದರೆ, ಲೌಕಿಕ ಜಗತ್ತಿಗೆ ನಾನು ಸನ್ಯಾಸಿ ಎಂಬುದನ್ನು ಪರಿಚಯಿಸಲು ನಮ್ಮ ಗುರುಗಳು 2010ರಲ್ಲಿ ದೀಕ್ಷೆ ನೀಡಿದರು ಎಂದರು. ಹಿರಿಯೂರು ದತ್ತಾಶ್ರಮದ ಸುಬೋಧಾ ನಂದ ಸರಸ್ವತಿ ಸ್ವಾಮೀಜಿ ಮಾತನಾಡಿದ ಅವರು, ದೇಹಕ್ಕೆ ಕಾವಿ ತೊಟ್ಟವರೆಲ್ಲಾ ಸನ್ಯಾಸಿಗಳಲ್ಲ, ಮನಸ್ಸಿಗೆ ಕಾವಿ ತೊಟ್ಟವನೇ ನಿಜವಾದ ಸನ್ಯಾಸಿ. ತನ್ನಲ್ಲೇ ಸುಖ ಕಾಣುವವನು ಸನ್ಯಾಸಿಯಾದರೆ, ಬೇರೆಯ ವರಲ್ಲಿ ಸುಖ ಹುಡುಕುವವನು ಬಿಕನಾಸಿ ಎಂದು ಮಾರ್ಮಿಕವಾಗಿ ಹೇಳಿದರು. ಬೆಂಗಳೂರಿನ ಆರ್‌ಎಸ್‌ವಿಕೆಯ ಸತೀಶ್ ಗುರೂಜಿ ಮಾತನಾಡಿ, ಆಧುನಿಕತೆ ಬೆಳೆ ದಂತೆಲ್ಲಾ ಕೌಟುಂಬಿಕ ಬಾಂಧವ್ಯಗಳು ನಶಿಸುತ್ತಿವೆ. ಗಂಡ-ಹೆಂಡತಿಯ ನಡುವಿನ ಅಂತರ ಹೆಚ್ಚಾಗುತ್ತಿದ್ದು, ಪರಸ್ಪರ ಕೊಲ್ಲುವಷ್ಟರ ಮಟ್ಟಿಗೆ ಪರಿಸ್ಥಿತಿ ಜರ್ಜರಿತವಾಗಿದೆ. ಇಂತಹ ವಿಕೃತ ಮನಸ್ಥಿತಿಗಳು ಬದಲಾಗಬೇಕಾದರೆ ಸಾರ್ವಜನಿಕರು ಸತ್ಸಂಗ ಹಾಗೂ ಆಧ್ಯಾತ್ಮಿಕ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು, ಎಂದು ಕರೆ ನೀಡಿದರು.

ಸಮಾರಂಭದಲ್ಲಿ ಆಲೂರು ಸುಜ್ಞಾನ ಬೋಧಾಶ್ರಮದ (ಹಿರಿಯೂರು ತಾಲೂಕು) ಬ್ರಹ್ಮಾನಂದ ತೀರ್ಥ ಭಿಕ್ಷು, ಶಿವಮೊಗ್ಗ ಜಿಲ್ಲೆ ಕಲ್ಲುಗಂಗೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ವಿನಯಾನಂದ ಸರಸ್ವತಿ ಸ್ವಾಮೀಜಿ, ರಾಮನಾಥಪುರದ ಸುಪ್ರಭಾನಂದ ಸರಸ್ವತಿ ಸ್ವಾಮೀಜಿ ಹಾಗೂ ಖ್ಯಾತ ಚಲನಚಿತ್ರ ನಟರಾದ ಶ್ರೀಧರ್ ಉಪಸ್ಥಿತರಿದ್ದರು.

ಮಕ್ಕಳು ದುಶ್ಚಟಗಳಿಗೆ ಬಲಿಯಾಗದಿರಲಿ: ಚೇತನ್

• **ಚನ್ನರಾಯಪಟ್ಟಣ:** ಶಿಕ್ಷಣ ಪಡೆಯುವ ಯುವ ಹಂತದಲ್ಲಿ ಮಕ್ಕಳು ಯಾವುದೇ ಕಾರಣಕ್ಕೂ ದುಶ್ಚಟಗಳಿಗೆ ಬಲಿಯಾಗಿ ತಮ್ಮ ಸುಂದರ ಬದುಕನ್ನು ಹಾಳು ಮಾಡಿ ಕೊಳ್ಳಬಾರದು, ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಯೋಜನಾಧಿಕಾರಿ ಚೇತನ್ ಸಲಹೆ ನೀಡಿದರು.

ತಾಲ್ಲೂಕಿನ ಪಡುವನಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹಮ್ಮಿಕೊಂಡಿದ್ದ 'ತಂಬಾಕು ವಿರೋಧಿ ದಿನಾಚರಣೆ'ಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಯುವಶಕ್ತಿ ದೇಶದ ಆಸ್ತಿಯಾಗಿದ್ದು, ಅದು ಸದ್ಬಳಕೆಯಾಗಬೇಕು. ಸಹವಾಸ ದೋಷ ಅಥವಾ ಇನ್ನಿತರ ಕಾರಣಗಳಿಗಾಗಿ ವಿದ್ಯಾರ್ಥಿಗಳು ಮಾದಕ ವಸ್ತುಗಳಿಗೆ ಬಲಿಯಾಗಬಾರದು. ಈ ನಿಟ್ಟಿನಲ್ಲಿ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಅವರ ಮಾರ್ಗದರ್ಶನದಲ್ಲಿ ಶಾಲಾ-ಕಾಲೇಜುಗಳಲ್ಲಿ ನಿರಂತರವಾಗಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು. ಸ್ಕೌಟ್ಸ್ ಅಂಡ್ ಗೈಡ್ಸ್ ಖಜಾಂಚಿ ಜಯರಾಮ್ ಮಾತನಾಡಿ, ತಾಲೂಕು ಆರೋಗ್ಯವನ್ನು ಹಾಳುಮಾಡುವ ಧೂಮಪಾನದಂತಹ ದುಶ್ಚಟಗಳಿಂದ ಶ್ವಾಸಕೋಶದ ಕ್ಯಾನ್ಸರ್‌ನಂತಹ ಕಾಯಿಲೆಗಳು ಬರುತ್ತವೆ. ಇದರಿಂದ ವ್ಯಕ್ತಿ ಮಾತ್ರವಲ್ಲದೆ ಇಡೀ ಕುಟುಂಬವೇ ಆರ್ಥಿಕ ಹಾಗೂ ಮಾನಸಿಕ ನಷ್ಟ ಅನುಭವಿಸಬೇಕಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಎಚ್ಚರಿಕೆಯಿಂದ ವ್ಯಾಸಂಗ ಮಾಡಬೇಕು ಎಂದರು. ಶಾಲೆಯ ಮುಖ್ಯಶಿಕ್ಷಕಿ ಶೋಭಾ, ಶಿಕ್ಷಕರಾದ ರಾಘವೇಂದ್ರ, ನಾಗರಾಜ್, ಜಿ.ಬಿ. ಮೋಹನ್ ಇದ್ದರು.

ರೋಗಿಗಳೇ ವೈದ್ಯರಿಗೆ ದೇವರು



• **ಹಾಸನ:** ವೈದ್ಯಕೀಯ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಕೇವಲ ಪುಸ್ತಕಗಳಿಂದ ಮಾತ್ರ ಕಲಿಯುವುದಿಲ್ಲ, ರೋಗಿಗಳಿಂದಲೂ ಕಲಿಯುತ್ತೀರಿ. ಆದ್ದರಿಂದ ರೋಗಿಗಳೇ ದೇವರೆಂದು ತಿಳಿದು ಸೇವಾಮನೋಭಾವದಿಂದ ಚಿಕಿತ್ಸೆ ನೀಡಬೇಕು ಎಂದು ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಭಗವಾನ್ ಬಿ.ಸಿ. ತಿಳಿಸಿದರು.

ಹಾಸನದಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ನಡೆದ 15ನೇ ಘಟಿಕೋತ್ಸವ ಪದವಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ವೈದ್ಯರು ನಿರಂತರವಾಗಿ ಕಲಿಯುತ್ತಲೇ ಇರಬೇಕು. ಈಗಿನ ಜನರೇಷನ್ ವಿದ್ಯಾರ್ಥಿಗಳಿಗೆ ಕಲಿಯುವುದು ತುಂಬಾ ಇದೆ. ಕಲಿಕೆ ಎಂಬುದು ನಿರಂತರ ಪ್ರಕ್ರಿಯೆ. ನಿಮ್ಮ ಪಠ್ಯಪುಸ್ತಕಗಳು ನಿಮಗೆ ಬೈಬಲ್, ಕುರಾನ್, ಭಗವದ್ಗೀತೆಯಂತೆ ಪವಿತ್ರವಾಗಿರಬೇಕು. ನಿಮ್ಮಲ್ಲಿ ಆತ್ಮವಿಶ್ವಾಸ ಹೆಚ್ಚಿಸಲು ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದಿಂದ ಅಡಿಯಲ್ಲಿ ಬರುವ ಎಲ್ಲಾ ಸಂಸ್ಥೆಗಳಲ್ಲಿ ಯೋಗ, ಧ್ಯಾನವನ್ನು ಕಡ್ಡಾಯಗೊಳಿಸುತ್ತಿದ್ದೇವೆ. ವೈದ್ಯರು ಮಾದಕ ವಸ್ತುಗಳ ದುಷ್ಪರಿಣಾಮದ ಬಗ್ಗೆ, ಪರಿಸರ ಸಂರಕ್ಷಣೆಯ ಬಗ್ಗೆ, ಮನುಷ್ಯನ ಅಂಗಾಂಗಗಳ ಧಾನದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಕೆಟ್ಟ ಅಭ್ಯಾಸಗಳನ್ನು ಬಿಟ್ಟು ಒಳ್ಳೆಯ ಹವ್ಯಾಸಗಳನ್ನು ರೂಢಿಸಿಕೊಂಡು ಆರೋಗ್ಯವಂತ ಸಮಾಜ ನಿರ್ಮಾಣ ಮಾಡಲು ವೈದ್ಯರು ಮುಂದಾಗಬೇಕು ಎಂದರು.

ಸಮಾರಂಭದಲ್ಲಿ ಹಿರಿಯವಿಜ್ಞಾನಿ ಪ್ರೊ. ಎಂ.ಕೆ. ಸೂರಪ್ಪ, ಹಾಸನ ಮೆಡಿಕಲ್ ಕಾಲೇಜಿನ ಡೀನ್ ಹಾಗೂ ನಿರ್ದೇಶಕರಾದ ಡಾ.ರಾಜಣ್ಣ ಬಿ, ಪ್ರಾಂಶುಪಾಲರಾದ ಡಾ. ಕವಿತಾ ಸಿ.ವಿ., ವೈದ್ಯಕೀಯ ಅಧೀಕ್ಷಕರಾದ ಡಾ. ರಾಘವೇಂದ್ರ ಪ್ರಸಾದ್ ಕೆ.ವಿ.. ಮುಖ್ಯ ಆಡಳಿತಾಧಿಕಾರಿ ರೇಖಾ, ಜಿಲ್ಲಾಸರ್ಜನ್ ನಾಗೇಶ್ ಆರಾಧ್ಯ,ಡಾ.ಚಿನ್ನವೀರಪ್ಪ ಪಿ.ಕೆ., ಡಾ.ಪ್ರವೀಣ್ ಜಿ., ಡಾ. ಮನುಪ್ರಕಾಶ್, ಘಟಿಕೋತ್ಸವದ ಸಂಘಟನಾಕಾರರಾದ ಡಾ. ಶ್ರೀರಂಗ ಎನ್. ಹಾಜರಿದ್ದರು.

ಮಕ್ಕಳ ಮನೆಗಳಲ್ಲಿ ಅಕ್ಷರಾಭ್ಯಾಸದ ಸಂಭ್ರಮ



• **ಕೊಣನೂರು:** ಅರಕಲಗೂಡು ತಾಲೂಕಿನ ಸರ್ಕಾರಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 19 ಮಕ್ಕಳ ಮನೆ (ಎಲ್‌ಕೆಜಿ ಮತ್ತು ಯುಕೆಜಿ) ಕೇಂದ್ರಗಳಲ್ಲಿ ಅಕ್ಷರಾಭ್ಯಾಸ ಕಾರ್ಯಕ್ರಮವು ಸಂಭ್ರಮ ಹಾಗೂ ಸಡಗರ ದಿಂದ ನಡೆಯಿತು.

ಸರಸ್ವತಿನಮಸ್ತುಭ್ಯಂ ವರದೇ ಕಾಮರೂಪಿಣಿ, ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ, ಎಂಬ ಮಂಗಳ ಶ್ಲೋಕದೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಪೋಷಕರು ತಮ್ಮ ಮಕ್ಕಳೊಂದಿಗೆ ಭಾಗವಹಿಸಿ, ಸಂಪ್ರದಾಯಬದ್ಧವಾಗಿ ವಿದ್ಯಾರಂಭ ನೆರವೇರಿಸಿದರು.

ಶಾಸಕರ ಪರಿಕಲ್ಪನೆಯಂತೆ ಅರಕಲಗೂಡು ತಾಲೂಕಿನ ವಿವಿಧ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಮನೆಗಳನ್ನು ಆರಂಭಿಸಲಾಗಿದ್ದು, ಗ್ರಾಮೀಣ ಭಾಗದ ಮಕ್ಕಳಿಗೆ ಗುಣಮಟ್ಟದ ಪೂರ್ವ ಪ್ರಾಥಮಿಕ ಶಿಕ್ಷಣ ಒದಗಿಸಲಾಗುತ್ತಿದೆ. ಈ ಮಕ್ಕಳ ಮನೆಗಳಲ್ಲಿ ಅಕ್ಷರಾಭ್ಯಾಸ ಕಾರ್ಯಕ್ರಮವನ್ನು ವಿಶೇಷವಾಗಿ ಆಯೋಜಿಸಿ ಮಕ್ಕಳ ಶೈಕ್ಷಣಿಕ ಪಯಣಕ್ಕೆ ಶುಭಾರಂಭ ಮಾಡಲಾಯಿತು. ಪುರೋಹಿತರ ಮಾರ್ಗದರ್ಶನದಲ್ಲಿ ನಡೆದ ಕಾರ್ಯಕ್ರಮದಲ್ಲಿ, ಪೋಷಕರು ಮಕ್ಕಳ ಕೈಹಿಡಿದು ಅಕ್ಷತೆಯ ಮೇಲೆ ಹಾಗೂ ಅಕ್ಕಿ ತುಂಬಿದ ತಟ್ಟೆಯಲ್ಲಿ ಓಂ ಬರೆಸುವ ಮೂಲಕ ವಿದ್ಯಾಭ್ಯಾಸಕ್ಕೆ ಚಾಲನೆ ನೀಡಿದರು. ಶಾಲಾ ಆವರಣಗಳಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದ್ದು, ಮಕ್ಕಳು, ಪೋಷಕರು ಹಾಗೂ ಶಿಕ್ಷಕರು ಸಂತಸದಿಂದ ಭಾಗವಹಿಸಿದರು.

ಮಕ್ಕಳ ಮನೆ ಕಾರ್ಯನಿರ್ವಹಿಸುತ್ತಿರುವ ಶಾಲೆಗಳು: ಹನ್ಯಾಳು, ರಾಮನಾಥಪುರ, ಕಾಳೇನಹಳ್ಳಿ, ಮಧುರನಹಳ್ಳಿ, ಹಂಪ್ರಂಗಿ, ಮಲ್ಲಿಪಟ್ಟಣ, ಹುಲಿಕಲ್, ಬೈಚನಹಳ್ಳಿ, ಸಂತೆಮರೂರು, ಹೊನ್ನೇನಹಳ್ಳಿ, ಕೋಟಿ ಅರಕಲಗೂಡು, ಬಿದರಕ್ಕ (ಹಳ್ಳಿಮೈಸೂರು), ಒಡನಹಳ್ಳಿ (ಹಳ್ಳಿಮೈಸೂರು), ಕೇರಳಾಪುರ, ಲಕ್ಕೂರು, ಕಟ್ಟೇಪುರ, ದೊಡ್ಡ ಬಮ್ಮತ್ತಿ, ಶ್ರವಣೂರು (ಹಳ್ಳಿಮೈಸೂರು) ಹಾಗೂ ಬೋರೆಕೊಪ್ಪಲು. ಕಾರ್ಯಕ್ರಮದ ಯಶಸ್ಸಿಗೆ ಶಿಕ್ಷಕರು, ಮಕ್ಕಳ ಮನೆ ಶಿಕ್ಷಕಿಯರು, ಗ್ರಾಮ ಪಂಚಾಯಿತಿ ಸದಸ್ಯರು, ಶಾಲಾಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ ಸದಸ್ಯರು, ಅಂಗನವಾಡಿ ಕಾರ್ಯಕರ್ತೆಯರು, ಹಿರಿಯ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಸಹಕಾರ ನೀಡಿದರು. ಅಕ್ಷರದ ಮೊದಲ ಹೆಜ್ಜೆಯಿಂದ ಜ್ಞಾನದ ಬೆಳಕಿನತ್ತ ಎಂಬ ಸಂದೇಶದೊಂದಿಗೆ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

ತಿಪಟೂರಿಗೆ ಆಗಮಿಸಿದ ಶಾಸಕ ಷಡಕ್ಷರಿ | ಆರೋಗ್ಯ ಪರಿಶೀಲಿಸಿದ ಡಾ.ಶ್ರೀಧರ್

ಶಾಸಕರ ಆರೋಗ್ಯದಲ್ಲಿ ಸಂಪೂರ್ಣ ಚೇತರಿಕೆ

• **ತಿಪಟೂರು:** ಆರೋಗ್ಯದಲ್ಲಿ ಸಂಪೂರ್ಣ ಚೇತರಿಕೆ ಕಂಡಿರುವ ಶಾಸಕ ಕೆ. ಷಡಕ್ಷರಿ ತಿಪಟೂರಿಗೆ ಆಗಮಿಸಿದರು.

ಶಾಸಕ ಷಡಕ್ಷರಿ ಕುಟುಂಬದ ಹೆಸರಾಂತ ವೈದ್ಯರಾದ ಡಾ. ಜಿ ಎಸ್. ಶ್ರೀಧರ್ ಭಾನುವಾರ ಮುಂಜಾನೆ ದೆಹಲಿಗೆ ಮ್ಯಾಕ್ಸ್ ಆಸ್ಪತ್ರೆಗೆ ತೆರಳಿ, ಅವರ ಆರೋಗ್ಯ ಪರೀಕ್ಷಿಸಿಕೊಂಡು ಸಂಪೂರ್ಣವಾಗಿ ಗುಣಮುಖರಾಗಿದ್ದನ್ನು ಖಾತರಿ ಪಡಿಸಿಕೊಂಡು ಅವರನ್ನು ಭಾನುವಾರ ತಿಪಟೂರಿಗೆ ಕರೆತಂದರು.

ಕಳೆದ ಗುರುವಾರ ದೆಹಲಿಗೆ ಹೋಗಿದ್ದ ಶಾಸಕ ಷಡಕ್ಷರಿ, ಅಸ್ವಸ್ಥರಾಗಿ ಆಸ್ಪತ್ರೆಗೆ ದಾಖಲಾಗಿದ್ದರು. ಚಿಕಿತ್ಸೆ ನಂತರ ಗುಣಮುಖರಾಗಿದ್ದು, ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದ್ದರೂ, ಎರಡು ವಿಶ್ರಾಂತಿ ಪಡೆದು ಪ್ರಯಾಣ ಬೆಳೆಸುವಂತೆ ಹೇಳಿದ ವೈದ್ಯರ ಸಲಹೆ ಮೇರೆಗೆ ದೆಹಲಿಯಲ್ಲಿ ತಂಗಿದ್ದರು.

ಗುರುವಾರದಿಂದ ನವದೆಹಲಿಯ ಮ್ಯಾಕ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಶಾಸಕರನ್ನು ಅವರ ಸಹೋದರರ ಮಕ್ಕಳಾದ ನಿಖಿಲ್ ರಾಜಣ್ಣ ಮತ್ತು ಆದಿಯವರು ಕಾಳಜಿ ವಹಿಸಿ ಅವರ ಜತೆಗೆ ಇದ್ದು ಯೋಗಕ್ಷೇಮ ನೋಡಿಕೊಳ್ಳುತ್ತಿದ್ದರು.



> ಸ್ಥಳೀಯವಾಗಿ ಅವರ ಆರೋಗ್ಯದ ಬಗ್ಗೆ ಜಾಗೃತರಾಗಿರಬೇಕು. ಆದರೆ ಬದಲಾದ ಹವಾಗುಣದಿಂದ ಆರೋಗ್ಯವಂತರೂ ಅನಾರೋಗ್ಯಕ್ಕೆ ತುತ್ತಾಗುವುದು ಸಹಜ. ಆರೋಗ್ಯದ ಬಗ್ಗೆ ಕಾಳಜಿ, ದಿನಚರಿ ಪಾಲಿಸಿದರೆ ಆರೋಗ್ಯ ಸಮಸ್ಯೆ ಇಲ್ಲ.
> ■ ಡಾ. ಜಿ.ಎಸ್. ಶ್ರೀಧರ್, ಖ್ಯಾತ ವೈದ್ಯರು, ತುಮಕೂರು

ಶುಗರ್ ಹೆಚ್ಚಿ ನಿತ್ರಾಣ ರಾಜ್ಯದ ರಾಜಕೀಯ ಬದಲಾವಣೆ ಹಿನ್ನಲೆಯಲ್ಲಿ ಸಚಿವ ಸ್ಥಾನದ ಆಕಾಂಕ್ಷಿಗಳಾದ ಶಾಸಕ ಕೆ ಷಡಕ್ಷರಿ ಕಳೆದ ಬುಧವಾರ ಸಂಜೆ ದೆಹಲಿಗೆ ತೆರಳಿದ್ದರು. ಗುರುವಾರ ಬೆಳಗ್ಗೆ ಡಿಸಿಎಂ ಜಿ ಪರಮೇಶ್ವರ್ ಕೊಠಡಿಯಲ್ಲಿ ಉಪಹಾರ ಸೇವಿಸುವ ಸಂದರ್ಭದಲ್ಲಿ ಸ್ವಲ್ಪ ಕೈ ನಡುಗಿ, ತಲೆ ಸುತ್ತು ಬಂದು ಅಲ್ಲೇ ಕುಸಿದು ಕುಳಿತು, ಅಸ್ವಸ್ಥರಾದ ಕಾರಣ ತಕ್ಷಣ ಅವರನ್ನು ಕರ್ನಾಟಕ ಭವನದಲ್ಲಿದ್ದ ವೈದ್ಯರು ಪ್ರಥಮ ಚಿಕಿತ್ಸೆ ನೀಡಿದ್ದರು. ಬಳಿಕ ಡಿಸಿಎಂ ಜಿ. ಪರಮೇಶ್ವರ್, ವಿಪ ಸದಸ್ಯ ರಾಜೇಂದ್ರ ಅವರು ಮ್ಯಾಕ್ಸ್ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಕೊಡಿಸಿದ್ದರು.

ಗೋಪೂಜೆ-ರಾಮತಾರಕ ಹೋಮ, ಶ್ರೀರಾಮಮೂರ್ತಿಯ ಮೆರವಣಿಗೆ

ಶಂಕರಮಠದಲ್ಲಿ ಸೀತಾರಾಮ ಕಲ್ಯಾಣೋತ್ಸವ



• **ಕೋಲಾರ:** ಕೋಲಾರ ಶೃಂಗೇರಿ ಶ್ರೀಶಂಕರ ಮಠದಲ್ಲಿ ಸೀತಾರಾಮ ಕಲ್ಯಾಣ ಮಹೋತ್ಸವ, ಶ್ರೀರಾಮ ಪಟ್ಟಾಭಿಷೇಕ ಹಾಗೂ ರಾಮ ತಾರಕ ಹೋಮ ನಡೆದಿದ್ದು, ಗೋಪೂಜೆಯೊಂದಿಗೆ ವಿವಿಧ ಕಾರ್ಯಕ್ರಮಗಳಿಗೆ ಚಾಲನೆ ನೀಡಿದ್ದು, 500ಕ್ಕೂ ಹೆಚ್ಚು ಭಕ್ತಾಧಿಗಳು ಭಾಗವಹಿಸಿದ್ದರು.

ಕೋಲಾರ ಶೃಂಗೇರಿ ಶ್ರೀಶಂಕರ ಮಠ ಹಾಗೂ ಶ್ರೀಶಂಕರ ಸೇವಾ ಟ್ರಸ್ಟ್, ಕೋಟೆ, ಕೋಲಾರ ಇವರ ವತಿಯಿಂದ ಅಧಿಕ ಮಾಸದ ಪ್ರಯುಕ್ತ ಶ್ರೀ ಸೀತಾರಾಮ ಕಲ್ಯಾಣ ಮಹೋತ್ಸವ, ಶ್ರೀರಾಮ ಪಟ್ಟಾಭಿಷೇಕ ಮತ್ತು ಶ್ರೀರಾಮ ತಾರಕ ಹೋಮ ಕಾರ್ಯಕ್ರಮಗಳನ್ನು ಭಕ್ತಿಭಾವದಿಂದ ಆಯೋಜಿಸಲಾಗಿತ್ತು.

ಅದ್ದೂರಿ ಮೆರವಣಿಗೆ ಹಾಗೂ ಭಜನಾ ತಂಡಗಳ ಗಾಯನ,ಕೋಲಾಟದೊಂದಿಗೆ ಶ್ರೀರಾಮನ ಮೂರ್ತಿಯನ್ನು ಹೊತ್ತು ತಂದು ನಂತರ ಸೀತಾರಾಮ ಕಲ್ಯಾಣೋತ್ಸವ ನಡೆಸಲಾಯಿತು. ಶ್ರೀರಾಮಚಂದ್ರ ಸ್ವಾಮಿಗೆ ವಿಶೇಷ ಪೂಜೆ ನಡೆಸಲಾಯಿತು.

ದಕ್ಷಿಣಾಮ್ನಾಯ ಶ್ರೀಶಾರದಾ ಪೀಠದ ಪರಮ ಪೂಜ್ಯ ಉಭಯ ಜಗದ್ಗುರುಗಳ ಪರಮಾನುಗ್ರಹ ಹಾಗೂ ಅವನೀ ಶ್ರೀಶಂಕರ ಮಠದ ಪೂಜ್ಯ ಸ್ವಾಮಿಗಳ ಆಶೀರ್ವಾದದೊಂದಿಗೆ ನಡೆಯುತ್ತಿರುವ ರಾಮ ತಾರಕ ಮಹಾಮಂತ್ರ ಜಪ ಯಜ್ಞದ ಮಂಗಳಾಚರಣೆಯ ಅಂಗವಾಗಿ ಈ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಸಂಜೆ ನಡೆದ ಶ್ರೀಸೀತಾರಾಮ ಕಲ್ಯಾಣೋತ್ಸವದಲ್ಲಿ ನೂರಾರು ಮಂದಿ ಪಾಲ್ಗೊಂಡಿದ್ದು, ಭಾನುವಾರ ಬೆಳಗ್ಗೆ ಜಗದ್ಗುರುಗಳ ಸನ್ನಿಧಿಯಲ್ಲಿ ರುದ್ರಾಭಿಷೇಕ, ಬೆಳಗ್ಗೆ ಶ್ರೀರಾಮ ತಾರಕ ಹೋಮ, ಶ್ರೀರಾಮ ಪಟ್ಟಾಭಿಷೇಕ ಹಾಗೂ ಮಹಾನೀರಾಜನ, ತೀರ್ಥ ಪ್ರಸಾದ ವಿನಿಯೋಗ ನಡೆಯಿತು. ಆಗಮಿಕರಾಗಿ ಹಿಂದೂಪುರದ ಸುನೀಲ್ ಶರ್ಮ, ಅಪ್ಪಣ್ಣಶಾಸ್ತ್ರಿಗಳು, ಸುರೇಶ್, ಗಣೇಶ್, ವೆಂಕಟೇಶ್ ಶಾಸ್ತ್ರಿಗಳು ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ಶ್ರೀಶಂಕರಸೇವಾ ಟ್ರಸ್ಟ್ ಅಧ್ಯಕ್ಷ ಡಾ. ಎಂ. ವಿ. ಜಯರಾಮ್ ಹಾಗೂ ಕೋಲಾರ ಶೃಂಗೇರಿ ಶ್ರೀಶಂಕರ ಮಠದ ಧರ್ಮಾಧಿಕಾರಿ ಜೆ. ಎನ್. ರಾಮಕೃಷ್ಣ, ಹಿರಿಯರಾದ ಅಪ್ಪಣ್ಣಶಾಸ್ತ್ರಿಗಳು, ವೆಂಕಟೇಶ್, ಶಂಕರಮಠದ ಪದಾಧಿಕಾರಿಗಳಾದ ಉದಯಕುಮಾರ್, ಸಿ.ಪಿ.ವಿಷ್ಣು, ಶ್ರೀವತ್ಸ, ವರುಣ್, ಹೆಚ್.ಕೆ.ಉಮೇಶ್, ಎಂ.ಪಿ. ಆನಂದ್, ಜಗದೀಶ್, ಶ್ರೀಕಂಠನ್, ಮುರಳಿಸುಂದರ್ ಮತ್ತು ಟ್ರಸ್ಟಿಗಳು ಹಾಜರಿದ್ದರು.

ಕಿರುಸುದ್ದಿ

ಪ್ರೇಮ ಕಲಹ: ಯುವತಿಯ ಕತ್ತು ಸೀಳಿ ಹತ್ಯೆ

• **ಬೆಂಗಳೂರು:** ಪ್ರೇಮಿಗಳ ನಡುವೆ ಉಂಟಾದ ಕಲಹದ ಹಿನ್ನೆಲೆಯಲ್ಲಿ 22 ವರ್ಷದ ಯುವತಿಯನ್ನು ಕತ್ತು ಸೀಳಿ ಹತ್ಯೆ ಮಾಡಿದ ಘಟನೆ ಬೆಳ್ಳಂದೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಮೃತ ಯುವತಿಯನ್ನು ಆಟಿ ಹಂಗ್ಮಾ ಸುಬಾ (22) ಎಂದು ಗುರುತಿಸಲಾಗಿದ್ದು, ಅವರು ಮೂಲತಃ ಸಿಕ್ಕಿಂ ರಾಜ್ಯದವರಾಗಿದ್ದಾರೆ. ಬೆಂಗಳೂರಿನ ಖಾಸಗಿ ಸಲೂನ್‌ನಲ್ಲಿ ರಿಸೆಪ್ಷನಿಸ್ಟ್ ಆಗಿ ಕೆಲಸ ಮಾಡುತ್ತಿದ್ದರು. ಆರೋಪಿಯನ್ನು ಪೂಬಾರ್ ಲೆಪ್ಚಾ ಎಂದು ಗುರುತಿಸಲಾಗಿದ್ದು, ಆತ ಮೂಲತ ಡಾರ್ಜಿಲಿಂಗ್‌ನವನಾಗಿದ್ದು, ನಗರದ ಖಾಸಗಿ ಹೋಟೆಲ್‌ನಲ್ಲಿ ವೈಟರ್ ಆಗಿ ಕೆಲಸ ಮಾಡುತ್ತಿದ್ದನು.

ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಅವರು ನೀಡಿರುವ ಮಾಹಿತಿಯಂತೆ, ಇಬ್ಬರೂ ಪರಸ್ಪರ ಪ್ರೀತಿಸುತ್ತಿದ್ದು, ಸುಮಾರು ಒಂದು ತಿಂಗಳ ಹಿಂದೆ ಬೆಂಗಳೂರಿಗೆ ಬಂದು ದೊಡ್ಡಕನ್ನಲ್ಲಿಯಲ್ಲಿ ವಾಸವಾಗಿದ್ದರು. ಯುವತಿಗೆ ಮತ್ತೊಬ್ಬ ಸ್ನೇಹಿತನೊಂದಿಗೆ ಸಂಪರ್ಕವಿದೆ ಎಂಬ ಅನುಮಾನದ ಹಿನ್ನೆಲೆಯಲ್ಲಿ ಭಾನುವಾರ ಬೆಳಗ್ಗೆ ಇಬ್ಬರ ನಡುವೆ ವಾಗ್ವಾದ ನಡೆದಿದೆ. ವಾದ-ವಿವಾದ ತೀವ್ರಗೊಂಡ ವೇಳೆ ಆರೋಪಿ ಮನೆಯಲ್ಲಿದ್ದ ಅಡುಗೆ ಚಾಕುವಿನಿಂದ ಯುವತಿಯ ಕತ್ತು ಸೀಳಿ ಹತ್ಯೆ ಮಾಡಿದ್ದಾನೆ ಎಂದು ತಿಳಿದುಬಂದಿದೆ ಎಂದು ಹೇಳಿದರು.

ಘಟನೆ ಕುರಿತು ಬೆಳ್ಳಂದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದು ಮುಂದಿನ ತನಿಖೆ ನಡೆಸುತ್ತಿದ್ದಾರೆ ಎಂದು ಡಿಸಿಪಿ ತಿಳಿಸಿದ್ದಾರೆ.

ಹೈಡ್ರೋಪೋನಿಕ್ ಗಾಂಜಾ ವಶ

• **ಬೆಂಗಳೂರು:** ಬ್ಯಾಂಕಾಕ್‌ನಿಂದ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದ ಐವರು ಪ್ರಯಾಣಿಕರಿಂದ 24.8 ಕೆ.ಜಿ. ಹೈಡ್ರೋಪೋನಿಕ್ ಗಾಂಜಾವನ್ನು ಬೆಂಗಳೂರು ಕಸ್ಟಮ್ಸ್ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಚೆಕ್-ಇನ್ ಲಗೇಜ್‌ನಲ್ಲಿ ಚಾಣಾಕ್ಷತನದಿಂದ ಅಡಗಿಸಿಡಲಾಗಿದ್ದ ಮಾದಕ ವಸ್ತುವನ್ನು ತಪಾಸಣೆಯ ವೇಳೆ ಪತ್ತೆ ಹಚ್ಚಲಾಗಿದೆ. ವಶಪಡಿಸಿಕೊಂಡ ಗಾಂಜಾದ ಅಂದಾಜು ಮೌಲ್ಯ 8.68 ಕೋಟಿ ರೂ. ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ಆರೋಪಿಗಳನ್ನು ಮಾದಕ ದ್ರವ್ಯ ಮತ್ತು ಮನೋವಿಕಾರಿ ಪದಾರ್ಥಗಳ ನಿಯಂತ್ರಣ ಕಾಯ್ದೆ (ಎನ್‌ಡಿಪಿಎಸ್) ಅಡಿಯಲ್ಲಿ ಬಂಧಿಸಲಾಗಿದ್ದು, ಹೆಚ್ಚಿನ ತನಿಖೆ ಮುಂದುವರೆದಿದೆ ಎಂದು ಕಸ್ಟಮ್ಸ್ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಪೈಪ್ ಕಳವು: ಆರೋಪಿ ಬಂಧನ

• **ಶಿವಮೊಗ್ಗ :** ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಪೂರೈಸುವ ಜಲ ಜೀವನ್ ಮಿಷನ್ ಪೈಪ್‌ನ 18 ಬಂಡಲುಗಳನ್ನು ಕಳ್ಳತನ ಮಾಡಿದ್ದ ಆರೋಪಿಯನ್ನು ಹೊಳೆಹೊನ್ನೂರು ಪೊಲೀಸರು ಬಂಧಿಸಿದ್ದಾರೆ. ಭದ್ರಾವತಿ ತಾಲೂಕಿನ ನಾಗತಿ ಬೆಳಗಲು ಗ್ರಾಮದ ರಾಕೇಶ (30) ಬಂಧಿತ. ಈತನಿಂದ ಅಂದಾಜು 7,92,000 ರೂ. ಮೌಲ್ಯದ 18 ಬಂಡಲು ಪೈಪ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಪೈಪ್ ಬಂಡಲುಗಳು ಕಳುವಾದ ಬಗ್ಗೆ ಇಂಜಿನಿಯರ್ ಅವಿನಾಶ ಜೂ.11ರಂದು ಹೊಳೆಹೊನ್ನೂರು ಠಾಣೆಗೆ ದೂರು ನೀಡಿದ್ದರು. ಇದರ ಪತ್ತೆಗಾಗಿ ನೇಮಿಸಲಾಗಿದ್ದ ಪೊಲೀಸರ ವಿಶೇಷ ತಂಡ ಆರೋಪಿಯನ್ನು ಬಂಧಿಸಿದೆ.

ಪಾಲಿಕೆ ಆಯುಕ್ತರೊಂದಿಗೆ ಸಾರ್ವಜನಿಕ ಮುಖಾಮುಖಿ ಕಾರ್ಯಕ್ರಮ

• **ಶಿವಮೊಗ್ಗ:** ಮಹಾನಗರ ಪಾಲಿಕೆ ಆಯುಕ್ತ ಕೆ.ಮಾಯಣ್ಣ ಗೌಡ ಅವರೊಂದಿಗೆ ಸಾರ್ವಜನಿಕ ಮುಖಾಮುಖಿ ಕಾರ್ಯ ಕ್ರಮವನ್ನು ಜೂನ್ 17ರ ಬೆಳಗ್ಗೆ 11ಗಂಟೆಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಶಿವಮೊಗ್ಗ ಜಿಲ್ಲಾ ಶಾಖೆ ಆಯೋಜಿಸಿದೆ. ಮಹಾನಗರ ಪಾಲಿಕೆಯ ಪ್ರಮುಖ ಅಧಿಕಾರಿಗಳು ಕೂಡ ಈ ಮುಖಾಮುಖಿಯಲ್ಲಿ ಪಾಲ್ಗೊಂಡು ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಲಿದ್ದಾರೆ. ನಾಗರಿಕರ ಪ್ರಶ್ನೆಗಳಿಗೆ ಆಯುಕ್ತರು ಉತ್ತರಿಸಲಿದ್ದಾರೆ.

ಶಿವಮೊಗ್ಗ ಮಹಾನಗರ ಪಾಲಿಕೆಯಲ್ಲಿ ಚುನಾಯಿತ ಪ್ರತಿನಿಧಿಗಳು ಇಲ್ಲದೇ ಸುಮಾರು ಮೂರು ವರ್ಷ ಕಳೆದಿದೆ. ಈ ಸಂದರ್ಭದಲ್ಲಿ ಸಾರ್ವಜನಿಕರು ಹಾಗೂ ಪಾಲಿಕೆ ನಡುವೆ ಸೇತುವೆ ಆಗುವ ಕಾರ್ಯಕ್ರಮವೇ ಈ ಮುಖಾಮುಖಿ. ವೈಯಕ್ತಿಕವಲ್ಲದ ಸಾರ್ವಜನಿಕ ಸಮಸ್ಯೆಗಳನ್ನು ಸಂಘಕ್ಕೆ ಕಳಿಸಬೇಕು. ಈ ಸಮಸ್ಯೆಗಳಿಗೆ ಆಯುಕ್ತರು ಪರಿಹಾರ ಸೂಚಿಸಲಿದ್ದಾರೆ. ಪ್ರಶ್ನೆಗಳನ್ನು ಕಳಿಸಬೇಕಾದ ವಾಟ್ಸಪ್ ನಂ. 9448138183, 8073502892, 9538172845

ವಿಹಿಂಪ ರಾಷ್ಟ್ರೀಯ ಸೇವಾ ಸಂವರ್ಧನಾ ಸಮಿತಿ ಉಪಾಧ್ಯಕ್ಷ ಸಚಿನ್ ಪಾಂಡ್ಯ ಕಳವಳ

ಆಂದೋಲನಗಳ ಪ್ರಮಾಣ ಇಳಿಕೆ

• **ಯಲಹಂಕ:** ಇತ್ತೀಚೆಗೆ ನಮ್ಮಲ್ಲಿ ಆಂದೋಲನಗಳ ಪ್ರಮಾಣ ಕಡಿಮೆಯಾಗುತ್ತಿದ್ದು, ಇವುಗಳನ್ನು ಹೆಚ್ಚಿಸುವ ದಿಸೆಯಲ್ಲಿ ನಾವು ಕಾರ್ಯಮಗ್ನರಾಗ ಬೇಕು ಎಂದು ವಿಶ್ವ ಹಿಂದೂ ಪರಿಷತ್‌ನ ರಾಷ್ಟ್ರೀಯ ಸೇವಾ ಸಂವರ್ಧನಾ ಸಮಿತಿಯ ಉಪಾಧ್ಯಕ್ಷ ಸಚಿನ್ ಪಾಂಡ್ಯ ಕರೆ ನೀಡಿದರು.

ವಿಶ್ವ ರಕ್ತದಾನ ದಿನವಾದಂದು ವಿಶ್ವ ಹಿಂದೂ ಪರಿಷತ್, ಯಲಹಂಕ ಜಿಲ್ಲೆ, ಶ್ರೀ ಸಾಯಿ ಸಮರ್ಥ್ ಫೌಂಡೇಶನ್ ಹಾಗೂ ರಾಷ್ಟ್ರೋತ್ಥಾನ ರಕ್ತ ಕೇಂದ್ರ ಇವರ ಸಹಯೋಗದೊಂದಿಗೆ ಯಲಹಂಕ ಉಪನಗರದ ಶ್ರೀ ವೀರಾಂಜನೇಯ ಸ್ವಾಮಿ ದೇಗುಲದ ಸಭಾಂಗಣದಲ್ಲಿ ಆಯೋಜಿಸಿದ್ದ 7ನೇ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿ ಹಿಂದೂ ಧರ್ಮ ಜಾಗೃತಿ ಮೂಡಿಸಲು ವಿಶ್ವ ಹಿಂದೂ ಪರಿಷತ್ ಅವಿರತವಾಗಿ ಶ್ರಮಿಸುತ್ತಿದೆ. ಹಲವು ದಶಕಗಳಿಂದಲೂ ದೇಶವ್ಯಾಪಿ ಆಂದೋಲನಗಳ ಮೂಲಕ ಹಿಂದೂ ಧರ್ಮ ಶ್ರದ್ಧೆ, ಧರ್ಮ ರಕ್ಷಣೆ, ಹಿಂದೂ ಪೌರಾಣಿಕ ಸ್ಥಳಗಳು ಮತ್ತು ಧಾರ್ಮಿಕ



ಕೇಂದ್ರಗಳ ಸಂರಕ್ಷಣೆ ಯಂತಹ ಮಹತ್ತರವಾದ ಕಾರ್ಯಗಳನ್ನು ಕೈಗೊಳ್ಳುತ್ತಾ ಬಂದಿದ್ದು, ಇದರ ಜತೆಗೆ ಮತಾಂತರ, ಲವ್ ಜಿಹಾದ್, ದೇಶ ಮತ್ತು ಧರ್ಮದ ಬಗೆಗಿನ ಅಪಪ್ರಚಾರ ಮುಂತಾದ ಅಪಮೌಲ್ಯಗಳ ವಿರುದ್ಧ ದೇಶದ ಜನರಲ್ಲಿ ಅರಿವು ಮೂಡಿಸುತ್ತಾ ಬರುತ್ತಿರುವುದು ಸಂತೋಷದ ಸಂಗತಿಯಾದರು, ಇತ್ತೀಚೆಗೆ ನಮ್ಮಲ್ಲಿ ಆಂದೋಲನಗಳ ಸಂಖ್ಯೆ ಕಡಿಮೆಯಾಗುತ್ತಿವೆ, ಇವುಗಳನ್ನು ಹೆಚ್ಚಿಸುವ ದಿಸೆಯಲ್ಲಿ ನಾವು ಕಾರ್ಯಮಗ್ನರಾಗಬೇಕಿದೆ ಎಂದರು.

ಶ್ರೀ ಸಾಯಿ ಸಮರ್ಥ್ ಫೌಂಡೇಶನ್‌ನ ಅಧ್ಯಕ್ಷ ಅರುಣ್ ಕುಮಾರ್ ಸಾಲಹಳ್ಳಿ, ಯಲಹಂಕ ನಗರ ಮಂಡಲ ಬಿಜೆಪಿ ಅಧ್ಯಕ್ಷ ಎಂ.ಮುನಿರಾಜು, ಮಾಜಿ ಸೈನಿಕರ ಸಂಘದ ಅಧ್ಯಕ್ಷ ಶಿವಕುಮಾರ್ ಗೌಡ, ವಿಶ್ವ ಹಿಂದೂ ಪರಿಷತ್‌ನ ಕರ್ನಾಟಕ ದಕ್ಷಿಣ ಪ್ರಾಂತ ವಿಶೇಷ ಸಂಪರ್ಕ ಪ್ರಮುಖ್ ಮಂಜುನಾಥ ಸ್ವಾಮಿ, ವಿಶ್ವ ಹಿಂದೂ ಪರಿಷತ್ ಜಿಲ್ಲಾಧ್ಯಕ್ಷ ಡಾ.ರತ್ನಾಕರ ಭಟ್, ಕಾರ್ಯದರ್ಶಿ ಮಂಜುನಾಥ್ ವಿ. ಎಸ್ ಸೇರಿದಂತೆ ಇತರರಿದ್ದರು.

ಕೆಇಟಿ ಶತಮಾನೋತ್ಸವ: ವಿದ್ಯಾರ್ಥಿಗಳಿಗೆ ಪ್ರಶಸ್ತಿ

• **ಬೆಂಗಳೂರು:** ಶತಮಾನೋತ್ಸವವನ್ನು ಆಚರಿಸುತ್ತಿರುವ ದಿ ಕಲ್ಲುಂಟೆ ಎಜುಕೇಶನ್ ಟ್ರಸ್ಟ್ (ಕೆಇಟಿ) ವತಿಯಿಂದ ಎಸ್. ಕಡಾಂಬಿ ವಿದ್ಯಾ ಕೇಂದ್ರದ ಆವರಣದಲ್ಲಿ ಕೆಇಟಿ ಶತಮಾನೋತ್ಸವ ಮೇರು ಪ್ರತಿಭಾ ಪ್ರಶಸ್ತಿ ಕಾರ್ಯಕ್ರಮ ಆಯೋಜಿಸಿ 53 ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಟ್ರಸ್ಟ್ ಜಂಟಿ ಕಾರ್ಯದರ್ಶಿ ಕೆ.ಆರ್. ಕೃಷ್ಣ ಪ್ರಸಾದ್, ಯಶಸ್ಸು ಆಕಸ್ಮಿಕವಲ್ಲ, ಅದು ಪ್ರತಿದಿನದ ಸರಿಯಾದ ನಿರ್ಧಾರಗಳು ಮತ್ತು ನಿರಂತರ ಪರಿಶ್ರಮದ ಫಲವಾಗಿದೆ. ವಿದ್ಯಾರ್ಥಿಗಳಿಗೆ ಶ್ರಮ, ಶಿಸ್ತು ಮತ್ತು ನಿರಂತರ ಪ್ರಯತ್ನ ಅಗತ್ಯ. ಅಂಕಗಳು ಅವಕಾಶದ ಬಾಗಿಲು ತೆರೆಯಬಹುದು. ಆದರೆ ವ್ಯಕ್ತಿತ್ವ, ಪ್ರಾಮಾಣಿಕತೆ, ಮೌಲ್ಯಗಳು ಮತ್ತು ಉತ್ತಮ ನಡತೆಯೇ ಜೀವನದಲ್ಲಿ ಶಾಶ್ವತ ಯಶಸ್ಸನ್ನು ತಂದುಕೊಡುತ್ತವೆ ಎಂದು ತಿಳಿಸಿದರು.

ಶಿಕ್ಷಣವು ಕೇವಲ ಉದ್ಯೋಗ ಸೃಷ್ಟಿಸುವುದಲ್ಲ, ಜವಾಬ್ದಾರಿಯುತ ನಾಗರಿಕರು ಮತ್ತು ನಾಯಕತ್ವ



ಗುಣಗಳಿರುವ ವ್ಯಕ್ತಿಗಳನ್ನು ರೂಪಿಸಬೇಕು ಎಂದು ಹೇಳಿದರು.

ಶತಮಾನೋತ್ಸವದ ಯೋಜನೆ: ಶಿಕ್ಷಣ ತಜ್ಞ ಹಾಗೂ ಸಮಾಜಸೇವಕ ಕಡಾಂಬಿ ಸಿ.ಆರ್. ಶ್ರೀನಿವಾಸಾಚಾರ್ಯ ಅವರಿಂದ 1926ರಲ್ಲಿ ಸ್ಥಾಪಿತವಾದ ದಿ ಕಲ್ಲುಂಟೆ ಎಜುಕೇಶನ್ ಟ್ರಸ್ಟ್ ಕಳೆದ ನೂರು ವರ್ಷಗಳಿಂದ ಮೌಲ್ಯಾಧಾರಿತ ಹಾಗೂ ಗುಣಮಟ್ಟದ ಶಿಕ್ಷಣ ನೀಡುತ್ತಾ ಸಾವಿರಾರು ವಿದ್ಯಾರ್ಥಿಗಳ ಬದುಕನ್ನು ರೂಪಿಸಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯನ್ನು ಉತ್ತೇಜಿಸಿ, ಸಮಾಜಮುಖಿ ನಾಗರಿಕರನ್ನು ರೂಪಿಸುವ ಉದ್ದೇಶದಿಂದ ಟ್ರಸ್ಟ್ ಶತಮಾನೋತ್ಸವ ವರ್ಷದಲ್ಲಿ ಈ ವಿಶೇಷ ಮೇರು ಪ್ರತಿಭಾ ಪ್ರಶಸ್ತಿ ಯೋಜನೆ ಆರಂಭಿಸಿದೆ.

ಐಸಿಎಸ್‌ಇ ಪರೀಕ್ಷೆಯಲ್ಲಿ ಶೇ.99.4 ಅಂಕಗಳೊಂದಿಗೆ ಶಾಲೆಗೆ ಪ್ರಥಮ ಸ್ಥಾನ ಪಡೆದ ಯಶಸ್ ಬಿ. ಗೌಡ ಅವರಿಗೆ 50,000 ರೂ. ಮೌಲ್ಯದ ಕೆಇಟಿ ಶತಮಾನೋತ್ಸವ ವಿಶೇಷ ವಿದ್ಯಾರ್ಥಿವೇತನ ನೀಡಲಾಯಿತು. ಇದೇ ಸಂದರ್ಭದಲ್ಲಿ ಸಂಸ್ಥೆಯ ಹಳೆಯ ವಿದ್ಯಾರ್ಥಿ ಸೃಜನ್ ಬಿ.ಎಸ್. ಅವರು 2026ರ ದ್ವಿತೀಯ ಪಿಯುಸಿ ಹಾಗೂ ಸಿಇಟಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್ ಗಳಿಸಿದ ಸಾಧನೆಯನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಇಸ್ಕಾನ್‌ನ ರತ್ನಗಧ ಗೋವಿಂದ ದಾಸ ಭಾಗವಹಿಸಿದ್ದರು. ಟ್ರಸ್ಟ್ ಅಧ್ಯಕ್ಷ ಡಾ. ಕೆ. ಶೇಷಮೂರ್ತಿ, ಉಪಾಧ್ಯಕ್ಷ ಸಾಯಿರಾಮ್ ಆರ್., ಕಾರ್ಯದರ್ಶಿ ಕೆ.ಜಿ. ರಂಗನಾಥ ಸೇರಿದಂತೆ ಟ್ರಸ್ಟ್ ಪದಾಧಿಕಾರಿಗಳು, ಶಿಕ್ಷಕರು, ಪೋಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ನಗರದಲ್ಲಿ ಭಾನುವಾರ ಸಂಜೆ ಸುರಿದ ಭಾರೀ ಮಳೆಗೆ ಜನರು ತತ್ತರಿಸಿದ್ದು, ಪ್ರಮುಖ ರಸ್ತೆಗಳಲ್ಲಿ ಸಂಚಾರ ಅಸ್ತವ್ಯಸ್ತವಾಗಿತ್ತು. ಮಳೆಯಿಂದ ರಕ್ಷಿಸಿಕೊಳ್ಳಲು ಜನರು ಮೆಟ್ರೋ ನಿಲ್ದಾಣ ಮತ್ತು ಮರಗಳ ಕೆಳಗೆ ಆಶ್ರಯ ಪಡೆದರು.

ರಕ್ತದಾನ ಶ್ರೇಷ್ಠ ಕಾರ್ಯ



• **ಶಿವಮೊಗ್ಗ:** ರಕ್ತದಾನ ಜೀವ ಉಳಿಸುವ ಶ್ರೇಷ್ಠ ಕಾರ್ಯವಾಗಿದ್ದು, ರಕ್ತದಾನದಿಂದ ಮಾನಸಿಕ ಹಾಗೂ ದೈಹಿಕ ಸದೃಢತೆ ಹೊಂದಲು ಸಾಧ್ಯವಾಗುತ್ತದೆ ಎಂದು ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಅಧ್ಯಕ್ಷ ಬಿ.ಗೋಪಿನಾಥ್ ಹೇಳಿದರು.

ಲ್ಯಾಂಡ್ ಕಾರ್ಲ್ ಸ್ಟೀನರ್ ಜನ್ಮದಿನ ಮತ್ತು ವಿಶ್ವ ರಕ್ತದಾನಿಗಳ ದಿನಾಚರಣೆ ಅಂಗವಾಗಿ ಜಿಲ್ಲಾ ವಿತರಕರ ಸಂಘದ ವತಿಯಿಂದ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಶಾಂತಲಾ ಸ್ಪೆರೋಕ್ಯಾಸ್ಟ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾದ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಸಕಾಲದಲ್ಲಿ ರಕ್ತ ಸಿಗದೇ ಸಾಕಷ್ಟು ಜನ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಾರೆ. ರಕ್ತದ ಬೇಡಿಕೆ ಹೆಚ್ಚಿದ್ದು, ಯುವಕರು ರಕ್ತದಾನ ಮಾಡುವುದರ ಮುಖಾಂತರ ಪವಿತ್ರವಾದ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ರಕ್ತವನ್ನು ಕೃತಕವಾಗಿ ಉತ್ಪಾದಿಸಲು ಆಗುವುದಿಲ್ಲ, ದಾನಿಗಳ ದೇಹದಿಂದ ಸಂಗ್ರಹಿಸಿ ಅದನ್ನು ಪರೀಕ್ಷಿಸಿ ಇನ್ನೊಬ್ಬರಿಗೆ ದಾನ ಮಾಡುವ ಪ್ರಕ್ರಿಯೆ ಆಗಿದೆ. ಯುವಜನರು ಮೂಢನಂಬಿಕೆಯಿಂದ ಹೊರಬಂದು ರಕ್ತದಾನ ಮಾಡುವುದರ ಜೊತೆಗೆ ಮತ್ತೊಬ್ಬರನ್ನು ಸಹ ಪ್ರೇರೇಪಿಸಿ ರಕ್ತದಾನಿಗಳನ್ನಾಗಿ ಮಾಡಬೇಕು ಎಂದು ಕರೆ ನೀಡಿದರು.

ಕೈಗಾರಿಕಾ ಸಂಘದ ಉಪಾಧ್ಯಕ್ಷ, ರಕ್ತದಾನಿ ಜಿ.ವಿಜಯ್ ಕುಮಾರ್ ಮಾತನಾಡಿ, ಪ್ರತಿಯೊಬ್ಬ ಆರೋಗ್ಯವಂತ ಮನುಷ್ಯ ವರ್ಷದಲ್ಲಿ ಮೂರು ಬಾರಿ ರಕ್ತದಾನ ಮಾಡಬೇಕು. ಸಮಾಜದಲ್ಲಿ ನಿಜವಾದ ಹೀರೋ ಗಳು ಎಂದರೆ ರಕ್ತದಾನಿಗಳು ಎಂದರು.

ಜಿಲ್ಲಾ ವಿತರಕರ ಸಂಘದ ಅಧ್ಯಕ್ಷ ಸಿಎಂ ದೇವರಾಜ್, ರೋಟರಿ ಬ್ಲಡ್ ಬ್ಯಾಂಕಿನ ಮುಖ್ಯಸ್ಥ ಆನಂದ್, ವಿತರಕರ ಸಂಘದ ಉಪಾಧ್ಯಕ್ಷ ಬದ್ರಿನಾಥ್, ಗೌರವ ಕಾರ್ಯದರ್ಶಿ ಶ್ರೀನಿವಾಸ್.ಗಿರೀಶ್, ಪ್ರಶಾಂತ್, ಶಿವರಾಜ್ ಉಡುಗಣಿ, ಚಂದ್ರು, ರಮೇಶ್ ಇದ್ದರು.

ಶಾಸಕರ ವಿರುದ್ಧ ತನಿಖೆ: ಸ್ಪೀಕರ್ ಅನುಮತಿ ಕಡ್ಡಾಯ

• **ಬೆಂಗಳೂರು:** ಜನ ಪ್ರತಿನಿಧಿಗಳಾದ ಶಾಸಕರನ್ನು ನೇಮಕ ಮಾಡುವ ಅಧಿಕಾರ ತಮಗಿಲ್ಲ ಎಂಬ ಕಾರಣವನ್ನು ನೀಡಿ ಶಾಸಕರ ವಿರುದ್ಧದ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವುದಕ್ಕೆ ಬರುವುದಿಲ್ಲ ಎಂಬ ವಿಧಾನಸಭಾಧ್ಯಕ್ಷರ ನಿಲುವನ್ನು ಹೈಕೋರ್ಟ್ ತಳ್ಳಿಹಾಕಿದೆ.

ಅಲ್ಲದೇ, ಸಂಸದರು, ಶಾಸಕರು ಸಾರ್ವಜನಿಕ ಸೇವಕರು ಎಂಬುದಾಗಿ ಸುಪ್ರೀಂಕೋರ್ಟ್ ತಿಳಿಸಿದ್ದು, ತನಿಖಾ ಸಂಸ್ಥೆಗಳು ಅಥವಾ ಖಾಸಗಿ ದೂರುದಾರರು ದೋಷಾರೋಪ ಪಟ್ಟಿ ಸಲ್ಲಿಸುವ ಮುನ್ನ ಸದನದ ಸಭಾಧ್ಯಕ್ಷರು ಸ್ಪೀಕರ್ ಅವರಿಂದ ಅನುಮತಿ ಪಡೆಯುವುದು ಕಡ್ಡಾಯವಾಗಿದೆ ಎಂದು ತಿಳಿಸಿದೆ.

ಬಿಜೆಪಿ ಸೇರಲು ಜೆಡಿಎಸ್ ಪಕ್ಷದ ಶಾಸಕರಿಗೆ ಹಣದ ಆಮಿಷ ನೀಡಿದ ಆರೋಪ ಸಂಬಂಧ ಶಾಸಕರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನಿರಾಕರಿಸಿದ್ದ ಸ್ಪೀಕರ್ ಕಚೇರಿಯ ಕ್ರಮವನ್ನು ಪ್ರಶ್ನಿಸಿ ಪ್ರಕರಣದ ಖಾಸಗಿ ದೂರುದಾರ ಅಬ್ರಾಹಂ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ಎಸ್. ಸುನಿಲ್ ದತ್ ಯಾದವ್ ಅವರಿದ್ದ ನ್ಯಾಯಪೀಠ, ಸ್ಪೀಕರ್ ಕಚೇರಿಯ ಹಿಂಬರಹವನ್ನು ರದ್ದುಪಡಿಸಿ ಆದೇಶಿಸಿದ್ದಾರೆ. ಅಲ್ಲದೇ, ಅರ್ಜಿದಾರರ ಮನವಿಯನ್ನು ಕಾನೂನು ಪ್ರಕಾರ ಹೊಸದಾಗಿ ತೀರ್ಮಾನ ಕೈಗೊಳ್ಳುವಂತೆ ಸ್ಪೀಕರ್‌ಗೆ ಕಚೇರಿಗೆ ಹಿಂದಿರುಗಿಸಿದ್ದಾರೆ.

ಅಲ್ಲದೇ, ಶಾಸಕರನ್ನು ಸ್ಪೀಕರ್ ನೇಮಕ ಮಾಡುವುದಿಲ್ಲ ಎಂಬ ಕಾರಣಕ್ಕೆ ತನಿಖೆಗೆ ಅನುಮತಿ ನೀಡಲು



ನಿರಾಕರಿಸಿರುವ ಸ್ಪೀಕರ್ ಕಚೇರಿಯ ಆದೇಶ ಕಾನೂನು ಬದ್ಧವಾಗಿಲ್ಲ, ಸಂಸದರು ಮತ್ತು ಶಾಸಕರು ಸಾರ್ವಜನಿಕ ಸೇವಕರು ಎಂದು ಸುಪ್ರೀಂಕೋರ್ಟ್ ಪಿ.ವಿ. ನರಸಿಂಹರಾವ್ ಪ್ರಕರಣದಲ್ಲಿ ಸ್ಪಷ್ಟಪಡಿಸಿದೆ. ಅದರಂತೆ, ತನಿಖಾ ಸಂಸ್ಥೆಗಳು ಅಥವಾ ಖಾಸಗಿ ದೂರುದಾರರು ದೋಷಾರೋಪ ಪಟ್ಟಿ ಸಲ್ಲಿಸುವ ಮುನ್ನ ಸದನದ ಸ್ಪೀಕರ್ ಅವರಿಂದ ಅನುಮತಿ ಪಡೆಯುವುದು ಕಡ್ಡಾಯವಾಗಿದೆ ಎಂದು ಪೀಠ ತನ್ನ ಆದೇಶದಲ್ಲಿ ತಿಳಿಸಿದೆ.

ಅಲ್ಲದೇ, ಸ್ಪೀಕರ್ ಅವರು ಈ ತಾಂತ್ರಿಕ ಕಾರಣಗಳನ್ನು ಬದಿಗಿಟ್ಟು, ದೂರುದಾರರ ಅರ್ಜಿಯನ್ನು ಕಾನೂನು ಚೌಕಟ್ಟಿನಲ್ಲಿ ಮರುಪರಿಶೀಲಿಸಿ ಸೂಕ್ತ ಆದೇಶ ಹೊರಡಿಸಬೇಕು ಎಂದು ತಿಳಿಸಿ ಪ್ರಕರಣವನ್ನು ಮತ್ತೆ ಸ್ಪೀಕರ್ ಕಚೇರಿಗೆ ರವಾನಿಸಿದೆ.

ಪ್ರಕರಣದ ಹಿನ್ನೆಲೆ: ಬಿಜೆಪಿಗೆ ಸೇರ್ಪಡೆಯಾದರೆ 30 ಕೋಟಿ.ರೂ.ಗಳನ್ನು ನೀಡುವುದಾಗಿ ತಿಳಿಸಿದ್ದು, ಮುಂಗಡವಾಗಿ 5 ಕೋಟಿ ರೂ.ಗಳನ್ನು ನೀಡಲಾಗಿದೆ ಎಂದು ಈ ಹಣವನ್ನು ಎರಡು ತಿಂಗಳು ಕಾಲ ತನ್ನ ಮನೆಯಲ್ಲಿರಿಸಿಕೊಂಡುಮಾಜಿಸಿಎಂಕುಮಾರಸ್ವಾಮಿ ಸಮ್ಮುಖದಲ್ಲಿ ಹಿಂದಿರುಗಿಸಲಾಯಿತು ಎಂದು ಕೋಲಾರದ ಶಾಸಕ ಕೆ.ಶ್ರೀನಿವಾಸ ಗೌಡ ಅವರು ಬಹಿರಂಗವಾಗಿ ಹೇಳಿಕೆ ನೀಡಿದ್ದರು.

ಈ ಸಂಬಂಧ ಭ್ರಷ್ಟಾಚಾರ ನಿಗ್ರಹ ದಳಕ್ಕೆ ದೂರು ನೀಡಿದ್ದ ಅರ್ಜಿದಾರ ಅಬ್ರಾಹಂ, ಅಂದಿನ ಉಪ ಮುಖ್ಯಮಂತ್ರಿಯಾಗಿದ್ದ ಸಿ.ಎನ್.ಅಶ್ವತ್ ನಾರಾಯಣ, ಶಾಸಕ ಎಸ್.ಆರ್.ವಿಶ್ವನಾಥ್, ವಿಧಾನ ಪರಿಷತ್ ಸದಸ್ಯರಾಗಿದ್ದ ಸಿ.ಪಿ.ಯೋಗೇಶ್ವರ್ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ದೂರು ನೀಡಿದ್ದರು. ದೂರು ದಾಖಲಿಸಿಕೊಳ್ಳದ ಹಿನ್ನೆಲೆಯಲ್ಲಿ ವಿಶೇಷ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ್ದ ವಿಶೇಷ ನ್ಯಾಯಾಲಯ, ದೂರಿನ ತನಿಖೆ ಮುಂದುವರಿಸಲು ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆಯಡಿ ಸ್ಪೀಕರ್ ಅವರಿಂದ ಪೂರ್ವಾನುಮತಿ ಪಡೆಯುವಂತೆ ದೂರುದಾರರಿಗೆ ಸೂಚಿಸಿತ್ತು. ಅದರಂತೆ ಅಬ್ರಾಹಂ ಅವರು ಅನುಮತಿ ಕೋರಿ ಸ್ಪೀಕರ್ ಅವರಿಗೆ ಮನವಿ ಮಾಡಿದ್ದರು. ಮನವಿ ತಿರಸ್ಕರಿಸಿದ್ದ ಸ್ಪೀಕರ್ ಕಚೇರಿ, ವಿಧಾನಸಭಾ ಸದಸ್ಯರು ಜನರಿಂದ ಚುನಾಯಿತರಾದವರು, ಅವರನ್ನು ಸ್ಪೀಕರ್ ನೇಮಕ ಮಾಡುವುದಿಲ್ಲ, ಆದ್ದರಿಂದ ಅವರ ವಿರುದ್ಧ ತನಿಖೆ ನಡೆಸಲು ಅನುಮತಿ ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ತಿಳಿಸಿ ಮನವಿಯನ್ನು ತಿರಸ್ಕರಿಸಲಾಗಿತ್ತು. ಇದನ್ನು ಪ್ರಶ್ನಿಸಿ ಅಬ್ರಹಾಂ ಹೈಕೋರ್ಟ್ ಮೆಟ್ಟಿಲೇರಿದ್ದರು.



ದೇವನಹಳ್ಳಿಯಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಪ್ರಗತಿ ಪಥ ಯಾತ್ರೆ ಕಾರ್ಯಕ್ರಮದ ವೇಳೆ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ದೇವನಹಳ್ಳಿ ಮಂಡಲ ಅಧ್ಯಕ್ಷ ಎಲ್. ಎಲ್. ಅಂಬರೀಶ್ ಗೌಡ ಅಭಿನಂದಿಸಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಂಸದ ಡಾ. ಕೆ. ಸುಧಾಕರ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ತುಳು ಸಾಹಿತ್ಯ ಆಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಇಂಗಿತ

ಎಲ್ಲೆಡೆ ತುಳು ಕುರಿತು ಜಾಗೃತಿ ಅನಿವಾರ್ಯ

• **ಭದ್ರಾವತಿ :** ತುಳು ಭಾಷೆಗೆ ತನ್ನದೇ ಆದ ಪರಂಪರೆ ಇದ್ದು, ಈ ಭಾಷೆಯ ಬೆಳವಣಿಗೆಗಾಗಿ ನಿರಂತರವಾಗಿ ಹೋರಾಟ ನಡೆಸಿಕೊಂಡು ಬರಲಾಗುತ್ತಿದೆ. ನಾಡಿನ ಎಲ್ಲೆಡೆ ತುಳು ಭಾಷೆ ಕುರಿತು ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಹೇಳಿದರು.

ನ್ಯೂಟೌನ್ ಬಂಟರ ಭವನದಲ್ಲಿ ತುಳು ಕೂಟದಿಂದ ಭಾನುವಾರ ಆಯೋಜಿಸಿದ್ದ ತುಳು ಉತ್ಸವ-2026 ಉದ್ಘಾಟಿಸಿ ಮಾತನಾಡಿದರು. ತುಳು ಭಾಷಿಕರು ಎಲ್ಲೇ ಇದ್ದರೂ ಸಹ ಭಾಷೆ ಕುರಿತು ಜಾಗೃತಿ ಮೂಡಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು. ತುಳುನಾಡಿನ ಸಾಹಿತ್ಯ, ಸಂಸ್ಕೃತಿ, ಭಾಷೆ ವೈವಿಧ್ಯತೆಯಿಂದ ಕೂಡಿದೆ. ಈ ಭಾಷೆಯನ್ನು ಪ್ರಾಥಮಿಕ ಹಂತದಿಂದಲೇ ಮಕ್ಕಳಿಗೆ ಕಲಿಸುವ ನಿಟ್ಟಿನಲ್ಲಿ ಪ್ರಯತ್ನಿಸಬೇಕಾಗಿದೆ. ಈ ನಿಟ್ಟಿನಲ್ಲಿ ಹೋರಾಟ ನಡೆಸಿದ ಪರಿಣಾಮ ಸರ್ಕಾರ ತುಳುನಾಡಿನ ಭಾಗದ ಶಾಲೆಗಳಲ್ಲಿ ತುಳು ಭಾಷೆಯನ್ನು ಒಂದು ಐಚ್ಛಿಕ ಭಾಷೆಯನ್ನಾಗಿಸಿದೆ. ಪ್ರಸ್ತುತ ತುಳು ಭಾಷೆ ಕಲಿಕೆಯಲ್ಲಿ ತೊಡಗಿರುವವರಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕಾಗಿದೆ. ಪ್ರತಿಯೊಬ್ಬರು ತಮ್ಮ ಮಕ್ಕಳಿಗೆ ತುಳು



ಭಾಷೆ ಕಲಿಕೆಗೆ ಪ್ರೋತ್ಸಾಹಿಸಬೇಕೆಂದರು.

ತುಳು ಕೂಟದ ಅಧ್ಯಕ್ಷ ಪಿ. ಸುಧಾಕರ ಶೆಟ್ಟಿ ಅಧ್ಯಕ್ಷತೆವಹಿಸಿದ್ದರು. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಸದಸ್ಯ ಕನ್ನಡ ಸಾಹಿತಿ ಕುಂಬ್ರ ದುರ್ಗಾ ಪ್ರಸಾದ್ ರೈ, ಡಾ. ಹರೀಶ ದೇಲಂತಬೆಟ್ಟು, ಡಾ. ವೈ. ಆನಂದ್, ನಾರಾಯಣ ಪೂಜಾರಿ, ಬಿ. ಸುಬ್ಬಣ್ಣ ರೈ, ಶಾಮರಾಯ ಆಚಾರ್ ಉಪಸ್ಥಿತರಿದ್ದರು. ಉಪಾಧ್ಯಕ್ಷ ಪ್ರಕಾಶ್ ಪಿಂಟೋ ಸ್ವಾಗತಿಸಿದರು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಅಭಿನಂದಿ ಸಲಾಯಿತು.

ಬೆಳಗ್ಗೆ ತುಳುನಾಡಿನ ಆಚರಣೆ-ಆರಾಧನೆಗಳ ಲೋಕ ದೃಷ್ಟಿ ಕನ್ನಡ ಜಗತ್ತಿಗೆ ತುಳು ಲೋಕದ ಪರಿಚಯ ಮಾಲಿಕೆ ಕಾರ್ಯಕ್ರಮ ನಡೆಯಿತು. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಿ. ಮಂಜುನಾಥ್ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಸದಸ್ಯ ಕನ್ನಡ ಸಾಹಿತಿ ಕುಂಬ್ರ ದುರ್ಗಾ ಪ್ರಸಾದ್ ರೈ ತುಳುನಾಡಿನ ಕೃಷಿ, ಬದುಕಿನ ಆಚರಣೆ-ಆರಾಧನೆಗಳು ಕುರಿತು ಉಪನ್ಯಾಸ ನೀಡಿದರು. ಕವಿಗಳಾದ ದೀಪ್ತಿ ಹರ್ಷ, ನಂದಿನಿ ಮಲ್ಲಿಕಾರ್ಜುನ, ಪೂರ್ಣಿಮ ಉಡುಪ, ಅಂಬಿಕಾ ದೇವರಾಜ್ ಭಾಗವಹಿಸಿದ್ದರು.

ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ದಯಾನಂದ್ ಆಯ್ಕೆ

ರಿಯಾಯಿತಿ ದರದಲ್ಲಿ ಹೈನುಗಾರಿಕೆ ಸಲಕರಣೆ ನೀಡಿ

• **ಚನ್ನರಾಯಪಟ್ಟಣ:** ತಾಲೂಕಿನ ಕಸಬಾ ಹೋಬಳಿ ದಿಂಡಗೂರು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ದಯಾನಂದ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಮಾಜಿ ಅಧ್ಯಕ್ಷ ಡಿ.ಎಂ. ಕೋಡಿಗೌಡ ಅವರ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ದಯಾನಂದ್ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ವಿಜಯೇಂದ್ರ ಘೋಷಿಸಿದರು.

ನೂತನ ಅಧ್ಯಕ್ಷರನ್ನು ಗೌರವಿಸಿ ಮಾತನಾಡಿದ ದಿಂಡಗೂರು ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಡಿ.ಕೆ. ಚೇತನ್, ರೈತರ ಬೆನ್ನೆಲುಬು ಹೈನುಗಾರಿಕೆಯಾಗಿದೆ. ನೂತನ ಅಧ್ಯಕ್ಷರು ಶಾಸಕರ ಸಹಕಾರದೊಂದಿಗೆ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಹುಲ್ಲು ಕತ್ತರಿಸುವ ಯಂತ್ರ, ಮ್ಯಾಟ್, ಹಾಲು ಕರೆಯುವ ಯಂತ್ರ ಸೇರಿದಂತೆ ಹೈನುಗಾರಿಕೆ ಸಲಕರಣೆಗಳನ್ನು ವಿತರಿಸಲು ಮುಂದಾಗಬೇಕು. ಮಳೆ ಕೊರತೆಯಾಗಿರುವುದರಿಂದ ಸಂಘದ ಮೂಲಕ ಮೇವಿನ ಬೀಜ ವಿತರಿಸಬೇಕು ಹಾಗೂ ಹಾಲಿನ ಹಣವನ್ನು ವಾರಕ್ಕೊಮ್ಮೆ ರೈತರ ಖಾತೆಗೆ ಜಮೆ



ಮಾಡಬೇಕು ಎಂದು ಮನವಿ ಮಾಡಿದರು.

ಸಂಘದ ಶಿಥಿಲಗೊಂಡಿರುವ ಕಟ್ಟಡದ ಪುನಃ ನಿರ್ಮಾಣಕ್ಕೆ ಧರ್ಮಸ್ಥಳ ಸಂಘದಿಂದ 2 ಲಕ್ಷ ರೂ. ಅನುದಾನ ಸಿಗಲಿದ್ದು, ಹಾಸನ ಹಾಲು ಒಕ್ಕೂಟ ಹಾಗೂ ಕೆಎಂಎಫ್‌ನಿಂದಲೂ ಅನುದಾನ ತಂದು ಹೊಸ ಕಟ್ಟಡ ನಿರ್ಮಿಸಬೇಕು ಎಂದು ಅವರು ಸಲಹೆ ನೀಡಿದರು.

ಸಭೆಯಲ್ಲಿ ಉಪಾಧ್ಯಕ್ಷೆ ಡಿ.ಪಿ.ವನಿತಾ, ಕಾರ್ಯದರ್ಶಿ ಡಿ.ಪಿ.ರಾಜು, ನಿರ್ದೇಶಕರಾದ ವಸಂತ, ಮಂಜೇಗೌಡ, ಕೋಡಿಗೌಡ, ಡಿ.ಎಚ್.ಕೃಷ್ಣ, ಶಂಕರ್, ವಿಜಯಲಕ್ಷ್ಮೀ, ಡಿ.ಆರ್.ಶಂಕರ್, ಡಿ.ವಿ. ಪವಿತ್ರ, ಪಿ.ಲಲಿತಮ್ಮ, ನಾಗರಾಜು, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಸಾಯಿಶ್, ಮಾಜಿ ಸದಸ್ಯ ಪುಟ್ಟೇಗೌಡ, ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ವಿಜಯ್, ಮುಖಂಡರಾದ ಸಣ್ಣಬೊಮ್ಮ, ಸಂಜು, ನಾಗು ಮೊದಲಾದವರಿದ್ದರು.

2 ಕೋಟಿ ಜನರಿಂದ ಯೋಗ: ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮಿ

ದಾಖಲೆಯ ಯೋಗಕ್ಕೆ ಸಿದ್ಧತೆ



ಮೈಸೂರು: ಅರಮನೆ ನಗರಿ ಮೈಸೂರಿನಲ್ಲೀಗ ಯೋಗ ಸುಪ್ರಸಿದ್ಧಿ ಆಗಿದೆ. ಇದನ್ನು ಎಲ್ಲ ಕಡೆಗೆ ವಿಸ್ತರಿಸುವ ನಿಟ್ಟಿನಲ್ಲಿ ಮುಂದಿನ ವರ್ಷ ರಾಜ್ಯಾದ್ಯಂತ 2 ಕೋಟಿ ಜನ ಯೋಗಾಭ್ಯಾಸ ಮಾಡುವಂತಾಗಬೇಕು ಎಂದು ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ ಸಲಹೆ ನೀಡಿದರು.

ಭಾನುವಾರ ಮೈಸೂರು ಯೋಗ ಒಕ್ಕೂಟದ ವತಿಯಿಂದ ನಗರದ ನಂಜನಗೂಡು- ಊಟಿ ರಸ್ತೆಯಲ್ಲಿರುವ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ 3ನೇ ಸಂಕಲ್ಪ ದಿವಸದ ಯೋಗ ಪೂರ್ವಾಭ್ಯಾಸವನ್ನು ಉದ್ಘಾಟಿಸಿ ಮಾತನಾಡಿದ ಅವರು,

ಮೈಸೂರಿನಲ್ಲಿ ವಿಶ್ವ ಯೋಗ ದಿನವನ್ನು ವರ್ಷದಿಂದ ವರ್ಷಕ್ಕೆ ದೊಡ್ಡ ಪ್ರಮಾಣದಲ್ಲಿ ಆಯೋಜಿಸಿಕೊಂಡು ಬರಲಾಗುತ್ತಿದೆ. ಇದೇ ವ್ಯವಸ್ಥೆಯನ್ನು ರಾಜ್ಯಮಟ್ಟಕ್ಕೆ ವಿಸ್ತರಿಸಬೇಕು. ಮುಂದಿನ ವರ್ಷ ರಾಜ್ಯದಲ್ಲಿ ಸುಮಾರು 2 ಕೋಟಿ ಜನ ಅವರು ಇರುವ ಕಡೆಗಳಲ್ಲೇ ಯೋಗ ಮಾಡುವಂತೆ ಆಗಬೇಕು ಎಂದು ಸಲಹೆ ನೀಡಿದರು.

ಪ್ರಸ್ತುತ ದಿನಗಳಲ್ಲಿ ಯೋಗಾಭ್ಯಾಸದತ್ತ ಎಲ್ಲರೂ ಮುಖ ಮಾಡಿದ್ದಾರೆ. ಇದು ವ್ಯಕ್ತಿಯ ಶಾರೀರಿಕ ಅಂಗಸಾಧನೆಯಾದರೂ, ಸಾರ್ವಜನಿಕವಾಗಿ ಇಡೀ ಸಮಾಜ ಪಾಲ್ಗೊಳ್ಳುವುದರಿಂದ ಎಲ್ಲರಲ್ಲೂ ಉತ್ತಮ ಬಾಂಧವ್ಯ ಬೆಳೆಯುತ್ತದೆ. ಕೋವಿಡ್ ನಂತರದ ಕಾಲಮಾನದಲ್ಲಿ ಸಾಮಾಜಿಕವಾಗಿ ಒಂದೆಡೆ ಸೇರುವುದೇ ಕಡಿಮೆಯಾಗಿದೆ. ಹೊಸ ಚಿಂತನೆಗಳಿಂದ ಸಮಾಜವನ್ನು ಸದೃಢಗೊಳಿಸಬೇಕಿದೆ ಎಂದರು. ಎಲ್ಲ ಧರ್ಮಗಳಲ್ಲೂ ಒಳ್ಳೆಯ ಬೋಧನೆಗಳು ಇರುತ್ತವೆ. ಪ್ರಾರ್ಥನೆ ಹಾಗೂ ಧ್ಯಾನದ ಸಂಗಮವೇ ಯೋಗಾಭ್ಯಾಸವಾಗಿದೆ. ಮಾಧ್ಯಮಗಳಲ್ಲಿ ನಗರಗಳ ಯುವಜನತೆ ವ್ಯಸನಿಗಳಾದ ಸುದ್ದಿಗಳನ್ನು ಓದುವಾಗ ಬೇಸರವಾಗುತ್ತದೆ. ಎಲ್ಲ ದುಶ್ಚಟಗಳನ್ನು ದೂರವಾಗಿಸಿಕೊಳ್ಳಲು ವಯಸ್ಸಿನ ಇತಿಮಿತಿ ಇಲ್ಲದೆ ಸರ್ವ ಜನರ ಆರೋಗ್ಯ ಹಾಗೂ ದೈಹಿಕ ಚಲನಶೀಲತೆ ಹೆಚ್ಚಿಸುವ ಯೋಗವನ್ನು ಎಲ್ಲರೂ ಅನುಸರಿಸಬೇಕು ಎಂದು ಹೇಳಿದರು. ಶಾಸಕ ಟಿ.ಎಸ್. ಶ್ರೀವತ್ಸ ಮಾತನಾಡಿ, ಮೈಸೂರು ಎಂದರೆ ಯೋಗವೇ ಆಗಿದೆ. ಪ್ರಧಾನಿ ಮೋದಿ ಅವರು ಮೈಸೂರಿನಲ್ಲಿ ಯೋಗ ದಿನ ಆಚರಣೆಯಲ್ಲಿ ಪಾಲ್ಗೊಂಡ ನಂತರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಯೋಗಕ್ಕೆ ಪ್ರಾಮುಖ್ಯತೆ ದೊರಕಿದೆ. ಪ್ರತಿ ವರ್ಷ ಮೈಸೂರಿನ ಯೋಗ ಕಾರ್ಯಕ್ರಮವನ್ನು ಇತರೆ ರಾಜ್ಯಗಳು ಮಾದರಿಯನ್ನಾಗಿ ಅಳವಡಿಸಿಕೊಳ್ಳುತ್ತಿವೆ. ನಾನು ಪ್ರತಿದಿನವೂ ಯೋಗದ ಕೆಲವು ಆಸನಗಳನ್ನು ಅಭ್ಯಾಸಿಸುತ್ತಿದ್ದೇನೆ. ಇಂತಹ ಮೈಸೂರು ನಗರದ ಶಾಸಕನಾಗಿ ನಾನು ಇರುವುದು ನನ್ನ ಯೋಗಾಯೋಗ, ಅದೃಷ್ಟವೇ ಸರಿ ಎಂದರು.

ಜಿಲ್ಲಾ ಆಯುಷ್ ಅಧಿಕಾರಿ ರೇಣುಕಾದೇವಿ ಮಾತನಾಡಿ, ರಾಜ್ಯದ ಆರೋಗ್ಯ, ಯೋಗ ಯೋಜನೆಯಲ್ಲಿ ಮೈಸೂರು ಜಿಲ್ಲೆ ಹಾಗೂ ನಂಜನಗೂಡು ತಾಲೂಕನ್ನು ಪ್ರಾಯೋಗಿಕವಾಗಿ ಆಯ್ಕೆ ಮಾಡಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀದತ್ತ ಅಂತಾರಾಷ್ಟ್ರೀಯ ಯೋಗ ಕೇಂದ್ರ ಮುಖ್ಯಸ್ಥ ರಾಮೇಶ್ವರ ರಾಜು, ಭಾರತ್ ಸ್ವಾಭಿಮಾನ ಟ್ರಸ್ಟ್‌ನ ಮಧು, ಯೋಗ ಸ್ಪೋರ್ಟ್ಸ್ ಫೆಡರೇಷನ ಡಾ.ಗಣೇಶ್ ಕುಮಾರ್, ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಕೆ.ಜಿ.ದೇವರಾಜ್, ಶಿವಪ್ರಕಾಶ್, ಪಶುಪತಿ, ಮೈಸೂರಿನ ಶ್ರೀ ಪತಂಜಲಿ ಯೋಗ ಶಿಕ್ಷಣ ಸಂಸ್ಥೆಯ ನಂಜುಂಡಸ್ವಾಮಿ, ಮೃತ್ಯುಂಜಯ, ಜಿಎಸ್‌ಎಸ್ ಯೋಗ ಸಂಸ್ಥೆಯ ಸರಳ ಹಾಗೂ ರೂಪಶ್ರೀ ಸೇರಿದಂತೆ ವಿವಿಧ ಯೋಗ ಸಂಸ್ಥೆಗಳ ಪ್ರಮುಖರು ಭಾಗವಹಿಸಿದ್ದರು.

500ಕ್ಕೂ ಹೆಚ್ಚು ಜನರಿಂದ ಯೋಗಾಭ್ಯಾಸ

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಆಯೋಜಿಸಿದ್ದ ಸಂಕಲ್ಪ ದಿನದಲ್ಲಿ 500ಕ್ಕೂ ಹೆಚ್ಚು ಯೋಗಪಟುಗಳು ವಿಶ್ವ ಯೋಗ ದಿನದ ಶಿಷ್ಟಾಚಾರದನ್ವಯ ಯೋಗ ತಾಲೀಮು ನಡೆಸಿದರು. ಯೋಗ ಪೂರ್ವಾಭ್ಯಾಸದಲ್ಲಿ ಯೋಗಪಟುಗಳು, ಸಾಧಕರು ಹಾಗೂ ಬೋಧಕರು ಭಾಗವಹಿಸಿದ್ದರು. ಸುಮಾರು 45 ನಿಮಿಷಗಳ ಕಾಲ ಪ್ರಾರ್ಥನೆ, ಚಾಲನಾ ಕ್ರಿಯೆ, ತಾಡಾಸನ, ವೃಕ್ಷಾಸನ, ಪಾದ-ಹಸ್ತಾಸನ, ಅರ್ಧ ಚಕ್ರಾಂತಾಸನ ಮತ್ತು ತ್ರಿಕೋಣಾಸನ, ಭದ್ರಾಸನ, ವಜ್ರಾಸನ, ಅರ್ಧ ಉಷ್ಟ್ರಾಸನ, ಉಷ್ಟ್ರಾಸನ, ಶಶಕಾಸನ, ಉತ್ತಾನ ಮಂಡೂಕಾಸನ ಮತ್ತು ವಕ್ರಾಸನ, ಮಕರಾಸನ, ಭುಜಂಗಾಸನ, ಶಲಭಾಸನ, ಸೇತುಬಂಧಾಸನ, ಉತ್ತಾನಪಾದಾಸನ, ಅರ್ಧಹಲಾಸನ, ಪವನಮುಕ್ತಾಸನ ಅಭ್ಯಾಸ ಮಾಡಲಾಯಿತು. ಕಪಾಲಭಾತಿ, ಪ್ರಾಣಾಯಾಮ, ನಾಡಿಶೋಧನೆ, ಧ್ಯಾನದೊಂದಿಗೆ ತಾಲೀಮು ಪೂರ್ಣಗೊಳಿಸಲಾಯಿತು.

ಮುನಿಸು ಮರೆತು ವೇದಿಕೆಯಲ್ಲಿ ಮೈತ್ರಿ ಪಕ್ಷದ ನಾಯಕರ ಸಂಗಮ



ಮರೆದು ಒಂದೇ ವೇದಿಕೆಯಲ್ಲಿ ಭಾಗಿಯಾಗಿದ್ದರು. ಬಿಜೆಪಿ ಹಾಗೂ ಜೆಡಿಎಸ್‌ನ ಜಿಲ್ಲೆಯ ಎಲ್ಲಾ ಮುಖಂಡರೂ ಭಾಗಿಯಾಗಿದ್ದರು. ಜೊತೆಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹಾಗೂ ಮಾಜಿ ಸಚಿವ ಕೆ.ಸಿ.ನಾರಾಯಣಗೌಡ ಅಕ್ಕ ಪಕ್ಕ ಕುಳಿತು ಖುಷಿಯಿಂದಲೇ ಮಾತುಕತೆ ನಡೆಸಿದ್ದು ವಿಶೇಷವಾಗಿತ್ತು.

ಮಂಡ್ಯ: ಜೆಡಿಎಸ್ ಮತ್ತು ಬಿಜೆಪಿ ನಾಯಕರು ಮುನಿಸು ಮರೆತು ಒಂದೇ ವೇದಿಕೆಯಲ್ಲಿ ಕಾಣಿಸಿಕೊಳ್ಳುವ ಮೂಲಕ ಮೈತ್ರಿಯಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ ಎಂದು ಸಾಬೀತುಪಡಿಸಿದರು.

ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ನಡೆದ ಪ್ರಧಾನಿ ನರೇಂದ್ರ ಮೋದಿ 12 ವರ್ಷ ಸುದೀರ್ಘ ಆಡಳಿತ ಸ್ಮರಣೆ ಕಾರ್ಯಕ್ರಮದಲ್ಲಿ ಭಾಗಿಯಾದ ಜೆಡಿಎಸ್ ಮತ್ತು ಬಿಜೆಪಿ ನಾಯಕರು ಎಲ್ಲ ಮುನಿಸನ್ನೂ ಬದಿಗೊತ್ತಿ ಸಂತಸದಿಂದಲೇ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದು ವಿಶೇಷವಾಗಿತ್ತು.

ಮಂಡ್ಯ ಲೋಕಸಭಾ ಕ್ಷೇತ್ರದ ಸದಸ್ಯರು ಆದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಸಮ್ಮುಖದಲ್ಲಿ ವೇದಿಕೆ ಹಂಚಿಕೊಂಡ ಉಭಯ ಪಕ್ಷಗಳ ಮುಖಂಡರು ಕಾರ್ಯಕ್ರಮವನ್ನು ಸುಸೂತ್ರವಾಗಿ ನಡೆಸಿಕೊಟ್ಟರು. ಇತ್ತೀಚೆಗಷ್ಟೇ ಬಿಜೆಪಿ-ಜೆಡಿಎಸ್ ಮುಖಂಡರು ಪರಸ್ಪರ ವಾಗ್ವಾಳಿ ಮಾಡಿಕೊಂಡಿದ್ದರು. ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಸೀಟು ಹಂಚಿಕೆ ವಿಚಾರದಲ್ಲೂ ವಾಗ್ವಾದ ನಡೆದಿತ್ತು. ಮೈತ್ರಿಯೇ ಬೇಡ ಎಂದು ಉಭಯ ಪಕ್ಷಗಳ ಮುಖಂಡರು ಹೇಳಿಕೆ ನೀಡಿದ್ದರು. ಜೆಡಿಎಸ್ ವಿರುದ್ಧ ರಾಜ್ಯ ಬಿಜೆಪಿ ನಾಯಕರಿಗೂ ದೂರು ನೀಡಿದ್ದರು. ಬಿಜೆಪಿ ಮುಖಂಡರ ವಿರುದ್ಧವೂ ಜೆಡಿಎಸ್ ನಾಯಕರು ವಾಗ್ದಾಳಿ ನಡೆಸಿದರು. ಇದೀಗ ಎಲ್ಲ ಮುನಿಸನ್ನೂ

ಜಿಲ್ಲಾಭಿವೃದ್ಧಿಗೆ ಹಲವು ಕಾರ್ಯಕ್ರಮ



ಕಾರ್ಯಕ್ರಮದಲ್ಲಿ ಶಾಸಕ ಪಿ.ರವಿಕುಮಾರ್, ಜಿಲ್ಲಾಧಿಕಾರಿ ಡಾ. ಕುಮಾರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಕೆ.ಆರ್. ನಂದಿನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎ.ಜಿ. ಶೋಭರಾಣಿ, ನಗರಸಭಾ ಆಯುಕ್ತರಾದ ಪಂಪಶ್ರೀ ಇತರರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಮಂಡ್ಯ: ಜಿಲ್ಲೆಯ ಅಭಿವೃದ್ಧಿ ಜೊತೆಗೆ ಮಕ್ಕಳ ಆಹಾರ ಮತ್ತು ಆರೋಗ್ಯ ಸಮಸ್ಯೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿದ್ದು ಭಾನುವಾರ ಚಾಲನೆ ಮಾಡಲಾಗುತ್ತಿದೆ ಎಂದು ಕೇಂದ್ರ ಸರ್ಕಾರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ನಗರಸಭಾ ಆವರಣದಲ್ಲಿ ನಡೆದ ಮಂಡ್ಯ ನಗರಸಭೆಗೆ ಕೇಂದ್ರ ಸರ್ಕಾರದ 15ನೇ ಹಣಕಾಸು ಪುರಸ್ಕೃತ ಯೋಜನೆಯಡಿ ಹೊಸದಾಗಿ ಜಾರ್ಸಿ ಮೌಂಟೆಡ್ ಸ್ವೀಪಿಂಗ್ ವಾಹನವನ್ನು ಚಾಲನೆ ನೀಡಿ ಮಾತನಾಡಿದರು. ಮಂಡ್ಯ ಜಿಲ್ಲೆಯಲ್ಲಿ 1.5 ಕೋಟಿ ರೂ.ಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗಿದ್ದು ಕಾರ್ಯಕ್ರಮದಲ್ಲಿ ಭಾಗವಹಿಸುವುದಾಗಿ ತಿಳಿಸಿದರು. ಕೇಂದ್ರ ಸರ್ಕಾರ ಯೋಜನೆಗಳ ಮೂಲಕ ದೇಶದ ಸಮಗ್ರ ಅಭಿವೃದ್ಧಿ ಹಾಗೂ ಯೋಜನೆಗಳು, ಕುಟುಂಬಗಳಿಗೆ ದೊರಕುವ ನಿಟ್ಟಿನಲ್ಲಿ ಮೋದಿ ಅವರು ಹಲವಾರು ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿದ್ದಾರೆ. ದೇಶದ ಅಭಿವೃದ್ಧಿ ಜೊತೆಗೆ 2047ಕ್ಕೆ ವಿಕಸಿತ ಭಾರತವನ್ನು ಮಾಡುವ ದೃಷ್ಟಿಕೋನ ಇಟ್ಟುಕೊಂಡು ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ ಎಂದರು.

ಬಾಲ್ಯದಿಂದಲೇ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಅಗತ್ಯ



ದಿತ್ಯ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಹೇಮಂತ್ ಕುಮಾರ್ ಹೇಳಿಕೆ

ಪಾಂಡವಪುರ: ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಕ್ಕಳಿಗೆ ಬಾಲ್ಯದಿಂದಲೇ ಗುಣಮಟ್ಟದ ಶಿಕ್ಷಣವನ್ನು ಕೊಡಿಸಬೇಕು ಎಂದು ಆದಿತ್ಯ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಹೇಮಂತ್ ಕುಮಾರ್ ಹೇಳಿದರು. ಪಟ್ಟಣದ ಆದಿತ್ಯ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಅಕ್ಷರಾಭ್ಯಾಸ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಅಕ್ಷರಾಭ್ಯಾಸ ಕಾರ್ಯಕ್ರಮಗಳನ್ನು ಪೂರ್ವದಲ್ಲಿ ಗುರುಕುಲದಲ್ಲಿ ನಡೆಸಲಾಗುತ್ತಿತ್ತು. ಇದೀಗ ಮಕ್ಕಳಿಗೆ ಶಿಕ್ಷಣದ ಬಗ್ಗೆ ಆಸಕ್ತಿ ಮೂಡಿಸಲೆಂದು ನಮ್ಮ ಶಾಲೆಯಲ್ಲೂ ಸಹ ಆಯೋಜಿಸಿ ಪೋಷಕರಿಂದ ಮಕ್ಕಳಿಗೆ ಅಕ್ಷರ ತಿದ್ದಿಸುವ ಮೂಲಕ ಅಕ್ಷರಾಭ್ಯಾಸ ನಡೆಸಲಾಗುತ್ತಿದೆ ಎಂದರು. ಮಕ್ಕಳಿಗೆ ಶಿಕ್ಷಣ ಎಷ್ಟು ಮುಖ್ಯವೋ ಅಷ್ಟೇ ಸಂಸ್ಕಾರ, ಮಾನವೀಯ ಮೌಲ್ಯಗಳುಳ್ಳ ಗುಣಗಳು ಸಹ ಬಹಳ ಮುಖ್ಯ. ಪೋಷಕರು ಮನೆಯಲ್ಲಿ ಮಕ್ಕಳಿಗೆ ಸಂಸ್ಕಾರ ಬೆಳೆಸುವ ಕೆಲಸ ಮಾಡಬೇಕು. ಶಾಲೆಯಲ್ಲಿ ಓದುವ ಜತೆಗೆ ಮನೆಯಲ್ಲೂ ಸಹ ಮಕ್ಕಳಿಗೆ ಓದಿಸುವ ಜವಾಬ್ದಾರಿಯನ್ನು ಪೋಷಕರು ಹೊರಬೇಕಾಗಿದೆ ಎಂದು ಸಲಹೆ ನೀಡಿದರು. ಸಂಸ್ಥೆ ಅಧ್ಯಕ್ಷೆ ಯಶೋಧಮ್ಮ, ಖಜಾಂಚಿ ಶ್ರುತಿ, ಮುಖ್ಯ ಶಿಕ್ಷಕಿ ಶ್ವೇತಾ ಸೇರಿದಂತೆ ಪೋಷಕರು ಹಾಜರಿದ್ದರು.

ಡೇರಿಯಲ್ಲಿದ್ದ ಜಡ ಸರಕು ವಿಲೇವಾರಿ



ಪಾಂಡವಪುರ: ತಾಲೂಕಿನ ಬೀರಶೆಟ್ಟಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಜಡ ಸರಕು ಅಥವಾ ಮಾರಾಟವಾಗದ ದಾಸ್ತಾನುಗಳನ್ನು (ಡೆಡ್ ಸ್ಟಾಕ್) ವಿಲೇವಾರಿ ಮಾಡಲಾಯಿತು. ಸಂಘದ ಅಧ್ಯಕ್ಷ ಪಿ.ದಿವಾಕರ, ಉಪಾಧ್ಯಕ್ಷ ಗೋ. ರಮೇಶ್, ಹಾಗೂ ಆಡಳಿತ ಮಂಡಳಿ ಸದಸ್ಯರು ಮತ್ತು ಮಾರ್ಗ ವಿಸ್ತೀರ್ಣಾಧಿಕಾರಿ ನಾಗೇಂದ್ರಕುಮಾರ್ ಅವರ ಸಮ್ಮುಖದಲ್ಲಿ ಅನೇಕ ವಸ್ತುಗಳನ್ನು ವಿಲೇವಾರಿ ಮಾಡಲಾಯಿತು. ಈ ವೇಳೆ ಹಳೇ ಬಿಲ್ ಬುಕ್ 375[3]=1125ರೂ, ಪ್ಲಾಸ್ಟಿಕ್ 10[5]=50ರೂ, ದಿನಪತ್ರಿಕೆ 18[16]=288ರೂ, ರಟ್ಟುಗಳು 15[10]=150 ರೂ, ಶಿಥಿಲಗೊಂಡ ಹಾಲಿನಕ್ಯಾನ್ ಗಳು 20[240]=4800 ರೂ, ಕಬ್ಬಿಣ 2X30=780ರೂ, ಮರದ ಶೀಟ್ ಗಳು 500 ರೂ, ಸೇರಿದಂತೆ ಮಾರಾಟವಾದ ಒಟ್ಟು 7693 ರೂ. ಮೊತ್ತವನ್ನು ಸಂಘದ ಖಾತೆಗೆ ಜಮಾ ಮಾಡಲಾಗಿದೆ ಎಂದು ಅಧ್ಯಕ್ಷ ಪಿ.ದಿವಾಕರ ಅವರು ತಿಳಿಸಿದ್ದಾರೆ. ಈ ವೇಳೆ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಪಿ.ದಿವಾಕರ, ಉಪಾಧ್ಯಕ್ಷ ಗೋ.ರಮೇಶ್. ನಿರ್ದೇಶಕರಾದ ಸಿ.ಮಧುಸೂದನ್, ಪಿ.ವಿಶ್ವನಾಥ್, ಆನಂದ, ಪ್ರಭಾರ ಕಾರ್ಯದರ್ಶಿ ಗುರುಕುಮಾರ್, ಸಹಾಯಕ ಅಖಿಲೇಶ್ ಹಾಗೂ ಇತರರು ಉಪಸ್ಥಿತರಿದ್ದರು.



ಹೆಬ್ಬಾವು ರಕ್ಷಿಸಿದ ಸ್ನೇಕ್ ಸಿದ್ದರಾಜು

ಶ್ರೀರಂಗಪಟ್ಟಣ: ತಾಲೂಕಿನ ಬೆಳಗೊಳ ಗ್ರಾಮದ ಬಳಿಯ ನಾಲೆ ಏರಿ ಮೇಲೆ ಕಾಣಿಸಿಕೊಂಡ ಬಾರಿ ಗಾತ್ರದ ಹೆಬ್ಬಾವನ್ನು ರಕ್ಷಣೆ ಮಾಡಿ ಕಾಡಿಗೆ ಬಿಡಲಾಗಿದೆ.

ಗ್ರಾಮದ ನಾಲೆ ಏರಿ ಮೇಲೆ ರೈತರು ತಮ್ಮ ಜಮೀನಿಗೆ ಹೋಗುವ ವೇಳೆ ಏರಿ ರಸ್ತೆಯ ಮಧ್ಯದಲ್ಲಿ ಹೆಬ್ಬಾವು ನಿಧಾನವಾಗಿ ಚಲಿಸುತ್ತಿದ್ದುದ್ದನ್ನು ಗಮನಿಸಿದ ರೈತರು ಭಯಗೊಂಡು ಗ್ರಾಮದ ಸ್ನೇಕ್ ಸಿದ್ದರಾಜು ಎಂಬುವರಿಗೆ ವಿಷಯ ಮುಟ್ಟಿಸಿದ್ದಾರೆ. ತಕ್ಷಣ ಸಿದ್ದರಾಜು ಸ್ಥಳಕ್ಕೆ ಆಗಮಿಸಿ, ಸುಮಾರು 10 ಅಡಿ ಉದ್ದ ಹಾಗೂ ಸುಮಾರು 20 ರಿಂದ 30 ಕೆ.ಜಿ ತೂಕದ ಹೆಬ್ಬಾವನ್ನ ಹಿಡಿದು ಗ್ರಾಮಕ್ಕೆ ತಂದು ಗ್ರಾಮಸ್ಥರಿಗೆ ಮಾಹಿತಿ ನೀಡಿ ನಂತರ ಹೆಬ್ಬಾವನ್ನು ಕಾಡಿಗೆ ಬಿಡುವುದಾಗಿ ಕೊಂಡೊಯ್ದರು.

ಶ್ರೀಮಠದ ಉದ್ಧಾರಕ್ಕೆ ಶ್ರಮಿಸಿದ ಮಂಡ್ಯ ಜನ

ಮಂಡ್ಯ: ಮಂಡ್ಯ ಜಿಲ್ಲೆಯ ಜನತೆ ಶ್ರೀಮಠದ ಉದ್ಧಾರಕ್ಕೆ ಶ್ರಮಿಸಿದ್ದಾರೆ, ಅಪಾರ ಕೊಡುಗೆ ನೀಡಿದ್ದಾರೆ, ಅದೇ ರೀತಿ ಕೆಂಗೇರಿಯಲ್ಲಿರುವ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಸೇವಾಕಾರ್ಯಕ್ಕೂ ಅಪಾರ ಕೊಡುಗೆ ಸಾಧ್ಯವಾಗಲಿ ಎಂದು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ನಿಶ್ಚಲಾನಂದನಾಥ ಸ್ವಾಮೀಜಿ ಆಶಿಸಿದರು. ನಗರದ ಗಾಂಧಿ ಭವನದಲ್ಲಿ ನಂಜಮ್ಮ ಮೋಟೆಗೌಡ ಚಾರಿಟಬಲ್ ಮತ್ತು ಎಜುಕೇಷನಲ್ ಟ್ರಸ್ಟ್ ಕೊಪ್ಪ ವತಿಯಿಂದ ಆಯೋಜಿಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಹಾಗೂ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು. ಶ್ರೀಕ್ಷೇತ್ರದ ಮಠದಲ್ಲಿ ಅನ್ನದಾನ ನಡೆಯುತ್ತಿದೆ, ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ನೀಡಲು ಸಕಲ ಸಿದ್ಧತೆ ನಡೆಯುತ್ತಿದೆ, ಉದ್ಯಮಿ ಸ್ಟಾರ್ ಚಂದ್ರು ಅವರು ಮಠಕ್ಕೆ ವಾಹನಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಮಂಡ್ಯ ಜಿಲ್ಲೆಯ ಜನತೆಯನ್ನು ಶ್ರೀಮಠ ಸದಾ ಸ್ಮರಿಸುತ್ತದೆ ಎಂದು ಹೇಳಿದರು. ಹಿಂದೆ ಸಮಾಜ ಮಠಗಳನ್ನು ಬೆಳೆಸಿ, ಉದ್ಧಾರವಾಗಲು ಉದಾರವಾಗಿ ನೆರವಾಗುತ್ತಿದ್ದವು. ಅದೇ ರೀತಿಯಲ್ಲಿ ಇಂದಿನ ಸಮಾಜಗಳು ಮಠಗಳನ್ನು ಕೈಹಿಡಿಯಬೇಕಿದೆ ಎಂದರು. ಬಳಿಕ ಮಾತನಾಡಿದ ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ಆಧ್ಯಾತ್ಮಿಕ ಚಿಂತನೆ ಮತ್ತು ಸಂಸ್ಕಾರ-ಸಂಸ್ಕೃತಿ ಬೆಳವಣಿಗೆಗೆ ಶ್ರೀಮಠಗಳ ಪಾತ್ರ ದೊಡ್ಡದು, ಅನಾರೋಗ್ಯ ಬಂದರೆ ಆಸ್ಪತ್ರೆಗೆ ಹೋಗುತ್ತೇವೆ, ಮಾನಸಿಕ ನೆಮ್ಮದಿಗೆ ಶ್ರೀಕ್ಷೇತ್ರ ಮಠಗಳಿಗೆ ತೆರಳಿದಾಗಿ ಶಾಂತಿ ಲಭಿಸುತ್ತದೆ ಎಂದು ಹೇಳಿದರು.

ಹಾವೇರಿಯ ಪ್ರಧಾನ ಸಿವಿಲ್ ಜಡ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯದಲ್ಲಿ

ಓ.ಎಸ್. ನಂ. 42/2025

ವಾದಿ: ಸಮೀರ್ ಮಹಾವೀರ್ ಗೌತಮ್

ವಿರುದ್ಧ

ಪ್ರತಿವಾದಿಗಳು: ಆರ್.ಜಿ. ಮಹಾವೀರ್ ಮತ್ತು ಇನ್ನೊಬ್ಬರು

1ನೇ ಪ್ರತಿವಾದಿ : ಆರ್. ಜಿ. ಮಹಾವೀರ್ ಬಿನ್ ಎ. ಗಂಗಾಧರ ರಾವ್, ವಯಸ್ಸು 60 ವರ್ಷ, ... [illegible]

CHANGE OF NAME

I, Sri. Sanjib Panja @ Sandeep Paja, S/o Sri. Sukumar Panja @ Shivakumar Paja, aged about 48 years, presently residing at 34, Saraswati Nilaya, Venkata Charinagar, Rmv 2nd stage, Bangalore urban, Bengaluru-560094, Karnataka, India, and also having my permanent address at, #172, Near Timbar Wood Shop, Nagashetty Halli, Bangalore North, District: Bangalore-560094, I declare that below mentioned both names **"Sandeep Paja"** and **"Sanjib Panja"** refer to one and the same person, namely myself, and I declare that the names **"Sukumar Panja", "Sukumar", "Shiva Kumar Panja"**, and **"Shivakumar Paja"** refer to one and the same person, namely my father, vide affidavit dated 12/6/2026 sworn to before H H Nagaraj Advocate and Notary Bangalore.

CHANGE OF NAME

I, **POOJA RITESH AGRAWAL**, Wife of Ritesh Mahavir Agrawal, Daughter of Vinod Gopikisan Namodiya, Aged about 34 years, Presently residing at Flat No. C8, 2nd Floor, AHP Woods, Spring Dale Layout, Opposite to GCN Green Springs Apartment, Vijayanagara, Whitefield, Bangalore - 560 066, do hereby declare that I have changed my name from **POOJA VINODKUMAR NIMODIYA** to **POOJA RITESH AGRAWAL**. Vide affidavit dated 13.06.2026 sworn before Ramachandrappa .C, Advocate & Notary Public, Government of India, Bengaluru.

IN THE COURT OF THE PRINCIPAL CIVIL JUDGE AND J.M.F.C.AT TIPTUR

C.MIS.NO.353/2025

PETITIONERS: **Basavaraju** S/o Late Narasimhaiah Aged about 40 years, Residing at Kamagondanahalli Village Kibbanahalli Village, Tiptur Taluk.

//VS//

RESPONDENT; The Registrar, The Registration of Birth and Death Tahasildar, Taluk Office Tiptur.

PAPER PUBLICATION

That the petitioners have filed the above petition under section 13(3) of Registration of Birth and Death Act, for obtaining Death Certificate of my father 'Narasimhaiah S/o SannaNarasaiah' who is My Father of petitioner and he was died 13/04/2021 at Kamagondanahalli Village, Kibbanahalli Hobli, Tiptur Taluk, Tumkur District. The case is posted for hearing on 20-07-2026 at 11-00 A.M. If anybody has any objection or interest, in this behalf, they may come personally or through their Advocate before this Hon'ble court, otherwise, the case will be decided one side.

Given Under my hand with seal of the Court on this 06th day of June 2026

By order of court
Sheristedar, Principal Civil Judge & J.M.F.C at Tiptur

K.B.Lingappa, Advocate, Tiptur
Place: Tiptur, Date: 04-06-2026

BEFORE THE MOTOR ACCIDENT CLAIMS TRIBUNAL AT BENGALURU (SCCH-18)

M. V. C. No. 6196 of 2024

BETWEEN : Mrs. Shekar Ravindra Bakshi :Petitioners

AND : Mr. Nandeesha C and another :Respondents

Notice to Respondent No.1

Mr. Nandeesha C S/o Chinnaswamy R/at. #19, Banashankari Nilaya, 3rd Cross, Green View Layout, Sanjeevappa Road, Mylasandra, Kengeri Hobli, Bangalore South, Bengaluru -560 059 (Owner of the Auto bearing No. KA-01-AN-1722)

Whereas the petitioner above named have filed a petition against you seeking compensation of Rs.15,00,000/- for the injuries suffered by him in Road Traffic Accident on 14-07-2024 at about 10-30 P.m. on Near Siddaiah Puranik road near, Priyadarshini hotel, Bengaluru, involving your Auto bearing No.KA-01-AN-1722, owned by you. You are hereby summoned to appear before this court in person or by a pleader on **17/07/26 at 11.00 A.M.** to answer the same, failing which the petition will be disposed off exparte.

Given under my hand and seal of this court this 11th day of June 2026.

By Order of the Court
Sd/- Assistant Registrar
Court of Small Causes, Bangalore

Advocate for Petitioner Shankar A.C.
SMM Law Associates
No.40, "S" 2nd Main, 1st Stage, 2nd Phase, Chandra Layout, Bangalore -560040

ಮಂಡ್ಯ ಗೌರಿಬಿದನೂರು ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ... [illegible]

ಪಿ.ಮಿಸ್.ನಂ. 201/2026

[illegible]

ಪ್ರಮಾಣ ಪತ್ರ

... 45 ವರ್ಷ ... ನಂ.59, ... ಬೆಂಗಳೂರು-560073 ... (SATHISHA B) ... N6481257 ... (SATHISH BHOOVANAHALLI) ... 11.06.2026 ... [illegible]

ಮಂಡ್ಯ ಗೌರಿಬಿದನೂರು ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ... [illegible]

ಪಿ.ಮಿಸ್.ನಂ. 200/2026

[illegible]

AFFIDAVIT

I, **VINOD GOPIKISAN NIMODIYA**, son of Gopikisan Nimodiya, Aged about 58 years, permanent residing at Dhamangaon Road, Gandhinagara, Yavatmal, Maharastra - 445001, Presently residing at Flat No. C8, 2nd Floor, AHP Woods, Spring Dale Layout, Opposite to GCN Green Springs Apartment, Vijayanagara, Whitefield, Bangalore - 560 066, do hereby declare that the names **VINODKUMAR GOPIKISANJI NIMODIYA** and **VINOD GOPIKISAN NIMODIYA** refer to one and the same person, i.e., myself. Vide affidavit dated 13.06.2026 sworn before Ramachandrappa .C, Advocate & Notary Public, Government of India, Bengaluru.

AFFIDAVIT

I, **POONAM VINOD NIMODIYA**, Wife of Vinod Gopikisan Nimodiya, Aged about 59 years, permanent residing at Dhamangaon Road, Gandhinagara, Yavatmal, Maharastra - 445001, Presently residing at Flat No. C8, 2nd Floor, AHP Woods, Spring Dale Layout, Opposite to GCN Green Springs Apartment, Vijayanagara, Whitefield, Bangalore - 560 066, do hereby declare that the names **POONAM VINODKUMAR NIMODIYA** and **POONAM VINOD NIMODIYA** refer to one and the same person, i.e., both the names are pertains myself only. Vide affidavit dated 13.06.2026 sworn before Ramachandrappa .C, Advocate & Notary Public, Government of India, Bengaluru.

BEFORE THE MOTOR ACCIDENT CLAIMS TRIBUNAL AT BENGALURU (SCCH-18)

M. V. C. No. 9550 of 2025

BETWEEN : Mrs. Sanju P :Petitioners

AND : Mr. Shekshavali and another :Respondents

Notice to Respondent No.1

Mr. Shekshavali S/o Ramajan Sab R/at 150, Kariyammana Agrahara, Near Patel Public School, Bellandur Post, Bengaluru -560103. (Owner of Motorcycle No.KA-01-KE-4533)

Whereas the petitioner above named have filed a petition against you seeking compensation of Rs.15,00,000/- for the injuries suffered by him in Road Traffic Accident on 25-06-2025 at about 11-00 P.M. Near Infront of BMTC Bus Depot-31 Outer ring Road, Sumanahalli, Bengaluru, involving your Two Wheeler No.KA-01-KE-4533, owned by you. You are hereby summoned to appear before this court in person or by a pleader on **17/07/26 at 11.00 A.M.** to answer the same, failing which the petition will be disposed off exparte.

Given under my hand and seal of this court this 11th day of June 2026.

By Order of the Court
Sd/- Assistant Registrar
Court of Small Causes, Bangalore

Advocate for Petitioner Shankar A.C.
SMM Law Associates
No.40, "S" 2nd Main, 1st Stage, 2nd Phase, Chandra Layout, Bangalore -560040

ಮಾನ್ಯ 14ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ... ಬೆಂಗಳೂರು

[illegible]

PUBLIC NOTICE

This is to inform the general public that my client **Sri.C.Babu** S/o Chandrappa Aged about 39 Years, Residing at No. 70, Janthagondana Halli, Varthur, Bangalore-560 087, he is the absolute owner of the **Property bearing No.81, E-Khatha No.150200101600120611, New Sy.No.81, Old Sy.No.35/299, Duly converted from Agriculture to non agricultural** Educational Institutions (School/College) Purpose Vide order No. ALN(ASH)SR146/2022-23 issued by the Deputy Commissioner, Bangalore Rural District, Situated at Janthagondanahalli Village, Sarjapura Hobli, Anekal Taluk, Bangalore Urban District, Presently comes under the limits of Nerega Grama Panchyath, **Measuring 2023.428000 Square Meters or 0.20 Guntas**, along with Building Constructed thereon and bounded on East by: Property belongs to Jagurappa, West by: Property belongs to G.Vedavathi, North by: Nagena Agrahara Border, South by : Road, my client has lost his **1)Original Unregistered General Power of attorney dated 27.01.2011, 2)Original Registered GPA dated 23.06.2017 Bearing Document No.SRJ-4-00091/2017-18, 3)Original Registered Sale Deed dated 23.06.2017 Bearing Document No.SRJ-1-01242/2017-18, 4)Original Registered Sale Deed dated 20.01.2017, Bearing Document No.SRJ-1-03867/2016-17, 4 and 5) Original Registered Sale Agreement dated 01.02.2019, bearing Document No.SRJ-1-05126/2018-19.** In this regard he has lodged a police complaint on 12.06.2026, the public to whosoever find the above said the original documents may be handed over to my client or undersigned advocate. Any person/s do not have any right, title or interest of any nature in or any lien, charge or claims in relation to the said property. The public are hereby warned that any transaction whatsoever with respect to the said property would at their own risk.

J.K. MANJUNATH, Advocate
J.K.ADVOCATES
No. 7/16, Manjunatha Complex, 2nd Floor, 4th Main Road, SSA Road, Hebbal, Bangalore-560024. Mob: 8050111770

PUBLIC NOTICE

This is to inform the general public that my client **Sri.Manjunatha.S.L S/o Sri. Lakshminarayana, Aged About 42 Years**, Residing at: **Nareppa Kunte, Ward No.5, Chintamani Town, Chintamani Taluk, Chikkaballapura District, Karnataka-563125**, he has intend to avail loan facility on the security of the Schedule Property from **Cholamandalam Investment and Finance Company Limited, K.R.Puram Branch, Bangalore**, by way of registered Deed of Mortgage/Deposit of Title Deed, if any persons including an individual, a Hindu Undivided family, a Company, Banks, Non-Banking Financial Institution(s), lender/s and/or Creditors having any objection, claim, right, title and/or interest in respect of said property or any part or portion thereof by way of sale, Memorandum of understanding, exchange, mortgage, pledge, charge, gift, trust, inheritance, succession, possession, lease, tenancy, maintenance easement, license, bequeath, bequest, share, assignment, lien, attachment or otherwise or demand of any nature whatsoever are hereby requested to inform the same in writing supported with original/certified copies of documents with the undersigned advocate within 7 days from the date of the publication of this Notice, failing which the claim or objection if any shall deemed to have been waived.

THE SCHEDULE ABOVE REFERRED TO

All that Piece and Parcel of the **property bearing 32-4-192**, Old Property No. Sy.No.139/4, Assessment No.10022, situated at Srinivasapura Village, Kasaba Hobli, Srinivasapura Taluk, Kolar District, Presently comes under the limits of Srinivasapura TMC, **measuring East to West 55.6 Meter and North to South 16.831 Meter, in all measuring 935.82 Square Meters, along with building constructed thereon**, and bounded on: East by: Land belongs to Mukthiyar, West by: Land belongs to Afasar, North by: Land belongs to Pololu Lakshmakka, South by: Road

J.K.MANJUNATH, Advocate
J.K.ADVOCATES
No. 7/16, Manjunatha Complex, 2nd Floor, 4th Main Road, SSA Road, Hebbal, Bangalore-560024. Mob: 8050111770

IN THE COURT OF THE 57th ADDL. CITY CIVIL AND SESSIONS JUDGE BENGALURU AT BENGALURU (CCH-58)

P & SC No. 25013/2026

BETWEEN: 1. Smt. Bhagyalakshmi Ganga Bai ... [illegible]

AND: NIL...RESPONDENT(S)

[illegible]

IN THE COURT OF THE XI ADDL. CITY CIVIL JUDGE AT BANGALORE (CCH-8)

O.S. No. 7562/2023

BETWEEN : **Smt. MUNIAKKAYAMMA**, D/o. late Chikkadasamma W/o. late Chikkamuniyappa, Aged about 62 years, R/o. #595/4, 1st C Cross, Service Road, Dommalur Layout, Bangalore-560 071. Represented by her son and GPA holder Sri. MUNINDRA KUMAR M, S/o.Muniakkayamma, Aged about 33 years, R/o. #595/4, 1st C Cross, Service road, Dommalur Layout, Bangalore-560 071. ...Plaintiff

AND : Smt. Ramakka and others ...Defendants.

NOTICE / SUMMONS TO DEFENDANT no.1 to 7 and 10 to 13

1) **Smt. Ramakka** W/o. late Muniraju, Daughter-in-law of Late S. Munidasappa and late Muniyamma, Aged about 65 years. 2) **Sri. Dhasharatha**, S/o. Late Muniraju, Grandson of Late S. Munidasappa and late Muniyamma, Aged about 42 years.

3) **Smt. Vijayamma @Vijaylaxmi**, D/o. Late Muniraju, Granddaughter of Late S. Munidasappa and late Muniyamma, Aged about 37 years.

4) **Smt. Jyothi**, D/o. Late Muniraju, Granddaughter of Late S. Munidasappa and late Muniyamma, Aged about 37 years. All of defendants' No. 1-4 are residing at no. 28/1, Dommaluru village, Behind Smt. Lingamma Patel Muniswamy Reddy building, Bangalore -560 071. 5) **Smt. Netravathi**, D/o. Late Gowramma, Granddaughter of Late S. Munidasappa and late Muniyamma, Aged about 30 years. 6) **Master. Naveen**, S/o. late Nagaraju and late Rajamma, Grandson of Late S. Munidasappa and late Muniyamma, Aged about 32 years.

7) **Kum. Latha**, D/o. late Nagaraju and late Rajamma, Granddaughter of Late S. Munidasappa and late Muniyamma, Aged about 30 years

10) **Master Chandra**, S/o. Sri.Gopi @ Gopalaraju, Grandson of Late S. Munidasappa and late Muniyamma, Aged about 31 years.

11) **Master. Prathapa**, S/o. Sri.Gopi @ Gopalaraju, Grandson of Late S. Munidasappa and late Muniyamma, Aged about 27 years.

12) **Kum. Chandini**, D/o. Sri. Gopi @ Gopalaraju, Granddaughter of Late S. Munidasappa and late Muniyamma, Aged about 25 years.

13) **Smt. Nagamma**, W/o. late Sri. Shamaraja @ Shambha, Daughter in law of Late S. Munidasappa and late Muniyamma, Aged about 53 years.

All of defendants No. 5 to 7 and 10 to 13 are Residing at no. 28/1, Dommaluru Village, Behind Smt. Lingamma Patel Muniswamy Reddy building, Bangalore 560 071.

Whereas, the Plaintiff Smt. MUNIAKKAYAMMA, Represented by her son and GPA holder Sri. MUNINDRA KUMAR M, has instituted the above case against Smt. Ramakka and others for ... [illegible]

SCHEDULE OF THE PROPERTY

[illegible]

Given under my hand and the seal of this Court this 10 day of June 2026.

By Order of the Court
Sd/- Senior Sheristedar
City Civil Court, Bengaluru

Advocate for Plaintiff :- Sri. Shimoga Nagaraj H H, Advocate, ... [illegible]

ರೈತ ಪರ ಬಿಜೆಪಿ ನಿಲುವು: ವಿಜಯೇಂದ್ರ ಸ್ಪಷ್ಟನೆ
ರೈತರ ಒಕ್ಕಲೆಬ್ಬಿಸುವುದು ಶೋಭೆಯಲ್ಲ

• **ಬೆಂಗಳೂರು:** ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಬಿಜೆಪಿ ನಿಲುವು ಸ್ಪಷ್ಟವಾಗಿದೆ ರೈತರ ಪರವಾಗಿ ನಾವು ನಿಲ್ಲುತ್ತೇವೆ. ಒತ್ತಾಯವಾಗಿ ರೈತರ ಜಮೀನು ಕಸಿಯಲು ನಾವು ಬಿಡುವುದಿಲ್ಲ, ಸ್ವತಃ ಮುಖ್ಯಮಂತ್ರಿ ಅವರೇ ಆಸಕ್ತಿ ವಹಿಸಿ ರೈತರನ್ನು ಒಕ್ಕಲೆಬ್ಬಿಸಲು ಹೋಗಿರುವುದು ಸರಿ ಅಲ್ಲ, ಇದು ಅಕ್ಷಮ್ಯ ಅಪರಾಧ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಾಗ್ದಾಳಿ ನಡೆಸಿದ್ದಾರೆ.



ಈ ಕುರಿತು ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಜಮೀನು ಬಿಡುವುದಿಲ್ಲ ಎಂದು ರೈತರೇ ಹೇಳಿದ್ದಾರೆ. ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರೇ ಮುಖ್ಯಮಂತ್ರಿ ಮೇಲೆ ಒತ್ತಡ ಹೇರಿ ಇದನ್ನು ತಡೆಯಬೇಕು. ರೈತರಿಗೆ ತೊಂದರೆ ಆಗುವುದನ್ನು ಖಂಡಿಸಿ ಬಿಜೆಪಿ ಹೋರಾಟ ಮಾಡಲಿದೆ. ಟೌನ್‌ಶಿಪ್ ವಿಚಾರದಲ್ಲಿ ಪ್ರಧಾನಿ ಮೋದಿ ಅವರ ಹೆಸರು ಹೇಳಿ ದಲ್ಲಾಳಿತನ ಮಾಡಲು ಬಿಡಲ್ಲ ಭೂಸ್ವಾಧೀನಕ್ಕೆ ಕೆಐಎಡಿಬಿ ನಿಯಮ ಪಾಲನೆ ಮಾಡಲಿ ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಸರ್ಕಾರದ ಷಡ್ಯಂತ್ರ

ಧರ್ಮಸ್ಥಳದ ಬುರುಡೇ ಪ್ರಕರಣ ಕಾಂಗ್ರೆಸ್ ಸರ್ಕಾರದ ಷಡ್ಯಂತ್ರ. ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಾದಿಬೀದಿಯಲ್ಲಿ ಹೋಗುವ ನಗರ ನಕ್ಸಲರ ಮಾತು ಕೇಳಿ ಎಸ್‌ಐಟಿ ರಚಿಸಿದರು. ಆದರ ಅಗತ್ಯ ಇರಲಿಲ್ಲ, ಇದೇ ಈಗ ಸರ್ಕಾರಕ್ಕೆ ಗಂಡಾಂತರ ತಂದಿದೆ. ಇಡೀ ದೇಶದ ಮೂಲೆ ಮೂಲೆಯಿಂದ ಕೋಟಿ ಭಕ್ತರು ಧರ್ಮಸ್ಥಳಕ್ಕೆ ಬರುತ್ತಾರೆ. ಎಸ್‌ಐಟಿ ರಚಿಸಲು ಮುಖ್ಯಮಂತ್ರಿ ವಿವೇಚನೆ ಬಳಸಬೇಕಿತ್ತು. ಬುರುಡೆ ಪ್ರಕರಣದಲ್ಲಿ ನೂರಾರು ಕೋಟಿ ಅವ್ಯವಹಾರ ಆಗಿದೆ ಎಂಬ ವರದಿಗಳಿವೆ. ಇದಕ್ಕೆಲ್ಲ ಕಾಂಗ್ರೆಸ್ ಸರ್ಕಾರವೇ ಹೊಣೆ. ಅವರ ಆಸಕ್ತಿ ಏನಿತ್ತು ಎಂಬುದು ತಿಳಿಯಲಿ ಎಂದು ವಿಜಯೇಂದ್ರ ಹೇಳಿದರು.

ಜನರ ಆರೋಗ್ಯಕ್ಕೆ ಒತ್ತು ನೀಡಿ

• **ದಾಸರಹಳ್ಳಿ:** ಇಂದಿನ ಒತ್ತಡದ ಜೀವನದಲ್ಲಿ ಜನರು ಮುಖ್ಯವಾಗಿ ಆರೋಗ್ಯ ಕಾಪಾಡಿಕೊಳ್ಳಿ. ಆರೋಗ್ಯದಲ್ಲಿ ಏನಾದರೂ ಸಮಸ್ಯೆ ಕಂಡು ಬಂದರೆ ಕೂಡಲೇ ತಪಾಸಣೆ ಮಾಡಿಸಿಕೊಂಡು ಸರಿಯಾದ ಚಿಕಿತ್ಸೆ ಪಡೆಯಿರಿ ಎಂದು ದಾಸರಹಳ್ಳಿ ಶಾಸಕ ಎಸ್ ಮುನಿರಾಜು ತಿಳಿಸಿದರು.



ಕ್ಷೇತ್ರದ ಹೆಸರುಘಟ್ಟ ಮುಖ್ಯರಸ್ತೆಯಲ್ಲಿ ನೇಸರ ಫೌಂಡೇಷನ್ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟನೆ ಮಾಡಿ ಮಾತನಾಡಿದ ಅವರು, ಕುಟುಂಬ ನಿರ್ವಹಣೆಗೆ ಜನರು ಒಂದಲ್ಲಾ ಒಂದು ಸಮಸ್ಯೆ ಎದುರುಸುತ್ತಾ ಒತ್ತಡದ ಜೀವನ ನಡೆಸುತ್ತಿರುವುದು ಇತ್ತೀಚಿನ ದಿನಗಳಲ್ಲಿ ಜಾಸ್ತಿ. ಅದರಲ್ಲೂ ಯುವಕ, ಯುವತಿಯರು ತಮ್ಮ ಜೀವನ ಶೈಲಿ ಐಷಾರಾಮಿಯಂತಿರಬೇಕೆಂದು ಕನಸು ಕಾಣುತ್ತಾ ಒತ್ತಡದ ಜೀವನದಲ್ಲಿ ಸಿಲುಕುತ್ತಿದ್ದಾರೆಂಬ ವಾತಾವರಣ ಎಲ್ಲೆಲ್ಲೂ ಕಾಣುತ್ತಿದೆ. ಆದ್ದರಿಂದ ಎಲ್ಲರೂ ಬಿಡುವು ಮಾಡಿಕೊಂಡು ತಮ್ಮ ಆರೋಗ್ಯದ ಕಡೆ ಗಮನ ಹರಿಸಿ ಇರುವಷ್ಟರಲ್ಲೇ ಸುಖವಾಗಿ ಜೀವನ ನಡೆಸಿ ಆರೋಗ್ಯ ಕಾಪಾಡಿಕೊಳ್ಳಿ ಎಂದು ಹೇಳಿದರು. ನೇಸರ ಫೌಂಡೇಶನ್ ಸಂಸ್ಥಾಪಕ ಬಿ ಎಸ್ ಅನಿಲ್ ಕುಮಾರ್ ಮಾತನಾಡಿ, ಈಗಾಗಲೇ ನಮ್ಮ ಫೌಂಡೇಶನ್ ವತಿಯಿಂದ ಪರಿಸರ ರಕ್ಷಣೆಗಾಗಿ ಅನೇಕ ಬಡಾವಣೆಗಳಲ್ಲಿ ಗಿಡ ನೆಡುವುದರ ಮೂಲಕ ಹಸಿರು ಕ್ರಾಂತಿಯ ಆಂದೋಲನ ಆರಂಭಿಸಿದ್ದೇವೆ ಎಂದು ಹೇಳಿದರು. ಶಿಬಿರದಲ್ಲಿ ಸೂರಜ್ ಫೌಂಡೇಶನ್ ಅಧ್ಯಕ್ಷೆ ಸುಜಾತಾ ಮುನಿರಾಜು, ದಾಸರಹಳ್ಳಿ ಬಿಜೆಪಿ ಮಂಡಲ ಅಧ್ಯಕ್ಷ ಸೋಮಶೇಖರ್, ಬಿಜೆಪಿ ಅಧ್ಯಕ್ಷೆ ಉಮಾದೇವಿ ನಾಗರಾಜ್, ಮಲ್ಲಸಂದ್ರದ ಟಿ ಶಿವಕುಮಾರ್, ಬಾಗಲಗುಂಟೆಯ ಬಿ ಎಂ ನಾರಾಯಣ್, ಬಿ ಎಂ ಕೃಷ್ಣ, ಬಾಣಾವರದ ಭಾಗ್ಯಮ್ಮ ಇದ್ದರು.

ಪ್ರಶಸ್ತಿ ಪ್ರದಾನ



ನಗರದ ಶೇಷಾದ್ರಿಪುರ ಕಾಲೇಜಿನ ಸಭಾಂಗಣದಲ್ಲಿ ಗೌಡತಿಯರ ಸೇನೆ ವತಿಯಿಂದ ಆಯೋಜಿಸಿದ್ದ ಉಪನ್ಯಾಸ ಮತ್ತು ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬೊಮ್ಮನಾಯಕನಹಳ್ಳಿ ಮಹೇಶ್ (ಕಾರ್ಮಿಕರ ಸೇವೆ), ಎಚ್.ಕೆ.ಬೊಮ್ಮೇಗೌಡ (ಪತ್ರಿಕಾ ಸೇವೆ), ಭಾಗ್ಯಶ್ರೀ (ಸಂಗೀತ ಕ್ಷೇತ್ರ) , ಎಚ್.ಡಿ.ಪುಷ್ಪಾ (ಶಿಕ್ಷಣ, ಪರಿಸರ ಸೇವೆ)ಗಳ ಜಾನಪದ ತಜ್ಞೆ ಡಾ.ಕೆ.ಆರ್.ಸಂಧ್ಯಾ ರೆಡ್ಡಿ, ಬ್ರಹ್ಮ ಸಮಾಜದ ಚಿಂತಕ ಡಬ್ಲ್ಯೂ.ಡಿ.ಅಶೋಕ್ ಅವರು ಸೇವಾ ಗೌರವ ಪ್ರಶಸ್ತಿ ನೀಡಿ ಅಭಿನಂದಿಸಿದರು. ಈ ವೇಳೆ ಶಾಸನ ತಜ್ಞ ಡಾ.ಸ್ಮಿತಾ ಡಿ. ರೆಡ್ಡಿ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಮಾಯಣ್ಣ, ಸಾಹಿತಿ ಡಾ.ಎಸ್.ರಾಮಲಿಂಗೇಶ್ವರ ಸೇರಿದಂತೆ ಇತರರಿದ್ದರು.

ಕಿರುಸುದ್ದಿ

ಪರಿಶೀಲನಾ ಸಮಿತಿಗೆ ಆರ್.ಅಶೋಕ ಪತ್ರ

• **ಬೆಂಗಳೂರು:** ನಗರದ ಘನತ್ಯಾಜ್ಯ ನಿರ್ವಹಣೆಯ ಟೆಂಡರ್ ಪರಿಶೀಲನೆಗೆ ಕಾಂಗ್ರೆಸ್ ಸರ್ಕಾರದಿಂದ ರಚಿಸಿದ ಉನ್ನತ ಮಟ್ಟದ ಪರಿಶೀಲನಾ ಸಮಿತಿಗೆ ಪ್ರತಿಪಕ್ಷ ನಾಯಕ ಆರ್.ಅಶೋಕ ಪತ್ರ ಬರೆದಿದ್ದಾರೆ. ಯಾವುದೇ ರಾಜಕೀಯ, ಆಡಳಿತಾತ್ಮಕ ಅಥವಾ ಬಾಹ್ಯ ಒತ್ತಡಗಳಿಗೆ ಮಣಿಯದೆ, ಆತ್ಮಸಾಕ್ಷಿ ಮತ್ತು ಸಾರ್ವಜನಿಕ ಹಿತಾಸಕ್ತಿಗೆ ಅನುಗುಣವಾಗಿ ವರದಿ ಸಲ್ಲಿಸಿ ಎಂದು ಕೋರಿದ್ದಾರೆ.

ಕಾಂಗ್ರೆಸ್ ಸರ್ಕಾರ ಬೆಂಗಳೂರಿನ ಘನತ್ಯಾಜ್ಯ ನಿರ್ವಹಣೆಗೆ 39,437 ಕೋಟಿ ರೂ. ಮೊತ್ತದ ಟೆಂಡರ್ ರೂಪಿಸಿದೆ. ಇದರಲ್ಲಿ ಕಿಕ್‌ಬ್ಯಾಕ್ ಪಡೆದಿದ್ದು, ಭಾರಿ ಭ್ರಷ್ಟಾಚಾರ ನಡೆದಿದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ದೂರಿದ್ದರು. ಟೆಂಡರ್ ಪರಿಶೀಲನೆಗೆಂದು ಸರ್ಕಾರದಿಂದ ಉನ್ನತ ಮಟ್ಟದ ಪರಿಶೀಲನಾ ಸಮಿತಿ ರಚಿಸಲಾಗಿದೆ. ಈ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರನ್ನು ಉದ್ದೇಶಿಸಿ ಅವರು ಪತ್ರ ಬರೆದಿದ್ದಾರೆ. ನೀವು ಕೇವಲ ಈ ಸಮಿತಿಯ ಸದಸ್ಯರಲ್ಲ, ನೀವು ಈ ನಗರದ ನಾಗರಿಕರು. ತೆರಿಗೆ ಪಾವತಿಸುವವರು, ಬೆಂಗಳೂರಿನ ಪ್ರಗತಿಯ ಪಾಲುದಾರರು ಮತ್ತು ಹಕ್ಕುದಾರರು. ನಿಮ್ಮ ಕುಟುಂಬಗಳು ಮತ್ತು ಮಕ್ಕಳ ಭವಿಷ್ಯವೂ ಇದೇ ನಗರದ ಭವಿಷ್ಯದೊಂದಿಗೆ ಬೆಸೆದುಕೊಂಡಿದೆ. ಹೀಗಾಗಿ, ನಿಮ್ಮ ಮುಂದೆ ಇರುವ ಪ್ರಶ್ನೆ ಕೇವಲ ಒಂದು ಟೆಂಡರ್ ಕಡತದ ಪ್ರಶ್ನೆಯಲ್ಲ, ಮುಂದಿನ ಮೂರು ದಶಕಗಳ ಕಾಲ ಬೆಂಗಳೂರಿನ ಜನರ ಹಣ, ನಗರದ ಆಡಳಿತ ಮತ್ತು ಸಾರ್ವಜನಿಕ ಸಂಪನ್ಮೂಲಗಳ ಭವಿಷ್ಯವನ್ನು ನಿರ್ಧರಿಸುವ ಪ್ರಶ್ನೆಯಾಗಿದೆ ಎಂದಿದ್ದಾರೆ.

ಬೆಂಗಳೂರು ಕೃಷಿ ವಿವಿ ದೇಶದಲ್ಲಿ 7ನೇ ಸ್ಥಾನ

• **ಬೆಂಗಳೂರು:** ಕೃಷಿ ಶಿಕ್ಷಣ, ಸಂಶೋಧನೆ ಮತ್ತು ರೈತಪರ ಸೇವೆಗಳಲ್ಲಿ ತನ್ನದೇ ಆದ ಛಾಪು ಮೂಡಿಸಿರುವ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ದೇಶದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳ ಪೈಕಿ ಮತ್ತೊಮ್ಮೆ ಗಮನಾರ್ಹ ಸಾಧನೆ ಮಾಡಿದೆ.

ಇಂಡಿಯನ್ ಇನ್‌ಸ್ಟಿಟ್ಯೂಷನಲ್ ರ್‍ಯಾಂಕಿಂಗ್ ಫ್ರೇಮ್‌ವರ್ಕ್ (ಐಐಆರ್‌ಎಫ್)-2026 ಪ್ರಕಟಿಸಿರುವ ಶ್ರೇಯಾಂಕ ಪಟ್ಟಿಯಲ್ಲಿ ವಿಶ್ವವಿದ್ಯಾಲಯವು ದೇಶದಲ್ಲಿ 7ನೇ ಸ್ಥಾನ ಪಡೆದುಕೊಂಡಿದ್ದು, ಕರ್ನಾಟಕದ ಕೃಷಿ ವಿಶ್ವವಿದ್ಯಾಲಯಗಳ ಪೈಕಿ ಅಗ್ರಸ್ಥಾನವನ್ನು ಕಾಯ್ದುಕೊಂಡಿದೆ.

ದೇಶದಾದ್ಯಂತ 5 ಸಾವಿರಕ್ಕೂ ಹೆಚ್ಚು ಉನ್ನತ ಶಿಕ್ಷಣ ಸಂಸ್ಥೆಗಳ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡುವ ಐಐಆರ್‌ಎಫ್ ಸಂಸ್ಥೆಯು ವಿಶ್ವವಿದ್ಯಾಲಯಗಳು, ಕಾಲೇಜುಗಳು ಮತ್ತು ನಿರ್ವಹಣಾ ಶಿಕ್ಷಣ ಸಂಸ್ಥೆಗಳನ್ನು ವಿವಿಧ ಮಾನದಂಡಗಳ ಆಧಾರದ ಮೇಲೆ ಪರಿಶೀಲಿಸಿ ಶ್ರೇಯಾಂಕ ನೀಡುತ್ತದೆ. ಸಂಶೋಧನಾ ಸಾಧನೆ, ಬೋಧಕ ಸಿಬ್ಬಂದಿಯ ಗುಣಮಟ್ಟ, ವಿದ್ಯಾರ್ಥಿಗಳ ಉದ್ಯೋಗಾವಕಾಶಗಳು, ಕೈಗಾರಿಕೆಗಳೊಂದಿಗೆ ಸಹಭಾಗಿತ್ವ, ನವೋದ್ಯಮಗಳಿಗೆ ಉತ್ತೇಜನ ಹಾಗೂ ಇತರೆ ಪ್ರಮುಖ ಅಂಶಗಳನ್ನು ಪರಿಗಣಿಸಿ ಈ ಮೌಲ್ಯಮಾಪನ ನಡೆಸಲಾಗುತ್ತದೆ. ಈ ಹಿಂದೆ ವಿಶ್ವವಿದ್ಯಾಲಯ ಪಡೆದಿದ್ದ ನ್ಯಾಕ್ ಎ+ ಮಾನ್ಯತೆಯ ನಂತರ ದೊರೆತಿರುವ ಈ ರಾಷ್ಟ್ರೀಯ ಮಟ್ಟದ ಗೌರವವು, ಗುಣಮಟ್ಟದ ಶಿಕ್ಷಣ, ಕೃಷಿ ಕ್ಷೇತ್ರದ ಸಂಶೋಧನಾ ಸಾಧನೆಗಳು, ತಂತ್ರಜ್ಞಾನ ಅಭಿವೃದ್ಧಿ, ರೈತಪರ ವಿಸ್ತರಣಾ ಚಟುವಟಿಕೆಗಳು ಹಾಗೂ ಸಮಾಜಮುಖಿ ಕಾರ್ಯಗಳಿಗೆ ದೊರೆತ ಮತ್ತೊಂದು ಮನ್ನಣೆಯಾಗಿದೆ.

ಜಾಗತಿಕ ಮಾನದಂಡಗಳಿಗೆ ಅನುಗುಣವಾಗಿ ಉನ್ನತೀಕರಣ | ಕನ್ನಡ ಹಸ್ತಪ್ರತಿಗಳ ಡಿಜಿಟಲೀಕರಣಕ್ಕೆ ಆದ್ಯತೆ
ವಿವಿಯ ವಸ್ತುಸಂಗ್ರಹಾಲಯ ನವೀಕರಣ

▸ ನಂದಿನಿ ಎನ್.

ದಿಗಂತ ವಿಶೇಷ

• **ಬೆಂಗಳೂರು:** ಶಿಕ್ಷಣ, ಸಂಶೋಧನೆ ಮತ್ತು ಪರಂಪರೆ ಸಂರಕ್ಷಣೆಗೆ ಹೊಸ ಆಯಾಮ ನೀಡುವ ಉದ್ದೇಶದಿಂದ ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿರುವ ಐದು ವಸ್ತು ಸಂಗ್ರಹಾಲಯಗಳನ್ನು 1 ಕೋಟಿ ರೂ. ವೆಚ್ಚದಲ್ಲಿ ನವೀಕರಿಸುವ ಕಾರ್ಯ ಭರದಿಂದ ಸಾಗುತ್ತಿದೆ. ಕೇಂದ್ರ ಶಿಕ್ಷಣ ಸಚಿವಾಲಯದ ಪ್ರಧಾನ ಮಂತ್ರಿ ಉಚ್ಚತರ್ ಶಿಕ್ಷಾ ಅಭಿಯಾನ (ಪಿಎಂ-ಉಷಾ) ಯೋಜನೆ ಅಡಿಯಲ್ಲಿ ವಿಶ್ವವಿದ್ಯಾಲಯಕ್ಕೆ ಬಿಡುಗಡೆಯಾಗಿರುವ 100 ಕೋಟಿ ರೂ. ಅನುದಾನದ ಭಾಗವಾಗಿ ಈ ಕಾಮಗಾರಿಗಳು ಕೈಗೆತ್ತಿಕೊಳ್ಳಲಾಗಿದೆ.

ಪ್ರಾಣಿ ವಿಜ್ಞಾನ, ಭೂ-ವಿಜ್ಞಾನ, ಸಸ್ಯ ವಿಜ್ಞಾನ, ಇತಿಹಾಸ ಹಾಗೂ ಕನ್ನಡ ವಿಭಾಗಗಳಲ್ಲಿರುವ ವಸ್ತು ಸಂಗ್ರಹಾಲಯಗಳನ್ನು ಜಾಗತಿಕ ವಸ್ತು ಸಂಗ್ರಹಾಲಯಗಳ ಮಾನದಂಡಗಳಿಗೆ ಅನುಗುಣವಾಗಿ ಉನ್ನತೀಕರಿಸಲಾಗುತ್ತಿದೆ. ಈ ಮೂಲಕ ಅಮೂಲ್ಯ ಐತಿಹಾಸಿಕ, ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಪರಂಪರೆಯ ವಸ್ತುಗಳನ್ನು ಸಂರಕ್ಷಿಸುವುದರ ಜತೆಗೆ ಅವುಗಳನ್ನು ವಿದ್ಯಾರ್ಥಿಗಳು, ಸಂಶೋಧಕರು ಮತ್ತು ಸಾರ್ವಜನಿಕರಿಗೂ ಹೆಚ್ಚು ಪರಿಣಾಮಕಾರಿಯಾಗಿ ತಲುಪಿಸುವ ಉದ್ದೇಶ ಹೊಂದಲಾಗಿದೆ.



> **ಪರಂಪರೆಯ ಸಂರಕ್ಷಣೆ ಮತ್ತು ಆಧುನಿಕ ತಂತ್ರಜ್ಞಾನದ ಸಮನ್ವಯದ ಮೂಲಕ ಬೆಂಗಳೂರು ವಿಶ್ವವಿದ್ಯಾಲಯ ತನ್ನ ವಸ್ತು ಸಂಗ್ರಹಾಲಯಗಳನ್ನು ಜ್ಞಾನ, ಸಂಶೋಧನೆ ಮತ್ತು ಸಾರ್ವಜನಿಕ ಶಿಕ್ಷಣದ ನೂತನ ಕೇಂದ್ರಗಳನ್ನಾಗಿ ರೂಪಿಸಲು ಮುಂದಾಗಿದೆ.**
> ■ ಎಸ್.ಎಂ. ಜಯಕರ, ಕುಲಪತಿ, ಬೆಂಗಳೂರು ವಿಶ್ವವಿದ್ಯಾಲಯ

ಪಾರಂಪರಿಕ ಕಟ್ಟಡಗಳ ಮೂಲ ವಾಸ್ತುಶಿಲ್ಪಕ್ಕೆ ಯಾವುದೇ ಧಕ್ಕೆಯಾಗದಂತೆ, ಈಗಾಗಲೇ ಕಟ್ಟಡಗಳ ದುರಸ್ತಿ ಮತ್ತು ಆಧುನೀಕರಣ ಕಾರ್ಯ ಆರಂಭಗೊಂಡಿದ್ದು, ಸೂಕ್ತ ತಂತ್ರಜ್ಞಾನ ಬಳಸಿ ಸಂಗ್ರಹಾಲಯಗಳನ್ನು ನೂತನ ರೂಪದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಅಲ್ಲದೇ, ಕಲಾಕೃತಿಗಳು ಹಾಗೂ ಅಪರೂಪದ ವಸ್ತುಗಳಿಗೆ ಯಾವುದೇ ಹಾನಿಯಾಗದಿರಲು, ವಿಶೇಷ ಎಲ್‌ಇಡಿ ಬೆಳಕಿನ ವ್ಯವಸ್ಥೆಯನ್ನು ಬಳಸಲಾಗುತ್ತಿದೆ. ಇದರಿಂದ ವಸ್ತುಗಳ ಮೇಲೆ ಉಷ್ಣದ ಪರಿಣಾಮ ಕಡಿಮೆಯಾಗುವುದರೊಂದಿಗೆ ಪ್ರದರ್ಶನದ ಗುಣಮಟ್ಟವೂ ಹೆಚ್ಚಳವಾಗಲಿದೆ.

ಶಾಲಾ ವಿದ್ಯಾರ್ಥಿಗಳಿಗೆ ಕಲಿಕಾ ಕೇಂದ್ರಗಳಾಗಿ ರೂಪಾಂತರ: ವಸ್ತು ಸಂಗ್ರಹಾಲಯಗಳು ಕೇವಲ ಪ್ರದರ್ಶನ ಕೇಂದ್ರಗಳಾಗಿರದೆ, ಕಾರ್ಯಾಗಾರಗಳು, ವಿಚಾರಗೋಷ್ಠಿಗಳು ಮತ್ತು ಶಾಲಾ ವಿದ್ಯಾರ್ಥಿಗಳಿಗೆ ಪೂರಕ ಕಲಿಕಾ ಕೇಂದ್ರಗಳಾಗಿಯೂ ಕಾರ್ಯನಿರ್ವಹಿಸಲಿವೆ. ಸಂಗ್ರಹಾಲಯ ಆಧಾರಿತ ಶಿಕ್ಷಣವನ್ನು ಉತ್ತೇಜಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಸಂಶೋಧನಾ ಮನೋಭಾವ ಮತ್ತು ಪರಂಪರೆ ಬಗ್ಗೆ ಅರಿವು ಮೂಡಿಸುವ ಉದ್ದೇಶವನ್ನು ವಿಶ್ವವಿದ್ಯಾಲಯ ಹೊಂದಿದೆ.

ಬೋಧನೆ ಮತ್ತು ಸಂಶೋಧನೆಗೆ ಮತ್ತಷ್ಟು ಬಲ: ವಸ್ತು ಸಂಗ್ರಹಾಲಯಗಳು ಬೋಧನೆ ಮತ್ತು ಅಧ್ಯಯನ ಪ್ರಕ್ರಿಯೆಗಳನ್ನು ಬಲಪಡಿಸುವುದರ ಜತೆಗೆ ಉನ್ನತ ಮಟ್ಟದ ಸಂಶೋಧನೆಗೂ ಬೆಂಬಲ ನೀಡುತ್ತದೆ. ವಿಭಾಗೀಯ ಸಂಗ್ರಹಾಲಯಗಳನ್ನು ಶೈಕ್ಷಣಿಕ ಹಾಗೂ ಸಾರ್ವಜನಿಕ ಜ್ಞಾನ ಕೇಂದ್ರಗಳನ್ನಾಗಿ ಪರಿವರ್ತಿಸುವ ಮೂಲಕ ಅಮೂಲ್ಯ ವೈಜ್ಞಾನಿಕ, ಐತಿಹಾಸಿಕ ಮತ್ತು ಸಾಂಸ್ಕೃತಿಕ ಸಂಪತ್ತನ್ನು ಮುಂದಿನ ಪೀಳಿಗೆಗೆ ಉಳಿಸಬಹುದಾಗಿದೆ.

ಡಿಜಿಟಲೀಕರಣ ಯೋಜನೆಯ ಮಹತ್ವದ ಹೆಜ್ಜೆ

ಕನ್ನಡ ವಿಭಾಗದ ವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿಸಲ್ಪಟ್ಟಿರುವ ಸುಮಾರು 10 ಸಾವಿರಕ್ಕೂ ಹೆಚ್ಚು ಕನ್ನಡ ಹಸ್ತಪ್ರತಿಗಳು ಹಾಗೂ ಲಿಪಿಗಳನ್ನು ಡಿಜಿಟಲೀಕರಣಗೊಳಿಸುವ ವಿಶೇಷ ಯೋಜನೆ ರೂಪಿಸಲಾಗಿದ್ದು, ಈ ಕಾರ್ಯ ಪೂರ್ಣಗೊಂಡ ನಂತರ ಅಪರೂಪದ ದಾಖಲೆಗಳ ಸಂರಕ್ಷಣೆ ಸುಲಭವಾಗಲಿದೆ. ಹಳೆಯ ಮತ್ತು ಅಮೂಲ್ಯ ದಾಖಲೆಗಳನ್ನು ಡಿಜಿಟಲ್ ರೂಪದಲ್ಲಿ ಸಂರಕ್ಷಿಸುವ ಮೂಲಕ ಅವುಗಳ ದೀರ್ಘಕಾಲೀನ ರಕ್ಷಣೆ ಸಾಧ್ಯವಾಗಲಿದೆ. ಕಾಲಕ್ರಮೇಣ ಹಾಳಾಗುವ ಸಾಧ್ಯತೆಯಿರುವ ಹಸ್ತಪ್ರತಿಗಳು ಹಾಗೂ ಲಿಪಿಗಳನ್ನು ತಂತ್ರಜ್ಞಾನದ ನೆರವಿನಿಂದ ಸುರಕ್ಷಿತವಾಗಿ ಉಳಿಸಿಕೊಳ್ಳುವ ಉದ್ದೇಶ ಹೊಂದಿದ್ದು, ಸಂಶೋಧಕರು, ವಿದ್ವಾಂಸರು, ಭಾಷಾ ತಜ್ಞರು ಮತ್ತು ವಿದ್ಯಾರ್ಥಿಗಳಿಗೆ ಅಮೂಲ್ಯ ಮಾಹಿತಿ ಲಭ್ಯವಾಗಲಿದೆ.

ಯುವಕರಿಗೆ ಸಂಸದ ತೇಜಸ್ವಿ ಸೂರ್ಯ ಕರೆ
ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ

ಬೆಂಗಳೂರು: ದೇಶದಲ್ಲೇ ಉತ್ತಮ ಹವಾಮಾನ ಹೊಂದಿರುವ ಉದ್ಯಾನ ನಗರಿ ಬೆಂಗಳೂರಿನ ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಎಂದು ಸಂಸದ ತೇಜಸ್ವಿ ಸೂರ್ಯ ಕರೆ ನೀಡಿದ್ದಾರೆ.

ಬಿಎನ್‌ಎಂ ತಾಂತ್ರಿಕ ಮಹಾವಿದ್ಯಾಲಯ ಮತ್ತು ವಿಕಸನ ಪ್ರತಿಷ್ಠಾನದ ಸಂಯುಕ್ತ ಆಶ್ರಯದಲ್ಲಿ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಆಯೋಜಿಸಲಾಗಿದ್ದ, ಬೆಂಗಳೂರು ಹೆರಿಟೇಜ್ ಹಬ್ಬಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಗಾಳಿ, ಮಳೆ, ಬಿಸಿಲು ಸೇರಿದಂತೆ ಎಲ್ಲಾ ರೀತಿಯ ಹವಾಮಾನ ಸಮತೋಲನವಿರುವ ಬೆಂಗಳೂರು ನಗರ ನಮ್ಮ ಹೆಮ್ಮೆಯ ಊರು. ಮುಂದಿನ ಪೀಳಿಗೆಗೆ ಶುದ್ಧ ಪರಿಸರ ಉಳಿಸಿ ಹೋಗುವುದು ನಮ್ಮ ಜವಾಬ್ದಾರಿ ಎಂದು ಅಭಿಪ್ರಾಯಪಟ್ಟರು.



ಪರಿಸರ ಮತ್ತು ಆರೋಗ್ಯ ಜಾಗೃತಿ ವಿಷಯದಲ್ಲಿ ಬಿಎನ್‌ಎಂ ತಾಂತ್ರಿಕ ಮಹಾವಿದ್ಯಾಲಯ ಸಂಸ್ಥೆಯ ಕಾಳಜಿಗೆ ತೇಜಸ್ವಿ ಸೂರ್ಯ ಮೆಚ್ಚುಗೆ ವ್ಯಕ್ತಪಡಿಸಿದರು. ಶಾಸಕರಾದ ಉದಯ ಗರುಡಾಚಾರ, ನಿವೃತ್ತ ಅಧಿಕಾರಿ ಭಾಸ್ಕರ್ ರಾವ್, ಕರ್ನಾಟಕ ಕ್ಯಾನ್ಸರ್ ಸೊಸೈಟಿ ಅಧ್ಯಕ್ಷ ಡಾ. ಸಿ.ಎ. ಕಿಶೋರ್, ಗರುಡ ಪ್ರತಿಷ್ಠಾನದ ಅಧ್ಯಕ್ಷೆ ಮೇದಿನಿ ಗರುಡಾಚಾರ ಸೇರಿದಂತೆ ಇತರರಿದ್ದರು.

ಕಟ್ಟಕಡೆಯ ವ್ಯಕ್ತಿಗೂ ಸಿಗಲಿ ಸೌಕರ್ಯ

• **ಕೆಂಗೇರಿ:** ಪ್ರತಿಯೊಬ್ಬ ಕಟ್ಟಕಡೆಯ ವ್ಯಕ್ತಿಗೂ, ಅನ್ನ, ಅಕ್ಷರ ದೊರಕುವಂತಹ ನಿಟ್ಟಿನಲ್ಲಿ ಸಮಾಜ ಸೇವೆಯಲ್ಲಿ ತೊಡಗಿಕೊಂಡು ಬಡವರು, ನಿರ್ಗತಿಕರು ಹಾಗೂ ಮಧ್ಯಮ ವರ್ಗದ ಜನರ ಏಳಿಗೆಗಾಗಿ ಹಗಲಿರುಳು ಶ್ರಮಿಸಲಾಗುತ್ತಿದೆ ಎಂದು ನಿಕಟಪೂರ್ವ ವಾರ್ಡ್ ಅಧ್ಯಕ್ಷ ಆರ್.ಪ್ರಸಾದ್ ಕುಮಾರ್ ಅಭಿಪ್ರಾಯ ವ್ಯಕ್ತಪಡಿಸಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ದೊಡ್ಡಬಿದರಕಲ್ಲು ವಾರ್ಡಿನ ಚನ್ನನಾಯಕನ ಪಾಳ್ಯ ಗ್ರಾಮದಲ್ಲಿ ತಮ್ಮ ಹುಟ್ಟು ಹಬ್ಬವನ್ನು ಅಭಿಮಾನಿಗಳು ಬಹಳ ಅದ್ದೂರಿಯಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೇಕ್ ಕತ್ತರಿಸಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಹುಟ್ಟು ಹಬ್ಬ ಕೇವಲ ಆಚರಣೆ ಆಗಬಾರದು, ಸಾಮಾಜಿಕ ಕಳಕಳಿಯನ್ನು ಮೈಗೂಡಿಸಿಕೊಂಡು, ಜನಸೇವಕನಾಗಿ ಜನರ ಸೇವೆಗೆ ಹಗಲಿರುಳು ಶ್ರಮಿಸುವ ನಿಟ್ಟಿನಲ್ಲಿ ಜನರ ಕಷ್ಟ ಸುಖಗಳಿಗೆ ಸ್ಪಂದಿಸುವ ಮೂಲಕ ಜನರ ಏಳಿಗೆಗಾಗಿ ಶ್ರಮಿಸಬೇಕು, ಗ್ರಾಮೀಣ ಪ್ರದೇಶದ ಜನರಿಗೆ ಮೂಲಭೂತ ಸೌಕರ್ಯ ಒದಗಿಸಿ ನೀರಿನ ಅಭಾವವನ್ನು ನೀಗಿಸಲು ದೃಢಸಂಕಲ್ಪ ಮಾಡಲಾಗಿದೆ ಎಂದು ತಿಳಿಸಿದರು.

ಗಂಗರಾಜು, ಮಾರೇಗೌಡ, ರಘುಕುಮಾರ್ .ಆರ್. ಅಶ್ವಿನ್ ಕುಮಾರ್, ಜಗದೀಶ್, ಕಸ್ತೂರಿ ಮಂಜುನಾಥ್, ಹನುಮೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಸ್ವಾರ್ಥಕ್ಕಾಗಿ ರೈತರ ಭೂಮಿ ಲೂಟಿಗೆ ಯತ್ನ: ಎಚ್‌ಡಿಕೆ
ಟೌನ್‌ಶಿಪ್: ರೈತರಿಗೆ ನ್ಯಾಯ ಕೊಡಿಸುತ್ತೇವೆ

• **ಬೆಂಗಳೂರು:** ಬಿಡದಿ ಟೌನ್‌ಶಿಪ್ ಕುರಿತು ಕಾನೂನಿನಲ್ಲಿ ಏನು ಹೋರಾಟ ಮಾಡಬೇಕೋ ಮಾಡುತ್ತೇವೆ. ರೈತರಿಗೆ ನ್ಯಾಯ ಕೊಡಿಸಲಿದ್ದೇವೆ. ರೈತರ ಪರ ನಿಲ್ಲುವುದು ಜನಪ್ರತಿನಿಧಿಗಳ ಕರ್ತವ್ಯ. ಆ ಕೆಲಸವನ್ನು ನಾವು ಮಾಡುತ್ತೇವೆ. ಯಾವುದೇ ಕಾರಣಕ್ಕೂ ರೈತರ ಭೂಮಿ ಕೊಳ್ಳೆ ಹೊಡೆಯಲು ಬಿಡುವುದಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.



ತಮ್ಮ ನಿವಾಸದಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಬೆಂಗಳೂರು ಅಭಿವೃದ್ಧಿಗೆ ಎಳ್ಳಷ್ಟು ಉಪಯೋಗ ಆಗದ ಈ ಯೋಜನೆಯನ್ನು ತಮ್ಮ ಸ್ವಾರ್ಥಕ್ಕಾಗಿ, ರಿಯಲ್ ಎಸ್ಟೇಟ್ ಮಾಫಿಯಾದೊಂದಿಗೆ ಕೈಜೋಡಿಸಿ ರೈತರ ಭೂಮಿಯನ್ನು ಲೂಟಿ ಹೊಡೆಯಲು ಹೊರಟಿದ್ದಾರೆ. ಈ ಹಿನ್ನೆಲೆಯಲ್ಲಿ ನಮ್ಮ ಪಕ್ಷ ರೈತರ ಪರವಾಗಿ ನಿಲ್ಲುತ್ತದೆ. ಅವರ ಜತೆ ನಿಂತು ಕಾನೂನು ಹೋರಾಟ ನಡೆಸುತ್ತದೆ ಎಂದು ಕೇಂದ್ರ ಸಚಿವರು ಹೇಳಿದರು.

2006ರಲ್ಲಿ, ನಾನು ಐದು ಟೌನ್‌ಶಿಪ್‌ಗಳನ್ನು ಮಾಡಲು ಹೊರಟಾಗ ಇತ್ತೀಚಿನ ದಿನಗಳವರೆಗೂ ಕಾನೂನು ಮಂತ್ರಿಯಾಗಿದ್ದ ಎಚ್.ಕೆ. ಪಾಟೀಲ್ ಅಧ್ಯಕ್ಷತೆಯಲ್ಲಿ ರಚಿಸಿದ ಸತ್ಯಶೋಧನಾ ಸಮಿತಿ 5 ಸ್ಥಳಗಳಲ್ಲಿ ಸತ್ಯಶೋಧನೆ ಮಾಡಿದ್ದರು. ಯಾವ ಉದ್ದೇಶಕ್ಕೆ ಅಂದು ಈ ಯೋಜನೆಯನ್ನು ವಿರೋಧಿಸಲಾಯಿತು ಎಂಬುದನ್ನು ಸಾರ್ವಜನಿಕವಾಗಿ ಜನರ ಮುಂದೆ ಹೇಳಲಿ ಎಂದು ಒತ್ತಾಯಿಸಿದರು.

ಜನರಿಂದ, ರೈತರಿಂದ ತೀವ್ರ ವಿರೋಧ ಬಂದ ನಂತರ ಈಗ ಪ್ರಧಾನಿ ನರೇಂದ್ರ ಮೋದಿಯವರೇ ಈ ಯೋಜನೆಯನ್ನು ಮೆಚ್ಚಿಕೊಂಡಿದ್ದಾರೆ ಎಂದು ಹೇಳುತ್ತಿದ್ದಾರೆ. ಆದರೆ, ನರೇಂದ್ರ ಮೋದಿ ಅವರು ಟೌನ್‌ಶಿಪ್‌ಗಳನ್ನು ಹಾಗೂ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದು ಎಲ್ಲಿ, ಭೂಕಂಪದಿಂದ ಸಂಪೂರ್ಣವಾಗಿ ನಾಶವಾಗಿದ್ದ ಪ್ರದೇಶದಲ್ಲಿ ಅವರು ಇಂಥ ಯೋಜನೆಗಳನ್ನು ಅನುಷ್ಠಾನಕ್ಕೆ ತಂದರು. ಆದರೆ, ಬಿಡದಿಯಲ್ಲಿ ಬೇರೆ ಪರಿಸ್ಥಿತಿ ಇದೆ. ಇಲ್ಲಿ ತೋಟಗಳಿವೆ, ಹೈನುಗಾರಿಕೆ ನಡೆಯುವ ಭೂಮಿಯಿದೆ. ಈ ವಿಚಾರವನ್ನು ಮುಖ್ಯಮಂತ್ರಿಗಳು ಪ್ರಧಾನಿಗಳಿಗೆ ಹೇಳಿದ್ದಾರಾ ಎಂದು ಕೇಂದ್ರ ಸಚಿವರು ಪ್ರಶ್ನಿಸಿದರು.

ಅಭಿವೃದ್ಧಿಗಾಗಿ ಚರಂಡಿ ವ್ಯವಸ್ಥೆ

• **ಕೆ.ಆರ್.ಪುರ:** ಹಲವು ದಿನಗಳ ಬೇಡಿಕೆಯಾದ ರಸ್ತೆ ಮತ್ತು ಚರಂಡಿ ವ್ಯವಸ್ಥೆ ಕಲ್ಪಿಸಲು ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದು ಶಾಸಕ ಬೈರತಿ ಬಸವರಾಜ ಹೇಳಿದರು.

ಕ್ಷೇತ್ರದ ರಾಮಮೂರ್ತಿನಗರದ ಹಳೆ ಪೋಸ್ಟ್ ಆಫೀಸ್ ಹತ್ತಿರ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಅನುದಾನದ ಕೊರತೆಯಿಂದ ಅಭಿವೃದ್ಧಿಗೆ ನಿಧಾನಗತಿಯಲ್ಲಿ ಚಾಲನೆ ದೊರೆತಿದೆ. ಅನುದಾನಕ್ಕೆ ಸರ್ಕಾರ ಮಟ್ಟದಲ್ಲಿ ಬೇಡಿಕೆ ಇದೆ. ಅನುದಾನ ಸಿಕ್ಕ ನಂತರ ಅಭಿವೃದ್ಧಿಗೆ ವೇಗ ದೊರೆಯಲಿದೆ. ಸಾರ್ವಜನಿಕರು ಅಭಿವೃದ್ಧಿ ಕಾಮಗಾರಿ ನಡೆಯುವ ಆಗುವ ತೊಂದರೆಗೆ ಸಹಕರಿಸಬೇಕು ಎಂದರು.

ಕ್ಷೇತ್ರದ ಅಭಿವೃದ್ಧಿಯೇ ನನ್ನ ಕನಸು. ಜನರ ಸೇವೆಯ ಮೂಲಕ ಇನ್ನಷ್ಟು ಅಭಿವೃದ್ಧಿಗೆ ಶ್ರಮಿಸಲಾಗುವುದು. ಕೆ.ಆರ್.ಪುರ ಕ್ಷೇತ್ರ ಅಭಿವೃದ್ಧಿಯ ಪಥದಲ್ಲಿ ಸಾಗಬೇಕು. ಕಾರ್ಯಕರ್ತರು ಮತ್ತು ಮುಖಂಡರು ಜನರ ನಡುವೆ ಸಮನ್ವಯತೆ ಸಾಧಿಸಿ ಒಟ್ಟಾರೆ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸೋಣ ಎಂದರು.

ಈ ಸಂದರ್ಭದಲ್ಲಿ ಮಂಡಲ ಅಧ್ಯಕ್ಷ ಮುನೇಗೌಡ, ಮುಖಂಡರಾದ ಬಾಕ್ಸರ್ ನಾಗರಾಜ್, ರಾಮಮೂರ್ತಿನಗರ ವಾರ್ಡಿನ ಜಿಬಿಎ ಬಿಜೆಪಿ ಪ್ರಬಲ ಆಕಾಂಕ್ಷಿ ಹಿಟಾಚಿ ಮಂಜುನಾಥ್, ಶಿವಣ್ಣ ಮತ್ತಿತರರಿದ್ದರು.



ದೀಕ್ಷಿತ್ ಸ್ಮರಣಾರ್ಥ ದತ್ತಿ ಉಪನ್ಯಾಸ

• **ಬೆಂಗಳೂರು:** ಮಧ್ಯಕಾಲೀನ ಕರ್ನಾಟಕದಲ್ಲಿ ಜ್ಞಾನ ಉತ್ಪಾದನೆ ಕೇವಲ ರಾಜದರ್ಬಾರುಗಳು ಅಥವಾ ಧಾರ್ಮಿಕ ಕೇಂದ್ರಗಳಿಗೆ ಸೀಮಿತವಾಗಿರಲಿಲ್ಲ, ಕೃಷಿಕರು, ವೈದ್ಯರು, ಜ್ಯೋತಿಷಿಗಳು, ಜಲ ನಿರ್ವಹಣಾ ತಜ್ಞರು ಹಾಗೂ ಸ್ಥಳೀಯ ಸಮುದಾಯಗಳ ಅನುಭವಾಧಾರಿತ ಜ್ಞಾನವೂ ಶಾಸ್ತ್ರಗಳ ರೂಪದಲ್ಲಿ ದಾಖಲಾಗಿ ಸಮಾಜದ ಅಭಿವೃದ್ಧಿಗೆ ಪೂರಕವಾಗಿತ್ತು ಎಂದು ಹಾರ್ವರ್ಡ್ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಪ್ರೊ.ಎರಿಕ್ ಮೋಸೆಸ್ ತಿಳಿಸಿದರು.

ಮಿಥಿಕ್ ಸೊಸೈಟಿಯಲ್ಲಿ ಪ್ರೊ. ಜಿ.ಎಸ್. ದೀಕ್ಷಿತ್ ಸ್ಮರಣಾರ್ಥ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮಧ್ಯಕಾಲೀನ ಕರ್ನಾಟಕದ ದೈನಂದಿನ ವಿಜ್ಞಾನಗಳು ಅಥವಾ ಲೌಕಿಕ ಶಾಸ್ತ್ರಗಳ ಕುರಿತು ಮಾತನಾಡಿದ ಅವರು, 11ನೇ ಮತ್ತು 12ನೇ ಶತಮಾನಗಳಲ್ಲಿ ವಿದ್ವಾಂಸರು ಸಂಸ್ಕೃತದ ಪಾಂಡಿತ್ಯಪರ ಪರಂಪರೆಯಿಂದ ಹೊರಬಂದು ಪ್ರಾಯೋಗಿಕ ಜ್ಞಾನವನ್ನು ದಾಖಲಿಸಲು ಹೊಸಗನ್ನಡ ಭಾಷೆಯನ್ನು ಬಳಸಿದ್ದರು. ಇದರ ಪರಿಣಾಮವಾಗಿ ವಿಜ್ಞಾನ, ಕೃಷಿ, ವೈದ್ಯಕೀಯ, ಜಲಸಂರಕ್ಷಣೆ ಮತ್ತು ಗೃಹ ಬಳಕೆಯ ಜ್ಞಾನ ಸಾಮಾನ್ಯ ಜನರಿಗೂ ತಲುಪುವಂತಾಯಿತು ಎಂದು ಹೇಳಿದರು.



ಪ್ರೊ. ಜಿ.ಎಸ್. ದೀಕ್ಷಿತ್ ಅವರ ಕೆರೆ ನೀರಾವರಿ ವ್ಯವಸ್ಥೆ, ಗ್ರಾಮೀಣ ಆಡಳಿತ ಮತ್ತು ಕರ್ನಾಟಕದ ಪರಿಸರ ಇತಿಹಾಸ ಕುರಿತು ಮಾಡಿದ ಸಂಶೋಧನೆಗಳು ಮಧ್ಯಕಾಲೀನ ಕರ್ನಾಟಕದ ಲೌಕಿಕ ಶಾಸ್ತ್ರಗಳು ಕೇವಲ ತಾಂತ್ರಿಕ ಮಾಹಿತಿಗಳ ಸಂಗ್ರಹವಲ್ಲ, ಅವು ಸಾಹಿತ್ಯದ ಸೊಗಡು, ಕಾವ್ಯದ ಸೌಂದರ್ಯ ಮತ್ತು ಜನಜೀವನದ ಅನುಭವಗಳ ಸಮನ್ವಯವಾಗಿದ್ದವು ಎಂದರು.

ವಿದ್ವಾಂಸರು ಕೇವಲ ಗ್ರಂಥಸ್ಥ ಜ್ಞಾನಕ್ಕೆ ಸೀಮಿತವಾಗಿರಲಿಲ್ಲ

ಈ ಕಾಲಘಟ್ಟದಲ್ಲಿ ವಿದ್ವಾಂಸರು ಕೇವಲ ಗ್ರಂಥಸ್ಥ ಜ್ಞಾನಕ್ಕೆ (ಆಗಮ) ಸೀಮಿತವಾಗದೆ, ದೈನಂದಿನ ಅನುಭವಗಳನ್ನು (ಲೌಕಿಕ) ಅಳವಡಿಸಿಕೊಂಡರು. ವೈದ್ಯ ಅಗಲನ ಶಸ್ತ್ರಚಿಕಿತ್ಸಾ ನೈಪುಣ್ಯ ಮತ್ತು ಚಾವುಂಡರಾಯನ ಲೋಕೋಪಕಾರಂ ಗ್ರಂಥದಲ್ಲಿರುವ ಅಡುಗೆ, ಬಾವಿ ತೋಡುವುದು ಹಾಗೂ ಜ್ಯೋತಿಷ್ಯದ ವಿಚಾರಗಳನ್ನು, ಅಂದಿನ ಸಮಾಜದ ವೈಜ್ಞಾನಿಕ ಮನೋಭಾವಕ್ಕೆ ಸಾಕ್ಷಿಯಾಗುವಂತೆ ದಾಖಲಿಸಿದ್ದರು. ತಮ್ಮ ಅನುಭವಗಳನ್ನು ದಾಖಲಿಸಿ ಮುಂದಿನ ಪೀಳಿಗೆಗಳಿಗೆ ಮಾರ್ಗದರ್ಶನ ನೀಡಿರುವುದು ಗಮನಾರ್ಹ ಸಂಗತಿ. ಅಂದಿನ ವಿದ್ವಾಂಸರು ತಮ್ಮ ಸಾಧನೆಗಳ ಬಗ್ಗೆ ಹೆಮ್ಮೆಯಿಂದ ಬರೆದುಕೊಳ್ಳುವ ಮೂಲಕ ವಿಜ್ಞಾನಕ್ಕೆ ಹೊಸ ಆಯಾಮ ನೀಡಿದ್ದರು ಎಂದು ಪ್ರೊ.ಎರಿಕ್ ಮೋಸೆಸ್ ಅಭಿಪ್ರಾಯಪಟ್ಟರು.

ಚಿತ್ರಕಲಾವಿದ ಚಂದ್ರನಾಥ ಆಚಾರ್ಯ ಅಭಿಮತ
ಕಲಾಪ್ರದರ್ಶನದಿಂದ ದೇಶೀಯ ಸಂಸ್ಕೃತಿ ಗಟ್ಟಿ

• **ಬೆಂಗಳೂರು:** ಭಾರತೀಯ ಸಂಸ್ಕೃತಿಯ ನೆಲೆಗಳನ್ನು ಗಟ್ಟಿಗೊಳಿಸುವಲ್ಲಿ ಈ ಕಲಾಪ್ರದರ್ಶನದ ಹಿಂದಿರುವ ಶ್ರಮ, ಉದ್ದೇಶ ಅತ್ಯಂತ ಶ್ಲಾಘನೀಯವಾದದ್ದು ಎಂದು ಚಿತ್ರಕಲಾವಿದ ಚಂದ್ರನಾಥ ಆಚಾರ್ಯ ಅಭಿಪ್ರಾಯಪಟ್ಟರು.

ಸಂಸ್ಕಾರ ಭಾರತೀ ಕರ್ನಾಟಕ ದಕ್ಷಿಣ ಪ್ರಾಂತ ದೃಶ್ಯ ಕಲಾ ವಿಭಾಗವು ಸ್ವಾಭಿಮಾನ ಭಾರತ್ ಮತ್ತು ಸಂವಿಧಾನ 75 ಶೀರ್ಷಿಕೆಯಲ್ಲಿ ಬಸವನಗುಡಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಆಯೋಜಿಸಿದ್ದ ಚಿತ್ರ ಕಲಾಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಷ್ಟ್ರೀಯತೆಗೆ ನಮ್ಮನ್ನು ಕೂಡ ಸ್ಪಂದಿಸುವಂತೆ ಈ ಕಾರ್ಯಕ್ರಮಗಳು ಪ್ರೇರೇಪಿಸುತ್ತದೆ. ತನ್ನ 60 ವರ್ಷಗಳ ಕಲಾ ಪಯಣದಲ್ಲಿ ಇಷ್ಟೊಂದು ದೊಡ್ಡ ಮಟ್ಟದ ಪ್ರದರ್ಶನದ ಕಲಾಕೃತಿಗಳಲ್ಲಿ ಒಂದು ಗಟ್ಟಿತನ ಕಾಣುತ್ತಿತ್ತು. ನೈಪುಣ್ಯದ ಜತೆಯಲ್ಲಿ ಕಲಾವಿದರ ನಿಮ್ಮ ನಿಮ್ಮ ಒಳದನಿ, ಅರಿತುಕೊಂಡು ಕಲಾ ರಚನೆ ಮಾಡಿ ಕೊಂಡರೆ ಕೆಲವೇ ವರ್ಷಗಳಲ್ಲಿ ವರ್ಷಗಳಲ್ಲಿ ಪ್ರಬುದ್ಧ ಕಲಾವಿದರಾಗಿ ಹೊರಹೊಮ್ಮುವ ಭರವಸೆ ಕೂಡ ಇಲ್ಲಿ ಕಾಣಬಹುದು ಎಂದರು. ಯುವ ಕಲಾವಿದ ಹಾಗೂ ಪ್ರಾಂತ ಪ್ರಧಾನ ಕಾರ್ಯದರ್ಶಿ ಹೇಮಂತ್ ಜನಾರ್ದನರಾವ್ ಮಾತನಾಡಿ, ಸಂಸ್ಕಾರಭಾರತೀ ಕಳೆದ ನಲವತ್ತು ವರ್ಷಗಳಲ್ಲಿ ದೇಶದಾದ್ಯಂತ ಲಲಿತ ಕಲೆಗಳ ಸಂವರ್ಧನೆಗೆ ಶ್ರಮಿಸುತ್ತಿರುವ ರಾಷ್ಟ್ರೀಯ ಸಂಸ್ಥೆಯಾಗಿದೆ. ಸಾ ಕಲಾ ಯಾ ವಿಮುಕ್ತಯೇ ಎಂಬ ಧ್ಯೇಯ ವಾಕ್ಯದಂತೆ ಮಾನವನ ಜೀವನಕ್ಕೆ ಕಲೆ ಅತ್ಯಂತ ಪೂರಕ ಹಾಗೂ ಪೋಷಕ ಎಂಬುದನ್ನು ತಿಳಿಸುತ್ತದೆ ಎಂದರು.



ಸ್ವಾಭಿಮಾನವೊಂದಿದ್ದರೆ ಹೆಳವ ಕೂಡ ಪರ್ವತ ಏರಬಲ್ಲ

ಸಂಸ್ಕಾರ ಭಾರತೀ ಪ್ರಾಂತ ಅಧ್ಯಕ್ಷ ಸುಚೇಂದ್ರ ಪ್ರಸಾದ್ ಮಾತನಾಡಿ, ನಮ್ಮ ಚಿತ್ರಕಲೆಯಂತ ಬಲವಾದ ಅಭಿವ್ಯಕ್ತಿ ಕಲಾಮಾಧ್ಯಮ, ನಮ್ಮಲ್ಲಿರುವ ಕೆಲವು ತವಕ, ತಲ್ಲಣಗಳನ್ನು ತಾಕಲಾಟಗಳನ್ನ ತಹತಹಗಳನ್ನ, ಸಂವಾದಿಸುವ ಬಲವಾದ ಪ್ರಬಲ ಮಾಧ್ಯಮ. ಬಾಹ್ಯ ಪ್ರಚೋದನೆ ಎಷ್ಟಿದ್ದರೂ ನಮ್ಮ ಅಂತರಾತ್ಮದ ಎಚ್ಚರಿಕೆಯ ಅರಿವು ಇರಬೇಕು. ಇರುವೆಗಳ ಹಾಗೆ ನಿಧಾನವಾಗಿ ಹೆಜ್ಜೆ ಇಡುತ್ತಾ ದೂರ ಸಾಗಿ ಯೋಜನೆ ಸಾಧಿಸಬೇಕು. ಸ್ವಾಭಿಮಾನವೊಂದಿದ್ದರೆ ಹೆಳವ ಕೂಡ ಪರ್ವತ ಏರಬಲ್ಲ, ನಮ್ಮ ನೆಲದಲ್ಲಿ ನಾವು ಅನ್ಯರಾಗದೆ ಮಾನ್ಯರಾಗುವ ದಿನಗಳು ಕಾಣುವಂತಾಗಬೇಕು ಎಂದರು.

ಇಂದು ನಗರದಲ್ಲಿ...

- ಆಮ್ ಆದ್ಮಿ ಪಕ್ಷ: ಬೆಂಗಳೂರು ಉಳಿಸಿ, ಹಸಿರು, ಸ್ವಚ್ಛ ಮತ್ತು ವಾಸಯೋಗ್ಯ ಬೆಂಗಳೂರಿಗಾಗಿ ಎಎಪಿ ಹಸಿರು ಕಾರ್ಯಸೂಚಿ, ಸ್ಥಳ: ಕಾನ್ಫರೆನ್ಸ್ ಹಾಲ್, ಪ್ರೆಸ್ ಕ್ಲಬ್, ಬೆಳಗ್ಗೆ 10.30
- ಬೆಂಗಳೂರು ನಗರ ಪೊಲೀಸ್ ವತಿಯಿಂದ ವಿಶ್ವ ಹಿರಿಯರ ಮೇಲಿನ ದೌರ್ಜನ್ಯ ಜಾಗೃತಿ ದಿನ-2026, ಸ್ಥಳ: ಪೊಲೀಸ್ ಆಯುಕ್ತರ ಕಚೇರಿ, ಬೆಳಗ್ಗೆ 11
- ವಾಸವಿ ಸಾಂಸ್ಕೃತಿಕ ಕಲಾತಂಡ : ಜಗಿ ನಾಟಕ ಪ್ರದರ್ಶನ, ಸ್ಥಳ: ನಿರಾಶ್ರಿತರ ಪರಿಹಾರ ಕೇಂದ್ರ, ಸುಮ್ಮನಹಳ್ಳಿ ಸರ್ಕಲ್, ಸಂಜೆ 4 ರಿಂದ.
- ವಾಲ್ಮೀಕಿ ರಾಮಾಯಣ ಹಾಗೂ ಸುಂದರಕಾಂಡದ ಸೂಕ್ಷ್ಮಾವಲೋಕನ, ಸ್ಥಳ: ಸಾಂಸ್ಕೃತಿಕ ಮಂದಿರ, 9ನೇ ಬಡಾವಣೆ, ಜಯನಗರ, ಸಂಜೆ 6.30

ಕಿರುಸುದ್ದಿ

ಸ್ವಾಭಿಮಾನದ ಜೀವನ ಮುಖ್ಯ: ರಶ್ಮಿರಾವ್

• **ಬೆಂಗಳೂರು:** ಇಂದಿನ ಮಕ್ಕಳು ಭವಿಷ್ಯದಲ್ಲಿ ಸ್ವಾಭಿಮಾನದ ಜೀವನ ನಡೆಸುವುದು ಅತೀ ಮುಖ್ಯವಾಗಿದೆ ಎಂದು ಸಂಹಿತಾ ಇಂಗ್ಲಿಷ್ ಸ್ಕೂಲ್‌ನ ಪ್ರಧಾನ ವ್ಯವಸ್ಥಾಪಕಿ ಡಾ ರಶ್ಮಿರಾವ್ ತಿಳಿಸಿದರು. ಎಸ್‌ಎಸ್‌ಎಲ್‌ಸಿ ಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ, ಕುರುಬರಹಳ್ಳಿಯ ಸಂಹಿತಾ ಇಂಗ್ಲಿಷ್ ಸ್ಕೂಲ್ ವಿದ್ಯಾರ್ಥಿಗಳಿಗೆ ಭೈರವರಾಗ ಮ್ಯೂಸಿಕಲ್ ಅಕಾಡೆಮಿ ಬಳಗದಿಂದ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ಈ ಸಂಧರ್ಭದಲ್ಲಿ ಮಾತನಾಡಿದ ಅವರು, ನಮ್ಮ ಶಾಲೆಯಲ್ಲಿ ಶಿಕ್ಷಣದ ಜತೆಗೆ ಯೋಗ, ಕರಾಟೆ ಇತ್ಯಾದಿ ಪಠ್ಯೇತರ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲು ನಮ್ಮ ಸಂಸ್ಥೆಯ ಶಿಕ್ಷಕರು ಹೆಚ್ಚಿನ ಶ್ರಮ ವಹಿಸಿದ್ದಾರೆ ಎಂದರು. ಭೈರವರಾಗದ ಅಧ್ಯಕ್ಷೆ ಎಸ್. ಸುಜಾತ ಮಾತನಾಡಿ, ಸಂಹಿತಾ ಇಂಗ್ಲೀಷ್ ಸ್ಕೂಲ್‌ನಲ್ಲಿ ಹೆಚ್ಚಾಗಿ ಮಧ್ಯಮ ವರ್ಗದ, ಬಡ ಕೂಲಿ ಕಾರ್ಮಿಕರ ಮಕ್ಕಳೇ ಕಲಿಯುತ್ತಿದ್ದಾರೆ. ಆದ್ದರಿಂದ ಇಲ್ಲಿನ ಮಕ್ಕಳಿಗೆ ಹಾಗೂ ಪೋಷಕರಿಗೆ ನಮ್ಮ ಸಂಸ್ಥೆಯಲ್ಲಿ ಉಚಿತವಾಗಿ ಸಂಗೀತದ ಹಾಡುಗಾರಿಕೆಯನ್ನು ಹೇಳಿಕೊಡಲಾಗುತ್ತದೆ ಎಂದರು. ಈ ಸಂದರ್ಭದಲ್ಲಿ ಶೇ 85 ಕ್ಕಿಂತ ಅಧಿಕ ಅಂಕಗಳನ್ನು ಗಳಿಸಿ ತೇರ್ಗಡೆ ಹೊಂದಿದ ರಾಜ್ಯ ಪಠ್ಯಕ್ರಮ ವಿಭಾಗದ 17 ವಿದ್ಯಾರ್ಥಿಗಳಿಗೆ ಫಲಕ ನೀಡಿ ಪುರಸ್ಕರಿಸಲಾಯಿತು. ಪ್ರಾಂಶುಪಾಲೆ ಕೆ. ವಿಜಯಾ, ಡಾ. ಪದ್ಮನಾಭನ್, ವೆಂಕಟೇಶಮೂರ್ತಿ, ಜಗದೀಶ ಕುಮಾರ್, ನಿತ್ಯಾಶಂಕರ್, ಉಮಾ, ರೇಣುಕಾ ಸೇರಿದಂತೆ ಶಿಕ್ಷಕರು, ಪೋಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ರೈತರಿಗೆ ಪೋಡಿ ದುರಸ್ತಿ ವಿಳಂಬ: ರೈತರ ಅಳಲು



• **ಕನಕಪುರ:** ಕಳೆದ ಏಳು ದಶಕಗಳಿಂದ ಸಾಗುವಳಿ ಮಾಡಿಕೊಂಡು ಬರುತ್ತಿರುವ ರೈತರಿಗೆ ಭೂಮಿಯ ಪೋಡಿ ಹಾಗೂ ದುರಸ್ತಿ ಕಾರ್ಯವನ್ನು ತಹಶೀಲ್ದಾರ್ ಕಚೇರಿ ವಿಳಂಬ ಮಾಡುತ್ತಿರುವುದಾಗಿ ರೈತರು ಶಾಸಕ ಇಕ್ಬಾಲ್ ಹುಸೇನ್ ಅವರ ಎದುರು ಅಳಲು ತೋಡಿಕೊಂಡ ಘಟನೆ ನಡೆದಿದೆ. ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಕಾರ್ಯಕ್ರಮಕ್ಕೆ ಆಗಮಿಸಿದ್ದ ಶಾಸಕರನ್ನು ಭೇಟಿ ಮಾಡಿದ ಗ್ರಾಮಸ್ಥರು, 1950ರಲ್ಲಿ ಸರ್ಕಾರವು 52 ಕುಟುಂಬಗಳಿಗೆ ತಲಾ 2 ಎಕರೆಗಳಂತೆ ಒಟ್ಟು 110 ಎಕರೆ ಭೂಮಿಯನ್ನು ಮಂಜೂರು ಮಾಡಿತ್ತು ಎಂದು ತಿಳಿಸಿದರು. ಈ ಭೂಮಿಗೆ ಸಂಬಂಧಿಸಿದಂತೆ ಎಲ್ಲಾ ಕಂದಾಯ ದಾಖಲೆಗಳು ತಮ್ಮ ಬಳಿ ಇದ್ದು, ಹಲವು ವರ್ಷಗಳಿಂದ ನಿರಂತರವಾಗಿ ಸಾಗುವಳಿ ಮಾಡಿಕೊಂಡು ಬರುತ್ತಿದ್ದೇವೆ ಎಂದು ಹೇಳಿದರು. ಈ ಕುರಿತು ಅರಣ್ಯ ಇಲಾಖೆಯು ಸಹ ತಮ್ಮ ವ್ಯಾಪ್ತಿಗೆ ಭೂಮಿ ಒಳಪಡುವುದಿಲ್ಲ ಎಂದು ದೃಢೀಕರಿಸಿದ್ದರೂ, ತಹಶೀಲ್ದಾರ್ ಹರ್ಷವರ್ಧನ್ ಅವರಿಗೆ ಹಲವು ಬಾರಿ ಅರ್ಜಿ ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಳ್ಳದೆ ವಿಳಂಬ ನೀತಿ ಅನುಸರಿಸಲಾಗುತ್ತಿದೆ ಎಂದು ರೈತರು ಆರೋಪಿಸಿದರು. ಭೂಮಿಯ ಪೋಡಿ ಮತ್ತು ದುರಸ್ತಿ ಕಾರ್ಯದಲ್ಲಿ ತಹಶೀಲ್ದಾರ್ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ನಿರ್ಲಕ್ಷ್ಯ ತೋರುತ್ತಿದ್ದು, ಇದರಿಂದ ರೈತರಿಗೆ ತೊಂದರೆಯಾಗುತ್ತಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು. ಶಾಸಕರು ಸಮಸ್ಯೆಯನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ಗ್ರಾಮಸ್ಥರಾದ ಕೆಬ್ಬೆದೊಡ್ಡಿ ಗೋವಿಂದ, ಲಕ್ಷಪ್ಪ, ರಾಜೇಶ್, ಸತ್ಯಪ್ರಕಾಶ್, ಬಸರಾಜು, ಲಕ್ಷ್ಮಮ್ಮ, ಗೌರಮ್ಮ, ಆಟೋ ಆನಂದ, ಕಿರಣ ಸೇರದಿಂತೆ ಹಲವರು ಹಾಜರಿದ್ದರು.


ಮಕ್ಕಳ ದುಡಿಮೆ ಮುಕ್ತಗೊಳಿಸಿ



• **ದೊಡ್ಡಬಳ್ಳಾಪುರ:** ಪ್ರತಿ ಮಗುವಿಗೂ ಶಿಕ್ಷಣ, ಪ್ರತಿ ಮಗುವಿಗೂ ಸುರಕ್ಷಿತ ಬಾಲ್ಯ ಎಂಬ ಸಂಕಲ್ಪದೊಂದಿಗೆ ಬಾಲಕಾರ್ಮಿಕತೆಯ ಮುಕ್ತ ಸಮಾಜವನ್ನು ನಿರ್ಮಿಸೋಣ ಎಂದು ದೇವರಾಜ್ ಅರಸ್ ವ್ಯವಹಾರ ನಿರ್ವಹಣಾ ಮಹಾವಿದ್ಯಾಲಯದ ಎನ್.ಎಸ್.ಎಸ್. ಅಧಿಕಾರಿ ಡಾ. ಎಂ ಚಿಕ್ಕಣ್ಣ ಹೇಳಿದರು. ದೇವರಾಜ್ ಅರಸ್ ವ್ಯವಹಾರ ನಿರ್ವಹಣಾ ಮಹಾವಿದ್ಯಾಲಯ ಹಾಗೂ ದೇವರಾಜ್ ಅರಸ್ ಪ್ರಥಮ ದರ್ಜೆ ಸಂಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದ ನೇತೃತ್ವದಲ್ಲಿ ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು. ಪ್ರತಿಯೊಬ್ಬ ಮಗುವಿಗೂ ಶಿಕ್ಷಣ ಪಡೆಯುವ, ಆಟವಾಡುವ ಮತ್ತು ಸಂತೋಷದಿಂದ ಬದುಕುವ ಹಕ್ಕು ಇದೆ. ಆದ್ದರಿಂದ ಬಾಲಕಾರ್ಮಿಕತೆಯನ್ನು ನಿರ್ಮೂಲನೆ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ನಾವು ನಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಾಲಕಾರ್ಮಿಕರನ್ನು ಕಂಡರೆ ಸಂಬಂಧಿಸಿದ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಮಕ್ಕಳಿಗೆ ಶಿಕ್ಷಣದ ಮಹತ್ವವನ್ನು ತಿಳಿಸಬೇಕು ಮತ್ತು ಅವರ ಹಕ್ಕುಗಳನ್ನು ರಕ್ಷಿಸಲು ಕೈಜೋಡಿಸಬೇಕು,ಮಕ್ಕಳು ದೇಶದ ಭವಿಷ್ಯ ಎಂದರು. ಬಾಲ ಕಾರ್ಮಿಕತೆಯ ವಿರುದ್ಧ ಹೋರಾಡುವ ಹಾಗೂ ಮಕ್ಕಳ ಸಮಗ್ರ ಅಭಿವೃದ್ಧಿಗೆ ಸಹಕರಿಸುವ ಸಂಕಲ್ಪದ ಪ್ರಮಾಣ ವಚನವನ್ನು ಡಾ.ಎಂ ಚಿಕ್ಕಣ್ಣ ಬೋಧಿಸಿದರು. ಕಾಲೇಜಿನ ಉಪ ಪ್ರಾಂಶುಪಾಲರಾದ ಕೆ. ದಕ್ಷಿಣಾಮೂರ್ತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರಾದ ಭಾನುಶ್ರೀ, ಲಕ್ಷ್ಮೀಶ, ವೆಂಕಟೇಶ್ ಮುತ್ತಿತರರು ಹಾಜರಿದ್ದರು.

ಪ್ರವಾಸಿಗರಿಗೆ ನೀರುಕುದುರೆ ಮರಿ ಆಕರ್ಷಣೆ

▸ ಮಹದೇವ್ ಆನೇಕಲ್





• **ಆನೇಕಲ್:** ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ಸಂಭ್ರಮದ ಅಲೆ ಎದ್ದಿದೆ. ಒಂದೆಡೆ ದಕ್ಷಿಣ ಆಫ್ರಿಕಾದಿಂದ ಆಗಮಿಸಿದ ಚೀತಾಗಳು ಮೊದಲ ಬಾರಿಗೆ ಸಾರ್ವಜನಿಕರ ಕಣ್ಣನ ಸೆಳೆಯುತ್ತಿದ್ದರೆ, ಮತ್ತೊಂದೆಡೆ ಜೀಬ್ರಾ ಮತ್ತು ನೀರುಕುದುರೆ ಮರಿಗಳ ಮುದ್ದಾಟ ಪ್ರವಾಸಿಗರ ಹೃದಯ ಗೆಲ್ಲುತ್ತಿದೆ.

ಕಡ್ಡಾಯ ಕ್ವಾರಂಟೈನ್ ಅವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಚೀತಾಗಳು ಇದೀಗ ತಮ್ಮ ವೇಗ, ಚುರುಕುತನ ಮತ್ತು ರಾಜಸನಡೆಗಳಿಂದವೀಕ್ಷಕರನ್ನು ಮಂತ್ರಮುಗ್ಧರನ್ನಾಗಿಸುತ್ತಿವೆ. ಚೀತಾಗಳ ದರ್ಶನಕ್ಕಾಗಿ ಪ್ರತಿದಿನ ಸಾವಿರಾರು ಪ್ರಾಣಿ ಪ್ರಿಯರು ಉದ್ಯಾನವನದತ್ತ ಮುಖ ಮಾಡುತ್ತಿದ್ದಾರೆ.


ಈ ಸಂತಸದ ನಡುವೆ ಕಬಿನಿ ಹೆಸರಿನ ಜೀಬ್ರಾ ಆರೋಗ್ಯವಂತ ಹೆಣ್ಣು ಮರಿಗೆ ಜನ್ಮ ನೀಡಿದ್ದು, ತನ್ನ ತಾಯಿಯೊಂದಿಗೆ ಓಡಾಡುವ ಮರಿ ಪ್ರವಾಸಿಗರ ಕ್ಯಾಮೆರಾಗಳ ಪ್ರಮುಖ ಆಕರ್ಷಣೆಯಾಗಿದೆ. ಹೊಸ ಮರಿಯ ಆಗಮನದಿಂದ ಉದ್ಯಾನವನದಲ್ಲಿನ ಜೀಬ್ರಾಗಳ ಸಂಖ್ಯೆ 11ಕ್ಕೆ ಏರಿಕೆಯಾಗಿದೆ.

ಇನ್ನೊಂದೆಡೆ, 17 ವರ್ಷದ ದಕ್ಷ ಹೆಸರಿನ ನೀರುಕುದುರೆ ಮೇ 28ರ ರಾತ್ರಿ ಮರಿಗೆ ಜನ್ಮ ನೀಡಿದ್ದು, ನೀರಿನಲ್ಲಿ ತಾಯಿಯೊಂದಿಗೆ ಆಟವಾಡುವ ದೃಶ್ಯಗಳು ನೋಡುಗರ ಮನಸೆಳೆಯುತ್ತಿವೆ. ಈ ಹೆಣ್ಣು ಮರಿಗೆ ದಿವಂಗತ ಪಶುವೈದ್ಯೆ ಡಾ. ಸಮೀಕ್ಷಾ ರೆಡ್ಡಿ ಅವರ ಸ್ಮರಣಾರ್ಥ 'ಸಮೀಕ್ಷಾ' ಎಂದು ನಾಮಕರಣ ಮಾಡುವ ಚಿಂತನೆ ನಡೆಯುತ್ತಿದೆ. ಚೀತಾದ ಚಿತ್ತಾಕರ್ಷಕ ಹೆಜ್ಜೆ, ಜೀಬ್ರಾ ಮರಿಯ ಚಿಲಿಪಿಲಿ ಓಟ ಮತ್ತು ನೀರುಕುದುರೆ ಮರಿಯ ಮುದ್ದು ಕಸರತ್ತುಗಳಿಂದ ಬನ್ನೇರುಘಟ್ಟ ಜೈವಿಕ ಉದ್ಯಾನವನ ಇದೀಗ ಪ್ರಕೃತಿ ಹಾಗೂ ವನ್ಯಜೀವಿ ಪ್ರಿಯರ ನೆಚ್ಚಿನ ತಾಣವಾಗಿ ರೂಪುಗೊಂಡಿದೆ. ಸಾವಿರಾರು ಪ್ರವಾಸಿಗರು ಈ ಅಪರೂಪದ ಕ್ಷಣಗಳನ್ನು ಕಣ್ತುಂಬಿಕೊಳ್ಳಲು ಹರಿದುಬರುತ್ತಿದ್ದಾರೆ.

ಬನ್ನೇರುಘಟ್ಟದಲ್ಲಿ ತ್ರಿವಳಿ ಸಂಭ್ರಮ: ಚೀತಾದ ಚಿತ್ತಾಕರ್ಷಕ ಓಟ

ಸಾರ್ವಜನಿಕ ವೀಕ್ಷಣೆಗೆ ಲಭ್ಯ

ದಕ್ಷಿಣ ಆಫ್ರಿಕಾದಿಂದ ಬನ್ನೇರುಘಟ್ಟ ಜೈವಿಕ ಉದ್ಯಾನವನಕ್ಕೆ ತರಲಾದ ಚೀತಾಗಳು ಕ್ವಾರಂಟೈನ್ ಅವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಸಾರ್ವಜನಿಕ ವೀಕ್ಷಣೆಗೆ ಲಭ್ಯವಾಗಿವೆ. ವಿಶ್ವದ ಅತಿ ವೇಗದ ಭೂಚರ ಪ್ರಾಣಿಗಳಾದ ಚೀತಾಗಳು ತಮ್ಮ ಮಿಂಚಿನ ವೇಗ, ಚುರುಕುತನ ಮತ್ತು ರಾಜಸ ನಡೆಗಳಿಂದ ಪ್ರವಾಸಿಗರ ಗಮನ ಸೆಳೆಯುತ್ತಿವೆ. ಚೀತಾಗಳನ್ನು ಕಣ್ತುಂಬಿಕೊಳ್ಳಲು ಪ್ರತಿದಿನ ಸಾವಿರಾರು ಸಂಖ್ಯೆಯಲ್ಲಿ ಪ್ರಾಣಿ ಪ್ರಿಯರು ಹಾಗೂ ಪ್ರವಾಸಿಗರು ಉದ್ಯಾನವನಕ್ಕೆ ಭೇಟಿ ನೀಡುತ್ತಿದ್ದಾರೆ. ಚೀತಾಗಳ ಆಗಮನದಿಂದ ಉದ್ಯಾನವನದ ಆಕರ್ಷಣೆ ಮತ್ತಷ್ಟು ಹೆಚ್ಚಿದ್ದು, ವನ್ಯಜೀವಿ ಸಂರಕ್ಷಣೆ ಹಾಗೂ ಜಾಗೃತಿಯ ಕುರಿತು ಸಾರ್ವಜನಿಕರಲ್ಲಿ ಆಸಕ್ತಿ ಮೂಡಿಸುತ್ತಿದೆ. ಮಕ್ಕಳಿಂದ ಹಿರಿಯರವರೆಗೆ ಎಲ್ಲರೂ ಚೀತಾಗಳ ಚಲನವಲನಗಳನ್ನು ಕಣ್ತುಂಬಿಕೊಳ್ಳುವ ಮೂಲಕ ವಿಶೇಷ ಅನುಭವ ಪಡೆಯುತ್ತಿದ್ದಾರೆ.



ಚೀತಾಗಳ ಹೊಸ ಉತ್ಸಾಹ

ಬನ್ನೇರುಘಟ್ಟ ಜೈವಿಕ ಉದ್ಯಾನವನವು ಹೊಸ ಉತ್ಸಾಹವನ್ನು ತಂದಿರುವ ಪ್ರಮುಖ ಬೆಳವಣಿಗೆಗಳ ಸಂತೋಷಪಡುತ್ತದೆ. ಇತ್ತೀಚೆಗೆ ದಕ್ಷಿಣ ಆಫ್ರಿಕಾದಿಂದ ತರಲಾದ ಚೀತಾಗಳು ಇಲ್ಲಿನ ವಾತಾವರಣಕ್ಕೆ ಯಶಸ್ವಿಯಾಗಿ ಹೊಂದಿಕೊಂಡಿರುವುದು, ಇದರೊಂದಿಗೆ ಜೀಬ್ರಾ ಮರಿ ಮತ್ತು ನೀರು ಕುದುರೆ ಮರಿಯ ಜನನವು ಉದ್ಯಾನವನದ ಮೈಲಿಗಲ್ಲಾಗಿದೆ. ವನ್ಯಜೀವಿ ಸಂರಕ್ಷಣೆಯ ಜಾಗೃತಿಯನ್ನು ಉತ್ತೇಜಿಸುವ ಜೊತೆಗೆ ಪ್ರಾಣಿಗಳ ಆರೈಕೆಯಲ್ಲಿ ಮಾದರಿ ಗುಣಮಟ್ಟವನ್ನು ಒದಗಿಸುವ ಉದ್ಯಾನವನದ ನಿರಂತರ ಪ್ರಯತ್ನಗಳಿಗೆ ಇದು ಸಾಕ್ಷಿಯಾಗಿದೆ ಎಂದು ಬನ್ನೇರುಘಟ್ಟ ಉದ್ಯಾನವನದ ಕಾರ್ಯನಿರ್ವಾಹಕ ನಿರ್ದೇಶಕ ಎ.ವಿ.ಸೂರ್ಯಸೇನ್ ತಿಳಿಸಿದರು.

ಮುಮ್ಮಡಿ ಶಿವರುದ್ರ ಸ್ವಾಮೀಜಿ ಕಿವಿಮಾತು

ಒತ್ತಡದ ಜೀವನಕ್ಕೆ ಸಂಗೀತವೇ ಮದ್ದು



• **ಕನಕಪುರ:** ಕಲೆ, ಸಂಸ್ಕೃತಿ ಹಾಗೂ ಸಂಗೀತಕ್ಕೆ ಇರುವ ಬೆಲೆ ಹಣಕ್ಕಿಲ್ಲ ಎಂಬ ಮಾತು ನೂರಕ್ಕೆ ನೂರು ಸತ್ಯ, ಕಲೆ, ಸಂಸ್ಕೃತಿ, ಮನಸ್ಸಿಗೆ ಶಾಂತಿ, ನೆಮ್ಮದಿ ಹಾಗೂ ಭಾವನಾತ್ಮಕವಾಗಿ ನಮ್ಮನ್ನು ಶ್ರೀಮಂತಗೊಳಿಸುವ ಶಕ್ತಿ ಅದಕ್ಕಿದೆ ಎಂದು ಶ್ರೀ ಕ್ಷೇತ್ರ ಮರಳೆಗವಿ ಮಠದ ಮುಮ್ಮಡಿ ಶಿವರುದ್ರ ಸ್ವಾಮೀಜಿ ಹೇಳಿದರು.

ಭಾನುವಾರ ನಗರದ ಅಂಬೇಡ್ಕರ್ ಭವನದಲ್ಲಿ ನವ್ಯ ನೃತ್ಯ ಅಕಾಡಮಿ ನೃತ್ಯ ಕಲೆಯಿಂದ ಜರುಗಿದ ಶ್ರೀ ಲಹರಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಂಗೀತ ನೀಡುವ ಆನಂದವನ್ನು ಯಾವುದೇ ಸಂಪತ್ತಿನಿಂದ ಅಳೆಯಲು ಸಾಧ್ಯವಿಲ್ಲ, ಒತ್ತಡದ ಜೀವನದಲ್ಲಿ ಒಂದು ಸುಂದರ ಹಾಡು ಅಥವಾ ಮಧುರವಾದ ವಾದ್ಯ, ಅಥವಾ ಬರತ ನಾಟ್ಯಗಳು ಮನಸ್ಸಿಗೆ ಮದವನ್ನು ನೀಡುತ್ತವೆ, ಹಣದಿಂದ ಪ್ರಪಂಚದ ಬೇಕಾದ ವಸ್ತುವನ್ನು ಖರೀದಿಸಬಹುದು. ಆದರೆ ಕೆಲ, ಸಂಸ್ಕೃತಿ, ಸಂಗೀತದಿಂದ ಸಿಗುವ ಆನಂದ, ನೆಮ್ಮದಿ ಮತ್ತು ಭಾವನಾತ್ಮಕ ಬೆಲೆಯನ್ನು ಹಣದಿಂದ ಅಳೆಯಲು ಆಗುವುದಿಲ್ಲ, ಅಂತಹ ಕಲೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸಲು ನವ್ಯ ನರ್ತನ ನೃತ್ಯ ಶಾಲೆಯ ನವ್ಯಶ್ರೀ ಭರತನಾಟ್ಯವನ್ನು ಆಯ್ದುಕೊಂಡು ತಮ್ಮ ಪಯಣವನ್ನು ಪೂರೈಸುತ್ತಿರುವುದು ಶ್ಲಾಘನೀಯವಾಗಿದೆ ಎಂದರು. ದೇಗುಲ ಮಠದ ಶ್ರೀ ಚನ್ನಬಸವ ಸ್ವಾಮೀಜಿ ಆಶೀರ್ವಚನ ನೀಡಿ, ಸನಾತನ ಧರ್ಮದಿಂದ ತಲೆತಲಾಂತರವಾಗಿ ಬಂದಿರುವ ಕಲೆ, ಸಂಸ್ಕೃತಿ ಹಾಗೂ ಸಂಗೀತ ನಮ್ಮ ನಾಡಿನ ಹೆಮ್ಮೆ. ಇವುಗಳನ್ನು ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸಿಕೊಂಡು ಹೋಗುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಈ ಪರಂಪರೆಯನ್ನು ಜೀವಂತವಾಗಿಡಲು ಪೋಷಕರು ತಮ್ಮ ಮಕ್ಕಳಿಗೆ ಅರಿವು ಮೂಡಿಸುವುದು ಅಗತ್ಯವಾಗಿದೆ. ಭರತನಾಟ್ಯವು ಭಾರತದ ಅತ್ಯಂತ ಪ್ರಾಚೀನ ಮತ್ತು ಆಕರ್ಷಕವಾದ ಶಾಸ್ತ್ರೀಯ ನೃತ್ಯ ಪ್ರಕಾರವಾಗಿದೆ ಎಂದರು.ಬೆಂಗಳೂರು ಕಬ್ಬನ್ ಪಾರ್ಕ್ ಎಸಿಪಿ ಪ್ರಿಯದರ್ಶಿನಿ ಈಶ್ವರ್ ಸಾಣಿಕೊಪ್ಪ ಮಾತನಾಡಿ, ಗ್ರಾಮೀಣ ಭಾಗದ ಮಕ್ಕಳಿಗೂ ಭರತನಾಟ್ಯದಂತಹ ಶ್ರೇಷ್ಠಕಲೆ ಪರಿಚಯಿಸುತ್ತಿರುವುದು ಅತ್ಯಂತ ಅರ್ಥಪೂರ್ಣವಾಗಿದೆ. ಮಕ್ಕಳಲ್ಲಿ ಸೃಜನಶೀಲತೆ ಬೆಳೆಸಿ, ಆತ್ಮ ವಿಶ್ವಾಸ ಮೂಡಿಸಿ, ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ಇಂತಹ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕಿದೆ.

ಯಾವುದೇ ಪೋಲಿಸ್‌ನವರ ತುರ್ತು ಸೇವೆಗಳಿಗೆ 100 ಬಳಸದೆ 112 ನಂಬರಿಗೆ ಕರೆ ಮಾಡಬೇಕೆಂದು ತಿಳಿಸಿದರು. ನೃತ್ಯಶಾಲೆಯ 10ಕ್ಕೂ ಹೆಚ್ಚು ತಂಡಗಳು ಕಂಸಾಳೆ,ಸಿದ್ದಪ್ಪಾಜಿ,ಧರಣಿಮಂಡಲಮಧ್ಯದೊಳಗೆ, ಶಿವತಾಂಡವ, ರಾಮಭಜನೆಯಂತಹ ಅನೇಕ ಹಾಡುಗಳಿಗೆ ನೃತ್ಯ ಮಾಡುವ ಮೂಲಕ ಪ್ರೇಕ್ಷಕರ ಮನಸೂರೆಗೊಂಡರು. ಕಾರ್ಯಕ್ರಮದಲ್ಲಿ ಶಿವಗಿರಿ ಕ್ಷೇತ್ರದ ಅನ್ನದಾನೇಶ್ವರನಾಥ ಸ್ವಾಮೀಜಿ ಆಶೀರ್ವಚಿಸಿದರು, ನೃತ್ಯ ನಿರ್ದೇಶಕಿ ಕಾವ್ಯ ದಿಲೀಪ್, ನಾಟಕ ನಿರ್ದೇಶಕ ಜಗದೀಶ್ವರಚಾರ್ಯ, ನೃತ್ಯ ಶಾಲೆಯ ಕೆ.ಎಂ.ನವ್ಯಶ್ರೀ, ಕಲ್ಪನಾ ಮಹದೇವಪ್ರಸಾದ್ ಭಾಗವಹಿಸಿದ್ದರು.

ಸರಳ ಜೀವನ ಅಳವಡಿಸಿಕೊಳ್ಳಿ

ಮನುಷ್ಯ ತನ್ನ ಜೀವನದಲ್ಲಿ ಅರಿಸ್ಟಾಟಲ್ ಅವರ ಮೂರು ಸತ್ಯಗಳ ತತ್ವವನ್ನು ಅಳವಡಿಸಿಕೊಳ್ಳಬೇಕು. ತನ್ನ ನಡೆ-ನುಡಿ, ಪ್ರಾಮಾಣಿಕತೆ ಹಾಗೂ ನೈತಿಕ ಮೌಲ್ಯಗಳ ಆಧಾರದ ಮೇಲೆ ಜೀವನ ಸಾಗಿಸಬೇಕು. ಅನಾವಶ್ಯಕವಾಗಿ ಮಾತನಾಡುವುದನ್ನು ತಪ್ಪಿಸಿ, ಸತ್ಯವನ್ನು ಹೇಳುವುದು ಅಗತ್ಯವಿದ್ದಾಗ ಮಾತ್ರ ಮಾತನಾಡಬೇಕು ಎಂಬ ಉದಾತ್ತ ಉದ್ದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಉತ್ತಮ ಎಂದು ಎಸಿಪಿ ಪ್ರಿಯದರ್ಶಿನಿ ಈಶ್ವರ್ ಸಾಣಿಕೊಪ್ಪ ತಿಳಿಸಿದರು.

ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್‌ರಿಂದ ಕಾಮಗಾರಿ ಪರಿಶೀಲನೆ

ಮೋದಿಯಿಂದ ಆರ್ಥಿಕ ಸುಧಾರಣೆ



• **ದೇವನಹಳ್ಳಿ:** ಚುನಾಯಿತ ಪ್ರತಿನಿಧಿಯಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಹಲವು ಐತಿಹಾಸಿಕ ದಾಖಲೆಗಳನ್ನು ನಿರ್ಮಿಸಿದ್ದು, ದೇಶದ ಅಭಿವೃದ್ಧಿ, ಆರ್ಥಿಕ ಸುಧಾರಣೆ ಹಾಗೂ ಜನಪರ ಯೋಜನೆಗಳ ಮೂಲಕ ಜನರ ವಿಶ್ವಾಸವನ್ನು ಗಳಿಸಿದ್ದಾರೆ ಎಂದು ಎಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು.

ಅವರು ಬೆಂ.ಗ್ರಾ.ಜಿಲ್ಲೆಯಲ್ಲಿ ಪ್ರಗತಿ ಪಥ ಯಾತ್ರೆ ದರ್ಶನ ಕಾರ್ಯಕ್ರಮ, ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್‌ವೇ ಹೆದ್ದಾರಿ ವೀಕ್ಷಿಸಿ ಕೇಂದ್ರ ಹಣಕಾಸು ಸಚಿವ ನಿರ್ಮಲಾ ಸೀತಾರಾಮನ್ ಅವರು ದೇವನಹಳ್ಳಿ ಪಟ್ಟಣಕ್ಕೆ ಭೇಟಿ ನೀಡಿ, ಬೆಂಗಳೂರು ಚೆನ್ನೈ ಎಕ್ಸ್‌ಪ್ರೆಸ್‌ವೇ ಸ್ಟ್ರಾಟೆಜಿಕ್ ಟೌನ್ ರಿಂಗ್ ರಸ್ತೆ (ಎಸ್.ಟಿ.ಆರ್.ಆರ್) ಕಾಮಗಾರಿಯ ಪರಿಶೀಲನೆ ನಡೆಸಿದರು. ಬಳಿಕ ರಾಣಿ ಕ್ರಾಸ್ ನಿಂದ ಜಿಲ್ಲಾಡಳಿತ ಕಛೇರಿ ವರೆಗೆ ವಾಹನದಲ್ಲಿ ಸಂಚರಿಸಿ, ಡಿಸಿ ಕಛೇರಿ ಸಮೀಪದಿಂದ ಸಚಿವೆ ನಿರ್ಮಲಾ ಸೀತಾರಾಮನ್ ಅವರು 100 ಮೀಟರ್ ಗಳಷ್ಟು ಕಾಲ್ನಡಿಗೆಯಲ್ಲಿ ಹೆದ್ದಾರಿ ರಸ್ತೆಯನ್ನು ಪರಿಶೀಲನೆ ನಡೆಸಿದರು.

ನಂತರ ಮಾತನಾಡಿ ಡಿಜಿಟಲ್ ಪೇಮೆಂಟ್, ಬೀದಿ ವ್ಯಾಪಾರಿ ಗಳೂ ಯು.ಪಿ.ಐ ಬಳಸುತ್ತಿದ್ದಾರೆ, ಮೂಲಭೂತ ಸೌಕರ್ಯಗಳ ಅಭಿವೃದ್ಧಿಯಲ್ಲಿ ದಾಖಲೆಗಳನ್ನು ಮಾಡಲಾಗಿದೆ, ಗುಣಮಟ್ಟದ ರಸ್ತೆಗಳ ನಿರ್ಮಾಣ ಆಗಿದೆ ವಾಯು ಮಾರ್ಗಗಳ, ಏರ್ ಪೋರ್ಟ್, ರೈಲು ಮಾರ್ಗಗಳ ಅಭಿವೃದ್ಧಿ ಆಗಿದೆ, ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಸೂತ್ರದಲ್ಲಿ ದೇಶ ಮುನ್ನಡೆಯುತ್ತಿದೆ.

ಅನುದಾನದ ವಿಚಾರದಲ್ಲಿ ತಾರತಮ್ಯ ವಿಚಾರ: ಚಿಕ್ಕಬಳ್ಳಾಪುರ ಬಾಗದಲ್ಲಿ ಅತಿ ಹೆಚ್ಚು ಹೂವು ಹಣ್ಣು ಬೆಳೆಯಲಾಗುತ್ತಿದೆ, ಆದರೆ ಇಲ್ಲಿ ಕೋಲ್ಡ್ ಸ್ಟೋರೇಜ್ ಕೊರತೆ ವಿಚಾರ, ರಾಜ್ಯ ಸರ್ಕಾರದಿಂದ ಬೇಡಿಕೆಯೇ ಬಂದಿಲ್ಲ ಎಂದ ಕೇಂದ್ರ ವಿತ್ತ ಸಚಿವೆ, ಬಜೆಟ್ ನಲ್ಲಿ ಹಣ ಇದೆ, ಆದರೆ ರಾಜ್ಯ ಸರ್ಕಾರ ಬೇಡಿಕೆ ಇಟ್ಟಿಲ್ಲ ಎಂದ ನಿರ್ಮಲಾ ಸೀತಾರಾಮನ್ ತಿಳಿಸಿದರು. ನಂತರ ದೇವನಹಳ್ಳಿ ಬೈಪಾಸ್ ನಲ್ಲಿ ಬಿಜೆಪಿ ಕಛೇರಿಯನ್ನು ಉದ್ಘಾಟಿಸಿ ನಂತರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದರು.

ಚಿಕ್ಕಬಳ್ಳಾಪುರ ಲೋಕಸಭಾ ಸಂಸದರಾದ ಡಾ. ಕೆ.ಸುಧಾಕರ, ರಾಜ್ಯ ಬಿಜೆಪ ಅಧ್ಯಕ್ಷ, ವಿಜಯೇಂದ್ರ, ಬಿಜೆಪಿ ಜಿಲ್ಲಾ ಉಸ್ತುವಾರಿ ಬ್ಯಾಟರಂಗೇಗೌಡ, ಮಂಡಲ ಅಧ್ಯಕ್ಷ ಅಂಬರೀಶ್‌ಗೌಡ ಸೇರಿದಂತೆ ನೂರಾರು ಕಾರ್ಯಕರ್ತರು ಉಪಸ್ಥಿತರಿದ್ದರು.

ತರಬೇತಿ ಶಿಬಿರದಲ್ಲಿ ಕಾರ್ಯಕರ್ತರಿಗೆ ಕೆ.ಎಚ್. ಮುನಿಯಪ್ಪ ಕರೆ

ಎಸ್‌ಐಆರ್ ಬಗ್ಗೆ ಎಚ್ಚರಿಕೆ ಅಗತ್ಯ



• **ವಿಜಯಪುರ:** ರಾಜ್ಯದಾದ್ಯಂತ ನಡೆಯುತ್ತಿರುವ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (ಖಐ) ಕಾರ್ಯದ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಬೂತ್ ಮಟ್ಟದ ಏಜೆಂಟ್-2 (ಬಿ.ಎಲ್.ಎ-2) ಪದಾಧಿಕಾರಿಗಳು ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಸಚಿವ ಕೆ.ಎಚ್. ಮುನಿಯಪ್ಪ ಪಕ್ಷದ ಮುಖಂಡರು ಕರೆ ನೀಡಿದರು.

ಶ್ರೀ ಅನ್ನಪೂರ್ಣೇಶ್ವರಿ ಕನ್ವೆನ್ಷನ್ ಹಾಲ್ನಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಜಯಪುರ, ದೇವನಹಳ್ಳಿ ಹಾಗೂ ತೂಬಗೆರೆ ಮೂರು ಬ್ಲಾಕ್‌ಗಳ ನೂತನ ಪದಾಧಿಕಾರಿಗಳ ನೇಮಕಾತಿ ಆದೇಶ ಪತ್ರ ವಿತರಣೆ ಹಾಗೂ ಎಸ್.ಐ.ಆರ್ ತರಬೇತಿ ಶಿಬಿರದಲ್ಲಿ ಭಾಗವಹಿಸಿ ಮಾತನಾಡಿದರು.

ಮತದಾರರ ಪಟ್ಟಿಯಲ್ಲಿ ಯಾವುದೇ ಅರ್ಹ ಮತದಾರರ ಹೆಸರು ಕೈಬಿಡದಂತೆ ಹಾಗೂ ಅನರ್ಹ ಹೆಸರುಗಳು ಸೇರ್ಪಡೆಯಾಗದಂತೆ ಎಚ್ಚರಿಕೆ ವಹಿಸಬೇಕು. ಮತದಾರರ ವಿವರಗಳನ್ನು ಪರಿಶೀಲಿಸಿ, ತಿದ್ದುಪಡಿ ಮತ್ತು ಸೇರ್ಪಡೆ ಪ್ರಕ್ರಿಯೆಯಲ್ಲಿ ಸಾರ್ವಜನಿಕರಿಗೆ ಅಗತ್ಯ ಸಹಕಾರ ನೀಡಬೇಕು ಎಂದು ಸೂಚಿಸಿದರು.

ಮತದಾರರ ಪಟ್ಟಿಯು ಪ್ರಜಾಪ್ರಭುತ್ವದ ಅಡಿಪಾಯವಾಗಿರುವುದರಿಂದ, ಪಕ್ಷದ ಕಾರ್ಯಕರ್ತರು ಹಾಗೂ ಬಿ.ಎಲ್.ಎ-2 ಪದಾಧಿಕಾರಿಗಳು ಚುನಾವಣಾ ಆಯೋಗದ ನಿಯಮಾನುಸಾರ ಕಾರ್ಯನಿರ್ವಹಿಸಿ ಮತದಾರರ ಹಕ್ಕುಗಳ ರಕ್ಷಣೆಗೆ ಮುಂದಾಗಬೇಕು ಎಂದು ತಿಳಿಸಿದರು.

ಪಕ್ಷದ ಸಂಘಟನೆಯಲ್ಲಿ ನಿರ್ಲಕ್ಷ್ಯ ವಹಿಸುವವರ ವಿರುದ್ಧ ಕಠಿಣ ನಿಲುವು ವ್ಯಕ್ತಪಡಿಸಿದ ಸಚಿವರು, ಈಗಾಗಲೇ ನೇಮಿಸಲಾಗಿರುವ ಬಿ.ಎಲ್.ಎ-2 ಪದಾಧಿಕಾರಿಗಳಲ್ಲಿ, ಯಾರು ತರಬೇತಿ ಶಿಬಿರಗಳಿಗೆ ಹಾಗೂ ಪಕ್ಷದ ಕಾರ್ಯಕ್ರಮಗಳಿಗೆ ಗೈರುಹಾಜರಾಗುತ್ತಿದ್ದಾರೋ, ಅಂತವರನ್ನು ಕೂಡಲೇ ಬದಲಾಯಿಸಿ. ಅವರ ಜಾಗಕ್ಕೆ ಪಕ್ಷದ ಬೆಳವಣಿಗೆಯ ಬಗ್ಗೆ ಮುತುವರ್ಜಿ ಮತ್ತು ಆಸಕ್ತಿ ಇರುವ ಸಕ್ರಿಯ ಕಾರ್ಯಕರ್ತರನ್ನು ನೇಮಿಸಿ, ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಕೆಪಿಸಿಸಿ ಕಾರ್ಯದರ್ಶಿ ವಿ. ಮಂಜುನಾಥ್ ಮಾತನಾಡಿ, ಬಿ.ಎಲ್.ಎ-2 ಕಾರ್ಯಕರ್ತರು 2002 ಹಾಗೂ 2025ರ ಮತದಾರರ ಪಟ್ಟಿಗಳನ್ನು ಇಟ್ಟುಕೊಂಡು ಸೂಕ್ತ ಪರಿಶೀಲನೆ ನಡೆಸಬೇಕು. ಚುನಾವಣಾ ಆಯೋಗವು ಕೇಳುವ ಅಗತ್ಯ ದಾಖಲೆಗಳನ್ನು ಒದಗಿಸಲು ಸಾರ್ವಜನಿಕರಿಗೆ ನೆರವಾಗಬೇಕು, ಎಂದರು.

ಕಾರ್ಯಕ್ರಮದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಸಿ.ಆರ್. ಗೌಡ, ಮಾಜಿ ಸಂಸದ ಸಿ. ನಾರಾಯಣಸ್ವಾಮಿ, ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಬಿ. ರಾಜಣ್ಣ, ಕೆಪಿಸಿಸಿ ಸದಸ್ಯ ಚಿನ್ನಪ್ಪ, ವಿಜಯಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದಿನ್ನೂರು ವೆಂಕಟೇಶ್ ಉಪಸ್ಥಿತರಿದ್ದರು.

ಸಾವಯವ ಸಂತೆ ವಿಜಯಪುರ ಕೃಷಿಕರ ತಂಡದಿಂದ ವಿನೂತನ ಪ್ರಯತ್ನ | ಸಾಂಪ್ರದಾಯಿಕ ಪದ್ಧತಿಗೆ ಉತ್ತೇಜನ

ರೈತರಿಂದ ನೇರವಾಗಿ ಗ್ರಾಹಕರಿಗೆ ವಿಷಮುಕ್ತ ತಾಜಾ ತರಕಾರಿ

▸ ಎನ್. ಮಹೇಶ್ ಬೆಳ್ಳಿ, ವಿಜಯಪುರ



• **ವಿಜಯಪುರ:** ಆಧುನಿಕಜೀವನಶೈಲಿಯಲ್ಲಿ ಆರೋಗ್ಯ ಕಾಪಾಡಿಕೊಳ್ಳುವುದು ದೊಡ್ಡ ಸವಾಲಾಗಿದೆ. ರೈತರು ಬೆಳೆದ ಸಾವಯವ ಬೆಳೆಗಳಿಗೆ ಮಧ್ಯವರ್ತಿಗಳ ಹಾವಳಿ ಇಲ್ಲದೆ ಗ್ರಾಹಕರಿಗೆ ವಿಷರಹಿತ ಆಹಾರ ಹಾಗೂ ರೈತರಿಗೆ ಉತ್ತಮ ಮಾರುಕಟ್ಟೆ ಒದಗಿಸುವುದು ಕಷ್ಟಕರವಾಗಿದೆ. ಆದರೆ ಈ ಸವಾಲನ್ನು ಸ್ವೀಕರಿಸಿರುವ ಸಾವಯವ ಸಂತೆ ವಿಜಯಪುರ ಕೃಷಿಕರ ತಂಡ, ರೈತರಿಂದ ನೇರವಾಗಿ ಗ್ರಾಹಕರಿಗೆ ವಿಷಮುಕ್ತ ಆಹಾರ ತಲುಪಿಸುವ ಕಾರ್ಯದಲ್ಲಿ ಯಶಸ್ವಿಯಾಗಿದೆ.

ಹಿಂದೆ ರೈತರು ತಮ್ಮದೇ ಬೀಜಗಳನ್ನು ತಯಾರಿಸಿ ಯಾವುದೇ ರಾಸಾಯನಿಕ ಕೀಟನಾಶಕಗಳ ಬಳಕೆ ಇಲ್ಲದೆ ಕೃಷಿ ಮಾಡುತ್ತಿದ್ದರು. ಆದರೆ ಇಂದು ಹೆಚ್ಚಿನ ಬೆಳೆಗಳಿಗೆ ರಾಸಾಯನಿಕ ವಿಷದಗಳ ಅವಲಂಬನೆ ಹೆಚ್ಚಾಗಿದೆ. ಇದಕ್ಕೆ ಪರ್ಯಾಯವಾಗಿ ಸಾವಯವ ಸಂತೆ ವಿಜಯಪುರದ ಕೃಷಿಕರು ಸಾಂಪ್ರದಾಯಿಕ ಪದ್ಧತಿಗಳನ್ನು ಅನುಸರಿಸಿ ಕೃಷಿ ಮಾಡುತ್ತಿದ್ದಾರೆ. ಈ ಕಾರ್ಯದಲ್ಲಿ ಕೃಷಿಕರು, ವ್ಯಾಪಾರಿಗಳು, ನಿವೃತ್ತ ಅಧಿಕಾರಿಗಳು ಹಾಗೂ ಸಮಾಜಮುಖಿಯಂದರು ಕೈಜೋಡಿಸಿದ್ದಾರೆ.

ವಿಷಮುಕ್ತ ಆಹಾರಕ್ಕಾಗಿ ರೈತರ ಸಂತೆ: ಸಾವಯವ ಕೃಷಿಯಲ್ಲಿ ಬೆಳೆದ ಹಣ್ಣು, ತರಕಾರಿ ಹಾಗೂ ಸೊಪ್ಪುಗಳನ್ನು ಈ ಸಂತೆಯಲ್ಲಿ ಮಾರಾಟ ಮಾಡಲಾಗುತ್ತದೆ. ಪ್ರಕೃತಿದತ್ತವಾಗಿ ಬೆಳೆದಿರುವ ಈ ಉತ್ಪನ್ನಗಳು ರೋಗನಿರೋಧಕ ಶಕ್ತಿ ಹೆಚ್ಚಿಸುವ ಗುಣಗಳನ್ನು ಹೊಂದಿದ್ದು, ರುಚಿಯಲ್ಲಿಯೂ ಉತ್ತಮವಾಗಿವೆ. ಸಂತೆಗೆ ಬರುವ ಗ್ರಾಹಕರು ಮುಂದಿನ ವಾರ ಬೇಕಾಗುವ ಉತ್ಪನ್ನಗಳ ಪಟ್ಟಿಯನ್ನು ಮುಂಚಿತವಾಗಿ ನೀಡುವ ಮೂಲಕ ಕಾಯ್ದಿರಿಸಿಕೊಳ್ಳುತ್ತಾರೆ.

ಗ್ರಾಹಕರ ಮೆಚ್ಚುಗೆ: ನಗರದಲ್ಲಿ ಹಲವು ವರ್ಷಗಳಿಂದ ನಡೆಯುತ್ತಿರುವ ಈ ಸಾವಯವ ಸಂತೆಗೆ ಉತ್ತಮ ಸ್ಪಂದನೆ ದೊರೆಯುತ್ತಿದೆ.

ರೈತರೇ ನೇರವಾಗಿ ಹಣ್ಣು, ತರಕಾರಿ ಹಾಗೂ ಸೊಪ್ಪುಗಳನ್ನು ಮಾರಾಟ ಮಾಡುವುದರಿಂದ ಗ್ರಾಹಕರಿಗೆ ತಾಜಾ ಮತ್ತು ಗುಣಮಟ್ಟದ ಉತ್ಪನ್ನಗಳು ದೊರೆಯುತ್ತಿವೆ. ನಗರ ಮತ್ತು ಸುತ್ತಮುತ್ತಲಿನ ಗ್ರಾಮಗಳ ಹಲವು ಕೃಷಿಕರು ಸೇರಿ ಸಾವಯವ ಕೃಷಿಯತ್ತ ಮುಖ ಮಾಡಿದ್ದಾರೆ. ಇವರು ತಂಡ ರಚಿಸಿಕೊಂಡು ಯಶಸ್ವಿ ಸಾವಯವ ರೈತರನ್ನು ಭೇಟಿ ಮಾಡಿ ಕೃಷಿ ವಿಧಾನಗಳನ್ನು ಕಲಿಯುತ್ತಿದ್ದಾರೆ. ಅಲ್ಲದೆ ಹೊಸದಾಗಿ ಸಾವಯವ ಕೃಷಿ ಮಾಡಲು ಆಸಕ್ತಿ ಇರುವ ರೈತರಿಗೆ ವಾರಕ್ಕೊಮ್ಮೆ ತೋಟಗಳಿಗೆ ಭೇಟಿ ನೀಡಿ ಮಾರ್ಗದರ್ಶನ ನೀಡುತ್ತಿದ್ದಾರೆ.

> ಈ ಸಂತೆ ಪ್ರತಿ ಭಾನುವಾರ ಬೆಳಗ್ಗೆ 7 ರಿಂದ 10 ಗಂಟೆಯವರೆಗೆ ಪಟ್ಟಣದ ಬಸವೇಶ್ವರ ಮುಖ್ಯರಸ್ತೆಯ ಅರಳಿಕಟ್ಟೆ ಬಳಿ ನಡೆಯುತ್ತದೆ.ಯಾವುದೇ ರಾಸಾಯನಿಕ ಸಿಂಪಡಣೆ ಇಲ್ಲದೆ ಬೆಳೆದ ಆಹಾರವನ್ನು ರೈತರಿಂದ ನೇರವಾಗಿ ಗ್ರಾಹಕರಿಗೆ ತಲುಪಿಸುವ ಉದ್ದೇಶ ದಿಂದ ಈ ಸಾವಯವ ಸಂತೆಯನ್ನು ನಡೆಸುತ್ತಿದ್ದೇವೆ.
>
> ■ **ಬಿ. ಕೆ. ದಿನೇಶ್**, ಸಂಚಾಲಕರು, ಸಾವಯವ ಕೃಷಿ ಸಂತೆ ವಿಜಯಪುರ

> ಸಂತೆಯಲ್ಲಿ ಮಾರಾಟ ಮಾಡಲು ಬರುವವರು ತಮ್ಮ ಉತ್ಪನ್ನಗಳು ನಿಜವಾಗಿಯೂ ಸಾವಯವ ಕೃಷಿಯಿಂದ ಬೆಳೆದವು ಎಂಬುದನ್ನು ಸಾಬೀತುಪಡಿಸಬೇಕು. ಪರಿಶೀಲನೆ ಮತ್ತು ದೃಢೀಕರಣದ ನಂತರವೇ ಅವರಿಗೆ ಮಾರಾಟಕ್ಕೆ ಅವಕಾಶ ನೀಡಲಾಗುತ್ತದೆ. ಸಾವಯವ ಕೃಷಿ ಮಾಡಲು ಬಯಸುವ ರೈತರಿಗೆ ಮಾರ್ಗದರ್ಶನ ನೀಡಲಾಗುತ್ತಿದೆ. ನೈಜವಾಗಿ ಸಾವಯವ ಕೃಷಿ ಮಾಡಿದವರಿ ಗಷ್ಟೇ ಸಂತೆಯಲ್ಲಿ ಮಾರಾಟಕ್ಕೆ ಅವಕಾಶ ನೀಡುತ್ತೇವೆ.
>
> ■ **ಎನ್.ಎಲ್. ಅಂಬರೀಶ್ ಗೌಡ**, ದೇವನಹಳ್ಳಿ ತಾಲೂಕು ಅಧ್ಯಕ್ಷ, ಬಿಜೆಪಿ

ಸೋಮವಾರದ ಪಂದ್ಯಗಳು

- ಸ್ವೀಡನ್-ಟುನೀಶಿಯಾ, (ಬೆಳಗ್ಗೆ 7:30)
- ಸ್ಪೇನ್-ಕಾಬೋವರ್ಡೆ, (ಬೆಳಗ್ಗೆ 9:30), ಸೋಮವಾರ-ಮಂಗಳವಾರ ತಡರಾತ್ರಿ
- ಬೆಲ್ಜಿಯಂ-ಇಜಿಪ್ಟ್ (ಮಧ್ಯರಾತ್ರಿ 12:30)
- ಸೌದಿ ಅರೇಬಿಯಾ-ಉರುಗ್ವೆ (ಮಧ್ಯರಾತ್ರಿ 3:30)

ಕಿರುಸುದ್ದಿ

ಸ್ವಂತ ಖರ್ಚಿನಲ್ಲೇ ಏಷ್ಯನ್ ಗೇಮ್ಸ್ ಆಡಿ: ಪಾಕ್

ರಾವಲ್ಪಿಂಡಿ: ಒಂದು ವೇಳೆ ನಿಮಗೆ ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸಬೇಕೆಂಬ ಆಸೆ ಏನಾದರೂ ಇದ್ದರೆ ನಿಮ್ಮ ಖರ್ಚಿನಿಂದಲೇ ಜಪಾನ್‌ಗೆ ಹೋಗಿ. ಆಡುವಾಗ ಮಾತ್ರ ದೇಶದ ಹೆಸರಲ್ಲಿ ಆಡಿ ಎಂದು ಪಾಕ್ ತನ್ನ ಟೇಬಲ್ ಟೆನಿಸ್ ಆಟಗಾರರಿಗೆ ಸೂಚನೆ ನೀಡಿದೆ.

ಜಪಾನ್‌ನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ಕೂಟಕ್ಕಾಗಿ ಪಾಕಿಸ್ತಾನ ಟೇಬಲ್ ಟೆನಿಸ್ ತನ್ನ ಭಾಗವಹಿಸುವ ಆಟಗಾರರ ಆಯ್ಕೆ ಪ್ರಕ್ರಿಯೆಯನ್ನು ಲಾಹೋರ್‌ನಲ್ಲಿ ನಡೆಸಿತು. ಅದರಂತೆ ಸಾವಿರಾರು ಪೆಡ್ಲರ್‌ಗಳು ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿ ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸಲು ಸಿದ್ಧರಾಗಿದ್ದಾರೆ. ಈ ನಡುವೆ ಆಯ್ಕೆಯಾದ ಆಟಗಾರರಿಗೆ ಅಲ್ಲಿನ ಟಿಟಿ ಸಂಸ್ಥೆ ಸೂಚನೆ ನೀಡಿದ್ದು, ಆಯ್ಕೆ ಪ್ರಕ್ರಿಯೆಯಲ್ಲಿ ಆಟಗಾರರಿಗೆ ಹಣ ಪಾವತಿಸುವ ಅಗತ್ಯವಿಲ್ಲ, ಆದರೆ ಜಪಾನ್‌ಗೆ ಪ್ರಯಾಣಿಸುವ ವೆಚ್ಚವನ್ನು ಆಟಗಾರರು ತಾವೇ ನೋಡಿಕೊಳ್ಳಬೇಕು. ಹಾಗೇ ಅಲ್ಲಿ ಇರಲು ಬೇಕಿರುವ ದಿನಕ್ಕೆ ವಸತಿ ವ್ಯವಸ್ಥೆಗಾಗಿ 50 ಡಾಲರ್ ಕೂಡ ನೀವೇ ಭರಿಸಬೇಕೆಂದು ಹೇಳಿದೆ. ಈ ಬಗ್ಗೆ ಆಟಗಾರರೊಬ್ಬರು ಮಾಧ್ಯಮದ ಮುಂದೆ ಹೇಳಿದ್ದಲ್ಲದೆ, ಮೇಲಾಧಿಕಾರಿಗಳಿಗೂ ದೂರು ಕೊಟ್ಟಿದ್ದಾರೆ. ಆದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ.

ಆರ್ಚರಿ: ಧೀರಜ್‌ಗೆ ಐತಿಹಾಸಿಕ ಚಿನ್ನ

ಹೊಸದಿಲ್ಲಿ: ಭಾರತದ ಬಿಲ್ಲುಗಾರ ಧೀರಜ್ ಬೊಮ್ಮದೇವರ ಇಲ್ಲಿ ನಡೆಯುತ್ತಿರುವ ಆರ್ಚರಿ ವಿಶ್ವಕಪ್ ಕೂಟದಲ್ಲಿ ಚಿನ್ನ ಗೆದ್ದು ಇತಿಹಾಸ ನಿರ್ಮಿಸಿದರು. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಕೊರಿಯಾದ ಲೀ ವೂ ಅವರನ್ನು ಎದುರಿಸಿದ್ದ ಅವರು, ಫೈನಲ್‌ನಲ್ಲಿ 7-3ರಿಂದ ಗೆಲುವು ಸಾಧಿಸಿದರು. ಇದಕ್ಕೂ ಮೊದಲೇ ಅವರು ಭಾರತೀಯ ಕುಂಕುಮ್ ಮೊಹೊದ್ ಅವರೊಂದಿಗೆ ಮಿಶ್ರ ಡಬಲ್ಸ್ ವಿಭಾಗದಲ್ಲೂ ಚಿನ್ನದ ಪದಕ ಗೆದ್ದಿದ್ದು



ವಿಶ್ವಕಪ್‌ನಲ್ಲಿ ಭಾರತೀಯ ಬಿಲ್ಲುಗಾರರು ಪಾರುಪತ್ಯ ಸಾಧಿಸಿದ್ದಾರೆ. ವೈಯಕ್ತಿಕ ವಿಭಾಗದಲ್ಲಿ ಧೀರಜ್ 5-1ರ ಮುನ್ನಡೆ ಸಾಧಿಸಿದರು. ಮೊದಲನೇ ಸೆಟ್‌ಗಳಲ್ಲಿ 30-29 ಅಂಕಗಳಿಂದ ಗೆದ್ದ ಅವರು, ಎರಡನೇ ಸೆಟ್ ಅನ್ನು 29-28, ಮೂರನೇ ಸೆಟ್ ಅನ್ನು 27-27ರಿಂದ ಟೈಗೊಂಡಿತು. ಪರಿಣಾಮ ಶೂಟೌಟ್ ಮೊರೆಗೆ ಹೋಗಬೇಕಾಯಿತು. ಶೂಟೌಟ್‌ನಲ್ಲಿ ಭಾರತೀಯ ಬಿಲ್ಲುಗಾರ ಅಲ್ಪ ಹಿನ್ನಡೆ ಅನುಭವಿಸಿದರು. ಆದಾಗ್ಯೂ ಮುಂದಿನ ಎರಡೂ ಸೆಟ್‌ಗಳಲ್ಲಿ ಗೆಲುವು ಸಾಧಿಸಿ ಚಿನ್ನ ಖಚಿತ ಪಡಿಸಿಕೊಂಡರು. ಡಬಲ್ಸ್ ವಿಭಾಗದಲ್ಲೂ ಭಾರತೀಯರಿಬ್ಬರೂ ಮಿಂಚಿದರು. ಧೀರಜ್‌ಗೆ ಇದು ಐತಿಹಾಸಿಕ ಮೊದಲನೇ ಚಿನ್ನದ ಪದಕವಾಗಿದೆ.

ಫಿಫಾ ವಿಶ್ವಕಪ್: ಆಸ್ಟ್ರೇಲಿಯಾ, ಸ್ಕಾಟ್ಲೆಂಡ್‌ಗೆ ಗೆಲುವು | ಎರಡು ಪಂದ್ಯಗಳು ಡ್ರಾ!

ಸೊಕ್ಕೆರೂಸ್‌ಗಳ ವಿಜಯಘೋಷ

ವ್ಯಾಂಕೋವರ್: ಫಿಫಾ ವಿಶ್ವಕಪ್ ಪಂದ್ಯಾವಳಿಯಲ್ಲಿ ಸ್ಟಾರ್‌ಗಳ ಮಿಂಚಿನಾಟ ಮತ್ತು ಕೊನೆ ಕ್ಷಣದ ರೋಚಕ ಕಾದಾಟಗಳು ಮುಂದುವರಿದಿವೆ. ಭಾನುವಾರದ ನಡೆದ 4 ಪಂದ್ಯಗಳಲ್ಲಿ 2 ಡ್ರಾಗೊಂಡರೆ, 2 ಪಂದ್ಯಗಳಿಂ ಸ್ಪಷ್ಟ ಫಲಿತಾಂಶ ಹೊರಬಂದಿದೆ.

ಸಿ' ಗುಂಪಿನ ಪಂದ್ಯದಲ್ಲಿ ಸ್ಕಾಟ್ಲೆಂಡ್ 1-0 ಗೋಲುಗಳಿಂದ ಹೈಟಿಯನ್ನು ಮಣಿಸಿ ಮಹತ್ವದ ಗೆಲುವು ದಾಖಲಿಸಿದೆ. ಡಿ ಗುಂಪಿನಲ್ಲಿ ಆಸ್ಟ್ರೇಲಿಯಾ ತಂಡವು ಟರ್ಕಿ ತಂಡವನ್ನು 2-0ರಿಂದ ಮಣಿಸಿದೆ. ಕತಾರ್ ತಂಡವು ಸ್ವಿಟ್ಜರ್ಲೆಂಡ್ ವಿರುದ್ಧ 1-1ರಿಂದ ಡ್ರಾ ಸಾಧಿಸಿದರೆ, ಬ್ರೆಜಿಲ್ ಮತ್ತು ಮೊರೊಕ್ಕೊ ತಂಡಗಳ ಪಂದ್ಯವೂ 1-1ರಿಂದ ಡ್ರಾಗೊಂಡಿತು.

ಆಸ್ಟ್ರೇಲಿಯಾಗೆ ಗೆಲುವಿನ ಆರಂಭ: ಟರ್ಕಿ ವಿರುದ್ಧ 2-0 ಜಯ | ಇರನ್‌ಕುಂಡಾ, ಮೆಟ್‌ಕಾಲ್ಫ್ ಮಿಂಚು 2026ರ ಫಿಫಾ

ಟರ್ಕಿಗೆ ಆಘಾತ

ವಿಶ್ವಕಪ್‌ನಲ್ಲಿ ಆಸ್ಟ್ರೇಲಿಯಾ ತನ್ನ ಅಭಿಯಾನವನ್ನು ಗೆಲುವಿನೊಂದಿಗೆ ಆರಂಭಿಸಿದೆ. ವ್ಯಾಂಕೂವರ್‌ನಲ್ಲಿ ನಡೆದ ಡಿ ಗುಂಪಿನ ಪಂದ್ಯದಲ್ಲಿ ಟರ್ಕಿಯನ್ನು 2-0 ಗೋಲುಗಳಿಂದ ಮಣಿಸಿದ ಸೊಕ್ಕೆರೂಸ್, ಅಮೂಲ್ಯ ಮೂರು ಅಂಕಗಳನ್ನು ತಮ್ಮದಾಗಿಸಿಕೊಂಡರು. 24 ವರ್ಷಗಳ ಬಳಿಕ ವಿಶ್ವಕಪ್‌ಗೆ ಮರಳಿದ್ದ ಟರ್ಕಿಗೆ ಆಸ್ಟ್ರೇಲಿಯಾ ಆರಂಭದಲ್ಲೇ ಆಘಾತ ನೀಡಿತು. 27ನೇ ನಿಮಿಷದಲ್ಲಿ ನೆಸ್ಟೋರಿ ಇರನ್‌ಕುಂಡಾ ಮೂವರು ರಕ್ಷಣಾ ಆಟಗಾರರ ನಡುವೆ ಅದ್ಭುತವಾಗಿ ಮುನ್ನುಗ್ಗಿ ಕೆಳಮಟ್ಟದ ಶಾಟ್ ಮೂಲಕ ಗೋಲು ಬಾರಿಸಿ ತಂಡಕ್ಕೆ ಮುನ್ನಡೆ ತಂದುಕೊಟ್ಟರು. 75ನೇ ನಿಮಿಷದಲ್ಲಿ ಇಸ್ಮಾಯಿಲ್ ಯುಕೆಕ್ ಮಾಡಿದ ತಪ್ಪನ್ನು ಸದುಪಯೋಗಪಡಿಸಿಕೊಂಡ ಕಾನರ್ ಮೆಟ್‌ಕಾಲ್ಫ್ ಗೋಲು ಬಾರಿಸಿ ಆಸ್ಟ್ರೇಲಿಯಾದ ಮುನ್ನಡೆಯನ್ನು 2-0ಕ್ಕೆ ಹೆಚ್ಚಿಸಿದರು. ಅಂತಿಮವಾಗಿ ಇದೇ ಅಂತರದಲ್ಲಿ ಪಂದ್ಯ ಮುಕ್ತಾಯಗೊಂಡಿತು.

ಇರನ್‌ಕುಂಡಾ ದಾಖಲೆ: 20 ವರ್ಷದ ಇರನ್‌ಕುಂಡಾ ವಿಶ್ವಕಪ್‌ನಲ್ಲಿ ಗೋಲು ದಾಖಲಿಸಿದ ಆಸ್ಟ್ರೇಲಿಯಾದ ಅತಿ ಕಿರಿಯ ಆಟಗಾರ ಎಂಬ ದಾಖಲೆ ನಿರ್ಮಿಸಿದರು. ಗೋಲು ಬಳಿಕ ಆಸ್ಟ್ರೇಲಿಯಾ ಫುಟ್‌ಬಾಲ್ ದಂತಕಥೆ ಟಿಮ್ ಕಾಹಿಲ್ ಅವರಿಗೆ ಗೌರವ ಸೂಚಿಸುವ ರೀತಿಯಲ್ಲಿ ಕಾರ್ನರ್ ಧ್ವಜವನ್ನು ಹೊಡೆದು ಸಂಭ್ರಮಿಸಿದರು.

ಬೀಚ್‌ನಿಂದ 8 ಸೇವ್!: ಎರಡನೇರ್ಧದಲ್ಲಿ ಟರ್ಕಿ ಸಮಬಲಕ್ಕಾಗಿ ಹಲವು ಪ್ರಯತ್ನಗಳನ್ನು ನಡೆಸಿತು. ಆದರೆ ಗೋಲ್‌ಕೀಪರ್ ಪ್ಯಾಟ್ರಿಕ್ ಬೀಚ್ ಅದ್ಭುತ ಪ್ರದರ್ಶನ ನೀಡಿ ಎಂಟು ಪ್ರಮುಖ ಸೇವ್‌ಗಳನ್ನು ಮಾಡಿದರು. 57ನೇ ನಿಮಿಷದಲ್ಲಿ ಅರ್ದಾ ಗುಲರ್ ಅವರ ಫ್ರೀ ಕಿಕ್ ಪ್ರಯತ್ನವನ್ನೂ ತಡೆದರು.



ಪಂದ್ಯದ ಮುಖ್ಯಾಂಶಗಳು

- ಆಸ್ಟ್ರೇಲಿಯಾ 2-0 ಟರ್ಕಿ
- 27ನೇ ನಿಮಿಷ ನೆಸ್ಟೋರಿ ಇರನ್‌ಕುಂಡಾ ಗೋಲು
- 75ನೇ ನಿಮಿಷ ಕಾನರ್ ಮೆಟ್‌ಕಾಲ್ಫ್ ಗೋಲು
- ಗೋಲ್‌ಕೀಪರ್ ಪ್ಯಾಟ್ರಿಕ್ ಬೀಚ್‌ನಿಂದ 8 ಸೇವ್‌ಗಳು
- 24 ವರ್ಷಗಳ ಬಳಿಕ ವಿಶ್ವಕಪ್‌ಗೆ ಮರಳಿದ ಟರ್ಕಿಗೆ ಸೋಲು

ಸೂಪರ್ ಸ್ಕಾಟ್ಲೆಂಡ್

ಹೈಟಿ ವಿರುದ್ಧ 1-0 ಜಯ, ಸಿ ಗುಂಪಿನಲ್ಲಿ ಅಗ್ರಸ್ಥಾನ

ಹೈಟಿ ವಿರುದ್ಧ ನಡೆದ ಪಂದ್ಯದಲ್ಲಿ ಸ್ಕಾಟ್ಲೆಂಡ್ ಭರ್ಜರಿ ಗೆಲುವು ಸಾಧಿಸಿದೆ. ಇದು 1990ರ ಬಳಿಕ ವಿಶ್ವಕಪ್‌ನಲ್ಲಿ ಸ್ಕಾಟ್ಲೆಂಡ್‌ಗೆ ದೊರೆತ ಮೊದಲ ಜಯ. ಮ್ಯಾಸಚೂಸೆಟ್ಸ್‌ನ ಫಾಕ್ಸ್‌ಬರೋದಲ್ಲಿರುವ ಜಿಲೆಟ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಜಾನ್ ಮ್ಯಾಕ್‌ಗಿನ್ 28ನೇ ನಿಮಿಷದಲ್ಲಿ ಗಳಿಸಿದ ಏಕೈಕ ಗೋಲು ಸ್ಕಾಟ್ಲೆಂಡ್‌ಗೆ ಗೆಲುವು ತಂದುಕೊಟ್ಟಿತು.

ಚೆ ಆಡಮ್ಸ್ ಅವರ ಪ್ರಯತ್ನವನ್ನು ಹೈಟಿ ಗೋಲ್‌ಕೀಪರ್ ಜಾನಿ ಪ್ಲಾಸಿಡ್ ತಡೆದರು. ಆದರೆ ಬಾಲ್ ತೆರವಾದ ಜಾಗಕ್ಕೆ ಬಿದ್ದಿತು. ಅದನ್ನು ಬಳಸಿಕೊಂಡ ಮ್ಯಾಕ್‌ಗಿನ್ ಹೊಡೆದ ಶಾಟ್ ರಕ್ಷಣಾ ಆಟಗಾರನಿಗೆ ತಾಗಿ ಗೋಲುಪೆಟ್ಟಿಗೆ ಸೇರಿತು. 17ನೇ ನಿಮಿಷದಲ್ಲೇ ನಾಯಕ ಸ್ಕಾಟ್ ಮೆಕ್ಟೊಮಿನೇ ಅವರ ಪ್ರಯತ್ನ ಗೋಲ್‌ಪೋಸ್ಟ್‌ಗೆ ತಾಗಿ ಹೊರಬಿದ್ದಿದ್ದರಿಂದ ಸ್ಕಾಟ್ಲೆಂಡ್ ಮತ್ತೊಂದು ಗೋಲು ಅವಕಾಶ ಕಳೆದುಕೊಂಡಿತು.

ದ್ವಿತೀಯಾರ್ಧದಲ್ಲಿ ಹೈಟಿ ತಿರುಗೇಟು ನೀಡಲು ಯತ್ನಿಸಿತು. 74ನೇ ನಿಮಿಷದಲ್ಲಿ ವಿಲ್ಸನ್ ಇಸಿಡೋರ್‌ಗೆ ದೊರೆತ ಅವಕಾಶ ಕೈತಪ್ಪಿದರೆ, 84ನೇ ನಿಮಿಷದಲ್ಲಿ ಫ್ರಾಂಟ್ಜ್ಡಿ ಪಿಯೆರೊಟ್ ಅವರ ಹೆಡರ್ ಗುರಿಯಿಂದ ಹೊರಹೋಯಿತು.



ಪಂದ್ಯದ ಮುಖ್ಯಾಂಶಗಳು

- ಸ್ಕಾಟ್ಲೆಂಡ್ 1-0 ಹೈಟಿ
- 28ನೇ ನಿಮಿಷ: ಜಾನ್ ಮ್ಯಾಕ್‌ಗಿನ್ ಗೋಲು
- 1990ರ ಬಳಿಕ ಸ್ಕಾಟ್ಲೆಂಡ್‌ನ ಮೊದಲ ವಿಶ್ವಕಪ್ ಗೆಲುವು
- 1998ರ ಬಳಿಕ ಸ್ಕಾಟ್ಲೆಂಡ್‌ನ ಮೊದಲ ವಿಶ್ವಕಪ್ ಭಾಗವಹಿಸುವಿಕೆ
- ಹೈಟಿಗೆ ಇನ್ನೂ ವಿಶ್ವಕಪ್‌ನಲ್ಲಿ ಮೊದಲ ಅಂಕದ ನಿರೀಕ್ಷೆ

ಕತಾರ್ ಕಿಕ್, ಪಂದ್ಯ ಸಮಬಲ

ಬಿ ಗುಂಪಿನ ಪಂದ್ಯದಲ್ಲಿ ಕತಾರ್ ಕೊನೆಯ ಕ್ಷಣದಲ್ಲಿ ಗೋಲು ಗಳಿಸಿ ಸ್ವಿಟ್ಜರ್ಲೆಂಡ್ ವಿರುದ್ಧ 1-1 ಸಮಬಲ ಸಾಧಿಸಿತು. ಸಾಂಟಾ ಕ್ಲಾರಾದ ಲೆವಿಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬಹುತೇಕ ಸಮಯ ಮೇಲುಗೈ ಸಾಧಿಸಿದ್ದ ಸ್ವಿಟ್ಜರ್ಲೆಂಡ್‌ಗೆ ಹೆಚ್ಚುವರಿ ವೇಳೆಯ ಗೋಲು ಆಘಾತ ನೀಡಿತು.

ಸ್ವಿಟ್ಜರ್ಲೆಂಡ್ ಆರಂಭದಿಂದಲೇ ಪಂದ್ಯದ ಮೇಲೆ ಹಿಡಿತ ಸಾಧಿಸಿತ್ತು. 13ನೇ ನಿಮಿಷದಲ್ಲಿ ಸ್ವಿಸ್ ಆಟಗಾರ ಬ್ರೀಲ್ ಎಂಬೋಲೊ ಅವರನ್ನು ಕತಾರ್ ಗೋಲ್‌ಕೀಪರ್ ಮಹ್ಮೂದ್ ಅಬುನಾದಾ ಫೌಲ್ ಮಾಡಿದ ಪರಿಣಾಮ ಪೆನಾಲ್ಟಿ ದೊರೆಯಿತು. 17ನೇ ನಿಮಿಷದಲ್ಲಿ ಪೆನಾಲ್ಟಿಯನ್ನು ಗೋಲಾಗಿ ಪರಿವರ್ತಿಸಿದ ಎಂಬೋಲೊ, ಸ್ವಿಟ್ಜರ್ಲೆಂಡ್‌ಗೆ 1-0 ಮುನ್ನಡೆ ತಂದುಕೊಟ್ಟರು. ಬಳಿಕವೂ ಸ್ವಿಸ್ ತಂಡಕ್ಕೆ ಹಲವು ಅವಕಾಶಗಳು ದೊರೆತರೂ ಮುನ್ನಡೆಯನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಕತಾರ್ ಕಂಬ್ಯಾಕ್: ಪಂದ್ಯ ಅಂತ್ಯದತ್ತ ಸಾಗುತ್ತಿದ್ದಂತೆ ಕತಾರ್ ಹೋರಾಟ ತೀವ್ರಗೊಳಿಸಿತು. ಹೆಚ್ಚುವರಿ ವೇಳೆಯ ನಾಲ್ಕನೇ ನಿಮಿಷದಲ್ಲಿ ಬೌಲೆಮ್ ಖೌಖಿ ಹೆಡರ್ ಮೂಲಕ ಚೆಂಡನ್ನು ಗೋಲುಪೆಟ್ಟಿಗೆಯೊಳಗೆ ಸೇರಿಸಿ ಕತಾರ್‌ಗೆ ಅಮೂಲ್ಯ ಸಮಬಲ ತಂದುಕೊಟ್ಟರು. ಕೊನೆಯ ಕ್ಷಣದ ಗೋಲಿನ ಬಳಿಕ ಕತಾರ್ ಆಟಗಾರರು ಸಂಭ್ರಮಾಚರಣೆಯಲ್ಲಿ ತೊಡಗಿದರೆ, ಗೆಲುವಿನ ಅಂಚಿನಲ್ಲಿದ್ದ ಸ್ವಿಟ್ಜರ್ಲೆಂಡ್ ನಿರಾಸೆ ಅನುಭವಿಸಿತು.



ಪಂದ್ಯದ ಮುಖ್ಯಾಂಶಗಳು

- ಕತಾರ್ 1-1 ಸ್ವಿಟ್ಜರ್ಲೆಂಡ್
- 17ನೇ ನಿಮಿಷ: ಬ್ರೀಲ್ ಎಂಬೋಲೊ (ಪೆನಾಲ್ಟಿ)
- 90+4ನೇ ನಿಮಿಷ: ಬೌಲೆಮ್ ಖೌಖಿ (ಹೆಡರ್)
- ಹೆಚ್ಚುವರಿ ವೇಳೆಯಲ್ಲಿ ಕತಾರ್ ಸಮಬಲ

ಮೊರಾಕ್ಕೊ ವಿರುದ್ಧ ಬ್ರೆಜಿಲ್‌ಗೆ ಡ್ರಾ

ಸಿ ಗುಂಪಿನ ಬಹುನಿರೀಕ್ಷಿತ ಪಂದ್ಯದಲ್ಲಿ ಐದು ಬಾರಿಯ ಚಾಂಪಿಯನ್ ಬ್ರೆಜಿಲ್, ಮೊರಾಕ್ಕೊ ವಿರುದ್ಧ 1-1 ಗೋಲುಗಳ ಸಮಬಲ ಸಾಧಿಸಿದೆ. ಈಸ್ಟ್ ರುದರ್‌ಫೋರ್ಡ್‌ನ ಮೆಟ್‌ಲೈಫ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎರಡೂ ತಂಡಗಳು ಆಕ್ರಮಣಕಾರಿ ಆಟವಾಡಿ ಪ್ರೇಕ್ಷಕರಿಗೆ ರಂಜಿಸಿದವು.

ಕಳೆದ ವಿಶ್ವಕಪ್‌ನ ಸೆಮಿಫೈನಲಿಸ್ಟ್ ಮೊರಾಕ್ಕೊ ಆರಂಭದಲ್ಲೇ ಮೇಲುಗೈ ಸಾಧಿಸಿತು. 21ನೇ ನಿಮಿಷದಲ್ಲಿ ಇಸ್ಮಾಯಿಲ್ ಸೈಬಾರಿ ಗೋಲು ಬಾರಿಸಿ ಆಫ್ರಿಕಾ ಚಾಂಪಿಯನ್ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಹಿನ್ನಡೆಯಲ್ಲಿದ್ದ ಬ್ರೆಜಿಲ್ 32ನೇ ನಿಮಿಷದಲ್ಲಿ ತಿರುಗೇಟು ನೀಡಿತು. ಬ್ರುನೋ ಗಿಮರಾಯಿಸ್ ಅವರೊಂದಿಗೆ ಸುಂದರ ಪಾಸ್ ವಿನಿಮಯ ನಡೆಸಿದ ವಿನಿಸಿಯಸ್ ಜೂನಿಯರ್, ರಕ್ಷಣಾ ಆಟಗಾರರನ್ನು ಮಣಿಸಿ ಬಲ ಕಾಲಿನ ಸಿಡಿಲಿನಂತಹ ಶಾಟ್ ಮೂಲಕ ಗೋಲು ಬಾರಿಸಿ ಸಮಬಲ ಸಾಧಿಸಿದರು. ಇದು ವಿನಿಸಿಯಸ್ ಅವರ ಅಂತಾರಾಷ್ಟ್ರೀಯ ವೃತ್ತಿಜೀವನದ 10ನೇ ಗೋಲಾಗಿತ್ತು. ಬಳಿಕ ಎರಡೂ ತಂಡಗಳಿಗೆ ಅವಕಾಶಗಳು ದೊರಕಿದರೂ ಗೋಲುಗಳಾಗಿ ಪರಿವರ್ತಿಸಲು ಸಾಧ್ಯವಾಗಲಿಲ್ಲ, ಹೀಗಾಗಿ ಪಂದ್ಯ 1-1 ಡ್ರಾದಲ್ಲಿ ಅಂತ್ಯವಾಯಿತು.



ಪಂದ್ಯದ ಮುಖ್ಯಾಂಶಗಳು

- 21ನೇ ನಿಮಿಷ: ಇಸ್ಮಾಯಿಲ್ ಸೈಬಾರಿ (ಮೊರಾಕ್ಕೊ)
- 32ನೇ ನಿಮಿಷ: ವಿನಿಸಿಯಸ್ ಜೂನಿಯರ್ (ಬ್ರೆಜಿಲ್)
- ವಿನಿಸಿಯಸ್ ಜೂನಿಯರ್‌ಗೆ 10ನೇ ಗೋಲು
- ವಿಶ್ವಕಪ್ ಉದ್ಘಾಟನಾ ಪಂದ್ಯಗಳಲ್ಲಿ ಬ್ರೆಜಿಲ್‌ನ ಅಜೇಯ ಸರಣಿ 21ಕ್ಕೆ ವಿಸ್ತರಣೆ

ಮಂಧಾನ, ಘೋಷ್ ಬ್ಯಾಟಿಂಗ್‌ಗೆ ಜಯ | ದೀಪ್ತಿಗೆ 5, ಚಾರಣಿಗೆ 3 ವಿಕೆಟ್

ದೀಪ್ತಿ ಧಮಾಕಾ, ಪಾಕ್ ಪಂಚರ್

ಬರ್ಮಿಂಗ್ಹ್ಯಾಮ್: ಸ್ಮೃತಿ ಮಂಧಾನ, ರಿಚಾ ಘೋಷ್ ಮಾಡಿದ ಬ್ಯಾಟಿಂಗ್ ಮತ್ತು ದೀಪ್ತಿ ಶರ್ಮಾ, ಶ್ರೀ ಚಾರಣಿ ಅವರ ಮಾರಕ ಬೌಲಿಂಗ್ ದಾಳಿಯ ನೆರವಿನಿಂದ ಮಿಂಚಿದ ಭಾರತ ತಂಡವು ಪಾಕ್ ಬೇಟೆಯಾಡಿದ್ದು, ಪ್ರತಿಷ್ಠಿತ ಮಹಿಳೆಯರ ವಿಶ್ವಕಪ್ ಪಂದ್ಯಾವಳಿಯಲ್ಲಿ ಗೆಲುವಿನ ಆರಂಭ ಮಾಡಿದೆ.

ಟಿ20 ವಿಶ್ವಕಪ್‌ನ ಮೊದಲನೇ ಪಂದ್ಯದಲ್ಲೇ ಪಾಕಿಸ್ತಾನವನ್ನು ಎದುರಿಸಿದ್ದ ಭಾರತ ತಂಡವು 64ರನ್‌ಗಳ ಭರ್ಜರಿ ಗೆಲುವು ಸಾಧಿಸಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 170 ರನ್ ಗಳಿಸಿತು. ಮಂಧಾನ 68, ಕೌರ್ 36 ರನ್ ಗಳಿಸಿದರೆ, ರಿಚಾ ಘೋಷ್ 34 ರನ್‌ನೊಂದಿಗೆ ಸ್ಕೋರ್ ಹಿಗ್ಗಿಸಿದರು. ಗುರಿ ಬೆನ್ನತ್ತಿದ ಪಾಕಿಸ್ತಾನ 17 ಓವರ್‌ಗಳಲ್ಲಿ 106 ರನ್‌ಗಳಿಗೆ ಆಲೌಟ್ ಆಯಿತು. ತಂಡದ ಪರ ಮುಬೀನಾ ಅಲಿ 41 ರನ್ ಗಳಿಸಿದರು. ಭಾರತ ಪರ ದೀಪ್ತಿ ಶರ್ಮಾ ಹಾಗೂ ಶ್ರೀ ಚಾರಣಿ ಕರಾರುವಾಕ್ ದಾಳಿಯೊಂದಿಗೆ ಮಿಂಚಿದರು.

ಮಂಧಾನ ಮ್ಯಾಚ್ ವಿನ್ನರ್ ಅನಿಸಿಕೊಂಡರೆ, ರಿಚಾ ಘೋಷ್ ಅಬ್ಬರದ ಬ್ಯಾಟಿಂಗ್‌ನೊಂದಿಗೆ ಬೆಸ್ಟ್ ಬ್ಯಾಟರ್ ಅನಿಸಿಕೊಂಡರು. ದೀಪ್ತಿ ಶರ್ಮಾ ತಮ್ಮ ಅನುಭವದಿಂದಾಗಿ ಮಿಂಚಿದರು. ಶ್ರೀ ಚಾರಣಿ ತಮ್ಮ ಸ್ಕಿಲ್‌ನೊಂದಿಗೆ ಅಬ್ಬರಿಸಿದರು.

ಪಾಕ್ ತತ್ತರ: ಗುರಿ ಬೆನ್ನತ್ತಿದ ಪಾಕಿಸ್ತಾನಕ್ಕೆ ಉತ್ತಮ ಆರಂಭವೇ ಸಿಕ್ಕಿತು. ಆದರೆ ದೀಪ್ತಿ ಶರ್ಮಾ ಎಲ್ಲಾ ಯೋಜನೆಗಳಿಗೂ ತೆರೆ ಎಳೆದರು. ಮುಬೀನಾ ಅಲಿ ನಿಧಾನವಾಗಿ ಬ್ಯಾಟಿಂಗ್ ಮಾಡಿದರೆ, ಗುಲ್ 9 ರನ್‌ಗೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಜಾಫರ್ 12 ರನ್‌ಗಳಿಸಿದ್ದಾಗ ದೀಪ್ತಿ ಶರ್ಮಾಗೆ ವಿಕೆಟ್ ಒಪ್ಪಿಸಿದರು. ಅಲ್ಲಿಗೆ ಗೆಲುವಿಗೆ ನಾಂದಿ ಹಾಡಲಾರಂಭಿಸಿದ ದೀಪ್ತಿ ಪಾಕ್ ಪಾಲಿಗೆ ದುಃಸ್ವಪ್ನವಾದರು. ಶ್ರೀಚಾರಣಿ ಸೈರಾ ವಿಕೆಟ್ ಕಿತ್ತ ನಂತರ ಭಾರತದ ಗೆಲುವು ಬಹುತೇಕ ಖಚಿತವಾಗಿತ್ತು. ಮುಂದಿನ ಓವರ್‌ಗಳಲ್ಲಿ ಪಾಕ್ ಪೆಚ್ಚಾಯಿತು. ಆದಾಗ್ಯೂ ಮುಬೀನಾ 41 ರನ್ ಗಳಿಸಿ ಪಂದ್ಯವನ್ನು ಗೆಲ್ಲಿಸುವತ್ತ ಸಾಗಿದ್ದರು. ಆದರೆ ದೀಪ್ತಿ ಶರ್ಮಾ ಈ ಬಾರಿ ಫೀಲ್ಡಿಂಗ್‌ನಲ್ಲಿ ಚಮತ್ಕಾರ ಮಾಡಿದರು. ನೇರ ಹಿಟ್‌ನೊಂದಿಗೆ ರನ್‌ಔಟ್‌ಗೆ ಬಲಿಯಾದ ನಂತರ ಭಾರತ ಪಂದ್ಯ ಗೆದ್ದಾಗಿತ್ತು. ಉಳಿದ ಔಪಚಾರಿಕತೆಯನ್ನು 17 ಓವರ್‌ಗಳಲ್ಲಿ ಮುಗಿಸಿತು. ದೀಪ್ತಿ ದಾಳಿಗೆ ಪಾಕ್ ತತ್ತರಿಸಿದ್ದು ಮುಬೀನಾ ಬಿಟ್ಟರೆ ಇನ್ನುಳಿದ ಯಾವುದೇ ಬ್ಯಾಟರ್ 20 ರ ಗಡಿ ದಾಟಲಿಲ್ಲ, ಭಾರತ ಪರ ದೀಪ್ತಿ 5, ಚಾರಣಿ 3, ಶೆಫಾಲಿ 1 ವಿಕೆಟ್ ಪಡೆದರು.

ಆರಂಭಿಕ ಆಘಾತ: ಟಾಸ್ ಸೋತ ಭಾರತ ಬ್ಯಾಟಿಂಗ್‌ಗಿಳಿಯಿತು. ಬ್ಯಾಟರ್ ಶೆಫಾಲಿ ವರ್ಮಾ ಬರುತ್ತಲೇ ಸಿಕ್ಸರ್ ಒಂದನ್ನು ಬಾರಿಸಿ ಕ್ಯಾಚಿತ್ತರು. ಮೂರನೇ ಕ್ರಮಾಂಕದಲ್ಲಿ ಬಂದ ಜೆಮಿಮಾ ರಾಡ್ರಿಗ್ಸ್ ಬಂದು ಹೋಗುವ ಸಂಪ್ರದಾಯ ಮುಗಿಸಿಕೊಂಡರು. ಆದಾಗ್ಯೂ ಒಂದು ಬದಿಯಲ್ಲಿ ಮಾತ್ರ ಸ್ಮೃತಿ ಮಂಧಾನ ಉತ್ತಮ ಬ್ಯಾಟಿಂಗ್ ಮಾಡುತ್ತಿದ್ದರು. ಮಧ್ಯಮ ಕ್ರಮಾಂಕದಲ್ಲಿ ನಾಯಕಿ ಹರ್ಮನ್‌ಪ್ರೀತ್ ಜತೆಗೂಡಿದ ನಂತರ ಭಾರತ ಲಯಕ್ಕೆ ಮರಳಿತು. ಪವರ್‌ಪ್ಲೇ ಉದ್ದಕ್ಕೂ ಇವರಿಬ್ಬರು ಉತ್ತಮ ಬ್ಯಾಟಿಂಗ್ ಮಾಡಿದರು. ಪರಿಣಾಮ ಭಾರತ 38 ರನ್ ಗಳಿಸಿತು.

ಮಂಧಾನ ಮಿಂಚಿನಾಟ: ಮಧ್ಯಮ ಓವರ್‌ಗಳಲ್ಲಿ ಮಂಧಾನ ಸೆಟ್ ಆಗುವ ಔಪಚಾರಿಕತೆ ಮುಗಿಸಿಕೊಂಡಿದ್ದೇ ತಡ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಪಾಕಿಗಳನ್ನು ದಂಡಿಸುತ್ತಾ ಲೀಲಾ ಜಾಲವಾಗಿ ಬ್ಯಾಟ್ ಬೀಸಿದ ಅವರು 34 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದರು. ಅತ್ತ ಕೌರ್ ಕೇವಲ ಸಿಂಗಲ್‌ಗಳ ಮೂಲಕ ವಿಕೆಟ್ ಉಳಿಸಿದರು. 91 ರನ್‌ಗಳ ದೊಡ್ಡ ಜೊತೆಯಾಟ ನಿರ್ಮಿಸಿತು. ಆದರೆ 44 ಬಾಲ್‌ಗಳಲ್ಲಿ 9 ಬೌಂಡರಿ ಮತ್ತು 2 ಸಿಕ್ಸರ್‌ಗಳೊಂದಿಗೆ ಬ್ಯಾಟಿಂಗ್ ಮಾಡುತ್ತಿದ್ದ ಮಂಧಾನ ವಿಕೆಟ್ ಒಪ್ಪಿಸಿದರು. 36 ರನ್ ಗಳಿಸಿದ್ದ ಕೌರ್ ಕೂಡ ಪೆವಿಲಿಯನ್ ಸೇರಿದರು. ಮಧ್ಯಮ ಓವರ್‌ಗಳಲ್ಲಿ ಭಾರತ 84 ರನ್ ಗಳಿಸಿತು.

ರಿಚಾ ಘೋಷ್ ಅಬ್ಬರ: ಅಂತಿಮ ಓವರ್‌ಗಳಲ್ಲಿ ರಿಚಾ ಘೋಷ್ ಸ್ಫೋಟಕ ಬ್ಯಾಟಿಂಗ್ ಮಾಡತೊಡಗಿದರು. ಬರುತ್ತಲೇ ಬೌಂಡರಿಗಳಿಂದ ಅಬ್ಬರಿಸಿದ ಅವರು, ಡೆತ್ ಓವರ್‌ನಲ್ಲಿ ತೀರಾ ಬಿರುಸಿನ ಬ್ಯಾಟಿಂಗ್‌ನೊಂದಿಗೆ ಭಾರತಕ್ಕೆ ಮತ್ತೊಮ್ಮೆ ಆಸರೆಯಾದರು. ದೀಪ್ತಿ ಶರ್ಮಾ ಅವರ ಸಾಥ್ ಸಿಕ್ಕಂತೆ 18 ಓವರ್‌ಗಳಲ್ಲಿ ಭಾರತ 132 ರನ್ ಗಳಿಸಿತ್ತು. ಕೊನೆಯ ಎರಡು ಓವರ್‌ಗಳಲ್ಲಿ ಘೋಷ್ ಪಂದ್ಯದ ದಿಕ್ಕನ್ನೇ ಬದಲಾಯಿಸಿಬಿಟ್ಟರು. 5 ಬೌಂಡರಿ 1 ಸಿಕ್ಸರ್ ಬಾರಿಸಿದ ಅವರು, 17 ಬಾಲ್‌ಗಳಲ್ಲಿ ಮಾತ್ರ 34 ರನ್ ಬಾರಿಸಿದರು.





ಸಂಕ್ಷಿಪ್ತ ಸ್ಕೋರ್

ಭಾರತ 20 ಓವರ್‌ಗಳಲ್ಲಿ 170/6: ಮಂಧಾನ 68, ಕೌರ್ 36, ಘೋಷ್ 34; ಫಾತೀಮಾ 33/2, ಸಾದೀಯಾ 41/2
ಪಾಕಿಸ್ತಾನ 18 ಓವರ್‌ಗಳಲ್ಲಿ 120/10: ಮುಬೀನಾ 41; ಚಾರಣಿ21/3, ದೀಪ್ತಿ 10/5

ಹಾಲಿ ಚಾಂಪಿಯನ್ಸ್ ಕಿವೀಸ್‌ಗೆ ಆಘಾತ

ಸೌತಾಂಪ್ಟನ್: ಟಿ20 ವಿಶ್ವಕಪ್‌ನ ಹಾಲಿ ಚಾಂಪಿಯನ್ಸ್ ನ್ಯೂಜಿಲೆಂಡ್ ತಂಡಕ್ಕೆ ಮಹಿಳಾ ವಿಶ್ವಕಪ್ ಪಂದ್ಯಾವಳಿಯ ಆರಂಭಿಕ ಪಂದ್ಯದಲ್ಲೇ ಭಾರೀ ಆಘಾತ ಎದುರಾಗಿದೆ. ವಿಂಡೀಸ್ ವಿರುದ್ಧ ನಡೆದ ಪಂದ್ಯದಲ್ಲಿ 7 ವಿಕೆಟ್‌ಗಳಿಂದ ಭಾರೀ ಸೋಲನುಭವಿಸಿದೆ.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 162 ರನ್ ಗಳಿಸಿತು. ಇಸ್ಬೆಲ್ಲಾ ಗಾಜ್ 39, ಬ್ರೋಕ್ ಹಾಲಿಡೆ 40, ಮ್ಯಾಡಿ ಗ್ರೀನ್ 35★ ರನ್ ಗಳಿಸಿದರು. ವಿಂಡೀಸ್ ಪರ ಅಲಿಯ್ಯ ಅಲಾನೆ 4 ವಿಕೆಟ್ ಪಡೆದು ಮಿಂಚಿದರು. ಗುರಿ ಬೆನ್ನತ್ತಿದ ವಿಂಡೀಸ್ 19.5 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 165 ರನ್ ಗಳಿಸಿ ಪಂದ್ಯ ಗೆದ್ದಿತು. ಶಿಮೈನ್ ಕ್ಯಾಂಪ್‌ಬೆಲ್ ಅಜೇಯ 90 ರನ್ ಗಳಿಸಿದರು. ನಾಯಕಿ ಹೈಲೀ ಮ್ಯಾಥೀವ್ಸ್ 48 ರನ್ ಗಳಿಸಿದರು. ಕಿವೀಸ್ ಪರ ಜೆಸ್ ಕೇರ್ 2 ವಿಕೆಟ್ ಕಿತ್ತರು.


ಆಸ್ಟ್ರೇಲಿಯಾ ಶುಭಾರಂಭ: ಬೇಗನೇ ವಿಕೆಟ್‌ಗಳನ್ನು ಕಳೆದುಕೊಂಡರೂ ಲಿಚ್‌ಫೀಲ್ಡ್ 50, ಎಲ್ಲಿಸ್ ಪೆರ್ರಿ 36 ಮತ್ತು ವಾರೇಹಮ್ 32 ರನ್ ಬ್ಯಾಟಿಂಗ್‌ನೊಂದಿಗೆ 172 ರನ್ ಗಳಿಸಿದ್ದ ಆಸ್ಟ್ರೇಲಿಯಾ ಆಫ್ರಿಕಾ ತಂಡವನ್ನು 107 ರನ್‌ಗೆ ಆಲೌಟ್ ಮಾಡಿ ಪಂದ್ಯವನ್ನು ಗೆದ್ದಿದೆ.

ವಿಶ್ವಕಪ್‌ನ ಮತ್ತೊಂದು ಪಂದ್ಯದಲ್ಲಿ ಬಾಂಗ್ಲಾದೇಶ ಮಹಿಳಾ ತಂಡವು ನೆದರ್ಲೆಂಡ್ಸ್ ವಿರುದ್ಧ 6 ವಿಕೆಟ್‌ಗಳ ಗೆಲುವು ದಾಖಲಿಸಿದೆ. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ನೆದರ್ಲೆಂಡ್ಸ್ 20 ಓವರ್‌ಗಳಲ್ಲಿ 139 ರನ್ ಗಳಿಸಿದರೆ, ಬಾಂಗ್ಲಾ 19.1 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 141 ರನ್‌ಗಳಿಸಿ ಪಂದ್ಯ ಗೆದ್ದುಕೊಂಡಿತು.



ಪದಬಂಧ

ರಾಜಾ ಸಂಗಮೇಶ ಹಿರೇಮಠ



6015

ಎಡದಿಂದ ಬಲಕ್ಕೆ

1. ಕಾಣದಾಗುವಿಕೆ-ಮರೆಯಾದುದು (2)
2. ನಾಲ್ಕು ಆಶ್ರಮಗಳಲ್ಲಿ ಕಡೆಯದು (3)
4. ತಣ್ಣಗಿರುವ ಅವಸ್ಥೆ-ಶ್ರೇಷ್ಠ (2)
6. ಅರಸನ ಆಡಳಿತಕ್ಕೆ ವಂಚನೆ ಬಗೆಯುವಿಕೆ (4)
8. ಎಡಗಡೆಯ ವಿರುದ್ಧ ಅಂಶ (4)
11. ಕಂಡವರ ಕಣ್ಣಿಗೆ ಬೀಳದ ಚಿಹ್ನ (4)
13. ನ್ಯಾಯ ಬೆಲೆ ಅಂಗಡಿಯಲ್ಲಿ ಸಿಗುವ ದಿನಸಿ (4)
15. ತೆಪ್ಪಗೆ ಏರಿ ಕುಳಿತದ್ದು ಈ ನಾವೆಯಲ್ಲಿ (2)
16. ಟಿಸಿಲು-ಕುಲದ ಶಾಖೆಯಿದು (3)
17. ಬಂದವರು ಕಂಡಿರದ ಗಾಡಿ (2)

ಮೇಲಿನಿಂದ ಕೆಳಕ್ಕೆ

1. ಕೃಶವಾದುದು ತಲೆಕೆಳಗಾಗಿದೆ (4)
2. ಸಂಜೆಗೆಂಪು ಒಂದು ಚಲನಚಿತ್ರವಾಗಿದೆ (4)
3. ವಿಶ್ವದ ಅತಿದೊಡ್ಡ ಮರುಭೂಮಿಯ ಹೆಸರು (3)
5. ಮೂರು ಊರುಗಳನ್ನು ನಾಶ ಮಾಡಿದವನು-ಶಿವ (4)
7. ಚೇತನವಿಲ್ಲದ ಭೌತಿಕ ಶರೀರ (4)
9. ಅದೃಷ್ಟಶಾಲಿಯನ್ನು ಹೀಗೂ ಹೇಳಬಹುದು (4)
10. ಶ್ರೀಮಂತಿಕೆ-ಸಮೃದ್ಧಿಯ ಸಮಾನಪದ (4)
11. ಕಪ್ಪುಬಂಗಾರ ಎಂದು ಕರೆಯುವ ಸಂಪನ್ಮೂಲ (4)
12. ಉಗ್ರರೂಪದ ಚಾಮುಂಡಿ-ಕಾಳಿಯೀಕೆ (4)
14. ಕಲೆ-ಸಾಹಿತ್ಯ-ಸೌಂದರ್ಯ ಆಸ್ವಾದಿಸುವವನು (3)

6014 ಉತ್ತರ

ಎಡದಿಂದ ಬಲಕ್ಕೆ:
1.ಪೂರ್ವಜ 3.ಧವಳಗಿರಿ
5.ಕಟ್ಟಾಣಿ 6.ಪ್ರಭಾರಿ
7.ಮದಕರಿ 9.ರಥಬೀದಿ
12.ತಪ್ಪಲೆ 13.ಸುಜ್ಞಾನ
15.ಕಲಾಕೋವಿದ
16.ಕುಮಾರಿ

ಮೇಲಿನಿಂದ ಕೆಳಕ್ಕೆ :
1.ಪೂರ್ಣವಿರಾಮ
2.ಜನಕ 3.ಧರಣಿಜ
4.ರಿಪೇರಿ 6.ಪ್ರಮಥ
8.ಕಟ್ಟೋಲೆ
10.ದಿವಾನಗಿರಿ
11.ಹಸುಕಂದ 12.ತವಕ
14.ನರಕು

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26